ಕರ್ನಾಟಕದಲ್ಲಿ ಟಿಬೆಟಿಯನ್ನರ ಚಿತ್ರಕಲೆ



ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ.

ಸಂಶೋಧಕ
ಕೃಷ್ಣೇಗೌಡ. ಹೆಚ್.ಎನ್.

ಮಾರ್ಗದರ್ಶಕರು
ಡಾ.ಎಸ್.ಸಿ.ಪಾಟೀಲ ರವರು.



ಲಲಿತಕಲಾ ನಿಕಾಯ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ . ೨೦೦೭-೦೮.



ಕರ್ನಾಟಕದಲ್ಲಿ ಟಿಬೆಟಿಯನ್ನರ ಚಿತ್ರಕಲೆ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ
ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕ
ಕೃಷ್ಣೇಗೌಡ. ಹೆಚ್.ಎನ್.

ಮಾರ್ಗದರ್ಶಕರು
ಡಾ. ಎಸ್.ಸಿ. ಪಾಟೀಲ
ಡೀನ್, ಲಲಿತಕಲಾ ನಿಕಾಯ
ಮುಖ್ಯಸ್ಥರು, ದೃಶ್ಯಕಲಾ ವಿಭಾಗ

ದೃಶ್ಯಕಲಾ ವಿಭಾಗ
ಅಧ್ಯಯನಾಂಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

೨೦೦೮

ಪ್ರಮಾಣ ಪತ್ರ

ಕರ್ನಾಟಕದಲ್ಲಿ ಟಿಬೆಟಿಯನ್ನರ ಚಿತ್ರಕಲೆ ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು **ಡಾ. ಎಸ್.ಸಿ.ಪಾಟೀಲ್** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಈ ಸಂಪ್ರಬಂಧವನ್ನು ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Krishne Gowda H.N.

ದಿನಾಂಕ: 13/10/2008
ಸ್ಥಳ: ವಿದ್ಯಾರಣ್ಯ

(ಕೃಷ್ಣೇಗೌಡ ಎಚ್.ಎನ್.)
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಘೋಷಣಾ ಪತ್ರ

ಕೃಷ್ಣೇಗೌಡ ಎಚ್.ಎನ್. ಇವರು ಕರ್ನಾಟಕದಲ್ಲಿ ಟಿಬೆಟಿಯನ್ನರ ಚಿತ್ರಕಲೆ ಎಂಬ ಶೀರ್ಷಿಕೆಯ ಸಂಪ್ರಬಂಧವು ಮೂಲ ಸಂಶೋಧನಾ ಕೃತಿಯಾಗಿದ್ದು, ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದಲ್ಲಿನ ಲಲಿತಕಲಾ ನಿಕಾಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಈ ಸಂಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.

ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವು ಇಡಿಯಾಗಿ ಅಥವಾ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ: 13/10/2008
ಸ್ಥಳ: ವಿದ್ಯಾರಣ್ಯ

(ಪ್ರೊ. ಎಸ್.ಸಿ.ಪಾಟೀಲ್)
ಡೀನ್ ಲಲಿತಕಲಾ ನಿಕಾಯ
ಮುಖ್ಯಸ್ಥರು ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಪರಿವಿಡಿ



ಅಧ್ಯಾಯ-ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈದಾನಿಕತೆ

ಸೃಷ್ಟಿಯ ಸ್ವರೂಪವು ವಿಸ್ಮಯದಿಂದ ಕೂಡಿದೆ. ಅದು ತನ್ನ ಒಡಲಲ್ಲಿ ಕುತೂಹಲಕರವಾದ ಅನೇಕ ಗೂಢಾರ್ಥಗಳನ್ನು ಹೊಂದಿದೆ. ಇಂಥಹ ಸಂಗತಿಯನ್ನು ಅರ್ಥೈಸಿಕೊಳ್ಳಲು ಮಾನವ ಹಲವಾರು ಮಾರ್ಗಗಳಡಿಯಲ್ಲಿ ಸಾಗುತ್ತ ಬಂದಿದ್ದಾನೆ. ತನ್ನ ಜೀವಿತ ಅವಧಿಯಲ್ಲಿ ಬೌದ್ಧಿಕ ಹಾಗೂ ಭೌತಿಕ ಜಗತ್ತಿನೊಡನೆ ಹೊಂದಿಕೊಂಡು ಬದುಕಲು, ತನ್ನದೇ ಆದ ನಾಗರಿಕ ಜೀವನವನ್ನು ಸೃಷ್ಟಿಸಿಕೊಂಡಿದ್ದು, ವಿನೂತನ ಸಂಸ್ಕೃತಿಯಡಿ ಹೊಂದಾಣಿಕೆ ಮಾಡಿಕೊಂಡು ಬದುಕನ್ನು ಸಾಗಿಸುತ್ತಾ ಬಂದಿದ್ದಾನೆ.

ಮಾನವನ ಜೀವಿತಾವಧಿಯಲ್ಲಿ ಕಂಡುಬರುವ ಅನುಭವ ಭಾವಾಭಿವ್ಯಕ್ತಗಳಾದ ಸುಖ–ದುಃಖ, ನೋವು–ನಲಿವು, ದುಗುಡ–ದುಮ್ಮಾನಗಳನ್ನು ಅನೇಕ ರೂಪಗಳಲ್ಲಿ ಅಭಿವ್ಯಕ್ತಿಗೊಳಿಸುವ ಪ್ರಯತ್ನದಡಿಯಲ್ಲಿ ಸಂಸ್ಕೃತಿಯ ಭಾಗವಾದ ಚಿತ್ರಕಲೆಯ ಮಾಧ್ಯಮವನ್ನು ಸೃಷ್ಟಿಸಿಕೊಳ್ಳುತ್ತಾ ಬಂದಿದ್ದಾನೆ. ಚಿತ್ರಕಲೆಯನ್ನು ಮಾನವನು ಪ್ರಾಗೈತಿಹಾಸಿಕ ಕಾಲದಿಂದ ಇಂದಿನವರೆಗೂ ಹಲವು ರೂಪಗಳಲ್ಲಿ ಅಭಿವ್ಯಕ್ತಿಸುತ್ತ ಬಂದಿದ್ದಾನೆ. ಇದು ಇಂದು ವಿಶ್ವ ಭಾಷೆಯಾಗಿ ಪರಿಗಣಿಸಲ್ಪಟ್ಟಿದೆ. ಚಿತ್ರಕಲೆ ಆಯಾಕಾಲದ ನಿತ್ಯದ ಬದುಕಿನ ಆಚಾರ, ವಿಚಾರ, ನಂಬಿಕೆ, ಆಚರಣೆ ಮತ್ತು ಧಾರ್ಮಿಕ ಕ್ರಿಯಾವಿಧಿಗಳಂತಹ ಸಂಗತಿಗಳು ಮಾನವ ರಚಿಸಿದ ಚಿತ್ರ, ಶಿಲ್ಪ ಇತ್ಯಾದಿ ಲಲಿತಕಲೆಗಳಲ್ಲಿ ಒಡಮೂಡಿಸಿದ್ದಾನೆ. ಇಂತಹ ಕಲೆಗಳನ್ನು ವೃದ್ಧಿಸಿಕೊಂಡು ತನ್ನ ಜೀವನ ವಿಧಾನವನ್ನು ಒಂದು ಕಲಾತ್ಮಕ ಪ್ರಕ್ರಿಯೆಯಾಗಿ ಮೈಗೂಡಿಸಿಕೊಂಡು ಬಂದಿದ್ದಾನೆ. ಎಂಬುದು ಕುತೂಹಲಕರವಾದ ಸಂಗತಿಯಾಗಿದೆ.

ಜೀವನ ಬದಲಾಯಿಸಿದಂತೆ ಜೀವನ ಮೌಲ್ಯಗಳು ಬದಲಾದಂತೆ ಕಲೆಯು ಬದಲಾಗುತ್ತದೆ. ಹಳೆಯದರ ಸ್ಥಾನಕ್ಕೆ ಹೊಸದು ಒಂದು ನಿಲ್ಲುತ್ತದೆ. ಈ ಹೊಸದು ಕೂಡ ಮುಂದೆ ಮತ್ತೊಂದು ಹೊಸ ಸಂಪ್ರದಾಯಲ್ಲೆ ದಾರಿ ಮಾಡಿ ಕೂಡುತ್ತದೆ. ಈ ಕಲಾನುಗುಣ ಅಭಿವ್ಯಾಕ್ತಿ ನಿರಂತರವಾಗಿ ನಡೆಯುವ ಕ್ರಿಯಗೆ ಕಲೆಗಳು ನಿತ್ಯ ಕ್ರಿಯಾಶೀಲವಾಗಿವೆ.[೧]

ರಸ ಋಷಿ ಡಿ.ವಿ.ಜಿ ಅವರು ಹೇಳಿರುವಂತೆ "ಕಲೆಯಲ್ಲಿ ಪರಮಕಲೆ ಜೀವನ ಕಲೆ" ಎಂಬುವುದು ಈ ಹಿನ್ನೆಲೆಯಲ್ಲಿ ಸಾರ್ಥಕವಾಗುತ್ತದೆ. ಇದರಲ್ಲಿ ಸೌಂದರ್ಯ ತುಂಬುವ ಶಕ್ತಿಯು ಅಂದಿನ ಆದಿ

---

೧. ಡಾ. ಎಸ್.ಸಿ.ಪಾಟೀಲ್: ವರ್ಣಸಂಚಯ: ಪು.ಸಂ.೪೭

ಮಾನವನಿಂದ ಇಂದಿನ ಕಲಾವಿದನಿಗೂ ಸೇರಿರುತ್ತದೆ ಹಾಗೂ ಆಸ್ವಾದಿಸುವಂತಹ ಪ್ರಜ್ಞಾಪೂರ್ವಕ ಸಹೃದಯರು ಇರುವುದು ಅದಕ್ಕೊಂದು ಮೌಲ್ಯ ತಂದುಕೊಟ್ಟಿದೆ.[೨]

ನಿತ್ಯದ ಬದುಕು ಹಸನಾಗಿ ನಡೆಯುವಂತೆ ಒಂದು ಸೂತ್ರದಲ್ಲಿ ಯಾವುದು ಲಭಿಸಿದೆಯೋ ಅದು ಧರ್ಮ, ಈ ಧರ್ಮಪ್ರಜ್ಞೆಯ ಆಚಾರ-ವಿಚಾರಗಳು ನೂರಾರು ಸಂಪ್ರದಾಯ ನಂಬಿಕೆಗಳಿಗೆ, ಮೌಲ್ಯಗಳಿಗೆ ಕಾರಣವಾಗಿ ಸಂಗೀತ, ಚಿತ್ರ, ಶಿಲ್ಪ ಮುಂತಾದ ಲಲಿತಕಲೆಗಳು ಹುಟ್ಟಿ ವಿಕಾಸಗೊಂಡವು. ಈ ದೃಷ್ಟಿಯಿಂದ ಮನುಷ್ಯನ ಕ್ರಿಯಾಶೀಲ ಮನಸ್ಸು ಬದುಕನ್ನು ಸುಂದರವಾಗಿಸಲು ಜಡದಿಂದ ಚೈತನ್ಯಕ್ಕೆ ಸಾಗುವಂತೆ ಮಾಡಲು ಪಟ್ಟ ಪರಿಶ್ರಮವೇ ಕಲೆಗಳ ಹುಟ್ಟಿಗೆ ಕಾರಣವಾಗಿದೆಯನ್ನಬೇಕು. ಇಂತಹ ಕಲೆಗಳ ಬೆಳವಣಿಗೆ ವಿಕಾಸಗಳೇ ಸಂಸ್ಕೃತಿಯ ವೈಭವವನ್ನು ಸೂಚಿಸುತ್ತವೆ.[೩]

ಕಲೆ ತನ್ನ ಪ್ರಭುತ್ವವನ್ನು ಉಳಿಸಿ ಬೆಳೆಸಿಕೊಂಡು ಬರಲು ಹಲವು ಧಾರ್ಮಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ವಲಯಗಳ ಮಡಿಲಿನಲ್ಲಿ ಆಶ್ರಯ ಪಡೆದಿದೆ. ಧರ್ಮ ಪ್ರಚಾರಕ್ಕೆ ಹಲವು ಮಾಧ್ಯಮಗಳ ರೂಪವನ್ನು ಬಳಸಿಕೊಂಡು ಬೆಳೆದು ಬಂದಿದೆ. ಕಾಲಘಟ್ಟಕ್ಕೆ ತಕ್ಕಂತೆ ಕಲೆಗಳು ತನ್ನ ಬೆಳವಣಿಗೆಯುದ್ದಕ್ಕೂ ಅನೇಕ ಪರಿವರ್ತನೆ ಪ್ರಕ್ರಿಯೆಗಳಿಗೆ ಒಳಗಾಗಿ ಹಲವು ಧರ್ಮ, ಜಾತಿ, ತತ್ವ, ಆಚರಣೆ, ಸಂಪ್ರದಾಯ, ಕಲಾವಿದರ ವರ್ಗ ಹಾಗೂ ಸಾಂಸ್ಕೃತಿಕ ಪರಿಸರಗಳನ್ನು ದಾಟಿಕೊಂಡು ಹರಿಯುವ ನೀರಿನಂತೆ ನಿತ್ಯ ಕ್ರಿಯಾಶೀಲವಾದುದಾಗಿದೆ. ಒಂದು ವರ್ಗದವರಿಂದ ಮತ್ತೊಂದು ವರ್ಗದವರಿಗೆ ಹಸ್ತಾಂತರವಾಗುತ್ತಾ ತನ್ನ ಉನ್ನತಿ-ಅವನತಿಗಳಲ್ಲಿ ಅಂದಿನಿಂದ ಇಂದಿನವರೆಗೂ ಅನೇಕ ಸಾಧನೆಗಳನ್ನು ಕಂಡುಕೊಂಡು ಬಂದಿದೆ.

ಧರ್ಮಪ್ರಜ್ಞೆಯ ಆಚಾರ-ವಿಚಾರ ನೂರಾರು ಸಂಪ್ರದಾಯ ನಂಬಿಕೆಗಳಂತಹ ಮೌಲ್ಯಗಳಿಗೆ ಕಾರಣವಾಗಿ ಸಾಹಿತ್ಯ, ಸಂಗೀತ, ಚಿತ್ರ, ಶಿಲ್ಪ ಮುಂತಾದ ಕಲೆಗಳು ಹುಟ್ಟಿ ವಿಕಾಸಗೊಂಡವು, ಇದರಲ್ಲಿ ತೊಡಗಿಸಿಕೊಂಡು ಸಾವಿರಾರು ಕಲಾವಿದರ ಹಾಗೂ ಕಲಾಪೋಷಕರ ಅವಿರತ ಪ್ರಯತ್ನವನ್ನು ಗುರುತಿಸಬಹುದು ನಾವಿಂದುಹಾಗೆಯೇ ಆಯಾ ನಾಡಿನ ಪ್ರಜೆಗಳು, ಅರಸರು, ಧರ್ಮಗುರುಗಳು, ಮಾಂಡಲಿಕರು, ಶ್ರೀಮಂತಕುಟುಂಬದವರು, ನಾಯಕರು ಕಲಾಭಿರುಚಿಗೆ ತಕ್ಕಂತೆ ಕಲೆಯ ಪಾಲನೆ, ಪೋಷಣೆ ಮತ್ತು ಪ್ರೋತ್ಸಾಹಗಳನ್ನು ಕೊಟ್ಟಿರುವುದರಿಂದ ಕಲೆಯ ಕೀರ್ತಿಗೆ ಪ್ರೇರಣೆ ನೀಡಿವೆ. ಇಂತಹ ಪ್ರಯತ್ನದ ಫಲವೇ ಕಲಾ ಇತಿಹಾಸ ನಿರ್ಮಾಣವಾಗಲು ಕಾರಣವಾಗಿದೆ. ಅಲ್ಲದೆ ಇತಿಹಾಸ ರಚನೆಯಲ್ಲಿ ಚಿತ್ರಕಲೆ ಪ್ರಮುಖ ಆಕರವಾಗಿ ಬೆಳಕು ಚೆಲ್ಲುವ ಪ್ರಯತ್ನ ನಡೆದಿದೆ, ನಡೆಯುತ್ತಲಿದೆ. ಇದರಿಂದಾಗಿ ಕಲೆಯು ನಿರಂತರ ಪ್ರಕ್ರಿಯೆಯಲ್ಲಿ ಪರಿವರ್ತನಾಶೀಲವಾದದ್ದು ಎಂಬುವುದು ವೇದ್ಯವಾಗುತ್ತದೆ.

ಒಂದು ರಾಷ್ಟ್ರ ಪ್ರಭುದ್ಧಮಾನಕ್ಕೆ ಬರಲು ಅನೇಕ ಸಂಸ್ಕೃತಿಗಳ ನೆಲೆಬೀಡಾದರೆ ಮಾತ್ರ ಸಾಧ್ಯ. ಭಾರತವು ಅನುಪಮ ವಿಶಿಷ್ಟ ಸಂಸ್ಕೃತಿಗಳ ಬೀಡು ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. ತನ್ನ ಸಾಂಸ್ಕೃತಿಕ ಪರಂಪರೆಯಲ್ಲಿ ಬೌದ್ಧ, ಜೈನ, ಶೈವ, ವೈಷ್ಣವ, ಕ್ರೈಸ್ತ, ಮಹಮ್ಮದೀಯ ಇತ್ಯಾದಿ ಧರ್ಮವನ್ನು ಪ್ರೋತ್ಸಾಹಿಸುವುದರ ಜೊತೆಗೆ ಅನ್ಯ ರಾಷ್ಟ್ರಗಳ ಜನಾಂಗಕ್ಕೆ ಆಶ್ರಯ ನೀಡಿರುವುದು ವಿಶಿಷ್ಟ ಸಂಗತಿ.

---

೨. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ: ಚಿತ್ರಕಲಾವಿದ- ಖಂಡೇರಾವ್ ಒಂದು ಅಧ್ಯಯನ ಎಂ.ಫಿಲ್. ಸಂಪ್ರಬಂಧ, ಕ.ವಿ.ಹಂ: ಪು.ಸಂ.೨

೩. ಡಾ. ಎಸ್.ಸಿ.ಪಾಟೀಲ್: ಕರ್ನಾಟಕ ಜನಪದ ಚಿತ್ರಕಲೆ: ಪು.ಸಂ. ೩

ಇಂತಹ ಕ್ರಿಯೆಯಲ್ಲಿ ಬೌದ್ಧಕಲೆಯು ತನ್ನದೆ ಆದ ಕೊಡುಗೆಯನ್ನು ಭಾರತೀಯ ಕಲೆಯ ಇತಿಹಾಸದಲ್ಲಿ ಮಹತ್ವದ ನೀಡಿದೆ. ಬೌದ್ಧಧರ್ಮವನ್ನು ಪ್ರಮುಖವಾಗಿ ಇಟ್ಟುಕೊಂಡು ಚಿತ್ರ ಶಿಲ್ಪಾದಿಗಳನ್ನು ನಿರ್ಮಿಸಿ ನೋಡುಗರಲ್ಲಿ ಧಾರ್ಮಿಕ ಭಾವನೆಯನ್ನು ಉಂಟು ಮಾಡುವಂತಿದೆ. ಬೌದ್ಧ ಧರ್ಮವು ಭಾರತದಲ್ಲಿ ಆರಂಭವಾದರೂ ಜಪಾನ್, ಚೀನಾ, ಮಧ್ಯ ಏಷಿಯಾ, ಟಿಬೆಟ್, ಸಿಲೋನ್, ಬರ್ಮಾ ಇತ್ಯಾದಿ ದೇಶಗಳಲ್ಲೂ ಹರಡಿದ್ದರಿಂದ ಬೌದ್ಧ ಕಲಾಕೃತಿಗಳು ಆ ದೇಶಗಳಲ್ಲೂ ಕಂಡುಬರುತ್ತವೆ.

ಬೌದ್ಧಚಿತ್ರಕಾರರು ಸನ್ಯಾಸಿಗಳಾದುದರಿಂದ ಚಿತ್ರಕಲೆಯನ್ನು ತಮ್ಮ ಧರ್ಮದ ಪ್ರಚಾರಕ್ಕಾಗಿ ಬಳಸಿಕೊಂಡರು. ಬುದ್ಧನನ್ನೇ ದೈವತ್ವಕ್ಕೇರಿಸಿದ ಈ ಅನುಯಾಯಿಗಳು ಅನೇಕ ಪವಾಡಗಳನ್ನು, ಪುರಾಣಗಳನ್ನು ತಮ್ಮ ಕೃತಿಗಳ ವಸ್ತುವಿಷಯವನ್ನಾಗಿಸಿಕೊಂಡರು. ಸುಮಾರು ೨ರಿಂದ ೭ನೇ ಶತಮಾನದವರಿಂದ ಈ ಬಗ್ಗೆಯ ಚಿತ್ರಗಳು ಕಂಡುಬರುತ್ತವೆ. ೩ನೇ ಶತಮಾನದ ಪಾಳಿ ಬೌದ್ಧ ಗ್ರಂಥವಾದ "ವಿನಯಪೀಠಕ"ದಲ್ಲಿ ಪ್ರಸೇಂದ್ರ ರಾಜನ ಚಿತ್ರಶಾಲೆಯನ್ನು ಕುರಿತ ಉಲ್ಲೇಖವಿದೆ. ಆ ಶಾಲೆಯ ಗೋಡೆಗಳ ಮೇಲೆ ಆಕರ್ಷವಾದ ಚಿತ್ರಗಳು ಕಂಗೊಳಿಸುತ್ತಿದ್ದವು ಎಂದು ಹೇಳಲಾಗಿದೆ. ಒಂದು ವಿಶಿಷ್ಟವಾದ ವಿಧಾನದಿಂದ ಚಿತ್ರಿಸುವ ಈ ಬೌದ್ಧ ಚಿತ್ರಗಳ ನಿರ್ಮಾಣಕ್ಕೆ ನಿಸರ್ಗದಲ್ಲಿನ ಬಣ್ಣಗಳನ್ನೇ ಬಳಸಿಕೊಂಡಿರುವುದು ಗಮನಾರ್ಹ[೪].

ಗೌತಮ ಬುದ್ಧನ ಜನ್ಮಸ್ಥಳವಾದ ಬುದ್ಧಗಯಾ ಭಾರತದಲ್ಲಿ ಬೌದ್ಧಕಲೆಯ ಮೂಲಸ್ಥಾನವೂ ಆಗಿದೆ. ಇದು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲು ಅಂದಿನ ಆಡಳಿತಗಾರರಾಗಿದ್ದ ಹರ್ಷವರ್ಧನ, ಕಾನಿಷ್ಕ ಹಾಗೂ ಅಶೋಕ ಮುಂತಾದವರು ಕಲೆಯ ಬಗ್ಗೆ ತೋರಿಸಿದ ಅತೀವ ಆಸಕ್ತಿಯೇ ಕಾರಣ. ಈ ರಾಜರು ಕಲಾತ್ಮಕವಾದ ಸ್ತೂಪಗಳನ್ನು ಬಹಳ ಸಂಖ್ಯೆಯಲ್ಲಿ ನಿರ್ಮಿಸಿದರು. ಬುದ್ಧಗಯಾದಲ್ಲಿರುವ ಧರ್ಮಚಕ್ರ ಪೂಜೆಯ ದೃಶ್ಯಾವಳಿಯಲ್ಲಿ ಬುದ್ಧನ ಜನನ, ಸ್ತೂಪದ ಚಿತ್ರಣ, ಸಪ್ತ ಅಶ್ವಾರೂಢ ಸೂರ್ಯ ಮುಂತಾದ ಬುದ್ಧನ ಜೀವನಕ್ಕೆ ಸಂಬಧಿಂಸಿದ ದೃಶ್ಯಗಳಿವೆ. ಭಾರತೀಯ ಚಿತ್ರಕಲಾ ಪರಂಪರೆಯಲ್ಲಿ ಭಿತ್ತಿಚಿತ್ರಗಳ ಕುರುಹು ಪ್ರಥಮವಾಗಿ ಅದರಲ್ಲೂ ಬೌದ್ಧ ಧರ್ಮ ಆಧಾರಿತವಾಗಿ ರಚನೆಗೊಂಡಿರುವದಕೆ ಅಜಂತ ಗುಹಾಂತರ ಭಿತ್ತಿ ಚಿತ್ರಗಳೇ ಸಾಕ್ಷಿ.

ನಂತರ ೮ನೇ ಶತಮಾನದ ಅನೇಕ ಮಹಾಯಾನ ಪಂಥದ ಬೌದ್ಧ ಸನ್ಯಾಸಿಗಳು ಕಾಶ್ಮೀರದ ಮೂಲಕ ಟಿಬೆಟಿಗೆ ಹೋಗಿ ನೆಲೆಸಿದರು. ಇದರಿಂದ ಅಲ್ಲಿ ದೇಶೀಯ ಸಂಪ್ರದಾಯವೊಂದು ಭಾರತೀಯ ಪ್ರಭಾವದೊಂದಿಗೆ ಸೇರಿ ಬೆಳೆಯಿತು. ಈ ಸಂಪ್ರದಾಯದಲ್ಲಿ ಥಾಂಕಗಳ ಕ್ಲಿಷ್ಟ ಮಾದರಿ, ಸೂಕ್ಷ್ಮರೇಖಾ ವಿನ್ಯಾಸ ಬೆಳೆದಿವೆ. ಇವು ಅಜಂತ ಚಿತ್ರಗಳಷ್ಟೇ ಸುಂದರವಾಗಿವೆ[೫]. ಧರ್ಮ ಪ್ರಚಾರದ ಮೂಲಕ ಟಿಬೆಟಿಗೆ ಹೋಗಿ ೧೮ನೇ ಶತಮಾನದವರೆಗೆ ಪ್ರಬುದ್ಧವಾಗಿ ಬೆಳೆದು ಥಾಂಕ ಶೈಲಿಯಾಗಿ ಪರಿವರ್ತನೆಗೊಂಡು ಮತ್ತೆ ೧೯ನೇ ಶತಮಾನದ ನಂತರ ಟಿಬೆಟಿಯನ್ ಬೌದ್ಧಸನ್ಯಾಸಿಗಳಿಂದ ಭಾರತಕ್ಕೆ ಈ ಕಲೆ ಪುನಃ ಪ್ರವೇಶವಾಗಿದೆ.

ಭಾರತಕ್ಕೆ ಬಂದು ನೆಲೆ ನಿಂತ ನಿರಾಶ್ರಿತ ಟಿಬೆಟಿಯನ್ನರ ಸಂಸ್ಕೃತಿಯಲ್ಲಿ ಈ ಕಲೆ ಸೇರಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ಭಾರತ ಹಾಗೂ ಪಾಶ್ಚಾತ್ಯ ಸಂಸ್ಕೃತಿಗಳ ಕಲಾ ಸಂಗಮಕ್ಕೆ ಕಲೆ ಆಶ್ರಯ ನೀಡಿರುವುದು

---

೪. ಆರ್.ಜಿ.ರಾಯಕರ್: ಭಾರತೀಯ ಚಿತ್ರಕಲೆ: ಪು.ಸಂ. ೮

೫. ಕೆ.ಬಿ.ಕೊಟ್ಟಾರ್(ಅನು) ಎಸ್.ಆರ್.ಕೃಷ್ಣಮೂರ್ತಿ: ಚಿತ್ರಕಲಾ ಪ್ರಪಂಚ: ಕ.ಲ.ಅ. ೧೯೯೬- ಪು.ಸಂ. ೧೦೮

ಗಮನಾರ್ಹ ಸಂಗತಿ. ಹೀಗಾಗಿ ಈ ಕಲೆಯನ್ನು ಕೂಡಾ ನಮ್ಮ ಭಾರತೀಯ ಚಿತ್ರಕಲಾ ಪರಂಪರೆಯ ಪ್ರಾಚೀನ ಪರಂಪರೆ ಸಂಸ್ಕೃತಿಯ ಒಂದು ಭಾಗವೆಂದು ಹೇಳಬಹುದಾಗಿದೆ.

ಅಧ್ಯಯನದ ಉದ್ದೇಶ

ಭಾರತೀಯ ಕಲಾವಲಯದಲ್ಲಿ ಲಲಿತಕಲೆಗಳ ತವರೂರೆಂಬ ಹೆಗ್ಗಳಿಕೆಗೆ ಪಾತ್ರವಾದ ಕರ್ನಾಟಕವು ತನ್ನದೆಆದ ಹಲವು ಸಾಂಸ್ಕೃತಿಕ ಪರಂಪರೆಯನ್ನು ಕಟ್ಟಿಕೊಂಡಿದೆ. ಇದಕ್ಕೆ ಈ ನಾಡಿನ ಕಲಾವಿದರ ಪರಿಶ್ರಮದ ಬೆವರಿನ ಫಲ ಕಾರಣವಾಗಿದೆ. ಪ್ರಾಗೈತಿಹಾಸಿಕಾಲದಿಂದ ವಿಜಯನಗರ, ಮೈಸೂರು, ಸುರಪುರ, ಕರಾವಳಿ, ಪಹಡಿ, ದಖ್ಖನಿ, ಮುಸ್ಲಿಂ, ಬ್ರಿಟೀಷ್ ಹಾಗೂ ಆಧುನಿಕ ಕಲಾವಿದಂದ ಅನೇಕ ಶೈಲಿಗಳು ಹುಟ್ಟಿಕೊಂಡಿದ್ದು ಇವುಗಳೆಲ್ಲವು ತನ್ನದೇಯಾದ ರಾಜಶ್ರಯ, ಧರ್ಮಾಶ್ರಯದ ಅನೇಕ ನೆಲೆಗಳಲ್ಲಿ ಬೆಳೆದು ಬಂದಿದ್ದು ಇಂತಹ ಸೃಷ್ಟಿಯಿಂದಾದ ಶೈಲಿರೂಪಿತ ಚಿತ್ರಕಲೆ, ಉಬ್ಬು ಶಿಲ್ಪ, ಮೂರ್ತಿ(ಶಿಲ್ಪ)ಕಲೆಗಳು ನಮ್ಮ ನಾಡಿನ ಸಾಂಸ್ಕೃತಿಕ ಆಸ್ತಿಗಳಾಗಿವೆ. ಇವುಗಳ ಸೃಷ್ಟಿಗೆ ಕಾರಣೀಭೂತರಾದ ಅನೇಕ ಅರಸರು, ಮಾಂಡಲಿಕರು, ಧರ್ಮಾರಾಧಕರು, ಶ್ರೀಮಂತವರ್ಗದವರು, ಕಲಾದಾರ್ಶನಿಕರು ಹಾಗೂ ಕಲಾವಿದರುಗಳ ಪ್ರೋತ್ಸಾಹದ ಪ್ರತಿ ಫಲವೇ ಕರ್ನಾಟಕದ ಸಂಸ್ಕೃತಿಯ ಕಲಾ ಇತಿಹಾಸವನ್ನು ಸೃಷ್ಟಿಸುವಂತಾಗಲು ಕಾರಣ ಈ ಮೇಲಿನ ಎಲ್ಲಾ ಕಲಾ ಬೆಳವಣಿಗೆಗೆ ಪ್ರಮುಖವಾಗಿ ಧರ್ಮಗಳು ಸಹ ತಮ್ಮ ಪ್ರಭಾವವನ್ನು ಬೀರಿದೆ. ವಿಶೇಷವಾಗಿ ಧರ್ಮ ಪ್ರಚಾರದ ದೃಷ್ಟಿಯಂದಲೆ ಸೃಷ್ಟಿಯಾದ ಚಿತ್ರಕಲೆ ಮತ್ತು ಶಿಲ್ಪಕಲೆಗಳನ್ನು ಕಾಣಬಹುದು.

ಇಂತಹ ಕಲಾ ಇತಿಹಾಸವನ್ನು ಪುನರ್ ರೂಪಿಸುವ ಅಥವಾ ರಚಿಸುವಂತಹ ಅಥವಾ ದಾಖಲಿಸಿಕೊಳ್ಳುವಂತಹ ಪ್ರಮುಖ ದೃಶ್ಯಕಲೆಗಳ ನೆಲೆಗಳನ್ನು ಸಂಶೋಧನ ಅಧ್ಯಯನಕ್ಕಾಗಿ ಪರಿವರ್ತಿಸಿಕೊಂಡು ದಾಖಲೀಕರಣಗೊಳಿಸುವುದು ಹಾಗೂ ಕಲಾಸಾಹಿತ್ಯ ರೂಪಕ್ಕೆ ಬದಲಿಸಿಕೊಳ್ಳುವುದು ಸುಲಭದ ಕೆಲಸವಲ್ಲ. ನಮ್ಮ ದೇಶದಲ್ಲಿ ಈ ಕಲಾ ಸಾಹಿತ್ಯವು ಇತ್ತೀಚಿಗಷ್ಟೇ ಪ್ರಚಲಿತದಲ್ಲಿ ಬರುತ್ತಿರುವುದನ್ನು ಕಾಣುತ್ತೇವೆ. ಡಾ. ಶಿವರಾಮ ಕಾರಂತರವರು ಅಭಿಪ್ರಾಯ ಪಡುವಂತೆ, "ನಮ್ಮ ದೇಶದ ಮಟ್ಟಿಗೆ ಹೇಳುವಲ್ಲಿ ಬಹುಮಂದಿ ವಿದ್ಯಾವಂತರಿಗೆ ಜಗತ್ತಿನ ವಿವಿಧ ಕಲೆಗಳ ಪರಿಚಯ ಇರುವುದಂತಿರಲ್ಲಿ ಸ್ವದೇಶದ ಚಿತ್ರ. ಶಿಲ್ಪಾದಿ ಕಲೆಗಳ ಪರಿಚಯವೂ ಸಾಕಷ್ಟಿಲ್ಲ. ಅವರನ್ನು ಕುರಿತು ದೇಶ ಭಾಷಿಗಳಲ್ಲಿ ತಿಳಿಸಿ ಹೇಳುವ ಸಾಹಿತ್ಯದ ಕೊರತೆ ಇದೆ. ನಮ್ಮ ದೇಶ-ಭಾಷೆಗಳಲ್ಲಿ ಕಾಣಿಸುವ ಈ ಶೂನ್ಯತೆ ಬೃಹತ್‌ಗಾತ್ರದ್ದು"[೬] ಎಂಬ ಮಾತಿನಲ್ಲಿ ಸತ್ಯಾಂಶವಿದೆ. ಈ ಹಿನ್ನೆಲೆಯಲ್ಲಿ ಚಿತ್ರ ಶಿಲ್ಪಗಳನ್ನು ಸೂಕ್ತವಾದ ರೀತಿಯಲ್ಲಿ ಅರಿತುಕೊಳ್ಳುವುದು ಯುಕ್ತವೆನಿಸುತ್ತದೆ. ಇವುಗಳ ಐತಿಹಾಸಿಕ ನೆಲೆ-ಹಿನ್ನೆಲೆ, ವಸ್ತುವಿಷಯ, ವರ್ಗೀಕರಣ, ಸಿದ್ಧತ ವಿಧಿ-ವಿಧಾನ, ಸಂರಕ್ಷಣೆ ಇತ್ಯಾದಿಗಳಿವೆ. ಈ ಕಲೆಯ ಮೇಲಿನ ಪ್ರಭಾವ ಪ್ರೇರಣೆ, ತಂತ್ರಗಾರಿಕೆ, ಶೈಲಿಗಳನ್ನು ತಿಳಿದುಕೊಳ್ಳುವ ಮತ್ತೊಬ್ಬರಿಗೆ ತಿಳಿಸುವ ಹಾಗೂ ಇವುಗಳನ್ನು ಪ್ರೋತ್ಸಾಹಿಸುವ ಅಥವಾ ಸಂರಕ್ಷಿಸುವಂತಹ ಹಲವಾರು ಪ್ರಮುಖ ಉದ್ದೇಶವನ್ನು ಇಟ್ಟುಕೊಂಡು ಧನಾತ್ಮಕ ಹಾಗೂ ಋಣಾತ್ಮಕ ಅಂಶಗಳನ್ನು ವಿಮರ್ಶಾತ್ಮಕವಾಗಿ ಶೋಧಿಸುವಂತಹ ಉದ್ದೇಶವನ್ನು ಹೊಂದಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

---

೬. ಶಿವರಾಮ ಕಾರಂತ: ಕಲಾ ಪ್ರಪಂಚ: ಪು.ಸಂ. ೩

ಕರ್ನಾಟಕದಲ್ಲಿ ಬಾದಾಮಿ, ಹಂಪಿ, ಶ್ರವಣಬೆಳಗೊಳ, ಸುರಪುರ, ನರಗುಂದ, ಮಹಾಲಿಂಗಪುರ, ಶ್ರೀರಂಗಪಟ್ಟಣ, ಮೈಸೂರು ಚಾಮರಾಜನಗರ, ಕೊಳ್ಳೇಗಾಲ, ಕರಾವಳಿ(ಕಾವಿ), ಬಿಜಾಪುರ, ಬೀದರ್ ಇತ್ಯಾದಿ ಕೇಂದ್ರಗಳಲ್ಲಿನ ಅರಮನೆಗಳು, ಗುರುಕುಲಗಳು, ಮಠಮನೆಗಳು ದೇವಾಲಯಗಳು, ಶ್ರೀಮಂತ ವ್ಯಕ್ತಿಗಳ ಮನೆಗಳಂತಹ ಇತ್ಯಾದಿ ಪ್ರದೇಶಗಳಲ್ಲಿ ಭಿತ್ತಿಚಿತ್ರಗಳು ವಿಶೇಷವಾಗಿ ಧರ್ಮವನ್ನಾಧರಿಸಿದ ವಸ್ತುವಿಷಯಗಳನ್ನೇ ಹೆಚ್ಚಾಗಿ ಕಾಣಬಹುದು. ಇವುಗಳೆಲ್ಲವೂ ಕರ್ನಾಟಕದಲ್ಲಿ ಧಾರ್ಮಿಕ ಪರಂಪರೆಯ ಸಂಸ್ಕೃತಿಯನ್ನು ಎತ್ತಿ ತೋರಿಸುತ್ತವೆ. ಹಾಗೂ ಅವುಗಳ ಪ್ರಭಾವವನ್ನು ತಿಳಿಸುತ್ತವೆ ಇಂತಹ ನೆಲೆಗಳಲ್ಲಿ ಥಾಂಕಾ ಶೈಲಿಯ ಟಿಬೆಟಿಯನ್ ಬೌದ್ಧಧರ್ಮ ಆಧಾರಿತ ಚಿತ್ರಕಲೆಯು ವಿಶಿಷ್ಟವಾದ ಮೈಸೂರಿನ ಪ್ರದೇಶಗಳ ೩ ನೆಲೆಗಳಲ್ಲಿ ಹಾಗೂ ಬೆಂಗಳೂರಿನ ಕೋರಮಂಗಲ, ಉತ್ತರಕನ್ನಡ ಜಿಲ್ಲೆಯ ಮುಂಡಗೋಡಕ್ಕೆ ಬಂದು ನೆಲೆ ನಿಂತಿರುವುದರಿಂದ ಇವುಗಳು ಇಂದು ನಮ್ಮ ಸಂಸ್ಕೃತಿಯಲ್ಲಿ ಆಕಾರಪಡೆದ ಕಲೆಗಳಾಗಿವೆ.

೧೯೬೩ರ ಸುಮಾರಿನಲ್ಲಿ ನಿರಾಶ್ರಿತರಾಗಿ ಬಂದು ನೆಲೆಸಿದ್ದು ತಮ್ಮದೇ ಆದ ಪೌರೋತ್ಯ ಶೈಲಿಯಲ್ಲಿ ದೇವಾಲಯಗಳು, ಪ್ರಾರ್ಥನಾ ಮಂದಿರಗಳು, ಸ್ತೂಪಗಳು ಹಾಗೂ ಮನೆಗಳಲ್ಲಿ, ಬೌದ್ಧಧರ್ಮ ಆಧಾರಿತ ಭಿತ್ತಿಚಿತ್ರ ಮತ್ತು ಭಿತ್ತಿಯೇತರ ಚಿತ್ರಗಳು ಹಾಗೂ ಸಂಕೀರ್ಣ ಮಾಧ್ಯಮದಲ್ಲಿ ವಿಶಿಷ್ಟ ಶೈಲಿಯ ಚಿತ್ರಕಲೆಯನ್ನು ಟಿಬೆಟಿಯನ್ನರು ಕರ್ನಾಟಕದ ಸಾಂಸ್ಕೃತಿಕ ನೆಲೆಯಲ್ಲಿ ವಿಶೇಷ್ವವಾಗಿ ಈ ನಾಡಿನಲ್ಲಿ ನೀಡುತ್ತಿದ್ದಾರೆ. ಅವುಗಳನ್ನು ಅಧ್ಯಯನಕ್ಕೆ ಒಳಪಡಿಸುವ ಉದ್ದೇಶ ಹೊಂದಲಾಗಿದೆ.

ಮೇಲಿನ ಅಂಶಗಳ ಜೊತೆಗೆ ಟಿಬೆಟಿಯನ್ನರ ಐತಿಹಾಸಿಕ ನೆಲೆ-ಹಿನ್ನೆಲೆಗಳ ಹರಿವು ಅವರುಗಳ ಧರ್ಮಾಚರಣೆ, ಥಾಂಕ ಚಿತ್ರಕಲೆಯ ವಸ್ತುವಿಷಯ, ಪ್ರಭಾವ, ಪ್ರೇರಣೆ, ತಂತ್ರಗಾರಿಕೆ, ಶೈಲಿ, ಪರಿಕರಗಳು ಹಾಗೂ ಕಲಾವಿದರ ಜೀವನ ಕ್ರಮವನ್ನು ವಿಷಯಾನುಸಾರ ವಿಂಗಡಿಸಿಕೊಂಡು, ಅಭ್ಯಾಸಿಸಿ. ಇವುಗಳನ್ನು ಅರ್ಥೈಸಿಕೊಳ್ಳುವುದು ಇವರ ಚಿತ್ರಕಲೆಯನ್ನು ಸಂಶೋಧನಾತ್ಮಕವಾಗಿ ಅಭ್ಯಾಸಿಸುವ ಉದ್ದೇಶವನ್ನು ಒಳಗೊಂಡಿದ್ದು ಕರ್ನಾಟಕದ ಐದು ನೆಲೆಗಳಲ್ಲಿ ಇರುವ ಇವರ ಚಿತ್ರಕಲೆಯ ಬಗ್ಗೆ ಅಭ್ಯಸಿಸಿ ಸ್ಥೂಲ ವಿವರಗಳನ್ನು ಚಿತ್ರಕಲಾ ಕ್ಷೇತ್ರಕ್ಕೆ, ಕಲಾ ಇತಿಹಾಸಕ್ಕೆ ಹಾಗೂ ಕರ್ನಾಟಕದ ಹಿರಿಯ ಹಾಗೂ ಕಿರಿಯ ಕಲಾವಿದರಿಗೆ ಹಾಗೂ ಸೌಂದರ್ಯ ಸ್ವಾದನೆಗೆ ಸ್ಪಂದಿಸುವಂತಹ ಅನೇಕ ಮಾಹಿತಿಗಳನ್ನು ತಿಳಿಸುವ ಉದ್ದೇಶದಿಂದ ಕನ್ನಡನಾಡಿನ ಮಟ್ಟಿಗೆ ಇಲ್ಲಿಯವರೆಗೂ ಟಿಬೆಟಿಯನ್ನರ ಚಿತ್ರಗಳ ಬಗ್ಗೆ ಅಭ್ಯಾಸ ನಡೆದಿಲ್ಲ ಹಾಗೂ ಲೇಖನಗಳು ವಿರಳ. ಈ ಹಿನ್ನಲೆಯಲ್ಲಿ ಪ್ರಸ್ತುತ ಸಂಶೋಧನ ಅಧ್ಯಯನದ ಪ್ರಯತ್ನ ಮೊದಲ ಬಾರಿಗೆ ಮಾಡಲಾಗುತ್ತಿದೆ. ಇದರ ದಾಖಲಿಸಿಕೊಳ್ಳುವ ಹಾಗೂ ಪರಿಚಯಿಸುವ ದೃಷ್ಟಿಯಿಂದ ತುಂಬ ಮಹತ್ವಪೂರ್ಣವೆಂದು ಸಂಶೋಧನೆಯ ಕಾರ್ಯವನ್ನು ಕೈಗೊಂಡಿದ್ದೇನೆ.

ಕರ್ನಾಟಕದ ಚಿತ್ರಕಲಾ ಕ್ಷೇತ್ರದಲ್ಲಿ ಇಲ್ಲಿಯವರಿಗೆ ನಡೆದ ಸಂಶೋಧನಾ ಅಧ್ಯಯನಗಳು

ಕರ್ನಾಟಕದ ಸಂದರ್ಭದ ಚಿತ್ರಕಲಾ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನಾ ಅಧ್ಯಯನಗಳು ನಡೆದಿಲ್ಲವೆಂದೇ ಹೇಳಬಹುದಾಗಿದೆ. ಏಕೆಂದರೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆಗಳ ಕುರಿತಾದ ಅಧ್ಯಯನಕ್ಕೆ ಅವಕಾಶ ದೊರಕಿದ್ದು ತೀರ ಇತ್ತೀಚೆಗಷ್ಟೆ ೯೦ರದಶಕದಲ್ಲಿ ಈ ಅಧ್ಯಯನಗಳು ತೀವ್ರಗೊಂಡು ಈಗ ಪ್ರೌಢಾವಸ್ಥೆಗೆ ಬಂದು ತಲುಪಿವೆ. ೧೯೮೦ರ ದಶಕದಿಂದ ಕರ್ನಾಟಕದಲ್ಲಿ ನಡೆದ ದೃಶ್ಯಕಲಾ ಅಧ್ಯಯನಗಳ ಸ್ಥೂಲವಾದ ವಿವರವನ್ನು ಈ ಕೆಳಗೆ ಸಮೀಕ್ಷಿಸಿ ಕೊಡಲಾಗಿದೆ.

ಪಿಹೆಚ್.ಡಿ ಮಹಾಪ್ರಬಂಧಗಳು

೧೯೮೦ರ ದಶಕದಿಂದ ಕರ್ನಾಟಕದ ದೃಶ್ಯಕಲಾ ಕ್ಷೇತ್ರದಲ್ಲಿ ಮೊದಲಬಾರಿಗೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆ ಕುರಿತು ಸಂಶೋಧನಾತ್ಮಕ ಅಧ್ಯಯನ ಪ್ರಾರಂಭಗೊಂಡಿರುವುದು ಕಂಡುಬರುತ್ತದೆ. ಡಾ.ಎಸ್.ಸಿ.ಪಾಟೀಲರು ೧೯೮೩ರಲ್ಲಿ ಕರ್ನಾಟಕ ವಿ.ವಿ.ಯ ಸ್ನಾತಕೋತ್ತರ ಶಿಕ್ಷಣ ವಿಭಾಗಕ್ಕೆ ಮಂಡಿಸಿದ **ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ : ಒಂದು ಅಧ್ಯಯನ**[೭] ಎಂಬ ಸಂಶೋಧನ ಕಿರು ಪ್ರಬಂಧವು ಈ ಕ್ಷೇತ್ರದ ಪ್ರಥಮ ಅಧ್ಯಯನದ ಕಾರ್ಯವೆಂದು ದಾಖಲಾಗಿದೆ. ೧೯೮೭ರಲ್ಲಿ ಡಾ.ಬಿ.ಕೆ.ಹಿರೇಮಠರವರು **ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ**[೮] ಎಂಬ ಪಿಹೆಚ್.ಡಿ. ಮಹಾಪ್ರಬಂಧದಲ್ಲಿ ಹಸ್ತಪ್ರತಿ ಚಿತ್ರಕಲೆ ಕುರಿತಂತೆ ಕೆಲವು ಅಧ್ಯಾಯಗಳು ಮೀಸಲಾಗಿಟ್ಟ ಅಧ್ಯಯನ ಮಾಡಿದ್ದಾರೆ. ಇದರ ನಂತರ ೧೯೯೧ರಲ್ಲಿ ಕರ್ನಾಟಕದಲ್ಲಿ ಜನಪದ ಚಿತ್ರಕಲೆಯನ್ನೇ ಸಂಶೋಧನೆಯ ಮುಖ್ಯ ವಿಷಯವನ್ನಾಗಿಟ್ಟುಕೊಂಡು ಕರ್ನಾಟಕ ವಿ.ವಿ.ಗೆ ಮಂಡಿಸಿದ ಪಿಹೆಚ್.ಡಿ. ಮಹಾಪ್ರಬಂಧ **ಕರ್ನಾಟಕದ ಜನಪದ ಚಿತ್ರಕಲೆ**[೯] ಈ ಮಹಾಪ್ರಬಂಧವನ್ನು ಡಾ.ಎಸ್.ಸಿ.ಪಾಟೀಲರು ಸಿದ್ಧಪಡಿಸಿದ್ದು ದೃಶ್ಯಕಲಾ ಕ್ಷೇತ್ರದ ಮೊದಲ ಅಧ್ಯಯನ ಎಂಬ ಅಗ್ಗಳಿಕೆಗೆ ಪಾತ್ರವಾಗಿದೆ. ನಂತರದ ದಿನಗಳಲ್ಲಿ ೧೯೯೫ರಲ್ಲಿ ಡಾ. ಅ.ಲ.ನರಸಿಂಹನ್ ಅವರು ಬೆಂಗಳೂರು ವಿ.ವಿ.ಗೆ ಮಂಡಿಸಿದ ಪಿಎಚ್.ಡಿ. ಮಹಾಪ್ರಬಂಧ **ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು**[೧೦] ೧೯೯೭ರಲ್ಲಿ ಡಾ.ಸಂಪದಾ ಭಟ್ ಅವರ **ಹಿಂದೂಸ್ಥಾನಿ ಸಂಗೀತ ಹಾಗೂ ರಾಗಮಾಲ ಚಿತ್ರಗಳು,**[೧೧] ಬೆಂಗಳೂರು ವಿಶ್ವವಿದ್ಯಾಲಯಕ್ಕೆ ೧೯೯೭ರಲ್ಲಿ ಡಾ. ಪುಷ್ಪಾ ದ್ರಾವಿಡ ಇವರು ಮಂಡಿಸಿದ **ಅನಿವಾಸಿ ಭಾರತೀಯ ಕಲಾವಿದ ದಿ.ನಿಕೋಲಸ್ ರೋರಿಕ ಜೀವನ ಮತ್ತು ಕಲಾಕೃತಿಗಳು**[೧೨] ೨೦೦೧ ರಲ್ಲಿ ಡಾ.ಯಾದಪ್ಪ ಪರದೇಶಿಯವರ **ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ, ಒಂದು ಅಧ್ಯಯನ**[೧೩] ೨೦೦೨ರಲ್ಲಿ ಡಾ.ಶಿವಾನಂದ ಬಂಟನೂರು ಇವರ **ಕರ್ನಾಟಕದ ಜನಪದ ಶಿಲ್ಪಕಲೆ, ಒಂದು ಅಧ್ಯಯನ,**[೧೪] ೨೦೦೨ರಲ್ಲಿ ಡಾ. ಗಿರೀಶ ಅವರ **ಬುಡಕಟ್ಟು ಚಿತ್ರಕಲೆ,**[೧೫] ೨೦೦೨ರಲ್ಲಿ ಡಾ. ಲಕ್ಷ್ಮಿದೇವಿಗವಾಯಿಯವರ ಕಲಾವಿದ **ಎಂ.ಎ.ಚೆಟ್ಟಿಯವರ ಜೀವನ, ಕಲಾಕೃತಿಗಳು-ಒಂದು ಅಧ್ಯಯನ,**[೧೬] ೨೦೦೨ರಲ್ಲಿ ಶರಣಪ್ಪ ಕೋಲ್ಕಾರ ಅವರ **ಕೊಪ್ಪಳ-ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ,**[೧೭] ೨೦೦೨ರಲ್ಲಿ ಡಾ.ಸೌಮ್ಯ ಅವರ **ಯಂತ್ರಾ ದಿ ವಿಜುವಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫೆರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್**[೧೮] ೨೦೦೨ರಲ್ಲಿ

---

೦೭. ಡಾ. ಎಸ್.ಸಿ.ಪಾಟೀಲ : ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ, ಕರ್ನಾಟಕ ವಿ.ವಿ.,೧೯೮೩

೦೮. ಡಾ. ಬಿ.ಕೆ.ಹಿರೇಮಠ : ಕನ್ನಡ ಹಸ್ತಪ್ರತಿಗಳು, ಪಿಹೆಚ್.ಡಿ.ಮ.ಪ್ರ. ಕರ್ನಾಟಕ ವಿ.ವಿ.,೧೯೮೭

೦೯. ಡಾ. ಎಸ್.ಸಿ.ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ, ಪಿಹೆಚ್.ಡಿ.,ಮ.ಪ್ರ.,೧೯೯೧

೧೦. ಡಾ. ಅ.ಲ.ನರಸಿಂಹನ್ ; ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು, ಪಿಹೆಚ್.ಡಿ.,ಮ.ಪ್ರ., ಬೆಂಗಳೂರು ವಿ.ವಿ.೧೯೯೮

೧೧. ಡಾ. ಸಂಪದಾ ಭಟ್ : ಹಿಂದೂಸ್ಥಾನಿ ಸಂಗೀತ ಹಾಗೂ ರಾಗಮಾಲ ಚಿತ್ರಗಳು, ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ.೧೯೯೮

೧೨. ಡಾ. ಪುಷ್ಪಾ ದ್ರಾವಿಡ : ಅನಿವಾಸಿ ಭಾರತೀಯ ಕಲಾವಿದ ದಿ.ನಿಕೋಲಸ್ ರೋರಿಕ ಜೀವನ ಮತ್ತು ಕಲಾಕೃತಿಗಳು, ಪಿಹೆಚ್.ಡಿ., ಮ.ಪ್ರ., ಬೆಂಗಳೂರು ವಿ.ವಿ., ೧೯೯೭

೧೩. ಡಾ.ಯಾದಪ್ಪ ಪರದೇಶಿ : ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ, ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ. ೨೦೦೦

೧೪. ಡಾ.ಶಿವಾನಂದ ಬಂಟನೂರು : ಕರ್ನಾಟಕದ ಜನಪದ ಶಿಲ್ಪಕಲೆ, ಒಂದು ಅಧ್ಯಯನ.ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ.೨೦೦೨

೧೫. ಡಾ.ಗಿರೀಶ : ಬುಡಕಟ್ಟು ಚಿತ್ರಕಲೆ,ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ.೨೦೦೨

೧೬. ಡಾ.ಲಕ್ಷ್ಮಿದೇವಿ ಗವಾಯಿ : ಕಲಾವಿದ ಎಂ.ಎ.ಚೆಟ್ಟಿಯವರ ಜೀವನ, ಕಲಾಕೃತಿಗಳು-ಒಂದು ಅಧ್ಯಯನ, ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ.೨೦೦೨

೧೭. ಡಾ. ಶರಣಪ್ಪ ಕೋಲ್ಕಾರ : ಅವರ ಕೊಪ್ಪಳ-ಹಂಪಿ ಪ್ರದೇಶದ ಪ್ರಾಗಿತಿಹಾಸಿಕ ಕಾಲದ ಕಲೆ,ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ.೨೦೦೨

೧೮. ಡಾ. ಸೌಮ್ಯ : ಯಂತ್ರಾ ದಿ ಯುಜುಮ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫೆರೆನ್ಸ್ ಟು ಕಾಂಟೆಂಪರರಿ ತಾಂತ್ರಿಕಾ ಆರ್ಟಿಸ್ಟ, ಪಿಹೆಚ್.ಡಿ., ಮ.ಪ್ರ., ಬೆಂಗಳೂರು ವಿ.ವಿ. ೨೦೦೨

ಡಾ.ಪ್ರಮೀಳಾ ಲೋಚನ ಅವರ **ಮೈಂಡ್ ಮ್ಯೂಜಿಕ್ ಅಂಡ್ ಕಲರ್ ಎಕ್ಸಪೋಜಿಸ್ ಅಂಡ್ ಡೆವೆಲಪ್ಮೆಂಟ್ ಆಫ್ ರಾಗಮಾಲಾ ಅಂಡ್ ಕಾಂಟೆಂಪರರಿ ಪೇಂಟಿಂಗ್**[೧೯] ೨೦೦೩ರಲ್ಲಿ ಡಾ.ವೀಣಾ ಶೇಖರ್ ಮಂಡಿಸಿದ **ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ** (೧೭೮೦-೧೮೨೦),[೨೦] ೨೦೦೩ರಲ್ಲಿ ಡಾ.ಸಿದ್ಧಲಿಂಗಸ್ವಾಮಿ ಹಿರೇಮಠ ಅವರ **ಕಲಾವಿದ ಆರ್.ಎಮ್.ಹಡಪದ, ಒಂದು ಅಧ್ಯಯನ,**[೨೧] ೨೦೦೩ರಲ್ಲಿ ಡಾ.ಎಸ್.ಸಿ.ಪಾಟೀಲರು ಕರ್ನಾಟಕ ವಿ.ವಿಗೆ ಮಂಡಿಸಿದ **ಎಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ ಎಜ್ಯುಕೇಶನ್ ಎಟ್ ಸ್ಕೂಲ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೆಷಲ್ ರೆಫೆರೆನ್ಸ್ ಟು ಡ್ರಾಯಿಂಗ ಆಂಡ್ ಪೇಂಟಿಂಗ,**[೨೨]

೨೦೦೪ರಲ್ಲಿ ಡಾ.ವಿ.ಎಮ್.ಬಾಗಾಯತ್ ಅವರ **ಕರ್ನಾಟಕ ಮುಸ್ಲಿಂ ಅರಸರ ಕಾಲದ** ಚಿತ್ರಕಲೆ, ಒಂದು ಅಧ್ಯಯನ(೧೪೦೦-೧೮೦೦),[೨೩] ೨೦೦೪ರಲ್ಲಿ ಡಾ.ಶಿವಕುಮಾರ ಎ.ಓ. ಅವರ **ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು.**[೨೪] ೨೦೦೫ರಲ್ಲಿ ಡಾ.ಶಶಿಕಲಾ ಹೂಗಾರ ಅವರ **ಕರ್ನಾಟಕ ತೊಗಲುಗೊಂಬೆ ಚಿತ್ರ ಕಲೆ**[೨೫] ೨೦೦೫ರಲ್ಲಿ ಡಾ.ಶಿವಪ್ರಕಾಶ ತುಕ್ಕಣ್ಣವರ ಅವರ **ಕರ್ನಾಟಕ ರಥ ಶಿಲ್ಪಕಲೆ**[೨೬] ೨೦೦೫ರಲ್ಲಿ ಡಾ.ಎಚ್.ಎನ್.ಚಿತ್ರಗಾರ ಅವರ **ಕರ್ನಾಟಕ ಹಸ್ತಪ್ರತಿ ಚಿತ್ರಕಲೆ**[೨೭] ೨೦೦೫ರಲ್ಲಿ ಡಾ. ಎಸ್. ವಿ. ವೆಂಕಟೇಶಯ್ಯ ಅವರ **ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು ಒಂದು ಅದ್ಯಯನ**[೨೮] ೨೦೦೬ರಲ್ಲಿ ಡಾ. ವಿಶ್ವೇಶ್ವರಿ ತಿವಾರಿ ಅವರ **ರಂಗೋಲಿ ಕಲೆ**[೨೯], ಪಿಹೆಚ್.ಡಿ.ಮಹಾಪ್ರಬಂಧಗಳು.

ಡಿ.ಲಿಟ್. ಮಹಾಪ್ರಬಂಧಗಳು

೨೦೦೫ರಲ್ಲಿ ಡಾ. ಆನಂದ ಪೂಜಾರ ಅವರ **ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ**[೩೦] ೨೦೦೫ರಲ್ಲಿ ಡಾ. ಡಿ. ಎ. ಉಪಾದ್ಯಯ ಅವರ **ದೃಶ್ಯಕಲೆಗಳ ತೌಲನಿಕ ಅದ್ಯಯನ**[೩೧] ಡಿ.ಲಿಟ್. ಮಹಾಪ್ರಬಂಧವಾಗಿದೆ.

---

೧೯. ಡಾ. ಪ್ರಮೀಳಾ ಲೋಚನ : ಮೈಡ್ ಮ್ಯೂಜಿಕ್ ಅಂಡು ಕಲರ್ ಎಕ್ಷಪೋಜಿಸ್ ಅಂಡ್ ಡೆವೆಲಪ್ಮೆಂಟ್ ಆಫ್ ರಾಗಮಾಲಾ ಅಂಡ್ ಕಾಂಟೆಂಪರರಿ ಪೇಂಟಿಂಗ್, ಪಿಹೆಚ್.ಡಿ., ಮ.ಪ್ರ., ಬೆಂಗಳುರು ವಿ.ವಿ. ೨೦೦೨

೨೦. ಡಾ.ವೀಣಾ ಶೇಖರ್ : ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (೧೭೮೦- ೧೮೨೦) ಪಿಹೆಚ್.ಡಿ.,ಮ.ಪ್ರ.,ಬೆಂಗಳೂರು ವಿ.ವಿ., ೨೦೦೩

೨೧. ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ : ಕಲಾವಿದ ಆರ್.ಎಮ್.ಹಡಪದ, ಒಂದು ಅಧ್ಯಯನ,ಪಿಹೆಚ್.ಡಿ., ಮ.ಪ್ರ.ಕನ್ನಡ ವಿ.ವಿ.೨೦೦೩

೨೨. ಡಾ. ಎಸ್.ಸಿ.ಪಾಟೀಲ : ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ ಎಜ್ಯುಕೇಶನ್ ಆಟ್ ಸ್ಕೂಲ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೆಷಲ್ ರೆಫೆರೆನ್ಸ್ ಟು ಡ್ರಾಯಿಂಗ ಆಂಡ್ ಪೇಂಟಿಂಗ,ಕರ್ನಾಟಕ ವಿ.ವಿ., ೨೦೦೩

೨೩. ಡಾ. ವಿ.ಎಮ್.ಬಾಗಾಯತ್ : ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ, ಒಂದು ಅಧ್ಯಯನ(೧೪೦೦-೧೮೦೦), ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ.೨೦೦೪

೨೪. ಡಾ.ಶಿವಕುಮಾರ ಎ.ಓ. : ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು, ಪಿಹೆಚ್.ಡಿ. ಮ.ಪ್ರ., ಗು.ವಿ.ಗು. ೨೦೦೪

೨೫. ಡಾ.ಶಶಿಕಲಾ ಹೂಗಾರ : ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ, ಪಿಹೆಚ್.ಡಿ.ಮ.ಪ್ರ.ಕನ್ನಡವಿ.ವಿ.,೨೦೦೫

೨೬. ಡಾ.ಶಿವಪ್ರಕಾಶ ತುಕ್ಕಣ್ಣವರ : ಕರ್ನಾಟಕ ರಥ ಶಿಲ್ಪಕಲೆ, ಪಿಹೆಚ್.ಡಿ.ಮ.ಪ್ರ.ಕನ್ನಡವಿ.ವಿ.,೨೦೦೫

೨೭. ಡಾ.ಎಚ್.ಎನ್.ಚಿತ್ರಗಾರ : ಕರ್ನಾಟಕ ಹಸ್ತಪ್ರತಿ ಚಿತ್ರಕಲೆ, ಪಿಹೆಚ್.ಡಿ.ಮ.ಪ್ರ.ಕನ್ನಡವಿ.ವಿ.,೨೦೦೫

೨೮. ಡಾ.ಎಸ್.ವಿ. ವೆಂಕಟೇಶಯ್ಯ : ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು ಪಿಹೆಚ್.ಡಿ.ಮ.ಪ್ರ.ಕನ್ನಡವಿ.ವಿ.,೨೦೦೫

೨೯. ವಿಶ್ವೇಶ್ವರಿ ತಿವಾರಿ : ರಂಗೋಲಿ ಚಿತ್ರಕಲೆ, ಪಿಹೆಚ್.ಡಿ.ಮ.ಪ್ರ ಗು.ವಿ.ವಿ.,೨೦೦೬

೩೦. ಡಾ.ಆನಂದ ಕೆ. ಪೂಜಾರ : ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ, ಡಿ.ಲಿಟ್. ಮ.ಪ್ರ.ಕನ್ನಡವಿ.ವಿ.,೨೦೦೫

೩೧. ಡಾ. ಡಿ. ಎ. ಉಪಾದ್ಯ ಅವರ ದೃಶ್ಯಕಲೆಗಳ ತೌಲನಿಕ ಅದ್ಯಯನ, ಡಿ.ಲಿಟ್. ಮ.ಪ್ರ.ಕನ್ನಡವಿ.ವಿ.,೨೦೦೫

ಎಂ.ಫಿಲ್. ಪ್ರಬಂಧಗಳು

೨೦೦೨ರಲ್ಲಿ ಮಲ್ಲಿಕಾರ್ಜುನ ಬಾಗೋಡಿಯವರು ಎಂ.ಫಿಲ್. ಪದವಿಗಾಗಿ ಮಂಡಿಸಿದ **ಚಿತ್ರಕಲಾವಿದ ಜೆ.ಎಸ್.ಖಂಡೇರಾವ-ಒಂದು ಅಧ್ಯಯನ,**[೩೨] ಮತ್ತು ೨೦೦೩ರಲ್ಲಿ ಎ.ಎಸ್.ವಿಶ್ವನಾಥ ಅವರ **ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣ,**[೩೩] ೨೦೦೫ರಲ್ಲಿ ಶಂಕರಪ್ಪ ಎಂ. ಕುಂದಗೋಳ ಅವರ **ಕಲಾವಿದ ಡಿ.ವಿ.ಹಾಲಭಾವಿಯವರ ಬದುಕು ಮತ್ತು ಕಲಾಕೃತಿಗಳು.**[೩೪] ಮತ್ತು ಸಿ.ಡಿ.ಜಟ್ಟೆಣ್ಣವರ ಅವರ **ಕಲಾವಿದ ಡಾ.ಎಂ.ವಿ.ಮಿಣಜಗಿಯವರ ಜೀವನ ಮತ್ತು ಕಲಾಕೃತಿಗಳು**[೩೫] ೨೦೦೬ರಲ್ಲಿ ಸುಚಿತ್ರಾ ಗ. ಲಿಂಗದಳ್ಳಿ ಇವರ **ವಿಜಯನಗರದ ಭಿತ್ತಿಚಿತ್ರಕಲೆ ಒಂದು ಅದ್ಯಯನ,**[೩೬] ಮತ್ತು ರವಿ ವಸರಾಮ ನಾಯಕ ಇವರ **ಕಿನ್ನಾಳ ಕಲೆ ಒಂದು ಅಧ್ಯಯನ**[೩೭] ೨೦೦೭ರಲ್ಲಿ ಬಿ.ಎಮ್.ಪಾಟೀಲ ಅವರ **ನಿಪ್ಪಾಣಿವಾಡೆಯ ಭಿತ್ತಿ ಚಿತ್ರಗಳು**[೩೮] ಶೈಲಾ ಬರಡೋಲ ಅವರ **ಸಂತ ಕಲಾವಿದ ಶುಭರಾಯರ ಜೀವನ ಮತ್ತು ಕಲಾಕೃತಿಗಳು**[೩೯] ಉಮೇಶ .ಎಸ್ ಅವರ **ಕನಾಟಕ ಜೈನ ಚಿತ್ರಕಲೆ**[೪೦] ಹಾಗೂ ಶಶಿಕಾಂತ ಬಸರಿಕಟ್ಟಿ ಅವರ **ಕಲಘಟಗಿ ಕಲೆ**[೪೧] ಈ ಪ್ರಬಂಧಗಳು ಕರ್ನಾಟಕ ದೃಶ್ಯಕಲೆಯ ಕುರಿತಾಗಿ ಬಂದ ಸಂಶೊಧನಾ ಅಧ್ಯಯನಗಳಾಗಿವೆ.

ಈಗ ಗುಲ್ಬರ್ಗಾ, ಬೆಂಗಳೂರು, ಕರ್ನಾಟಕ ವಿ.ವಿ. ಮತ್ತು ಕನ್ನಡ ವಿ.ವಿ.ಗಳಲ್ಲಿ ಪಿಹೆಚ್.ಡಿ ಅಧ್ಯಯನಕ್ಕೆ ಹಲವಾರು ವಿದ್ಯಾರ್ಥಿಗಳು ಸೇರ್ಪಡೆಯಾಗಿ ಅಧ್ಯಯನ ನಿರತರಾಗಿದ್ದಾರೆ. ಇದಲ್ಲದೇ ಅನೇಕ ಬಿ.ಎಫ್.ಎ. ಪದವಿ ಹಾಗೂ ಎಮ್.ವಿ.ಎ. ಪದವಿ, ಎಮ್.ಎಫ್.ಎ. ಪದವಿ ತರಗತಿಗಳಿಗೆ ಅಧ್ಯಯನದ ಭಾಗವಾಗಿ ಕಿರು ಸಂಶೋಧನಾ ಪ್ರಬಂಧಗಳು ರಚನೆಯಾಗಿದ್ದು, ಅವುಗಳ ಸಂಖ್ಯೆ ನೂರೈವತ್ತಕ್ಕೂ ಮಿಕ್ಕಿದೆ. ಹೀಗೆ ಈ ಕ್ಷೇತ್ರದಲ್ಲಿ ಸಂಶೋಧನೆಗಳು ತೀವ್ರವಾಗಿ ಮುನ್ನಡೆಯುತ್ತಲಿದ್ದು, ಭವಿಷ್ಯತ್ತಿನಲ್ಲಿ ಕಲಾಕ್ಷೇತ್ರವು ಸಂಶೋಧನಾತ್ಮಕವಾಗಿಯೂ ಬಲಗೊಳ್ಳುವ ಆಶಯವನ್ನು ನಿರೀಕ್ಷಿಸಬಹುದು.

ಮೇಲಿನ ಎಲ್ಲಾ ಸಂಶೋಧನಾ ಅಧ್ಯಯನ ಸಾಹಿತ್ಯಗಳನ್ನು ಅವಲೋಕಿಸಿದರೆ ಕರ್ನಾಟಕದಲ್ಲಿ ದೃಶ್ಯಕಲೆಯ ಕುರಿತಾಗಿ ಇತ್ತೀಚಿಗೆ ಬಂದ ಕೃತಿಗಳಾಗಿವೆ. ಗುಲಬರ್ಗ ವಿ.ವಿ., ಬೆಂಗಳೂರು ವಿ.ವಿ., ಕರ್ನಾಟಕ ವಿ.ವಿ., ಮೈಸೂರು ವಿ.ವಿ. ಮತ್ತು ಕನ್ನಡ ವಿಶ್ವವಿದ್ಯಾಲಯಗಳಲ್ಲಿ ಎಂ.ವಿ.ಎ, ಪಿ.ಎಚ್.ಡಿ, ಎಂ.ಫಿಲ್, ಡಿಲಿಟ್ ಅಧ್ಯಯನಕ್ಕೆ ಹಲವಾರು ವಿದ್ಯಾರ್ಥಿಗಳು ಸೇರ್ಪಡೆಯಾಗಿ ಸಂಶೋಧನಾ ಅಧ್ಯಯನಗಳ ಕೃತಿರೂಪದಲ್ಲಿ ಹೊರತರಲು ನಿರಂತರವಾಗಿ ಶ್ರಮಿಸುತ್ತಿದ್ದಾರೆ.

ಇದಲ್ಲದೆ ಕರ್ನಾಟಕದ ವ್ಯಾಪ್ತಿಯ ೪೫ಕ್ಕೂ ಅಧಿಕ ಚಿತ್ರಕಲಾ ಶಾಲೆಗಳು ಡಿಪ್ಲೋಮಾ ಪದವಿ,

---

೩೨. ಮಲ್ಲಿಕಾರ್ಜುನ ಬಾಗೋಡಿ : ಚಿತ್ರಕಲಾವಿದ ಜೆ.ಎಸ್.ಖಂಡೇರಾವ-ಒಂದು ಅಧ್ಯಯನ,ಎಂ.ಫಿಲ್. ಪ್ರ ಕ.ವಿ.ವಿ.ಹಂ. ೨೦೦೨

೩೩. ಎ.ಎಸ್.ವಿಶ್ವನಾಥ :ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣ, ಎಂ.ಫಿಲ್.ಪ್ರ ಕ.ವಿ.ವಿ.ಹಂ. ೨೦೦೩

೩೪. ಶಂಕರಪ್ಪ ಎಂ. ಕುಂದಗೋಳ : ಕಲಾವಿದ ಡಿ.ವಿ.ಹಾಲಭಾವಿಯವರ ಬದುಕು ಮತ್ತು ಕಲಾಕೃತಿಗಳು, ಎಂ.ಫಿಲ್. ಪ್ರ ಕ.ವಿ.ವಿ.ಹಂ. ೨೦೦೫

೩೫. ಸಿ.ಡಿ.ಜಟ್ಟೆಣ್ಣವರ : ಕಲಾಪಿದ ಡಾ.ಎಂ.ವಿ.ಮಿಣಜಗಿಯವರ ಜೀವನ ಮತ್ತು ಕಲಾಕೃತಿಗಳುಎಂ.ಫಿಲ್. ಪ್ರ, ಕ.ವಿ.ವಿ.ಹಂ. ೨೦೦೫

೩೬. ಸುಚಿತ್ರಾ ಗ. ಲಿಂಗದಳ್ಳಿ ಇವರ ವಿಜಯನಗರದ ಭಿತ್ತಿಚಿತ್ರಕಲೆ ಒಂದು ಅದ್ಯಯನ, ಎಂ.ಫಿಲ್. ಪ್ರ, ಕ.ವಿ.ವಿ.ಹಂ. ೨೦೦೬

೩೭. ರಪಿ ವಸರಾಮ ನಾಯಕ ಇವರ ಕಿನ್ನಾಳ ಕಲೆ ಒಂದು ಅದ್ಯಯನ ಎಂ.ಫಿಲ್. ಪ್ರ, ಕ.ವಿ.ವಿ.ಹಂ. ೨೦೦೫

೩೮. ಬಿ.ಎಂ.ಪಾಟೀಲ್: ನಿಪ್ಪಾಣಿ ವಾಡೆಯ ಭಿತ್ತಿಚಿತ್ರಗಳು: ಎಂ.ಫಿಲ್. ಸಂಪ್ರಬಂದ, ಕ.ವಿ.ಹಂ., ೨೦೦೭

೩೯. ಶೈಲಾ ಬರಡೋಲ: ಸಂತ ಕಲಾಪಿದ ಶುಭರಾಯರ ಜೀವನ ಮತ್ತು ಕಲಾಕೃತಿಗಳು: ಎಂ.ಫಿಲ್. ಸಂಪ್ರಬಂದ, ಕ.ವಿ.ಹಂ., ೨೦೦೭

೪೦. ಉಮೇಶ ಎಸ್: ಕರ್ನಾಟಕ ಜೈನ ಚಿತ್ರಕಲೆ: ಎಂ.ಫಿಲ್. ಸಂಪ್ರಬಂದ, ಕ.ವಿ.ಹಂ., ೨೦೦೭

೪೧. ಶಶಿಕಾಂತ ಬಸರಿಕಟ್ಟಿ: ಕಲಘಟಗಿ ಕಲೆ: ಎಂ.ಫಿಲ್. ಸಂಪ್ರಬಂದ, ಕ.ವಿ.ಹಂ., ೨೦೦೭

ಬಿ.ಎಫ್.ಎ, ಬಿ.ವಿ.ಎ, ಬಿ.ವಿ.ಎಡ್ ಪದವಿ ಅಥವಾ ಎಂ.ವಿ.ಎ ಅಥವಾ ಎಂ.ಎಫ್.ಎ ಸ್ನಾತಕೋತ್ತರ ಪದವಿ ತರಗತಿಗಳಾಗಿ ಪರೀಕ್ಷೆ ವಿಷಯವಾಗಿ ಕಿರು ಸಂಶೋಧನಾ ಪ್ರಬಂಧಗಳ ರಚನೆಯಾಗಿದ್ದು ಸುಮಾರು ೧೦೦೦ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಪುಸ್ತಕಗಳು ರಚನೆಗೊಂಡಿದ್ದು ಇತ್ತೀಚಿನ ದಿನಗಳಲ್ಲಿ ಈ ಕ್ಷೇತ್ರದಲ್ಲಿ ಚಿತ್ರಕಲೆ, ಶಿಲ್ಪಕಲೆ, ಅನ್ವಯಕಲೆ, ಗ್ರಾಫಿಕ್‌ಗೆ ಸಂಬಂಧಿಸಿದಂತೆ ಸಂಶೋಧನೆಗಳು ತೀವ್ರವಾಗಿ ಮುನ್ನಡೆಯುತ್ತಲಿದೆ.

ಮೇಲಿನ ಎಲ್ಲಾ ಸಂಶೋಧನೆಗಳು ಭಾರತೀಯ ಹಾಗೂ ಕರ್ನಾಟಕದ ವಿಷಯಗಳನ್ನು ಹೆಚ್ಚಾಗಿ ಆಯ್ಕೆ ಮಾಡಿಕೊಂಡು ಸಂಶೋಧನೆ ಕಾರ್ಯ ಕೈಗೊಂಡಿದ್ದು ಪಾಶ್ಚಾತ್ಯ ಶೈಲಿ ಕಲಾವಿದರುಗಳ ಹಾಗೂ ಕಲಾಶೈಲಿಗಳ ಬಗ್ಗೆ ಗಂಭೀರವಾದ ಅಧ್ಯಯನಗಳು ನಡೆದಿಲ್ಲ, ನಡೆದಿದ್ದರೂ ಕಲಾವಿದರುಗಳಾದ ಅನಿವಾಸಿ ಭಾರತೀಯ ಕಲಾವಿದ "ದಿ.ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿ", "ಯಂತ್ರಾ ದಿ ಯುಜುಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫೆರೆನ್ಸ್ ಟು ಕಾಂಟೆಪರರಿ ತಾಂತ್ರಿಕ ಆರ್ಟಿಸ್ಟ", "ಹಂಪಿ ಪ್ರದೇಶದ ರಾಬರ್ಟ್ ಕಲಾವಿದರ ಕಲಾ ಬದುಕು"ನಂತಹ ಇತ್ಯಾದಿ ಬೆರಳೆಣಿಕೆಯಷ್ಟು ಸಂಶೋಧನೆಗಳು ನಡೆದಿವೆ.

ಪ್ರಸ್ತುತ ಟಿಬೆಟಿಯನ್ನರ ಚಿತ್ರಕಲೆ ಕುರಿತು ನಡೆದ ಅಧ್ಯಯನದ ಸಮೀಕ್ಷೆ

ಟಿಬೆಟಿಯನ್ನರ ಕಲೆಯನ್ನು "ಬೈಲುಕುಪ್ಪೆ ಭಿತ್ತಿಚಿತ್ರಕಲೆ"[೪೨] ಬಗ್ಗೆ ಕೃಷ್ಣೇಗೌಡ.ಹೆಚ್.ಎನ್. ಅವರು ಎಂ.ವಿ.ಎ. ಕಿರು ಪ್ರಬಂಧ ೨೦೦೭ರಲ್ಲಿ ಹಾಗೂ "ದಿ ಟಿಬೆಟಿಯನ್ ಆರ್ಟ್ಸ್ ಅಂಡ್ ಆರ್ಟೀಸ್ಟ್ ಇನ್ ಮುಂಡಗೊಡ"[೪೩] ಬಗ್ಗೆ ಅಂತಿಮ ಬಿ.ವಿ.ಎ. ಪದವಿಗೆ ಜೆ.ಎನ್. ಗಣೇಶ್ ಕಠಾರೆ ರವರು ೨೦೦೮ರಲ್ಲಿ ಕಿರು ಸಂಶೋಧನೆಗಳು ಬಂದಿದ್ದರು ಅಂತಹ ಹೇಳಿಕೊಳ್ಳುವಂತಹ ಅಳವಾದ ಸಂಶೋಧನೆ ಅಗಿಲ್ಲ, ಆದರಲ್ಲಿ ಒಂದು ಕಿರು ಪ್ರಬಂಧ ಮಾತ್ರ ಕನ್ನಡದಲ್ಲಿ ಬಂದಿದೆ, ಟಿಬೆಟಿಯನ್ನರ ಇತಿಹಾಸಕೆ ಸಂಬಂಧಿಸಿದಂತೆ "ಟಿಬೆಟ್"[೪೪] ಅರ್ಧ ಶತಮಾನದ ಆರ್ಥಮಾರೆ ಈ ಕೃತಿಯ ಲೇಖಕರು ಮಂಗಳೂರು ವಿಜಯ ಬರೆದಿದ್ದು. ನಂತರ "ಸ್ವರ್ಣ ದೇವಾಲಯ"[೪೫]–ಎಂಬ ಕೃತಿಯಲ್ಲಿ ಟಿಬೆಟಿಯನ್ನರ ಬೈಲುಕುಪ್ಪೆಯ ಪರಿಸರದ ಬಗ್ಗೆ ಡಿ.ಎನ್. ಪುರುಷೋತ್ತಮರವರು ಬರೆದಿದ್ದಾರೆ. ನಂತರ ಪ್ರಜಾವಾಣಿ ಪತ್ರಿಕೆಯ ಕರ್ನಾಟಕ ದರ್ಶನ ಅಂಕಣದಲ್ಲಿ ದಿನಾಂಕ ೨೯–೫–೨೦೦೮ ರಂದು "ಬೈಲುಕುಪ್ಪೆ ಥೇಟ್ ಟಿಬೆಟ್" ಲೇಖನವನ್ನು ರೋಹೀಣಿ ಮುಂಡಾಜೆ ಅವರು ಬರೆದಿದ್ದಾರೆ. "ಮೈಸೂರು ವಿಶ್ವಕೋಶ", "ವಿಶ್ವಧರ್ಮ ದರ್ಶನ" ಅನೇಕ ಸಂಪುಟಗಳು ಬಂದಿದ್ದು, ವಜ್ರಯಾನ ಹಾಗೂ ರೆಹಮತ್ ತರೀಕೆರೆರವರ "ಕರ್ನಾಟಕದಲ್ಲಿ ನಾಥಪಂಥ"[೪೬] ಗಳಂತಹ ಪುಸ್ತಕಗಳಲ್ಲಿ ಇತಿಹಾಸ ಹಾಗೂ ಧರ್ಮಾಚರಣೆ ಬೆಳವಣಿಗೆಯ ಕುರಿತು ಚರ್ಚಿಸಲಾಗಿದೆ. ಆದರೆ ಎಲ್ಲೂ ಟಿಬೆಟಿಯನ್ನರ ಚಿತ್ರಕಲೆಯ ಬಗ್ಗೆ ವಿವರಣೆ ನೀಡಲಾಗಿಲ್ಲ. ಈಗ ಬೆಳಕಿಗೆ ಬಾರದಂತಹ ಟಿಬೆಟಿಯನ್ನರ ಥಾಂಕ ಶೈಲಿಯ ಚಿತ್ರಕಲೆಯನ್ನು (ವಿಶೇಷವಾಗಿ ಭಾರತೀಯ ಬೌದ್ಧಧರ್ಮದ ನೆಲೆಗಟ್ಟಿನಲ್ಲಿ ಚಿತ್ರಕಲೆ) ಕುರಿತಾಗಿ ಆಳವಾದ ಅಧ್ಯಯನವು ನಡೆಯದೆ ಇರುವುದರಿಂದ ಇಂತಹ ಚಿತ್ರಕಲೆಯ ವಿಷಯವನ್ನು ಅಧ್ಯಯನ ನಡೆಸುವ ಉದ್ದೇಶದಿಂದ ಎಂ.ಫಿಲ್ ಪದವಿಯ ಅಧ್ಯಯನಕ್ಕೆ ಬಳಸಿಕೊಂಡು ಅಧ್ಯಯನ ಮಾಡಲಾಗಿದೆ.

೪೨. ಕೃಷ್ಣೇಗೌಡ ಎಚ್.ಎನ್. ಬೈಲುಕುಪ್ಪೆ ಭಿತ್ತಿಚಿತ್ರಕಲೆ : ಸ್ನಾತಕೋತ್ತರ ಪದವಿಯ ಕಿ.ಪ್ರ., ೨೦೦೭
೪೩. ಜೆ.ಎನ್. ಗಣೇಶ ಕಟಾರೆ : ದಿ ಟಿಬೆಟಿಯನ್ ಆರ್ಟ್ ಅಂಡ್ ಆರ್ಟಿಸ್ಟ್ ಇನ್ ಮುಂಡಗೋಡ, ಅಂತಿಮ ವರ್ಷದ ಕಿ.ಪ್ರ : ಬಿ.ವಿ.ಎ., ೨೦೦೮
೪೪. ಮಂಗಳೂರು ವಿಜಯ : ಟಿಬೆಟ್ : ಬೆಂ.ವಿ.ವಿ., ೨೦೦೫
೪೫. ಡಿ.ಎನ್.ಪುರುಷೋತ್ತಮರಾವ್ (ಅನು) ಸ್ವರ್ಣದೇವಸ್ಥಾನ, ೨೦೦೬
೪೬. ರೆಹಮತ್ ತರೀಕೆರೆ : ಕರ್ನಾಟಕದಲ್ಲಿ ನಾಥ ಪಂಥ, ಕ.ವಿ.ಹಂ., ೨೦೦೬

ಸ್ವರೂಪ

ಕರ್ನಾಟಕದಲ್ಲಿ ಟಿಬೆಟಿಯನ್ ಚಿತ್ರಕಲೆಯು ತನ್ನದೇ ಆದ ಒಂದು ವಿಶಿಷ್ಟ ಬೌದ್ಧ ಧರ್ಮಾಧಾರಿತ ಸಂಪ್ರದಾಯವನ್ನು ರೂಢಿಸಿಕೊಂಡು ಬಂದಿದ್ದು, ಜೊತೆಗೆ ಐದು ನೆಲೆಗಳಲ್ಲಿ ವಿಶೇಷವಾಗಿ ತನ್ನದೇ ಸಾಂಸ್ಕೃತಿಕ ಪರಿಸರವನ್ನು ಸೃಷ್ಟಿಸಿಕೊಂಡು ಇಂತಹ ಸ್ಥಳಗಳಲ್ಲಿ ಥಾಂಕ ಶೈಲಿಯ ಚಿತ್ರ ಮತ್ತು ಶಿಲ್ಪಾದಿಗಳಿಂದ ಅಲಂಕರಿಸಿಕೊಂಡಿದೆ. ನಿಪುಣ ಟಿಬೆಟಿಯನ್ ಬೌದ್ಧಭಿಕ್ಷುಗಳು ಮತ್ತು ಕಲಾವಿದರುಗಳ ಪರಿಶ್ರಮದ ಬೆವರಿನ ಫಲ. ಸ್ವರ್ಣಮಂದಿರ, ಪ್ರಾರ್ಥನಾ ಮಂದಿರ, ಬುದ್ಧವಿಹಾರಗಳನ್ನು ತಮ್ಮ ವಾಸಿಸುವ ಪರಿಸರದ ಸುತ್ತಲು ಅನೇಕ ಚಿತ್ರಗಳಿಂದ ಶೃಂಗರಿಸಿಕೊಂಡಿರುತ್ತಾರೆ. ಇವುಗಳು ಬಟ್ಟೆ ಮಾಧ್ಯಮದ ಸುರುಳಿಚಿತ್ರಗಳು, ಪಟಚಿತ್ರಗಳು, ಭಿತ್ತಿಚಿತ್ರಗಳು ಮತ್ತು ವಿವಿಧ ಸಂಕೀರ್ಣ ಮಾಧ್ಯಮಗಳ ಚಿತ್ರಕಲೆಯನ್ನು ರಚಿಸಿದ್ದು ಪ್ರಮುಖವಾಗಿ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ೧೩೦೦ ಧರ್ಮ ಚಿತ್ರಗಳು ಮತ್ತು ಮಂಡಲಗಳು, ೧೨ ಮಹಾ ಮಹಿಮ ಗುರು ಭಗವಾನ್ ಬುದ್ಧರ ೧೨ ಮಹತ್ಕಾರ್ಯಗಳನ್ನು ಹಾಗೂ ಅವಲೋಕಿತೇಶ್ವರ, ಮಂಜುಶ್ರೀ, ತಾರಾದೇವಿ, ೨೪ ಗುರುಪದ್ಮಸಂಭವರು, ಬುದ್ಧನ ಹಲವು ಅವತಾರಗಳನ್ನು ಹಾಗೂ ವಿಶೇಷವಾಗಿ ಟಿಬೆಟಿನ ಬೌದ್ದಗುರುದೇವರನ್ನು ಹಾಗೂ ಹಲವು ವಸ್ತು ವಿಷಯಗಳನ್ನು ಪ್ರಧಾನವಾಗಿಟ್ಟುಕೊಂಡು ಬೌದ್ಧ ಧರ್ಮದ ಬೆಳವಣಿಗೆ ಪ್ರಚಾರದ ವಿವಿಧ ಮಜಲುಗಳಲ್ಲಿ ವಿಶೇಷತೆ ತೋರುವಂತಹ ಚಿತ್ರಗಳು ಇಲ್ಲಿ ಕಂಡುಬರುತ್ತವೆ..

ಇಂತಹ ಚಿತ್ರಗಳನ್ನು ರಚಿಸುವಲ್ಲಿ ಬಳಸಿಕೊಂಡ ನೈಸರ್ಗಿಕ ಜ್ಯಾಮಿತಿಕ ಭೂದೃಶ್ಯ ಮತ್ತು ಪ್ರಾಣಿ-ಪಕ್ಷಿಗಳಂತಹ ನಕ್ಷಾ ಚಿತ್ರಗಳು ಹಾಗೂ ಯಕ್ಷ-ಯಕ್ಷಿಣಿಯರ ಚಿತ್ರಗಳನ್ನು ಅಳವಡಿಸಿಕೊಂಡು ಅಜಂತಾ ಚಿತ್ರಗಳನ್ನು ಹೋಲುವಂತಹ ದೊಡ್ಡ ದೊಡ್ಡ ಚಿತ್ರಗಳಿಂದ ಅತಿ ಚಿಕ್ಕ ಚಿತ್ರಗಳಿಗೂ ಮಹತ್ವ ನೀಡಿ ಅತಿ ವೈಭವಪೂರಿತವಾಗಿ ಟಿಬೆಟಿಯನ್ನರ ಕ್ಯಾಂಪ್‌ಗಳಲ್ಲಿ ರಚಿಸಿಕೊಂಡಿದ್ದಾರೆ. ಇಂತಹ ಚಿತ್ರ ಶೈಲಿಯ ಅಧ್ಯಯನಗಳು ಕರ್ನಾಟಕದ ಸಾಂಸ್ಕೃತಿಕ(ದೃಶ್ಯಕಲೆ) ಹಿನ್ನೆಲೆಯಲ್ಲಿ ಅಧ್ಯಯನಕ್ಕೊಳಪಡದೆ ಇರುವುದನ್ನು ಗಮನಿಸಿ, ಇಂತಹ ಅಧ್ಯಯನವು ಎಂ.ಫಿಲ್ ಪ್ರಬಂಧದ ಅಧ್ಯಯನದ ವಿಷಯವಾಗಿ ಕೈಗೆತ್ತಿಕೊಳ್ಳಲಾಗಿದೆ. “ಕರ್ನಾಟಕದಲ್ಲಿ ಟಿಬೆಟಿಯನ್ನರ ಚಿತ್ರಕಲೆ” ಎಂಬ ಶೀರ್ಷಿಕೆಯಲ್ಲಿ ಅಧ್ಯಯನಕ್ಕೆ ಒಳಪಡಿಸಿ ಆಳವಾದ ಅಧ್ಯಯನ ಕಾರ್ಯವನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವನ್ನು ಒಂಭತ್ತು ಅಧ್ಯಾಯಗಳಾಗಿ ವಿಂಗಡಿಸಿಕೊಂಡಿದ್ದು ಸಂಕ್ಷಿಪ್ತ ವಿವರವನ್ನು ಕೆಳಗಿನಂತೆ ನೀಡಲಾಗಿದೆ.

ಮೊದಲನೆಯ ಅಧ್ಯಾಯವು ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆಗಳನ್ನು ಒಳಗೊಂಡಿದೆ.

ಎರಡನೆಯ ಅಧ್ಯಾಯವು ಟಿಬೆಟಿಯನ್ನರ ಐತಿಹಾಸಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ ಹಾಗೂ ಬೆಳವಣಿಗೆ ಮತ್ತು ಪ್ರಾದೇಶಿಕ ವೈಶಿಷ್ಟ್ಯ, ಧಾರ್ಮಿಕ ಪ್ರಭಾವ, ರಾಜಕೀಯ ಅರಾಜಕತೆಯಿಂದಾದ ಕಲೆಯ ಪ್ರಾದೇಶಿಕ ವಿಸ್ತಾರವನ್ನು ಹಾಗೂ ವಲಸೆಗೆ ಕಾರಣವಾದ ಅಂಶಗಳ ವಿವರಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ವಿವರಿಸಲಾಗಿದೆ

ಮೂರನೆಯ ಅಧ್ಯಾಯವು ಕರ್ನಾಟಕದಲ್ಲಿ ಟಿಬೆಟಿಯನ್ನರ ನೆಲೆಗಳು, ಸಾಂಸ್ಕೃತಿಕ ಪರಿಸರ, ಕಲೆಯ ಹರವುಗಳನ್ನು ಪ್ರತ್ಯೇಕ ನೆಲೆಗಳಡಿಯಲ್ಲಿ ಉಗಮಗೊಂಡ ಕಲೆಗಳ ಅವಲೋಕವನ್ನು ದೇಶೀಯ ಹಾಗೂ ವಿದೇಶಿಯ ವಿವರಗಳೊಂದಿಗೆ ಸಮೀಕರಿಸಿ ಅಧ್ಯಯನ ಮಾಡಲಾಗಿದೆ.

ನಾಲ್ಕನೆಯ ಅಧ್ಯಾಯವು ಟಿಬೆಟಿಯನ್ನರ ಚಿತ್ರಕಲೆಯನ್ನು ಭಿತ್ತಿಚಿತ್ರಕಲೆ ಮತ್ತು ಭಿತ್ತಿಯೇತರ ಚಿತ್ರಕಲೆ ಎಂಬುದಾಗಿ ವರ್ಗೀಕರಿಸಿ ಒಂದೊಂದನ್ನು ವಿವಿಧ ರೀತಿಯಗಳಲ್ಲಿ ವಿಭಾಗಿಸಿಕೊಳ್ಳಲಾಗಿದೆ. ದೇವಾಲಯಗಳು, ಸ್ತೂಪಗಳು, ಹೆಬ್ಬಾಗಿಲುಗಳು ಮತ್ತು ರಸ್ತೆಮೇಲಿನ ಚಿತ್ರಕಲೆ ಹಾಗೂ ಭಿತ್ತಿಯೇತರ ಚಿತ್ರಕಲೆಯಲ್ಲಿ ಪಟಚಿತ್ರಗಳು, ಸುರುಳಿಚಿತ್ರಗಳು, ಬಾವುಟ ಮೇಲಿನ ಚಿತ್ರಗಳು ಹಾಗೂ ವಿವಿಧ ಕರಕುಶಲ ವಸ್ತುಗಳ ಮೇಲಿನ ಚಿತ್ರಗಳನ್ನು ಸ್ಥೂಲವಾಗಿ ಅಭ್ಯಸಿಸಲಾಗುವುದು,

ಐದನೆಯ ಅಧ್ಯಾಯವು ಟಿಬೆಟಿಯನ್ನರ ಸಂಕೀರ್ಣ ಮಾಧ್ಯಮ ಚಿತ್ರಕಲೆಯಲ್ಲಿ ಲೋಹಮಾಧ್ಯಮ, ಸಿಮೆಂಟ್‌ಮಾಧ್ಯಮ, ಕಟ್ಟಿಗೆಮಾಧ್ಯಮ ಹಾಗೂ ಗೋಧಿ ಮತ್ತು ಬೆಣ್ಣೆಯಿಂದ ತಯಾರಿಸಿದ ಗೊಂಬೆಗಳ ಮೇಲಿನ ಚಿತ್ರಕಲೆ ಇತ್ಯಾದಿಗಳ ಕುರಿತಾದ ವಿವರಣಾತ್ಮಕವಾಗಿ ಈ ಅಧ್ಯಾಯದಲ್ಲಿ ಚರ್ಚಿಸಲಾಗುವುದು.

ಆರನೆಯ ಅಧ್ಯಾಯವು ಟಿಬೆಟಿಯನ್ನರ ಚಿತ್ರಕಲೆಯ ಮೇಲಾದ ಪ್ರಭಾವ–ಪ್ರೇರಣೆಗಳು, ತಂತ್ರಗಾರಿಕೆ ಮತ್ತು ಶೈಲಿಯನ್ನು ಬೌದ್ಧಧರ್ಮ ಮತ್ತು ಇತರ ಧರ್ಮಗಳ ಧರ್ಮಾಚರಣೆ ಪ್ರಚಾರಗಳಿಂದ ಒಳಗೊಂಡ ಪ್ರಭಾವ ಇಂತಹ ಚಿತ್ರಕಲೆಗೆ ಪ್ರೇರಣೆ ನೀಡಿದ ಅಂಶಗಳು ಹಾಗೂ ಶೈಲಿರೂಪದಲ್ಲಿ ಬೆಳೆದು ಬಂದ ಬಗೆಗಳ ಕುರಿತು ಸ್ಥೂಲವಾದ ವಿವರಗಳನ್ನು ವಿಶ್ಲೇಷಣಾತ್ಮಕವಾಗಿ ಈ ಅಧ್ಯಾಯದಲ್ಲಿ ಚರ್ಚಿಸಲಾಗುವುದು.

ಏಳನೆಯ ಅಧ್ಯಾಯವು ಟಿಬೆಟಿಯನ್ ಕಲಾವಿದರುಗಳ ಕಲಾಶಿಕ್ಷಣ ಮತ್ತು ಕಲಾವಿದರ ಜೀವನಕ್ರಮವನ್ನು ಹಾಗೂ ಅವರುಗಳ ಸ್ಥಿತಿ–ಗತಿಯನ್ನು, ವಾಸಿಸುವಂತಹ ಪರಿಸರದ ಧಾರ್ಮಿಕ ಆಚರಣೆ, ಜೀವನ ವಿಧಿ–ವಿಧಾನಗಳನ್ನು ಹಾಗೂ ಅವರಿಗೆ ಸಿಕ್ಕ ಗೌರವ ಕಲಾಕೃತಿಗಳ ಮಾರಾಟ ಇತ್ಯಾದಿ ಜೀವನ ಕ್ರಮವನ್ನು ಕುರಿತು ಚರ್ಚಿಸಲಾಗುವುದು.

ಎಂಟನೆಯ ಅಧ್ಯಾಯವು ಟಿಬೆಟಿಯನ್ನರ ಕಲೆ ಮತ್ತು ಕರ್ನಾಟಕದ ಕಲೆಗಳಲ್ಲಿನ ನಡುವಿನ ಸಹ ಸಂಬಂಧಗಳನ್ನು ಗುರುತಿಸಿ ಅವುಗಳಲ್ಲಿ ಕಂಡುಬರುವ ವಿಶೇಷ ಅಂಶಗಳನ್ನು ವಿಶ್ಲೇಷಣಾತ್ಮಕವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಒಂಭತ್ತನೆಯ ಅಧ್ಯಾಯವು ಸಮಾರೋಪವಾಗಿದ್ದು ಪ್ರಸ್ತುತ ಮೇಲಿನ ಎಂಟೂ ಅಧ್ಯಾಯಗಳಲ್ಲಿ ಚರ್ಚಿತವಾದ ಫಲಿತಗಳ ವಿಶ್ಲೇಷಣೆಯನ್ನು ಈ ಅಧ್ಯಾಯವು ಹೊಂದಿದೆ.

ವ್ಯಾಪ್ತಿ

ಭಾರತ ಮತ್ತು ಟಿಬೆಟ್ ದೇಶಗಳ ನಡುವೆ ನಡೆದ ಧಾರ್ಮಿಕ ಸಂಬಂಧ ಶತ–ಶತಮಾನಗಳಿಂದ ನಿರಂತರವಾಗಿ ಬೆಳೆದು ಬಂದಿದೆ. ಹಾಗೆಯೇ ಚಿತ್ರಕಲೆಯ ಬೆಳವಣಿಗೆಯೂ ಹಂತ–ಹಂತವಾಗಿ ಬೆಳೆದು ಬಂದಿರುವುದನ್ನು ಕಾಣಬಹುದು. ೧೯೫೯ರಲ್ಲಿ ಟಿಬೆಟಿನ ಅರಾಜಕೀಯತೆ ಉಂಟಾದ ಸಂದರ್ಭದಲ್ಲಿ ದಲೈಲಾಮ ಧರ್ಮಗುರುವಿನೊಂದಿಗೆ ಆತನ ಅನುಯಾಯಿಗಳು ಸಾವಿರಾರು ಸಂಖ್ಯೆಯಲ್ಲಿ

ಭಾರತಕ್ಕೆ ಸ್ವಯಂ ಗಡಿಪಾರಾಗಿ ಬಂದು ಅಂದಿನ ಪ್ರಧಾನಿ ನೆಹರೂರವರ ಸಹಾಯ ಹಸ್ತದಿಂದ ದಕ್ಷಿಣ ಭಾರತದ ಕರ್ನಾಟಕಕ್ಕೆ ಬಂದು ನೆಲಸುವಂತಾಯಿತು. ಇಂತಹ ಸಂದರ್ಭದಲ್ಲಿ ಅನೇಕ ಕಲಾವಿದರು ಹಾಗೂ ಬೌದ್ಧ ಸನ್ಯಾಸಿಗಳು ವಲಸೆ ಬಂದಿದ್ದಾರೆ.

ಈ ಅಧ್ಯಾಯವು "ಕರ್ನಾಟಕದಲ್ಲಿ ಟಿಬೆಟಿಯನ್ನರ ಚಿತ್ರಕಲೆ" ಯನ್ನು ಕುರಿತಾಗಿರುವುದರಿಂದ ಟಿಬೆಟಿಯನ್ನರ ಚಿತ್ರಕಲೆಗಳು ಕಂಡುಬರುವ ಅಥವಾ ಸಂಗ್ರಹಗೊಂಡಿರುವ ಪ್ರದೇಶಗಳ ವ್ಯಾಪ್ತಿಯನ್ನು ಹೊಂದಿದೆ. ಕರ್ನಾಟಕದಲ್ಲಿ ಬೌದ್ಧ ಧರ್ಮವು ಕ್ರಿ.ಪೂ. ದಿಂದ ಕ್ರಿ.ಶ ೮ನೇ ಶತಮಾನದವರೆಗೆ ಪ್ರಚಲಿತವಾಗಿದ್ದು ಈ ಪ್ರಾಂತ್ಯಗಳು ಬೌದ್ಧ ಸನ್ಯಾಸಿಗಳ ಧರ್ಮ ಆಚರಣೆಗಳಿಗೆ ಕಲಾ ಬೆಳವಣಿಗೆ. ಪ್ರಾಚೀನ ಕಾಲದಿಂದ ಇಂದಿನವರೆಗೂ ಒಂದಲ್ಲಾ ಒಂದು ರೀತಿಯಲ್ಲಿ ಭಾರತದಿಂದ ಟಿಬೆಟಿಗೆ ಹೋಗಿ ಮತ್ತು ಟಿಬೆಟಿನಿಂದ ಭಾರತಕ್ಕೆ ಬರುವಾಗ ಪ್ರಬುದ್ಧವಾಗಿ ಬೆಳೆದು ಬೇರೊಂದು ಹೊಸ ಶೈಲಿಯಾಗಿ ಪರಿವರ್ತಿನೆಗೊಂಡು ಮತ್ತೆ ಕರ್ನಾಟಕಕ್ಕೆ ಹಿಂತಿರುಗಿರುವುದು ಅನ್ಯ ಸಂಸ್ಕೃತಿಗಳ ಸಮ್ಮಿಲನಕ್ಕೆ ಸಾಕ್ಷಿಯಾಗಿದೆ.

ಟಿಬೆಟಿಯನ್ನರು ಕರ್ನಾಟಕದಲ್ಲಿ ತನ್ನದೇಯಾದ ಐದು ನೆಲೆಗಳಲ್ಲಿ ಕ್ಯಾಂಪ್‌ಗಳನ್ನು ನಿರ್ಮಿಸಿಕೊಂಡಿದ್ದು ಅವುಗಳೆಂದರೆ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಬೈಲುಕುಪ್ಪೆ, ಕೊಳ್ಳೆಗಾಲ ತಾಲೂಕಿನ ಒಡೆಯರ ಪಾಳ್ಯ, ಹುಣಸೂರು ತಾಲೂಕಿನ ಗುರುಪುರ, ಬೆಂಗಳೂರಿನ ಕೋರಮಂಗಲ, ಉತ್ತರಕನ್ನಡ ಜಿಲ್ಲೆಯ ಮುಂಡಗೋಡದಲ್ಲಿ ತಮ್ಮದೆಯಾದ ಬೌದ್ಧವಿಹಾರಗಳು, ಪ್ರಾರ್ಥನಮಂದಿರಗಳು, ಹೆಬ್ಬಾಗಿಲುಗಳು, ಸ್ತೂಪಗಳು, ಮನೆಗಳು, ರಸ್ತೆಗಳ ಮೇಲೆ ಹಾಗೂ ವಿವಿಧ ಶೃಂಗಾರಮಯ ವಾಸ್ತುರಚನೆಯನ್ನು ನಿರ್ಮಿಸಿಕೊಂಡು ಅವುಗಳ ಮೇಲೆ ಚಿತ್ರ ಶಿಲ್ಪಾದಿಗಳಿಂದ ವಿವಿಧ ರೀತಿಯ ಅಯಾಮಗಳನ್ನು ರಚಿಸಿಕೊಂಡಿದ್ದಾರೆ. ಈ ಎಲ್ಲಾ ಮೇಲಿನ ನೆಲೆಗಳಲ್ಲಿ ಥಾಂಕ ಶೈಲಿಯ ಚಿತ್ರಕಲೆಗಳು, ಚಿತ್ರಶಾಲೆಗಳನ್ನು ಸಂಶೋಧನಾ ಅಧ್ಯಯನದ ವ್ಯಾಪ್ತಿಗೆ ತಂದುಕೊಂಡು ಅಧ್ಯಯನ ಮಾಡಲಾಗಿದೆ. ಪೂರಕವಾಗಿ ಕರ್ನಾಟಕ ಹಾಗೂ ಕರ್ನಾಟಕೇತರ ವಿವಿಧ ಶೈಲಿಗಳ ಚಿತ್ರಗಳನ್ನು ಪ್ರಾಸಂಗಿಕವಾಗಿ ಪೂರಕವಾಗಿ ಅಲ್ಲ ಲ್ಲಿ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. ಇದು ಈ ಅಧ್ಯಯನದ ವ್ಯಾಪ್ತಿಯಾಗಿದೆ.

ವೈದಾನಿಕತೆ

ಪ್ರಸ್ತುತ ಅಧ್ಯಯನಕ್ಕೆ ಎರಡು ರೀತಿಯ ಆಕರ ಸಾಮಾಗ್ರಿಗಳನ್ನು ಬಳಸಿಕೊಳ್ಳಲಾಗಿದೆ.

ಅ. ಮೂಲ ಆಕರ ಸಾಮಾಗ್ರಿ

ಆ. ಅನುಷಂಗಿಕ ಆಕರ ಸಾಮಾಗ್ರಿ

ಮೂಲ ಆಕರ ಸಾಮಾಗ್ರಿ: ಚಿತ್ರಕಲಾ ಸಂಶೋಧನಾ ಕಾರ್ಯದ ಸಂದರ್ಭದಲ್ಲಿ ಮೂಲ ಆಕರ ಸಾಮಾಗ್ರಿಗಳಲ್ಲಿ ಬಹು ಮುಖ್ಯವಾದುದು ಕ್ಷೇತ್ರಕಾರ್ಯ. ಇಂತಹ ಕ್ಷೇತ್ರಕಾರ್ಯದಲ್ಲಿ ಕರ್ನಾಟಕದ ಟಿಬೆಟಿಯನ್ನರ ದೇವಾಲಯಗಳ ಪ್ರಾರ್ಥನಾ ಮಂದಿರಗಳ, ಸ್ತೂಪಗಳ ಹಾಗೂ ಟಿಬೆಟಿನ ಕ್ಯಾಂಪುಗಳ ಪರಿಸರದಲ್ಲಿನ ರಸ್ತೆ ಮೇಲಿನ ಭಿತ್ತಿಚಿತ್ರ, ಗೋಡೆಭಿತ್ತಿಚಿತ್ರಕಲೆ, ಪಟಚಿತ್ರಕಲೆ, ಸುರುಳಿಚಿತ್ರಕಲೆ ಹಾಗೂ ಇತರ ಸಂಕೀರ್ಣ ಮಾಧ್ಯಮದ ಚಿತ್ರಕಲೆಗಳ ನೆಲೆಗಳನ್ನು ಹಾಗೂ ಚಿತ್ರಿಸಿರುವ ಕಲಾವಿದರುಗಳ

ಹಾಗೂ ಪ್ರೋತ್ಸಾಹಕಾರರ, ಧರ್ಮಗುರುಗಳ ಹಾಗೂ ಬೌದ್ಧ ಸನ್ಯಾಸಿಗಳ, ಕಲಾಭಿರುಚಿ ಹೊಂದಿದ ವ್ಯಕ್ತಿಗಳು ಇರುವಲ್ಲಿಗೆ ಹೋಗಿ ಚರ್ಚಿಸಿ ಸಂದರ್ಶನಕ್ಕೆ ಒಳಪಡಿಸಲಾಗಿದೆ. ಹಾಗೂ ಅಲ್ಲಿನ ಕಲಾಕೃತಿಗಳನ್ನು ಛಾಯಾಚಿತ್ರಣ, ವಿಡಿಯೋ ಚಿತ್ರಣ, ಭಾಷೆಯ ತೊಡಕಾದರು ಧ್ವನಿಮುದ್ರಿಸಿಕೊಳ್ಳಲಾಗಿದ್ದು ಇದಕ್ಕೆ ಕಾರ್ಯ, ಭಾಷಾಂತರಕಾರರ ಸಹಾಯವನ್ನ ಪಡೆದು ಕೊಳ್ಳಲಾಗಿದೆ. ಹೀಗೆ ಹಲವು ರೀತಿಯಲ್ಲಿ ಮೂಲ ಆಕರಗಳ ಮಾಹಿತಿಗಳನ್ನು ವಸ್ತುನಿಷ್ಠವಾಗಿ ಸಂಗ್ರಹಿಸಲಾಗಿದೆ.

ಸಂದರ್ಶನ: ಚಿತ್ರಕಲೆಯ ವಿಶೇಷವಾಗಿ ಇಲ್ಲಿನ ಜನರು ಹಾಗೂ ಕಲಾವಿದರು ಮತ್ತು ಬೌದ್ಧ ಸನ್ಯಾಸಿಗಳು ಟಿಬೆಟ್, ಹಿಂದಿ, ಇಂಗ್ಲೀಷ್ ಮತ್ತು ಅಲ್ಪಸ್ವಲ್ಪ ಕನ್ನಡ ಬಲ್ಲವರಾಗಿದ್ದರಿಂದ ಕೆಲವೊಂದು ಸಂದರ್ಭಗಳಲ್ಲಿ ಅನುವಾದಕರ ಸಹಾಯದಿಂದ ಬಂದ ಮಾಹಿತಿಯನ್ನು ಧ್ವನಿ ಮುದ್ರಿಸಿಕೊಳ್ಳಲಾಗಿದೆ.

ಇಂತಹ ಪ್ರಯತ್ನದ ಜೊತೆಗೆ ವಿವಿಧ ಬಗೆಯ ಪ್ರಶ್ನೆಗಳಿಗೆ ಸಮಗ್ರವಾದ ಹತ್ತು ಹಲವು ವಿಷಯಗಳಿಗೆ ಉತ್ತರಗಳನ್ನು ಕಂಡುಕೊಳ್ಳಲಾಗಿದೆ. ಕೆಲವು ಸಂದರ್ಭದಲ್ಲಿ ಟಿಬೆಟಿಯನ್ನರ ಬಗ್ಗೆ ಹಲವು ಲೇಖನ ಬರೆದಿರುವ ಲೇಖಕರನ್ನು ಸಹ ಸಂದರ್ಶನ ಮಾಡಲಾಗಿದೆ. ಮೇಲಿನ ಎಲ್ಲಾ ವಿಷಯಗಳನ್ನು ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಛಾಯಾಚಿತ್ರಣ: ಟಿಬೆಟಿಯನ್ನರ ಕ್ಯಾಂಪುಗಳಲ್ಲಿನ ದೇವಾಲಯ, ಪ್ರಾರ್ಥನಮಂದಿರ, ರಸ್ತೆಯ ಮೇಲಿನ ಸ್ತೂಪಗಳು, ಸುರುಳಿಚಿತ್ರಣ, ಪಟಚಿತ್ರಣ ಮತ್ತು ಸಂಕೀರ್ಣ ಮಾಧ್ಯಮಗಳ ಚಿತ್ರಣಗಳ ಹಲವು ವಸ್ತುವಿಷಯಕ್ಕೆ ತಕ್ಕಂತೆ ಅವುಗಳು ಇರುವಲ್ಲಿಗೆ ಹೋಗಿ ಛಾಯಚಿತ್ರಣ ಹಾಗೂ ವಿಡಿಯೋ ಸಂಗ್ರಹವನ್ನು ಮಾಡಿಕೊಂಡು ಅಗತ್ಯಕ್ಕೆ ತಕ್ಕಂತೆ ಪ್ರಸ್ತುತ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಆನುಷಂಗಿಕ ಆಕರ ಸಾಮಾಗ್ರಿ: ಸಂಶೋಧನ ಪ್ರಬಂಧಗಳಲ್ಲಿ ಚಿತ್ರಕಲೆಗೆ ಸಂಬಂಧಿಸಿದ ಮಾಹಿತಿಯನ್ನು ಅಪ್ರಕಟಿತ ಮತ್ತು ಪ್ರಕಟಿತ ಕೃತಿಗಳು, ನಿಘಂಟುಗಳು, ಗೆಝೇಟಿಯಾರ್‌ಗಳು, ವಿಶ್ವಕೋಶ, ಅನುವಾದ ಪಡಿಸಿದ ಕೃತಿಗಳು. ದಿನಪತ್ರಿಕೆ, ವಾರಪತ್ರಿಕೆ, ಮಾಸಿಕ ಮತ್ತು ವಾರ್ಷಿಕ ಪತ್ರಿಕೆಗಳು. ಕೈಪಿಡಿಗಳು, ಟಿಬೆಟಿಯನ್ನರ ಚಿತ್ರಕಲೆಗೆ ಸಂಬಂಧಿಸಿದ ಲೇಖನಗಳು, ಕರ್ನಾಟಕದ ಅನೇಕ ವಿಶ್ವವಿದ್ಯಾಲಯದ ಗ್ರಂಥಾಲಯಗಳು, ಕನ್ನಡ ಪುಸ್ತಕ ಪ್ರಾಧಿಕಾರ ಕನ್ನಡ ಸಾಹಿತ್ಯ ಪರಿಷತ್ತು, ವಿವಿಧ ಸಂಘ–ಸಂಸ್ಥೆಗಳಲ್ಲಿ ಸಂಗ್ರಹಗೊಂಡ ಪುಸ್ತಕಗಳಿಂದ ವಿಷಯುಗಳ ಮಾಹಿತಿಸಂಗ್ರಹಿಸಿ ಹಾಗೂ ಅಂತರ ಜಾಲದ ಹುಡುಕಾಟದಿಂದ ಹಲವು ವಿಷಯಗಳನ್ನು ಸಂಗ್ರಹಿಸಿಕೊಂಡು ಈ ಸಂಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

***



ಅಧ್ಯಾಯ–ಎರಡು

ಟಿಬೆಟಿಯನ್ನರ ಸಾಂಸ್ಕೃತಿಕ ನೆಲೆ–ಹಿನ್ನೆಲೆ ಹಾಗೂ ವಲಸೆ

ಹಿಮಾಲಯದ ಸೆರಗಿನ ಉದ್ದಕ್ಕೂ ಹಾಸಿರುವ ನಮ್ಮ ನೆರೆನಾಡು ಟಿಬೆಟ್ ವಿಶಾಲವಾದ ಭೂಪ್ರದೇಶವನ್ನು ಹೊಂದಿದ್ದು ಸುಂದರವಾದ ಪ್ರಕೃತಿಯ ತಾಣವಾಗಿದೆ. ಪಶ್ಚಿಮಕ್ಕೆ ಭಾರತ, ಪಾಕಿಸ್ತಾನ, ಅಪಘಾನಿಸ್ತಾನಗಳಿದ್ದರೆ, ಪೂರ್ವಕ್ಕೆ ಚೀನಾ ತಪ್ಪಲು, ದಕ್ಷಿಣಕ್ಕೆ ನೇಪಾಳ ಹಾಗೂ ಉತ್ತರ ಪೂರ್ವ ಭಾಗಕ್ಕೆ ತುರ್ಕಿಸ್ತಾನಗಳಿವೆ. ಸುಮಾರು ೧೦,೦೦೦ ಅಡಿ ನೆರೆ ಹೊರೆ ರಾಷ್ಟ್ರಗಳಿಗಿಂತ ಎತ್ತರದಲ್ಲಿರುವ ಟಿಬೆಟ್ ದೊಡ್ಡ ಪರ್ವತಾವಳಿಯು ಮಂಜಿನಿಂದ ಕೂಡಿದ್ದು ಶೀತ ಹವೆಯುಳ್ಳದ್ದಾಗಿದೆ. ಸ್ಥೂಲವಾಗಿ ಪೂ.ರೇ. ೭೪°-೧೦೦° ಮತ್ತು ಉ.ಅ. ೨೭°-೩೭° ವಾತಾವರಣ ಹೊಂದಿದ್ದು ಉನ್ನತ ಪ್ರಸ್ಥಭೂಮಿಯ ಮೇಲೆ ಹಬ್ಬಿರುತ್ತದೆ. ಇದರ ವಿಸ್ತೀರ್ಣ ೪.೭೧.೬೬೦ ಚ.ಮೈ (೧೨.೨೧.೬೦೧ ಚ.ಕಿ.ಮೀ), ಜನಸಂಖ್ಯೆ ೧೪.೦೦.೦೦೦ (೧೯೬೮ ಅಂ) ಹೊಂದಿದ್ದು, ಇಲ್ಲಿನ ಪ್ರಮುಖ ನದಿಗಳೆಂದರೆ ಇರಾಎಡ್ಡಿ, ಯಾಂಗ್‌ತ್ಸೆ, ಮಕಾಂಗ್, ಸಲ್ವೀನ್, ತಿಸ್ತಾ ಇತ್ಯಾದಿ. ಇವು ಚೀನಾದ ಬಯಲು ಪ್ರದೇಶದತ್ತ ಮತ್ತು ಆಗ್ನೇಯ ಏಷ್ಯಾ ನೆಲದತ್ತ ಭೋರ್ಗರೆಯುತ್ತಾ ಹರಿಯುತ್ತವೆ. ಮೇಲಿನ ನದಿಗಳೆಲ್ಲಾ ಹುಟ್ಟುವುದು ಈ ಟಿಬೆಟಿನ ಪರ್ವತ ಸೀಮೆಯಲ್ಲಿಯೆ. ಬ್ರಹ್ಮಪುತ್ರ (ಟ್ಸಾಂಗ್ ಪ್ಲೇ)ಉದ್ದವಾಗಿದ್ದು, ಇದು ಟಿಬೆಟಿನ ಭೂಪ್ರದೇಶದಲ್ಲಿ ೮೦೦ ಮೈಲಿ ಹರಿದಾಡಿ ನಂತರ ಭಾರತವನ್ನು ತಲುಪುತ್ತದೆ. ಕೈಲಾಸ ಮತ್ತು ಕೊನ್ ಲೂಸ್ ಶ್ರೇಣಿಗಳ ನಡುವೆ ಇರುವ ಜಾಂಗ್ ಕಾಂಗ್ ಪ್ರದೇಶದಲ್ಲಿ ಅಸಂಖ್ಯಾತ ಸರೋವರಗಳಿವೆ. ಆದರೆ ಟಿಬೆಟಿನ ಅತ್ಯಂತ ದೊಡ್ಡ ಸರೋವರಗಳ ಪೈಕಿ ಮೂರು-ಚಿಂಗ್ ಹೈ (ಕೋ-ಕೋ-ನೋರ್) ಸರೋವರ ಮತ್ತು ಯಾವೆರ್ ಡ್ರಾಕ್ ಟ್ರಾ (ಯುಂಗ್-ಚೋ-ಯುಂಗ್) ಈ ಪ್ರದೇಶದ ಹೊರಗಡೆ ಇವೆ.

ಟಿಬೆಟನ್ನು ಭೌಗೋಳಿಕವಾಗಿ ಐದು ಪ್ರದೇಶಗಳಾಗಿ ವಿಂಗಡಿಸಿ ಹೇಳುವುದಾದರೆ ಒಂದನೇ ಪ್ರದೇಶ ಟಿಬೆಟಿನ ಮಧ್ಯಭಾಗವು ಆಧುನಿಕ ಟಿಬೆಟಿನ ಸಾಂಸ್ಕೃತಿಕ ಹಾಗೂ ರಾಜಕೀಯ ಕೇಂದ್ರವಾಗಿದ್ದು, ಬ್ರಹ್ಮಪುತ್ರದ ಉಪನದಿಗಳಾದ ರ್‍ಯೇ ಚ್ಯೋ (ಲಾಸಾ) ಮತ್ತು ಯಾರ್ಲಂಗ್‌ಗಳ ಬಯಲುಗಳು ಈ ಪ್ರದೇಶಕ್ಕೆ ಸೇರಿವೆ. ಇದರಲ್ಲಿ ಲಾಸಾವು ಟಿಬೆಟಿನ ರಾಜಧಾನಿ. ೨ನೇ ಪ್ರದೇಶಕ್ಕೆ ಪಶ್ಚಿಮದಲ್ಲಿರುವುದು ಟ್ಸಾಂಗ್ ಜಿಲ್ಲೆ ಅದರ ಮುಖ್ಯಪಟ್ಟಣ ಗಾಟ್ಸೆ, ಇದಕ್ಕೆ ಉತ್ತರದಲ್ಲಿ ಟಿಬೆಟಿನ ಜನರ ಧಾರ್ಮಿಕ ಹಾಗೂ ರಾಜಕೀಯ ಕೇಂದ್ರವಾದ ಟ್ರಷಿ ಉಹಂಪೊ ಇದೆ. ೩ನೆಯದಾದ ಎನ್ಸಾರಿ ಪರ್ವತ ಸೀಮೆ ಇದು,

ಪಶ್ಚಿಮಕ್ಕಿದು ಹಿಮಾಚ್ಛಾದಿತ ಶೃಂಗಗಳಿಗಿಂತಲು ಆಳವಾದ ನದಿ ಕಮರಿಗಳಿಂದಲೂ ಕೂಡಿದ ಪ್ರದೇಶವಾಗಿದ್ದು, ಹೆಚ್ಚು ಜನಸಂಖ್ಯೆಯನ್ನು ಹೊಂದಿಲ್ಲ. ಇಲ್ಲಿನ ಜನರು ಬರುಕನ್ನು ಅರಸುತ್ತಾ ತಮ್ಮ ಸಾಕು ಪ್ರಾಣಿಗಳೊಂದಿಗೆ ಒಂದು ಕಣಿವೆಯಿಂದ ಮತ್ತೊಂದು ಕಣಿವೆಗೆ ಸಂಚರಿಸುತ್ತಾರೆ. ೪ನೆಯದು ಜಾಂಗ್ ಡಾಂಗ್ ಪ್ರದೇಶ ಉತ್ತರದ ವಿಶಾಲಬಯಲು ಹಿಮಗಟ್ಟಿದ ಬಂಜರು ಪ್ರದೇಶದಲ್ಲಿ ಬಹು ವಿರಳವಾಗಿ ವಾಸಿಸುತ್ತಿದ್ದರು. ೫ನೆಯ ಪ್ರದೇಶ ಬಾಮ್ ಪ್ರದೇಶ, ಪೂರ್ವ ಭಾಗದಲ್ಲಿದ್ದು ಟಿಬೆಟಿಗೆ ಅತ್ಯಂತ ಫಲವತ್ತಾದ ನೆಲವಾಗಿದ್ದು, ಜನಸಂಖ್ಯೆ ಅತ್ಯಧಿಕವಾಗಿದೆ. ಕಾರಣ ತಗ್ಗಿನ ಪ್ರದೇಶದಲ್ಲಿದೆ. ಹೆಚ್ಚು ಮಳೆ, ನದಿಗಳ ಕಮರಿಗಳ ಅಂಚಿನಲ್ಲಿ ದಟ್ಟ ಅರಣ್ಯಗಳಿವೆ, ನದಿಗಳ ಕೆಳದಂಡೆ ಭೂಪ್ರದೇಶಗಳಲ್ಲಿ ಸಾಗುವಳಿಗೆ ಅನುಕೂಲಕರವಾಗುವಂತೆ ಒಳಗೊಂಡಿದೆ.[೧]

ಮೇಲಿನ ಭೂಪ್ರದೇಶಗಳ ವಾಯುಗುಣವು ಕಡಿಮೆ ತಾಪಮಾನದಿಂದ ಕೂಡಿದ ಕಾರಣ ಸಮುದ್ರ ತೀರ ದೂರದಲ್ಲಿದ್ದು ದಕ್ಷಿಣದಿಂದ ಉತ್ತರಕ್ಕೆ ಹೋಗುತ್ತಿದ್ದಂತೆ ಹಿಮಾಲಯ ಪರ್ವತಗಳು ಮಾನ್ಸೂನ್ ಮೋಡಗಳನ್ನು ತಡೆದು ಅಲ್ಲೇ ಬಹುತೇಕ ಮಳೆ ಸುರಿಸುತ್ತವೆ. ಹಿಮಾಲಯದ ದಕ್ಷಿಣ ಪಾರ್ಶ್ವಗಳಲ್ಲಿ ವಾರ್ಷಿಕ ಮಳೆ ೨೦೦". ಅಳಿದುಳಿದ ಕಣಿವೆಗಳಲ್ಲಿ ಮುಂದೆ ಸಾಗಿದ ಮೋಡಗಳು ಕೈಲಾಸ ಪರ್ವತಗಳ ಮೇಲೆ ಮಳೆ ಸುರಿಸುತ್ತವೆ. ವರ್ಷವಿಡೀ ಅತ್ಯಂತ ಬಲವಾಗಿ ಬೀಸುವ ತಣ್ಣನೆಯ ಗಾಳಿಯಿಂದ ವಾಯುಗುಣ ಬದಲಾಗುತ್ತಲೆ ಇರುತ್ತದೆ. ೧೮°ಸೆ ನವರೆಗೆ ಇಳಿಯುವಂತಹ ಹಾಗೂ ೩೮°ಸೆ ವರೆಗೆ ಹೆಚ್ಚಾಗಿರುವಂತಹ ಕ್ರಿಯೆ ನಡೆಯುತ್ತದೆ. ಬೇಸಿಗೆಯಲ್ಲೂ ಹಿಮ ಬೀಳುವುದುಂಟು. ನೈಸರ್ಗಿಕ ಪರಿಸರ ಮೂರನೆಯ ಎರಡು ಭಾಗವು ಆಕ್ರಮಿಸಿಕೊಂಡಿರುವ ಉತ್ತರದ ಮೈದಾನದಲ್ಲಿ ಮರಗಳಿಲ್ಲ. ಅಲ್ಲಿ ಮಳೆ ಇಲ್ಲ ಒಣಗಾಳಿ ಬೀಸುತ್ತದೆ. ಬಹಳ ಚಳಿ. ಎನ್‌ಗಾರಿ ಜಿಲ್ಲೆಯ ಸಟ್ಲೇಜ್ ನದಿ ಬಯಲು, ದಕ್ಷಿಣ ಚುಂಬಿ ಕಣಿವೆ ಅರಣ್ಯಗಳಲ್ಲಿ ಶಂಕುದಾರಿ ದೈತ್ಯ ಸ್ವರೂಪಿ ಮರಗಳು, ಓಕ್, ಅಕ್ರೋಟು, ಮೇಪ್‌ಲ್, ಪ್ಲಾಪ್ಲರ್, ಸ್ಪ್ರೂಸ್, ತಾಳೇಶ ಪತ್ರ ಮುಂತಾದ ಮರಗಳಿವೆ. ಪೈಮು (ಹೃದಯ ವಿಷ) ಹರಿಕುಶ, ರೇವಲ್ ಚಿನ್ನಿ, ಕೇಸರಿ, ಒಜೆ ಮುಂತಾದ ಮೂಲಿಕೆಗಳುಂಟು.

ಟಿಬೆಟಿನ ಕೆಲವು ನದಿಗಳ ಹಾಗೂ ಆಗ್ನೇಯದ ಫಲವತ್ತಾದ ತಗ್ಗು ನೆಲದಲ್ಲಿ ವ್ಯವಸಾಯ ನಡೆಸುತ್ತಿದ್ದು, ಕೆಲವು ಬಹುಭಾಗ ಬಂಜರು ಪ್ರದೇಶ, ಮಂಜುಗಟ್ಟಿದ ನೆಲ ಹೊಂದಿದೆ. ಜಲಾನಯನ ಪ್ರದೇಶಗಳಲ್ಲಿ ಬಾರ್ಲಿ, ಟರ್ನಿಪ್, ಗೋಧಿ ಇತರ ಧ್ಯಾನ್ಯಗಳನ್ನು ಆಗ್ನೇಯ ತಪ್ಪಲಿನಲ್ಲಿ ಭತ್ತವನ್ನು ಬೆಳೆಯುತ್ತಾರೆ.

ಭೂ ಭಾಗವನ್ನು ಪರಿಶೋಧನೆಗಳಿಗೆ ಒಳಪಡಿಸಿ ಯೋಗ್ಯ ಬೆಳೆಯನ್ನು ಬೆಳೆಯುತ್ತಾರೆ. ೧೯೫೦ರಲ್ಲಿ ಖನಿಜ ನಿಕ್ಷೇಪಗಳ ಪರಿಶೋಧನೆಗಳಿಂದ ಇಲ್ಲಿ ತೈಲ, ಕಲ್ಲರಗು, ಕಬ್ಬಿಣ, ಮ್ಯಾಂಗನೀಸ್, ಉಪ್ಪು, ಸೋಡ, ಟಂಕಣ, ಗಂಧಕ, ಸ್ಫಟಿಕ, ಅಭ್ರಕ, ಗ್ರಾಫೈಟ್, ಜಿಪ್ಸಂ, ಜೇಡ್, ಶಿಲೆ, ಪಿಂಗಾಣಿ ಮಣ್ಣು, ಕಬ್ಬಿಣದ ಅದಿರುಗಳು ಇತ್ಯಾದಿ ಗುರುತಿಸಿ ತೆಗೆದು ತಮ್ಮ ಆರ್ಥಿಕತೆಯನ್ನು ಹೆಚ್ಚಿಸಿಕೊಂಡಿದ್ದಾರೆ.

ಇವುಗಳಲ್ಲದೆ ಗೃಹ ಕೈಗಾರಿಕೆ ಹಾಗೂ ಕುಶಲ ಕಲೆಗಳು, ಜವಳಿ, ಕಬ್ಬಿಣ, ಉಕ್ಕು, ವಿದ್ಯುತ್ ಮುಂತಾದ ದೊಡ್ಡ ಉದ್ಯಮಗಳು ಟಿಬೆಟಿನಲ್ಲಿ ಸ್ಥಾಪಿತವಾಗಿವೆ. ಉಪ್ಪು, ಗಿಡ ಮೂಲಿಕೆಗಳು, ಪ್ರಾಣಿ

೧. ವಿ.ಜಿ.ಕೃಷ್ಣಮೂರ್ತಿ: ಕನ್ನಡ ವಿಶ್ವಕೋಶ, ಸಂ.೮: ಮ.ಸಂ. ೫೩೮

ಮೂಲವಸ್ತುಗಳು, ಚಹ, ರೇಷ್ಮೆ ಯಂತ್ರ ಸರಕು ಟಿಬೆಟಿನ ಮುಖ್ಯ ನಿರ್ಮಾಣ ವಸ್ತುಗಳನ್ನು ಆಮದು ಮಾಡಿಕೊಳ್ಳುತ್ತದೆ. ಜನರಿಗೆ ಹೆಚ್ಚಾಗಿ ಸಾರಿಗೆ ಸೌಲಭ್ಯಗಳಿಲ್ಲದೆ ಕಾಲು ನಡಿಗೆ ಪ್ರಾಣಿಗಳ ಸಹಾಯದಿಂದ ಸಂಚರಿಸುತ್ತಾರೆ. ಕಮ್ಯುನಿಷ್ಟ್ ಸರ್ಕಾರದಿಂದ ೧೯೫೬ರಲ್ಲಿ ಮೋಟಾರುರಸ್ತೆ, ವಿಮಾನ ಸಂಚಾರ, ಸೈನಿಕ ವಿಮಾನ ಸುಲಭವಿದ್ದ ರೈಲುಮಾರ್ಗವಿಲ್ಲದ ಪ್ರದೇಶವೆಂದು ಗುರುತಿಸಿಕೊಂಡಿದೆ.[೨]

ಟಿಬೆಟಿನ ಸಾಕು ಪ್ರಾಣಿಗಳೆಂದರೆ, ಕುರಿ, ಮೇಕೆ, ಯಾಕ್, ಕುದುರೆ, ಕತ್ತೆ, ಯಾಕ್ ಹೇರು ಪ್ರಾಣಿಗಳು. ಅವು ಕಡಿದಾದ ಪರ್ವತ ಭಾಗಗಳಲ್ಲಿ ಪ್ರಯಾಣ ಮಾಡಬಲ್ಲವು, ಆದರೆ ಅವು ವ್ಯವಸಾಯಕ್ಕೆ ಯೋಗ್ಯವಲ್ಲ. ಹಿಂದೆ ಪ್ರಸಿದ್ಧವಾಗಿದ್ದ ಬಲಯುತವಾದ ಜಾತಿಯ ಕುದುರೆಗಳು ಈಗ ಟಿಬೆಟಿನಲ್ಲಿಲ್ಲ. ಸವಾರಿ ಕುದುರೆಗಳನ್ನು ಚೀನಾದ ಚಿಂಗ್‌ಹೈ ಪ್ರಾಂತ್ಯದಿಂದ ತರಿಸಿಕೊಳ್ಳುತ್ತಾರೆ. ವನ್ಯ ಮೃಗಗಳಿಂದ ಕಾಡಿ ಯಾಕ್, ಕಾಡು ಕುದುರೆ, ಕಾಡುಕತ್ತೆ, ಹಿಮಚಿರತೆ, ಲೊಂಕ್ಸ್, ಕಂದು ಅಥವಾ ಕರಿಕರಡಿ, ಗೆಝಿಲ್ ಸಾರಂಗ, ಮಾರ್ಮಾಟ್, ಜಿಂಕೆ, ಕಸ್ತೂರಿ ಮೃಗ, ಕಾಡುಕುರಿ, ಪಕ್ಷಿಗಳು, ಹಂಸ, ಕಬ್ಬಾರೆ, ಡೇಗ ಕಡಲಕಾಗೆ, ವೀನಹದ್ದು, ಬಾತುಕೋಳಿ, ಉಳಿಸಿಂಡ, ಮರಕುಟಿಗ, ಪಾರಿವಾಳ, ಗುಬ್ಬಚ್ಚಿ ಮುಂತಾದವು ಟಿಬೆಟಿನ ಪೂರ್ವಭಾಗದಲ್ಲಿ ಸುಂದರವಾದ ಜೀವರಾಶಿಗಳಾಗಿವೆ.

ಟಿಬೆಟಿಯನ್ನರ ಭಾಷೆಗೂ ಉತ್ತರ ಬರ್ಮದ ಕೊಕಿ ಮತ್ತು ಪಾನ್ ಜನ ಆಡುವ ಭಾಷೆಗಳಿಗೂ ಹೋಲಿಕೆಗಳಿವೆ. ಇವರ ಪ್ರಧಾನ ಲಕ್ಷಣಗಳು ಕಪ್ಪುಕೂದಲು ಕಂದುಬಣ್ಣದ ಕಣ್ಣು ಮಧ್ಯೆ ಮತ್ತು ಪಶ್ಚಿಮ ಭಾಗಗಳಲ್ಲಿರುವ ಬೋದ್‌ಪೊ, ಪೂರ್ವ ಟಿಬೆಟಿನ ಖಂಪ, ವಾಯುವ್ಯ ಚೀನಾದ ಅಮ್‌ದೊನಲ್ಲಿರುವ ಬೌದ್ಧ ಧರ್ಮೀಯರು ಪೂರ್ವ ಟಿಬೆಟಿನಯನ್ನರು ಸ್ವಲ್ಪ ಎತ್ತರವಾಗಿರುತ್ತಾರೆ. ಇಲ್ಲಿನ ಜನರು ಉದ್ದ ತೋಳಿನ ನಿಲುವಂಗಿ ಕುರಿ ಚರ್ಮದ ಅಂಗಿ, ತಲೆ ಮೇಲೆ ವಿವಿಧ ಆಕಾರಗಳ ಹ್ಯಾಟ್ ಧರಿಸಿದ್ದು ಸ್ತ್ರೀಯರು ವಿವಿಧ ಆಭರಣಗಳನ್ನು ಧರಿಸುತ್ತಾರೆ. ಪುರುಷರು ಸರ ಮತ್ತು ಕರ್ಣಾಭರಣಗಳನ್ನು ತೊಡುವುದುಂಟು. ಸ್ತ್ರೀಯರು ತಮ್ಮ ಕೂದಲನ್ನು ಕಿರುಜಡೆಗಳಾಗಿ ಹೆಣೆದು ಒಟ್ಟಿಗೆ ಸೇರಿಸಿ ಶೃಂಗರಿಸಿಕೊಳ್ಳವರು. ಲಾಮ ಪುರೋಹಿತರು ಮಂತ್ರಿಸಿಕೊಡುವ ತಾಯಿತಗಳನ್ನು ಕೊರಳಲ್ಲಿ ಧರಿಸುತ್ತಾರೆ. ಮದುವೆಯಾದ ಸ್ತ್ರೀಯರಿಗೆ ಗೌರವವಿದ್ದು ಧರ್ಮಾಚರಣೆಯಲ್ಲಿ ಸ್ಥಾನವಿಲ್ಲ.

ಶ್ರೀಮಂತರ ಮನೆಗಳು ಕಲಾಕೃತಿಗಳಿಂದ ತುಂಬಿದರೆ ಬಡವರ (ಸಾಮಾನ್ಯ) ಮನೆಗಳು ಮಣ್ಣಿನ ಗೋಡೆ ಹಾಗೂ ಮುರಿದ ಛಾವಣಿಗಳಿಂದ ನಿರ್ಮಿತವಾಗಿವೆ. ಗೋವಳರು ಯಾಕ್ ಪ್ರಾಣಿಯ ಕೂದಲಿಂದ ತಯಾರಿಸಿದ ಉಣ್ಣೆಯ ಡೇರೆಗಳಲ್ಲಿ ವಾಸಿಸುತ್ತಿದ್ದಾರೆ. ಇಲ್ಲಿಯ ಜನರ ಆಹಾರವು ಬಾರ್ಲಿ, ಬೆಣ್ಣೆ, ಚಹ, ಹತ್ತಿ, ಹಣ್ಣು, ತರಕಾರಿ, ಗೋಧಿ, ಬಾರ್ಲಿಯಿಂದ ಮದ್ಯ ತಯಾರಿಸುತ್ತಾರೆ, ಹಾಗೂ ಯಾಕ್ ಪ್ರಾಣಿಯ ಮಾಂಸ, ಮೀನು, ಕೋಳಿಗಳನ್ನು ತಿನ್ನುವುದು ತಿಳಿದುಬರುತ್ತದೆ. ಹೀಗೆ ತಮ್ಮದೇ ಆದ ಶಾಂತ ಜೀವನಶೈಲಿಯನ್ನು ಟಿಬೆಟಿಯನ್ನರು ರೂಡಿಸಿಕೊಂಡು ಬಂದಿದ್ದಾರೆ.

ಟಿಬೆಟಿಯನ್ನರ ಜನಜೀವನದ ಬೆಳವಣಿಗೆ

ಟಿಬೆಟಿಯನ್ನರು ಗಟ್ಟಿಮುಟ್ಟಾಗಿದ್ದು ಪರ್ವತಾವಳಿಗಳ ಎಡೆಯಲ್ಲಿ ನೆಲೆಒಸಿರುವ ಅವರ ಜೀವನದಲ್ಲಿ ಏಕಾಂತ ಮನೋವೃತ್ತಿ ಅಧಿಕ. ಅದರಿಂದ ಇವರು ಬೌದ್ಧಧರ್ಮಕ್ಕೆ ಮನಸೂರೆಗೊಂಡರು. ಇವರು

೨. ಎ.ಜಿ.ಕೃಷ್ಣಮೂರ್ತಿ: ಕನ್ನಡ ವಿಶ್ವಕೋಶ, ಸಂ.೮: ಪು.ಸಂ. ೫೩೯

ಮತ್ತೊಬ್ಬರ ತಂಟೆಗೆ ಹೋಗುವವರಲ್ಲ. ಇನ್ನೊಬ್ಬರು ಅವರ ತಂಟೆಗೆ ಬರಕೂಡದು. ವಿದೇಶಿಯರೆಂದರೆ ಅವರಿಗೆ ಸಂಶಯ ತಮ್ಮ ಪಾಡಿಗೆ ಬೇಸಾಯ ಮಾಡಿಕೊಂಡಿದ್ದು ಸಾಂಪ್ರದಾಯಿಕವಾದ ಮತಚಾರಗಳನ್ನು ಅನುಸರಿಸಿಕೊಂಡಿರುವುದರಲ್ಲೇನೆ ಅವರಿಗೆ ತೃಪ್ತಿ. ಎಲ್ಲರು ಅನುಸರಿಸುತ್ತಿರುವ ಧರ್ಮ ಬುದ್ಧನದು, ಆದರೆ ಅದು ಚೀನಾ ದೇಶದಿಂದ ಅವರಿಗೆ ದೊರಕಿದ ಧರ್ಮ ನೇರವಾಗಿ ಹಿಂದೂಸ್ಥಾನದಿಂದಲ್ಲ. ಹೀಗಾಗಿ ಚೀನೀಯ ಸಂಸ್ಕೃತಿಯ ಪ್ರಭಾವ ಅವರಲ್ಲಿ ಉಂಟಾಗಿದೆ. ನಡೆ-ನುಡಿಗಳಲ್ಲಿ, ಶಿಷ್ಟಾಚಾರದಲ್ಲಿ ತುಂಬಾ ನಯ-ವಿನಯಗಳಿಂದ ನಡೆದುಕೊಳ್ಳುವವರು. ತಮಗೆ ಆಗದವರನ್ನು ಓಡಿಸುವುದಾದರೂ ಗೌರವದಿಂದಲೇ ಓಡಿಸುತ್ತಾರೆ. ಹಿರಿಯರು ತಮ್ಮ ಮೇಲಿನ ಅಧಿಕಾರಿಗಳು ಎಂದರೆ ಹೆಚ್ಚು ಗೌರವವನ್ನು ನೀಡುತ್ತಾರೆ, ಕುಳಿತುಕೊಳ್ಳಿ ಎನ್ನುವ ತನಕ ಕುಳಿತುಕೊಳ್ಳುವುದಿಲ್ಲ, ಸಮಾನರನ್ನು ಸತ್ಕರಿಸುವ ವಿಧಾನ ಇನ್ನಷ್ಟು ವಿಚಿತ್ರ, ಒಂದು ಕೈ ಕಪೋಲಕ್ಕಿಟ್ಟು ಇನ್ನೊಂದನ್ನು ಕಂಕುಳಲ್ಲಿರಿಸಿ ನಾಲಿಗೆ ಮುಂದೆ ಮುಂದೆ ಚಾಚುವ ಒಂದು ವಿಚಿತ್ರ ಸ್ನೇಹಾಚಾರವಿದೆ. ಇನ್ನು ಮಿತ್ರರನ್ನು ಭೇಟಿಯಾದಾಗ ರೇಷ್ಮೆಯ ಕರವಸ್ತ್ರಗಳನ್ನು ವಿನಿಮಯ ಮಾಡುವ ಶಿಷ್ಟಾಚಾರದ ವಂದನೆ ಕ್ರಮವೂ ಅವರಲ್ಲಿ ರೂಢಿಯಾಗಿದೆ. ಚೀನಿಯರಂತೆ ಅವರೂ ಚಹಾ-ಪಾನ ಪ್ರಿಯರು, ಗೆಳೆಯರ ಸತ್ಕಾರಕ್ಕೆ ಬೆಣ್ಣೆ, ಉಪ್ಪು ಬೆರೆಸಿದ ಚಾಹಾ ಅನಿವಾರ್ಯ, ಅದನ್ನು ಕುಡಿಯುತ್ತಾ ಎಷ್ಟು ಕಾಲ ಮಾತನಾಡುತ್ತಿರುತ್ತಾರೆ. ಚಾ ಪ್ರಿಯರಿರುವಂತೆ ನೃತ್ಯ ಪ್ರಿಯರು ಅಹುದು. ಸಾಮಾನ್ಯ ಜಾನಪದ ಕುಣಿತಗಳವು ನಮಗೆ ಕಂಡುಬೇಸರವಾದೀತು. ಆದರೆ ಅವರು ಹಾಡುತ್ತಾ ತಾಸು ತಾಸುಗಳನ್ನು ಕುಣಿದು ಕಾಲ ಕಳೆಯುತ್ತಾರೆ. ಅಲ್ಲಿನ ದೆವ್ವದ ನೃತ್ಯಗಳು ವಿಖ್ಯಾತವಾದವು ಈ ಕುಣಿತಗಳೆಲ್ಲ ಗಂಡಸರ ಪಾಲಿನ ಸಂತೋಷಗಳು, ಹೆಂಗಸರು ಕುಣಿಯುವುದಿಲ್ಲ.

ಟಿಬೆಟಿನವರ ಸಾಮಾಜಿಕ ಜೀವನ ನೂರಾರು ವಿಚಿತ್ರ ಕಟ್ಟಳೆ, ನಂಬಿಕೆಗಳಿಂದ ಕೂಡಿದ್ದು ಗಂಡಸರು, ಹೆಂಗಸರು ನಿತ್ಯೋದ್ಯೋಗಗಳಲ್ಲಿ ಬೆರೆತು ಕೆಲಸ ಮಾಡುವುದರಲ್ಲಿ ಹೆಂಗಸು ಹೊಲದಲ್ಲಿ ತುಂಬ ದುಡಿಯುತ್ತಾಳೆ. ಮತಾಚಾರಗಳಲ್ಲಿ ಮಾತ್ರ ಅವಳ ಪಾತ್ರ ಕಡಿಮೆ. ಬಹುಪತಿತ್ವದ ಆಚಾರಣೆ ಇದ್ದು ಅಣ್ಣ-ತಮ್ಮಂದಿರುಗಳಿಗೆಲ್ಲಾ ಒಬ್ಬಳೆ ಹೆಂಡತಿ. ನಾಲ್ಕೈದು ಗಂಡುಮಕ್ಕಳಿರುವ (ಅಣ್ಣ-ತಮ್ಮಂದಿರು) ಮನೆಯಲ್ಲಿ ಒಟ್ಟಿಗೆ ಬಾಳುವಾಗ ಒಬ್ಬಳೆ ಹೆಂಡತಿಯನ್ನು ಮಾಡಿಕೊಳ್ಳುವರು, ಆದರೆ ಹೆಂಡತಿ ದಾಸಿಯಲ್ಲ ಇವಳದೆ ಬಹು ಮುಖ್ಯ ಪಾತ್ರವಿರುತ್ತದೆ. ದುಡಿದ ಎಲ್ಲಾ ಗಂಡಸರು ಅವಳ ಕೈಗೆ ಹಣವನ್ನು ತಂದುಕೊಡಬೇಕು, ತಮಗೆ ಬೇಕಾದಾಗ ಅವಳಿಂದಲೇ ಹಣವನ್ನು ಪಡೆಯಬೇಕು. ಸರಿಯಾಗಿ ನಡೆದುಕೊಳ್ಳದ ಗಂಡನಿಗೆ ಆಕೆ ನಾಲ್ಕೈದು ಕೊಟ್ಟು ಬುದ್ಧಿಕಲಿಸಬಹುದು. ಅವರ ದಾಂಪತ್ಯ ಜೀವನದಲ್ಲಿ ಮನಸ್ತಾಪ ಉಂಟಾದರೆ ದಾಂಪತ್ಯ ಕಡಿದುಕೊಳ್ಳುವುದಕ್ಕೆ ಯಾವ ತೊಡಕೂ ಇರುವುದಿಲ್ಲ. ಇದು ಬೌದ್ಧ ಧರ್ಮೀಯರ ದೇಶವಾದುದರಿಂದ ಬಹುಮಂದಿ ಭಿಕ್ಷುಗಳಾಗುತ್ತಾರೆ. ಹಾಗಿದ್ದೂ ಬಹುಪತಿತ್ವ ಉಳಿದಿರುವುದು ಆಶ್ಚರ್ಯಕರ. ಉಳಿದ ದೇಶಗಳಲ್ಲಿ ಸ್ತ್ರೀಯರು ತಮ್ಮ ಚೆಲುವನ್ನು ಹೆಚ್ಚಿಸಲು ಅಲಂಕಾರಿಕ ವಸ್ತು ಒಡವೆಗಳನ್ನು ಉಪಯೋಗಿಸುವುದಾದರೆ ಈ ಜನರಲ್ಲಿ ಚೆಲುವಿನ ಸ್ತ್ರೀಯರು ತಮ್ಮ ಮುಖಕ್ಕೆ ಬಣ್ಣ ಬಳಿದುಕೊಂಡು ವಿಕಾರ ಮಾಡಿಕೊಳ್ಳತ್ತಾರೆ. ಗಂಡಸನ್ನು ಆಕರ್ಷಿಸುವ ಚೆಲುವು ಇರಬಾರದೆಂದು ಅವರ ನಂಬಿಕೆ.

ಇಲ್ಲಿನ ಸ್ತ್ರೀಯರು ತೀರ ಎಳೆಯರಿರುವಾಗಲೇ ಮದುವೆಯಾಗುವುದಿಲ್ಲ, ೨೦-೨೫ ವಯಸ್ಸಿನವರಾದಗಲೇ ಲಗ್ನವಾಗುವುದರಿಂದ ಅವರು ದೃಢಕಾಯರಾಗಿರುತ್ತಾರೆ. ಆದರೆ ಇಂಥ ಸ್ತ್ರೀಯರ ವಿವಾಹ ಅವರವರ ಆಯ್ಕೆಯಿಂದ ನಡೆಯುವುದಿಲ್ಲ. ಅದನ್ನೆಲ್ಲ ಮನೆಯ ಹಿರಿಯ ಗಂಡಸರು

ತೀರ್ಮಾನಿಸುವರು. ಕುಲ-ಗೋತ್ರಗಳನ್ನು ಆರಿಸಿ ಮಧ್ಯವರ್ತಿಯ ಮೂಲಕ ಸಂಧಾನ ನಡೆಸಿ ಪುರೋಹಿತನ ಮೂಲಕ ಯೋಗ್ಯ ಮುಹೂರ್ತ ನೋಡಿಸಿ ಅನಂತರ ನಿಶ್ಚಿತ ದಿನ ಹುಡುಗಿ"ದೇವಾಲಯಕ್ಕೆ ಹೋಗಬೇಕು ಹೆರಳು ಹಾಕಿಕೋ, ಸಿಂಗರಿಸಿಕೋ" ಅನ್ನುತ್ತಾರೆ. ಅವಳು ಸಿಂಗರಿಸಿ ಹೊರಟು ನಿಂತ ಬಳಿಕ "ನಿನಗೆ ಲಗ್ನವೆಂದು ನಿಶ್ಚಯ ಮಾಡಿದ್ದೇವೆ" ಎಂದು ತಿಳಿಸುತ್ತಾರೆ. ಮದುವೆಯೆಂಬುದು ಸುಲಭದ ಕೆಲಸವಲ್ಲ, ವಧೂ-ವರರು ನಿಶ್ಚಯವಾದ ಬಳಿಕ ಹುಡುಗನ ಕಡೆಯಿಂದ ಹುಡುಗಿಯ ಮನೆಗೆ ಉಡುಗೊರೆಗಳು ಕ್ರಮವಾಗಿ ಬರಬೇಕು. ಊಟ, ಉಪಚಾರಗಳಾಗಬೇಕು, ಅನಂತರ ಹುಡುಗಿಯನ್ನು ಕರೆದುಕೊಂಡು ಹೋಗುವ ಮುಂಚೆ ಔತಣಗಳಾಗಬೇಕು. ಊರಿನ ದೇವಾಲಯದಲ್ಲಿ ಸಮಾರಾಧನೆ ನಡೆಯಬೇಕು ಅನಂತರ ವಧುವನ್ನು ಮುಂದಕ್ಕಿರಿಸಿಕೊಂಡು ಪುರೋಹಿತರು "ನೀನು ಹೀಗಿರಬೇಕು; ಹೀಗಿರಬಾರದು" ಎಂದು ಗೃಹಿಣೀ ಧರ್ಮವನ್ನು ಕುರಿತು ನಾನಾ ಬಗೆಯಿಂದ ಉಪದೇಶಿಸಬೇಕು. ಅದನ್ನೇ ತಂದೆ-ತಾಯಿಯರು ಹೇಳಬೇಕು. ಅನಂತರ ಬಂಧು-ಬಳಗದವರೂ ಪಠಿಸಬೇಕು, ಅನಂತರ ಹೆಣ್ಣಿನ ಕಡೆಯವರು ಸೇರಿ ಕಣ್ಣೀರು ಸುರಿಸುತ್ತಾರೆ. ವಧುವನ್ನು ವರನ ಮನೆಗೆ ಕರೆದೊಯ್ಯುತ್ತಾರೆ. ಹಿಂದೂ ಧರ್ಮದಲ್ಲಿ ಈ ಪದ್ಧತಿಯು ಇರುವುದನ್ನು ಕಾಣಬಹುದು. ದಾರಿಯಲ್ಲೂ ಊಟ, ಉಪಚಾರಗಳು ನಡೆಯುತ್ತವೆ. ವರನ ಮನೆಯ ಪ್ರವೇಶಕ್ಕೂ ಕೆಲವೊಂದು ಕಟ್ಟು-ಕಟ್ಟಳೆಗಳಿವೆ ಅವೆಲ್ಲಾ ಮುಗಿದ ಮೇಲೆ ಲಗ್ನವಾಯಿತೆಂದು ಲೆಕ್ಕ. ಮೇಲಿನಂತೆ ಒಬ್ಬ ಲಗ್ನವಾದರೆ ಅವನ ಅಣ್ಣ-ತಮ್ಮಂದಿರಿಗೆಲ್ಲ ಅವಳು ಹಕ್ಕಿನ ಹೆಂಡತಿಯಾಗುತ್ತಾಳೆ.

ಇಂಥಹ ಬಹು ಪತಿತ್ವ ಈಗೀಗ ಕಡಿಮೆಯಾಗುತ್ತಿದೆಯಂತೆ, ಟಿಬೆಟಿನಲ್ಲಿ ಬೌದ್ಧಧರ್ಮ ಆರಾಧಕರ ಗುರುಗಳಾದ ಲಾಮ ಬೌದ್ಧಸನ್ಯಾಸಿಗಳು ಇವರಲ್ಲಿ ಅತಿಶ್ರೇಷ್ಠವೆನಿಸಿದವರು ಲಾಸಾ ನಗರದಲ್ಲಿನ ದಲೈಲಾಮ ಬೇರೆ ಒಬ್ಬೊಬರು ಚಿಕ್ಕ ಲಾಮರೂ ಇದ್ದಾರೆ. ಆದರೆ ದಲೈಲಾಮ ಬುದ್ಧನ ಅವತಾವೆಂದು ತಿಳಿದು ಜನರು ಪೂಜಿಸುತ್ತಾರೆ. ಒಬ್ಬ ಲಾಮ ತೀರಿಕೊಂಡರೆ ಅದೇ ಸಮಯಕ್ಕೆ ಸರಿಯಾಗಿ ಹೊಸ ಶಿಶುಗಳ ಜನನವಾದರೆ ಅವರ ಶರೀರ ಲಕ್ಷಣಗಳನ್ನು ಆರಿಸಿ ಅಂತಹ ಆರಿಸಲ್ಪಟ್ಟ ಕೆಲವು ಶಿಶುಗಳು ಮುಂದೆ ಮಡಿದ ಲಾಮನ ಉಡುಗೆ ಅಲಂಕಾರ ಇರಿಸುತ್ತಾರೆ. ಅದನ್ನು ಸ್ವೀಕರಿಸುವ ಶಿಶು ನಾಳಿನ ಲಾಮನಾಗುತ್ತಾನೆ. ಇಂತಹ ಲಾಮಗಳಿಗೆ ಚಿಕ್ಕಂದಿನಿಂದಲೇ ಶಾಸ್ತ್ರಭ್ಯಾಸದಲ್ಲಿ ತೊಡಗಿಸಿ ತಾನು ದೇವರು ಎಂದು ತಿಳಿಯುವ ಮನೋಧರ್ಮಕ್ಕೆ ಬರುವಂತಹ ಆವರಣವನ್ನು ಸೃಷ್ಠಿಸಿ ಅವರಿಗೆ ಹಲವು ಶಾಸ್ತ್ರಗ್ರಂಥಗಳ ಅರಿವು ಮಾಡಿಸಿ ಲಾಮನಾಗಿ ಬಳಸಿಕೊಳ್ಳತ್ತಾರೆ.

ಟಿಬೆಟಿನಲ್ಲಿ ಮದುವೆಗೆ ಇರುವ ಶಾಸ್ತ್ರಪದ್ಧತಿಯಂತೆ ಉತ್ತರಕ್ರಿಯೆ (ಶವ ಸಂಸ್ಕಾರ)ವು ವಿಚಿತ್ರ ಪದ್ಧತಿಯಲ್ಲಿದೆ. ಮೃತನ ಶರೀರವನ್ನು ಒಂದು ಬಿಳಿಯ ಬಟ್ಟೆಯನ್ನು ಹೊದಿಸುತ್ತಾರೆ. ಅನಂತರ ಏನು ಮಾಡಬೇಕೆಂಬುದು ಶಾಸ್ತ್ರದ ವಿಷಯ ಮೃತ ಶರೀರದ ವಿಸರ್ಜನೆಗೆ ಆ ದೇಶದಲ್ಲಿ ನಾಲ್ಕು ವಿಧದ ಆಚರಣೆಗಳಿವೆ. ಅದಕ್ಕೆ ಪುರೋಹಿತನನ್ನು ಕೇಳಿ ದಿನ, ಕಾಲಗಳನ್ನು ಗೊತ್ತು ಮಾಡಬೇಕು. ಅದು ಯಾವ ಕ್ರಮದಂತೆ ನಡೆಯಬೇಕೆಂಬುದನ್ನು ಆತನೇ ತಿಳಿಸಬೇಕು. ಶವಕ್ಕೆ ಅಗ್ನಿ ಸಂಸ್ಕಾರ, ಜಲಸಂಸ್ಕಾರ, ಭೂಸಂಸ್ಕಾರ, ವಾಯುಸಂಸ್ಕಾರ ಎಂದು ನಾಲ್ಕು ವಿಧ. ನಾಲ್ಕನೆಯ ರೀತಿಯೇ ಅಲ್ಲಿನ ಜನರಿಗೆ ಶ್ರೇಷ್ಠವಾಗಿ ಕಾಣಿಸುತ್ತಿರುವ ಆಚರಣೆಯಾಗಿದೆ. ಈ ಕ್ರಮದಂತೆ ಶವವನ್ನು ಉನ್ನತ ಪ್ರದೇಶಕ್ಕೊಯ್ದು ಹದ್ದು ಮೊದಲಾದ ಮಾಂಸಾಹಾರಿ ಪಕ್ಷಿಗಳಿಗೆ ತಿನ್ನಲು ಕೊಡುತ್ತಾರೆ. ಅದು ಒಂದೇ ನಡೆಯಬೇಕಾದ ಕಟ್ಟಳೆಯಲ್ಲಿ ಶವವನ್ನು ಹೊತ್ತು ಒಯ್ದು ಒಂದು ಕಡೆ ಇರಿಸಿದ ಮೇಲೆ ಅದರ ಹೊದಿಕೆ ತೆಗೆಯುತ್ತಾರೆ. ಅನಂತರ ಆ ಶವವನ್ನು ತುಂಡರಿಸಿದ ಮೇಲೆ ಅದರ ಹೊದಿಕೆ ತೆಗೆಯುತ್ತಾರೆ. ಅನಂತರ ಆ

ಶವವನ್ನು ತುಂಡರಿಸಿ ಆ ತುಂಡುಗಳನ್ನು ಪಕ್ಷಿಗಳಿಗೆ ಒಪ್ಪಿಸುತ್ತಾರೆ. ಈ ಕೊನೆಯ ಕೆಲಸ ಮಾಡುವವರಿಗೆ ಹೆಣಕ್ಕೆ ಹೊದಿಸಿದ ಬಟ್ಟೆ ಸಲ್ಲುತ್ತದೆ.

ಟಿಬೆಟನವರ ಮನೆಗಳು ಅವರ ಸಂಸ್ಕೃತಿಯನ್ನು ತೋರಿಸುವ ಅಲಂಕಾರ ಇರುತ್ತವೆ. ಚಿಲುವಿನ ರತ್ನ ಗಂಬಳಿಗಳನ್ನು ನೆಲಕ್ಕೆ ಹಾಸಿರುತ್ತಾರೆ. ಗೋಡೆಗಳಿಗೆ ಚಿತ್ರಗಳ ಸುರುಳಿ ತೂಗಿಹಾಕುತ್ತಾರೆ. ಕೆತ್ತನೆಯ ಕೆಲಸದಿಂದ ತುಂಬಿದ ಪಾತ್ರೆಪರಡಿಗಳನ್ನು ಬಳಸುತ್ತಾರೆ. ಅಮೂಲ್ಯವಾದ ಪಿಂಗಾಣಿ ಬಟ್ಟಲು ಪಾತ್ರೆಗಳನ್ನು ಬಳಸುತ್ತಾರೆ. ಅದೆಲ್ಲ ಸಾಮಾನುಗಳಿಂದ ಮನೆಯ ಒಳಗಿನ ಚಂದವೇನೋ ಇರುವಂತೆ ಜೋಡಿಸುತ್ತಾರೆ. ಆದರೆ ಉಡುಗೆ-ತೊಡುಗೆಗಳಲ್ಲಿ ನಾಜೂಕು ಕಡಿಮೆ ಇದ್ದು ಸ್ನಾನವನ್ನು ಅಪರೂಪಕ್ಕೆ ಮಾಡುತ್ತಾರೆ. ಕಾರಣ ಅಲ್ಲಿನ ವಿಪರೀತ ಚಳಿ ಇರುವುದರಿಂದ ಕೆಲವೊಮ್ಮೆ ಕುಡಿಯುವ ನೀರನ್ನು ಕಾಯಿಸಿಕೊಂಡು ಬಳಸುತ್ತಾರೆ. ಮೇಲಿನ ಮೂಲಾಂಶಗಳನ್ನು ಗಮನಿಸಿದರೆ ಟಿಬೆಟಿಯನ್ ಜನ-ಜೀವನ ಪದ್ಧತಿಯು ಹೇಗಿರುತ್ತದೆ ಎಂಬುದನ್ನು ವಿವರಣಾತ್ಮಕವಾಗಿ ಅವಲೋಕಿಸಬಹುದಾಗಿದೆ. ಹಾಗೂ ಇತ್ಯಾದಿ.[೩]

ಟಿಬೆಟಿಯನ್ನರ ಇತಿಹಾಸ ಬೆಳವಣಿಗೆ

ಟಿಬೆಟಿಯನ್ನರು ಮೂಲತಃ ಮಂಗೋಲಿಯನ್ ಜನಾಂಗದವರು. ಅಸ್ಸಾಂ, ಬರ್ಮದೇಶಗಳಿಂದ ಟಿಬೆಟ್ ಭಾಗಕ್ಕೆ ಬಂದು ನೆಲೆಸಿದರು. ಇವರ ಭಾಷೆ ಬರ್ಮಿ ಭಾಷೆಯೊಂದಿಗೆ ನಿಕಟ ಬಾಂಧವ್ಯ ಹೊಂದಿದೆ. ಟಿಬೆಟ್ ಜನಾಂಗದವರ ನಂಬಿಕೆಯಂತೆ, ವಾಮನವತಾರವನ್ನು ತಾಳಿದ್ದ ಅವಲೋಕಿತೇಶ್ವರದ ಸಂತತಿಗೆ ಸೇರಿದವರು. ಪುರಾಕೃತಿ ಫಲದಿಂದ ದೈತ್ಯಳಾಗಿದ್ದ ಮಹಿಳೆಯನ್ನು ಅವಲೋಕಿತೇಶ್ವರನನ್ನು ಮದುವೆಯಾಗುವಂತೆ ಪ್ರಾರ್ಥಿಸಿದಾಗ ಆತ ತನ್ನ ಗುರುವಿನ ಸಲಹೆ ಪಡೆದು ಅವಳನ್ನು ಮದುವೆಯಾದನು. ಇದರಿಂದ ಇವಳು ಆರು ಮಕ್ಕಳಿಗೆ ಜನ್ಮ ನೀಡಿದಳು. ತಂದೆಯು ಪವಿತ್ರವಾದ ಆಹಾರವನ್ನು ಮಕ್ಕಳಿಗೆ ಊಟಮಾಡಿಸಿದಾಗ ಅದರಿಂದ ಕ್ರಮೇಣ ಆ ಮಕ್ಕಳು ವಾನರರೂಪವನ್ನು ತಾಳಿದವು ಎಂಬುದನ್ನು ಮೌಖಿಕ ಕತೆ.

ಅತ್ಯಂತ ಪ್ರಾಚೀನ ವರದಿಯ ಪ್ರಕಾರ ಕ್ಷಿಪ್ರಯೆ ಅಥವಾ ಪುಗ್ಯೆ ಈ ದೇಶದ ಪ್ರಥಮ ಅರಸ ಈ ಸಂದರ್ಭಕ್ಕಾಗಲೇ ಬೊನ್ ಎಂಬ ಸರ್ವ ಚೇನಾವಾದಿ ಧರ್ಮ ಅಸ್ತಿತ್ವದಲ್ಲಿದ್ದಿತು. ಕ್ರಿ.ಪೂ ೧ನೇ ಶತಮಾನದವರೆಗೂ ಅನೇಕ ಅರಸರು ಟಿಬೆಟನ್ನು ಆಳಿದರು. ಈ ಸಂದರ್ಭದಲ್ಲಿ ಕೊಳ, ಕೆರೆ ಹಾಗೂ ನೀರಿನ ಸೌಲಭ್ಯಗಳು ಮತ್ತು ಕಲ್ಲಿದ್ದಲಿನ ಬಳಕೆ ಆರಂಭವಾಯಿತು. ಇದರಿಂದ ಗಣಿ ಉದ್ಯಮಗಳು ಅಭಿವೃದ್ಧಿ ಹೊಂದಿ, ಹೇಸರಗತ್ತೆಗಳನ್ನು ಸಾಕುವುದು ಪ್ರಾರಂಭವಾಯಿತು. ಇದರ ಜೊತೆಗೆ ಅನೇಕ ಬೌದ್ಧಧರ್ಮ ಪ್ರಚಾರ ಕಾರ್ಯಕ್ಕೆ ಮಾಧ್ಯಮವಾಗಿ ಚಿತ್ರ ಮತ್ತು ಶಿಲ್ಪಾದಿಗಳಂತಹ ಥಾಂಕ ಶೈಲಿಯಲ್ಲಿ ಬೆಳೆಸಿಕೊಂಡು ಬಂದರು ಹಾಗೂ ಇತ್ಯಾದಿ ಬೆಳವಣಿಗೆಯನ್ನು ಕಾಣಬಹುದು.

ಟಿಬೆಟಿಯನ್ನರ ಸಂಸ್ಕೃತಿಯ ಅಸ್ತಿಭಾರ ಹಾಕಿದ ಸಾಂಗ್-ತ್ಸೆನ್-ಗ್ಯಾಂಪೊ ೬೨೦ ರಿಂದ ೬೧೫ವರೆಗೆ ಆಳ್ವಿಕೆ ಮಾಡಿ ಬರ್ಮದ ಉತ್ತರ ಭಾಗ ಮತ್ತು ಚೇನದ ಪಶ್ಚಿಮ ಪ್ರದೇಶಗಳವರೆಗೆ ತನ್ನ ರಾಜ್ಯವನ್ನು ವಿಸ್ತರಿಸಿದ. ಚೇನದ ಸಾಮ್ರಾಟ ತನ್ನ ಕುಮಾರಿಯನ್ನು ಈತನಿಗೆ ಕೊಟ್ಟು ಮದುವೆ

೩. ಜವಾಹರ್‌ಲಾಲ್ ನೆಹರು. ಅನು: ಕೃಷ್ಣಮೂರ್ತಿರಾವ್: ಭಾರತ ದರ್ಶನ, ೧೯೭೩: ಪು.ಸಂ. ೧೫೩

ಮಾಡಬೇಕಾಯಿತು. ನೇಪಾಳದ ರಾಜಕುಮಾರಿಯೊಬ್ಬಳು ಇವನ ಇನ್ನೊಬ್ಬ ಪತ್ನಿ. ಆ ವೇಳೆಗಾಗಲೇ ಬೌದ್ಧ ಧರ್ಮ ಟಿಬೆಟನ್ನು ಪ್ರವೇಶಿಸಿತ್ತು. ಬೌದ್ಧಧರ್ಮದ ಪ್ರಭಾವಕ್ಕೆ ಒಳಗಾಗಿದ್ದ ತನ್ನ ಇಬ್ಬರು ಪತ್ನಿಯರ ಪ್ರಭಾವಕ್ಕೆ ಈತನು ಒಳಗಾಗಿ ಬೌದ್ಧಧರ್ಮವನ್ನು ಪ್ರಚಾರ ಮಾಡಲು ಶ್ರಮವಹಿಸಿದ. ಇಬ್ಬರು ಹೆಂಡತಿಯರಲ್ಲಿ ಭ್ರುಕುಟಿ ಎಂಬುವವಳು ನೇಪಾಳದ ರಾಜನ ಮಗಳು, ವೆನ್-ಚೆಂಗ್ ಎಂಬಾಕೆ ಚೀನೀ ಚಕ್ರವರ್ತಿಯ ಮಗಳು ಅವರಿಬ್ಬರು ಹುಟ್ಟು ಬೌದ್ಧರಾಗಿದ್ದು ಅವರು ಟಿಬೆಟಿಗೆ ಬಂದಾಗ ಅಕ್ಷೋಭ, ಮೈತ್ರೇಯ ಮತ್ತು ಸಾಕ್ಯಮುನಿಗಳ ವಿಗ್ರಹವನ್ನು ತಮ್ಮ ಜೊತೆಯಲ್ಲಿ ತಂದು ಪೂಜಿಸುತ್ತಿದ್ದರು. ಇಂತಹ ಸಂದರ್ಭದಲ್ಲಿ ಸ್ರೋನ್-ಬ್ಬಸನ್ ಭಾರತಕ್ಕೆ ಕಳುಹಿಸಿದ ಹದಿನಾರು ಟಿಬೆಟಿಯನ್ನರು ಭಾರತದ ವಿದ್ವಾಂಸರ ಸಹಾಯ ಪಡೆದು ಟಿಬೆಟಿನ ಲಿಪಿಯನ್ನು ವ್ಯಾಕರಣವನ್ನು ರೂಪಿಸಿದರು ಮತ್ತು ಆ ವಿದ್ವಾಂಸರ ನೆರವು ಪಡೆದು.

ಭಾರತದ ಕೆಲವು ಬೌದ್ಧ ಮತದ ಗ್ರಂಥಗಳನ್ನು ಮೊಟ್ಟಮೊದಲಿಗೆ ಟಿಬೆಟಿಯನ್ ಭಾಷೆಗೆ ತರ್ಜುಮೆ ಮಾಡಿದರು. ಬೌದ್ಧ ಮತದ ಹತ್ತು ನಿಯಮಗಳಿಗೆ ಅನುಸಾರವಾಗಿ ಸ್ರೋನ್-ಬ್ಬಸನ್ ಕಾನೂನುಗಳನ್ನು ಏರ್ಪಡಿಸಿದ ಲಾಸದಲ್ಲಿ ಪ್ರಖ್ಯಾತವಾದ ರೋಮ್‌ನಲ್ಲಿ ಚ ಮತ್ತು ಜೋಕ್ ಹಾಂಗ್ ಬೌದ್ಧ ದೇವಾಲಯಗಳನ್ನು ಕಟ್ಟಿಸಿದ. ಇಂತಹ ಸಂದರ್ಭದಲ್ಲಿ ಅನೇಕ ಥಾಂಕ ಶೈಲಿಯ ಚಿತ್ರ ಹಾಗೂ ಬೌದ್ಧ ದೇವಾಲಯದ ಬೌದ್ಧಮೂರ್ತಿಗಳನ್ನು ನಿರ್ಮಿಸಿದರು. ಆದರೂ ಅವನ ಕಾಲದ ಅನಂತರ ಬೌದ್ಧಮತದ ಪ್ರಾಮುಖ್ಯ ಕುಂದಿತು.

ಟಿಬೆಟಿನ ಪ್ರಾಚೀನ ಬೊನ್ ಮತದವರು ಬೌದ್ಧಮತವನ್ನು ಅಲ್ಲಿಂದ ಮೂರನೇ ಶತಮಾನದ ಉತ್ತರಾರ್ಧದಲ್ಲಿ ಆಳಿದ ಬ್ರಿ-ಸ್ರೋನ್-ಲ್ದೆ-ಬ್ಬಸನ್ ರಾಜು (ಕ್ರಿ.ಶ. ೭೫೫-೯೭) ನಲಂದ ಬೌದ್ಧ ವಿಶ್ವವಿದ್ಯಾನಿಲಯದಿಂದ ಶಾಂತರಕ್ಷಿತ ಭಿಕ್ಷುವನ್ನು ಟಿಬೆಟಿಗೆ ಕರೆಸಿಕೊಂಡ. ಆತ ಟಿಬೆಟಿನಲ್ಲಿ ಸಂಚರಿಸಿ ಬೌದ್ಧರ ಹತ್ತು ಸದ್ಗುಣಗಳು ಮತ್ತು ಕಾರ್ಯಕಾರಣ ಚಕ್ರವನ್ನು ಟಿಬೆಟಿನವರಿಗೆ ಬೋಧಿಸಿ ಅವರನ್ನು ಬೌದ್ಧಮತಕ್ಕೆ ಪರಿವರ್ತಿಸಲು ಪ್ರಯತ್ನಿಸಿದ. ಆಗ ದೇಶದಲ್ಲಿ ಹಟಾತ್ತನೆ ಬಿರುಗಾಳಿಯೂ ಸಂಪ್ರದಾಯಕ್ಕೆ ವಿರುದ್ಧವಾದ ಬೌದ್ಧಮತ ಪ್ರಚಾರ ಕಾರಣವೆಂದು ಭಾವಿಸಿ ರೊಚ್ಚಿಗೆದ್ದರು.

ಶಾಂತರಕ್ಷಿತ ತಾನು ಬೋಧಿಸಿದ ಬೌದ್ಧಶಾಖೆಯ ಧರ್ಮ ಟಿಬೆಟ್ಟಿನ ಜನರಿಗೆ ಒಗ್ಗದ ಧರ್ಮವೆಂದು ತಿಳಿದು ಟಿಬೆಟ್ಟಿನಿಂದ ಭಾರತಕ್ಕೆ ಹಿಂತಿರುಗಿದ. ಟಿಬೆಟ್ಟಿನವರಿಗೆ ತಾಂತ್ರಿಕ ಬೌದ್ಧಮತ ಹಿಡಿಸಬಹುದೆಂದು ನಂಬಿ ಆ ಶಾಖೆಯ ಪ್ರಸಿದ್ಧ ಭಿಕ್ಷುವಾದ ಪದ್ಮಸಂಭವನನ್ನು ಕರೆಸಿಕೊಳ್ಳಬೇಕೆಂದು ರಾಜನಿಗೆ ಸಲಹೆಕೊಟ್ಟ ಆತನ ಸಲಹೆಯಂತೆ ರಾಜ ಪದ್ಮಸಂಭವನನ್ನು ಕರೆಸಿಕೊಂಡು, ಅವನಿಂದ ಜನರಿಗೆ ಉಪದೇಶ ಕೊಡಿಸಿದ. ಮುಂದಿನ ಶತಮಾನದಲ್ಲಿ ರಾಲ್-ಪಾ-ಚಾನ್ ಬೌದ್ಧ ಸಂಘಗಳನ್ನು ವ್ಯವಸ್ಥೆಗೊಳಿಸಿದ ಇದರಿಂದ ಭಿಕ್ಷುಗಳ ಸಂಖ್ಯೆ ಹೆಚ್ಚಾಗಿ ಬೆಳೆದು ಅನೇಕ ಬೌದ್ಧಲಯಗಳು ನಿರ್ಮಾಣಗೊಂಡವು. ಭಾರತದಿಂದ ಅನೇಕ ಬೌದ್ಧ ಧಾರ್ಮಿಕ ಪಂಡಿತರು ಬೌದ್ಧಗ್ರಂಥಗಳನ್ನು ಟಿಬೆಟಿಗೆ ತಂದು ಟಿಬೆಟಿನ ಭಾಷೆಗೆ ಭಾಷಾಂತರಿಸುವುದರ ಜೊತೆಗೆ ಧಾರ್ಮಿಕ ಪ್ರಚಾರವನ್ನು ಮಾಡತೊಡಗಿದರು.

ಗ್ಯಾಂಪೋನ ಕಾಲದಿಂದಲೂ ಟಿಬೆಟ್ ಮತ್ತು ಚೀನಗಳ ನಡುವೆ ಯುದ್ಧಗಳಾಗುತ್ತಿದ್ದು, ಚೀನಿಯರು ಗ್ಯಾಂಪೋ ಮರಣ ಹೊಂದಿದ ಮೇಲೆ ಲಾಸವನ್ನು ಆಕ್ರಮಿಸಿದರು, ಆದರೆ ಡೆ-ತ್ಸೆನನ ಕಾಲದಲ್ಲಿ

ಚೀನಿಯರು ಪರಾಭವವನ್ನನುಭವಿಸಿ ಟಿಬೆಟಿಗೆ ಕಪ್ಪಕಾಣಿಕೆ ನೀಡಬೇಕಾಯಿತು. ಇವನ ನಂತರ ಬಂದ ಪಾಚನ್ ತನ್ನ ರಾಜ್ಯವನ್ನು ಇನ್ನಷ್ಟು ವಿಸ್ತರಿಸಿದ, ಆದರೆ ಅಣ್ಣನ ಬೌದ್ಧಧರ್ಮವನ್ನು ಒಪ್ಪದ ಲಾಂಗ್-ದರ್-ಮನು ಅಣ್ಣನನ್ನು ಕೊಂದು ಆಡಳಿತದ ಚುಕ್ಕಾಣಿ ಹಿಡಿದ. ಆದರೆ ಈತನೂ ೮೪೨ರಲ್ಲಿ ಕೊಲ್ಲಲ್ಪಟ್ಟ. ಇಲ್ಲಿಗೆ ಟಿಬೆಟಿನಲ್ಲಿ ಅರಸು ಮನೆತನದ ಆಳ್ವಿಕೆ ಕೊನೆಗೊಂಡು ಅಲ್ಲಿನ ಪಾಳೆಗಾರ ಮನೆತನವಾದ ಲಾಂಗ್-ದರ್ ಮನೆಯ ವಂಶಸ್ಥರು ಪಶ್ಚಿಮ ಟಿಬೆಟಿನಲ್ಲಿ ಪ್ರಬಲರಾದರು.[೪] ಆದರೆ ಇನ್ನೂ ಅನೇಕ ಪಾಳೆಗಾರರು ಪರಸ್ಪರ ಕಲಹಗಳಿಂದ ರಾಜಕೀಯ ವ್ಯವಸ್ಥೆ ಅಸ್ತವ್ಯಸ್ಥಗೊಂಡಿತು.

ಇಂತಹ ಅರಾಜಕತೆಯನ್ನು ಕಾಯುತ್ತಿದ್ದ ಚೀನಾದ ಟಾಂಗ್ ಮನೆತನದ ಟಾಂಗ್ ವಂಶವು ಪ್ರಯೋಜನ ಪಡೆದು ಟಿಬೆಟಿನ ವಶದಲ್ಲಿದ್ದ ಚೀನಿ ಪ್ರದೇಶವನ್ನು ಗೆದ್ದು ೧೨೦೭ರಲ್ಲಿ ಮಂಗೋಲರ ಜೆಂಗಿಸ್‌ಖಾನ್ ಟಿಬೆಟ್ ಹಾಗೂ ಚೀನಗಳ ಕೆಲವು ಪ್ರದೇಶವನ್ನು ತನ್ನ ವಶಕ್ಕೆ ತೆಗೆದುಕೊಂಡು ಟಿಬೆಟಿನ ಸಾರ್ವಭೌಮತ್ವವನ್ನು ತನ್ನ ತೆಕ್ಕೆಗೆ ಇರಿಸಿಕೊಂಡು, ನಂತರ ಚೀನದ ಕ್ಯಾನ್ಸೂ ಪ್ರಾಂತ್ಯದ ಅಧಿಪತಿಯಾಗಿದ್ದ ಗೋದನ್ ೧೨೪೯ರಲ್ಲಿ ಟಿಬೆಟಿನ ಮೇಲೆ ಅಕ್ರಮಣ ಮಾಡಿದನು. ಆಗ ಟಿಬೆಟಿನ ಪ್ರಜೆಗಳು ಸಾಕ್ಯ ಸಂಘದ ಲಾಮನಾದ ಸಾಕ್ಯಪಂಡಿತನ ಆಶ್ರಯಿಸಿ ಆತನ ನೆರವನ್ನು ಅಪೇಕ್ಷಿಸಿದರು. ಮಂಗೋಲರ ನಾಯಕ ಆತನನ್ನು ತನ್ನ ಪ್ರತಿನಿಧಿಯಾಗಿ ನೇಮಿಸಿ ಟಿಬೆಟಿನ ಆಡಳಿತ ಸೂತ್ರಗಳನ್ನು ಅವನಿಗೆ ವಹಿಸಿದ. ೧೨೫೧ರಲ್ಲಿ ಗೋದನ್ ಮರಣ ಹೊಂದಿದ ಬಳಿಕ ಟಿಬೆಟ್ ಕ್ಯೂಬ್ಲೈಖಾನನ ವಶಕ್ಕೆ ಬಂತು. ಇದೇ ಸಂದರ್ಭಕ್ಕೆ ಸಾಕ್ಯೆ ಪಂಡಿತನೂ ಮರಣ ಹೊಂದಿದ. ಈತನ ಸೋದರಳಿಯ ಫಗ್ವನನ್ನು ಕ್ಯೂಬ್ಲೈಖಾನ್ ಗೌರವಿಸಿ ರಾಜಪ್ರಧಾನಿಯಾಗಿ ನೇಮಿಸಿ ಅವನಿಗೆ ತಿಸ್ಸಿ ಎಂಬ ಬಿರುದು ನೀಡಿದ. ಬೌದ್ಧಧರ್ಮವನ್ನು ರಾಜಧರ್ಮವೆಂದು ಸಾರಿದ. ಟಿಬೆಟ್ ಮಂಗೋಲರ ಅಧೀನಕ್ಕೆ ಒಳಪಟ್ಟಿತು, ತಿಸ್ಸಿಗಳು ಅರಸನ ಪ್ರತಿನಿಧಿಗಳಾಗಿ ಮಧ್ಯ ಟಿಬೆಟಿನ ಅಧಿಪತಿಗಳಾದರು ಹೀಗೆ ನೇಮಕಗೊಂಡ ತಿಸ್ಸಿಗಳೆಲ್ಲ ಸಾಕ್ಯಪಂಡಿತನ ವಂಶಸ್ಥರೇ ಇವರಲ್ಲಿ ದ್ವೇಷಾಸೂಯೆಗಳ ಪರಿಣಾಮವಾಗಿ ಕ್ರಮೇಣ ತಿಸ್ಸಿಗಳ ಪ್ರಭಾವ ಕುಗ್ಗಿತು.

ಕ್ಯೂಬ್ಲೈಖಾನ್ ಚೀನದ ಚಕ್ರವರ್ತಿಯಾದ ಅಲ್ಲಿಯ ಜನರು ಈ ಪರಕೀಯನನ್ನು ಮತ್ತು ಈತನ ವಂಶವಾದ ಯೂವಾನ್ ಅರಸರಂತೆ ಟಿಬೆಟಿನ ಮೇಲಣ ಪ್ರಭುತ್ವವನ್ನು ಈ ಅರಸರು ಉಳಿಸಿಕೊಳ್ಳಲಾಗಲಿಲ್ಲ. ಸಾಕ್ಯಕುಲದ ಪ್ರತಿಸ್ಪರ್ಧಿಗಳಾಗಿದ್ದ ಪಗ್ಮೋತ್ರು ಕುಲದವರು ತಿಸ್ತ್ರೀಗಳನ್ನು ಕಡೆಗಣಿಸಿದರು. ಮಿಂಗ್ ಮನೆತನದ ಅರಸರು ನಾಮಮಾತ್ರಕ್ಕೆ ಟಿಬೆಟಿನ ಪ್ರಭುಗಳಾಗಿದ್ದರೂ ವಾಸ್ತವವಾಗಿ ಪಗ್ಮೋತ್ರುಗಳೂ ಅನಂತರ ಬಂದ ರಿಂಪುಂಗ್ ಮತ್ತು ಟ್ಸಾಂಗ್ ಕುಲಗಳವರೂ ಟಿಬೆಟಿನ ಅರಸರಾದರು ಈ ಕುಲಗಳ ಲಾಮಗಳು ಚೀನಕ್ಕೆ ಹೋಗಿ ಬರುವಷ್ಟಕ್ಕೆ ಚೀನದೊಂದಿಗೆ ಇವರ ಸಂಬಂಧ ಸೀಮಿತವಾಗಿತ್ತು.

ಈ ಸಂದರ್ಭಕ್ಕಾಗಲೇ ಬೌದ್ಧಧರ್ಮದ ತಾಂತ್ರಿಕ ಪದ್ಧತಿ ಪ್ರಭಾವಸಾಲಿಯಾಗಿ ಭಾರತದಲ್ಲಿ ಬೆಳೆದಿತ್ತು ಹಾಗೂ ಇತ್ಯಾದಿ ನೆರೆಯ ಪ್ರದೇಶಗಳಿಗೂ ಪಸರಿಸಿತು. ಪ್ರಕೃತಿಯನ್ನು ಆರಾಧಿಸುವ ಟಿಬೆಟಿಯನ್ನರು ತಾಂತ್ರಿಕ ಪದ್ಧತಿಯನ್ನು ತಮ್ಮ ಸಂಪ್ರದಾಯದೊಂದಿಗೆ ಹೊಂದಾಣಿಕೆ ಮಾಡಿಕೊಂಡು ತನ್ನದೇಯಾದ ಒಂದು ವಿಶಿಷ್ಠ ಧರ್ಮವನ್ನಾಗಿ ಬೆಳೆಸಿಕೊಂಡರು, ಇದರ ಪ್ರಭಾವ ಆಳವಾಗಿ ಬೇರೂರಿ ಧಾರ್ಮಿಕ ಗುರುಗಳು ಹುಟ್ಟಿಕೊಂಡು ದೇಶವನ್ನು ಆಳ್ವಿಕೆ ನಡೆಸುವ ಭಾರವನ್ನು ಹೊತ್ತುಕೊಂಡರು.

೪. ಎನ್ಸೈಕ್ಲೋಪಿಡಿಯಾ ಆಫ್ ಅಮೇರಿಕಾ: ಸಂ. ೨೬: ಪು.ಸಂ. ೭೨೦

೧೪ನೇ ಶತಮಾನದವರೆಗೆ ಕೆಂಪು ಟೋಪಿಯ ಬೌದ್ಧ ಗುರುಗಳು ಸಮಾಜದಲ್ಲಿ ಪ್ರಮುಖ ಸ್ಥಾನಪಡೆದಿದ್ದರು. ಇವರಿಗೆ ಮದುವೆಯಾಗುವ, ಮಧ್ಯೆಪಾನ ಸೇಮಿಸುವ ಹಾಗೂ ಮಾಂಸ ಆಹಾರವನ್ನು ಸೇವಿಸುಲು ಅವಕಾಶವಿತ್ತು. ಸುಮಾರು ೧೩೫೭-೧೪೧೯ರ ವೇಳೆಗೆ ಗೆಲುಗ್ಪ ಕುಲಕ್ಕೆ ಸೇರಿದ ತ್ಸಾಂಗ್-ಖಾ-ಪಾ ಎಂಬ ಸುಧಾರಕನೊಬ್ಬ ಹಳದಿ ಟೋಪಿಯ ಹೊಸ ಪಂಥವನ್ನು ಆರಂಭಿಸಿದ ಹಿಂದಿದ್ದ ಪದ್ಧತಿಗೆ ಬದಲಾಗಿ ಹೆಚ್ಚು ಕಟ್ಟುನಿಟ್ಟಾದ ನಿಯಮಗಳನ್ನು ಜಾರಿಗೆ ತಂದು ಈತನ ಉತ್ತರಾಧಿಕಾರಿ ಗ್ಯಾಡೆನ್ ತ್ರುಪ್ಪ ೧೪೭೪ರಲ್ಲಿ ಮರಣಹೊಂದಿದ ಎರಡು ವರ್ಷಗಳ ಬಳಿಕ ಹುಟ್ಟಿದ ಬಾಲಕನೊಬ್ಬನನ್ನು ಆತನ ಆತನ ಅತ್ಮ ಪ್ರವೇಶಿಸಿತೆಂದು ಭಾವಿಸಿ ಆ ಹುಡುಗನನ್ನು ತ್ರುಪ್ಪನ ಉತ್ತರಾಧಿಕಾರಿಯೆಂದು ಜನ ಸ್ವೀಕರಿಸಿದರು. ಅಂದಿನಿಂದ ಈ ಧಾರ್ಮಿಕ ಗುರು ಅವತಾರ ಪುರುಷನೆಂಬ ಭಾವನೆ ಉಂಟಾಯಿತು, ಸೋ ನಮ್ ಗ್ಯಾಟ್ಸೊಗೆ ಮಂಗೋಲರ ನಾಯಕ ಅಲ್ತನ ದಲೈಲಾಮ ಬಿರುದನ್ನು ನೀಡಿದನು, ಬೌದ್ಧ ಧಾರ್ಮಿಕ ಗುರುಗಳನ್ನು ದಲೈಲಾಮ ಎಂಬ ಹೆಸರು ಬಂದಿತು,

ಲೊಬ್‌ಸ್ಯಾಂಗ್ ಗ್ಯಾಟ್ಸೊನು ಹಿಂದಿನ ಧಾರ್ಮಿಕ ಪರಂಪರೆಗೆ ಸೇರಿದ ಪಂಗಡದವರೊಂದಿಗೆ ಹೋರಾಡಿ ತನ್ನ ಸ್ಥಾನವನ್ನು ಉಳಿಸಿಕೊಂಡನು. ಇಂತಹ ಸಮಯದಲ್ಲಿ ಮಂಗೋಲರ ನೆರವಿನೊಂದಿಗೆ ಕೆಂಪುಟೋಪಿ ಪಂಗಡದವರನ್ನು ಹಿಮ್ಮೆಟ್ಟಿಸಿದ. ನಂತರ ಟಿಬೆಟಿನ ಆಡಳಿತ ದಲೈಲಾಮನಿಗೆ ದೊರೆಯುವಂತಾಗಿತ್ತು. ಇತನು ಲಾಸದಲ್ಲಿ ಪೊಟಾಲ ಅರಮನೆ ಕಟ್ಟಬೇಕೆಂದು ಅಸ್ತಿಭಾರ ಹಾಕಿದ. ಈತನನ್ನು ಟಿಬೆಟ್ ದೇಶದ ಜನರು ಭೋಧಿಸತ್ವನೆಂದು ಭಾವಿಸಿ ಪೂಜಿಸುವ ಪದ್ಧತಿ ಆರಂಭಗೊಂಡು, ನಿರ್ವಾಣ ಪದವಿ ನೀಡಿ ಸಮಾಜ ಕಲ್ಯಾಣಕ್ಕಾಗಿ ಪುನಃ ಅವತರಿಸಿರುವ ಬೋಧಿಸತ್ತರೆಂದು ಟಿಬೆಟಿಯನ್ ಜನರು ನಂಬಿ ಇಂತಹ ದಲೈಲಾಮಗಳು ನಮ್ಮ ಅರಸರೂ ಹಾಗೂ ಧಾರ್ಮಿಕ ಗುರುಗಳಿಂದ ಇವರಿಗೆ ರಾಜಕೀಯ ಮತ್ತು ಧಾರ್ಮಿಕ ಅಧಿಕಾರಗಳನ್ನು ನೀಡಿದರು. ಐದನೆಯ ದಲೈಲಾಮ ಅಧಿಕಾರಕ್ಕೆ ಬಂದಾಗ ಈ ಅವತಾರದ ಸಿದ್ಧಾಂತಕ್ಕೆ ಹೆಚ್ಚಿನ ಪ್ರಾಶಸ್ತ್ಯ ದೊರಕಿದಂತಾಗಿತು. ಒಬ್ಬ ದಲೈಲಾಮ ಮರಣ ಹೊಂದುವ ಮೊದಲು ಮುಂದೆ ಇಂತಹ ಕಡೆ ಅವತಾರ ಹೊಂದುವುದಾಗಿ ತಿಳಿಸುತ್ತಿದ್ದ. ಅದಕ್ಕಾಗಿ ಕೆಲವು ಗುರುತುಗಳನ್ನು ಸೂಚಿಸುತ್ತಿದ್ದ. ಆತ ನಿಧನನಾದ ३-४ ವರ್ಷಗಳ ಬಳಿಕ ಸೇರಾ, ಡ್ರೆಪುಂಗ್, ಗಂಡೇನ್, ನೆಚುಂಗ್ ಮತ್ತು ಸಾಮ್ಯಗಳ ಪುರಾತನ ಮಠಗಳ ಸನ್ಯಾಸಿಗಳು ಮುಂದಿನ ದಲೈಲಾಮ ಜನಿಸಿರಬಹುದಾದ ಸ್ಥಳವನ್ನು ಹುಡುಕುತ್ತಿದ್ದರು. ಆತನನ್ನು ಆರಿಸುತ್ತದ್ದು ಈತನಿಗೆ ಲಾಸದ ಪೊಟಾಲ ಅರಮನೆಗೆ ಕರೆತಂದು ವಿದ್ಯಾಭ್ಯಾಸಕ್ಕೆ ಬೇಕಾದ ವ್ಯವಸ್ಥೆ ಮಾಡಿ ನಂತರ ೧೮ ವರ್ಷಗಳು ತುಂಬಿದ ಮೇಲೆ ಈತನು ಹೊಸ ದಲೈಲಾಮನೆಂದು ಅಧಿಕಾರ ಸೂತ್ರಗಳನ್ನು ವಹಿಸಿಕೊಡುತ್ತಿದ್ದರು. ಈತನೇ ನಮ್ಮ ಅಮೂಲ್ಯ ರಕ್ಷಕ, ಚಕ್ರವರ್ತಿ, ಧರ್ಮಗುರು ಎಂದು ಇವರನ್ನು ಕ್ಯಮ್‌ಗೋನ್, ರಿಂ-ಪೋ-ಚೆ, ಗ್ಯೆ ವಾ-ರಿಂ-ಪೋಚೆ ಎಂದು ಕರೆಯುತ್ತಾರೆ.

ದಲೈಲಾಮನಿಗೆ ಎಷ್ಟೇ ತಾತ್ವಿಕವಾಗಿ ನಿರಂಕುಶ ಅಧಿಕಾರವಿದ್ದರೂ ಆಚರಣೆಯಲ್ಲಿ ಕೆಲವು ಅಡೆತಡೆಗಳಿದ್ದವು.ರಾಜನೂ ಗುರುವೂ ಆಗಿದ್ದ ದಲೈಲಾಮ ಅಧಕಾರ ಸೂತ್ರಗಳನ್ನು ವಹಿಸುವವರೆಗೂ ರಾಜ್ಯಸಭೆಯಿಂದ ನಿಯೋಜಿತನಾದ ರಾಜ ಪ್ರತಿನಿಧಿ ಆಡಳಿತದ ಹೊಣೆ ಹೊರುತ್ತದ್ದ. ಆತನ ಆನಂತರ ಸ್ಥಾನ ಪ್ರಧಾನಿಯದು. ಈತ ಲೌಕಿಕ ವ್ಯಕ್ತಿ ಒಬ್ಬನೇ ಪ್ರಧಾನಿಯಿರಬೇಕೆಂಬ ನಿಯಮವಿರಲಿಲ್ಲ. ಆದರೆ ಈತ ಆಡಳಿತ ಸಭೆಯ ಸದಸ್ಯನಾಗಿರಲಿಲ್ಲ. ಆ ಸಭೆ ಮಾಡಿದ ಸಲಹೆಗಳನ್ನು ತನ್ನದೇ ಆದ ಬೇಡಿಕೆಗಳೊಂದಿಗೆ ದಲೈಲಾಮನಿಗೆ ಕಳುಹಿಸುವ ಕರ್ತವ್ಯ ಈತನದಾಗಿತ್ತು. ಟಿಬೆಟ್ ಸರ್ಕಾರದಲ್ಲಿ

ಕಶ್ಷಗ್ ಎಂಬುದು ಆಡಳಿತ ಸಭೆ ಇದನ್ನು ಮಂತ್ರಿಮಂಡಲ ಎನ್ನುವರು. ಕಷ್ತ್ರ ಒಬ್ಬೊಬ್ಬ ಮಂತ್ರಿಗೆ ಸೇರಿದಂತೆ ಇಲಾಖೆಗಳನ್ನು ಪ್ರತ್ಯೇಕಿಸಲಾಗಿರಲಿಲ್ಲ. ಅವರದು ಜಂಟಿ ಜವಾಬಾದರಿ ಅವರು ತಮ್ಮ ಸಲಹೆಗಳನ್ನು ಅನುಮೋದನೆಗೆಂದು ದಲೈಲಾಮನಿಗೆ ಸಲ್ಲಿಸುತ್ತಿದ್ದರು. ಆಡಳಿತ ಸಭೆ ನ್ಯಾಯಮಂಡಲಿಯೂ ಆಗಿತ್ತು. ಆಡಳಿತ ಸಭೆಯ ಅಧೀನದಲ್ಲಿ ಹಲವಾರು ವಿಶಿಷ್ಟ ಅಧಿಕಾರಿಗಳಿದ್ದರು. (ತ್ಸಿ-ಪೊನ್) ದೇಶದ ಆದಾಯ-ವೆಚ್ಚಗಳ ಲೆಕ್ಕ ಪತ್ರಗಳನ್ನಿಡುವ ಕಂದಾಯಗಳನ್ನು ನಿರ್ಧರಿಸುವ ಹೊಣೆ ಇವರದು. ರಾಜನಿಗೆ ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದಂತೆ ನೆರವು ನೀಡಲು ಚಿಕ್ಯಾಂಪ್ ಬೆಂಪೊ ಎಂಬ ಸನ್ಯಾಸಿ ಇರುತ್ತಿದ್ದ. ಈತ ದಲೈಲಾಮನ ಸ್ವಂತ ಖಜಾನೆಯ ಅಧಿಕಾರಿಯಾಗಿದ್ದ. ಯಿಕ್‌ಟ್ಸಾಂಗ್ ಎಂಬುದು ನಾಲ್ವರು ಸನ್ಯಾಸಿಗಳ ಸಭೆ, ಮಠಗಳ ಆಡಳಿತ ಹೊಣೆಯನ್ನು ಇವರು ಹೊತ್ತಿದ್ದರು. ಇವರು ರಾಷ್ಟ್ರೀಯ ಸಭೆಯ ಅಧ್ಯಕ್ಷ ಸ್ಥಾನ ವಹಿಸುತ್ತಿದ್ದರು. ರಾಷ್ಟ್ರೀಯ ಸಭೆ ಅವಶ್ಯವಿದ್ದಾಗ ಮಾತ್ರ ಸೇರುತ್ತಿತ್ತು. ಇದು ಸಮಕಾಲೀನ ಸಮಸ್ಯೆಗಳನ್ನು ಚರ್ಚಿಸಲು ರೂಪಿತವಾಗಿದ್ದ ಸಭೆ, ಉನ್ನತ ಅಧಿಕಾರಿಗಳು ಲಾಸದ ಮಠಗಳಲ್ಲಿಯ ಸನ್ಯಾಸಿಗಳ ಪ್ರತಿನಿಧಿಗಳು ಈ ಸಭೆಯ ಸದಸ್ಯರಾಗಿದ್ದರು. ದಲೈಲಾಮ ನಿಧನ ಹೊಂದಿದಾಗ ಇನ್ನೊಬ್ಬನನ್ನು ಆ ಸ್ಥಾನಕ್ಕೆ ಆರಿಸುವವರೆಗೆ ರಾಜಪ್ರತಿನಿಧಿಯಾಗಿ ಆಳ ಬೇಕಾಗಿದ್ದವನನ್ನು ನೇಮಿಸುವ ಅಧಿಕಾರ ಈ ಸಭೆಗೆ ಇತ್ತು.

ಐದನೆಯ ದಲೈಲಾಮನಿಗೆ ಕೋಕೋ ನೋರ್ ಪ್ರದೇಶದ ಮಂಗೋಲರ ನಾಯಕನಾದ ಗುಸ್ಸಿಖಾನನ ಬೆಂಬಲವಿತ್ತು. ಚೀನದಲ್ಲಿ ಆಗ ಮಾಂಜೊಗಳು ಕ್ರಮೇಣ ಪ್ರಾಬಲ್ಯಕ್ಕೆ ಬರುತ್ತಿದ್ದರು. ಗುಸ್ಸಿಖಾನ ಮಾಂಜೊಗಳೊಂದಿಗೆ ರಾಜಕೀಯ ಸಂಬಂಧ ಹೊಂದಿದ್ದ, ಗುಸ್ಸಿಖಾನನ ಅಧೀನಕ್ಕೆ ಟಿಬೆಟ್ ಬಂದಾಗ ಆತ ಐದನೆಯ ದಲೈಲಾಮನನ್ನು ಆ ಪದವಿಗೆ ಏರಿಸಿದ. ಆತ ಬದುಕಿರುವ ತನಕ (೧೬೫೫) ದಲೈಲಾಮ ಆತನ ಅಜ್ಞಾಧಾರಕ ನಂತಿದ್ದ ಆದರೆ ಅನಂತರ ದಲೈಲಾಮ ಟಿಬೆಟಿನ ವ್ಯವಹಾರಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯ ಪಡೆದ ಈತ ಒಂದು ಕಡೆ ಚೀನದ ಮಾಂಜೊಗಳನ್ನು ಇನ್ನೊಂದು ಕಡೆ ಮಂಗೋಲರನ್ನು ಅನುಸರಿಸಿದ. ಆದರೆ ೧೬೮೨ರಲ್ಲಿ ಈ ದಲೈಲಾಮನ ಮರಣ ಹೊಂದಿದಾಗ ಈತನ ಪ್ರಧಾನಿಯಾಗಿದ್ದ ಸಾಂಗ್ಯೆಗ್ಯಾಟ್ಸೊ ದಲೈಲಾಮನ ನಿಧನದ ವಾರ್ತೆಯನ್ನು ಮುಚ್ಚಿಟ್ಟು ಆಡಳಿತದ ಸೂತ್ರಗಳನ್ನು ಸ್ವತಃ ವಹಿಸಿದ ಆದರೆ ಮಂಗೋಲ ಲ್ಹಾ ಜ್ಸಾಂಗ್‌ಖಾನ್ ಇದನ್ನು ಸಹಿಸಲಿಲ್ಲ. ಆತ ಚೀನದ ಚಕ್ರವರ್ತಿ ಕಾಂಗ್‌ಹ್ಸಿಯ ನೆರವನ್ನು ಪಡೆದು ಸಾಂಗ್ಯೆ ಗ್ಯಾಚ್ಸೊನನ್ನು ಸೋಲಿಸಿ ತಾನೇ ಆರಿಸಿದ ಒಬ್ಬ ಲಾಮನನ್ನು ಟಿಬೆಟಿನ ದಲೈ ಎಂದು ನೇಮಿಸಿದ ಆದರೆ ಟಿಬೆಟಿನ ಪ್ರಜೆಗಳು ಇದನ್ನು ಮಾನ್ಯ ಮಾಡಲಿಲ್ಲ. ಕಾಂಗ್ ಹ್ಸಿ ಈ ಪದ್ಧತಿಯ ಪ್ರಯೋಜನ ಪಡೆದು ಟಿಬೆಟಿ ಜನರ ಕೋರಿಕೆಯನ್ನು ಮಾನ್ಯಮಾಡಿ ಲ್ಹಾಬ್ಜಾಂಗ್‌ನನ್ನು ಹೊರದೂಡಿದ. ಈ ಮೂಲಕ ಚೀನದ ಚಕ್ರವರ್ತಿ ಟಿಬೆಟಿನ ರಾಜಕೀಯದಲ್ಲಿ ಪ್ರವೇಶಿಸಿದ ಲಾಸದಲ್ಲಿ ತನ್ನ ಸೈನ್ಯದ ಒಂದು ತುಕಡಿಯನ್ನು ನಿಲ್ಲಿಸಿದ. ದಲೈಲಾಮನ ಪ್ರಭಾವ ಕುಗ್ಗಿತು.

ಟಿಬೆಟಿನ ಆಡಳಿತ ನಿರ್ವಹಿಸಲು ಅಂಬಲರನ್ನು ಚೀನೀ ಚಕ್ರವರ್ತಿ ನೇಮಿಸಿದ. ಪೋಲತೇಜಿ ಎಂಬಾತ ನೂತನ ಆಡಳಿತಾಧಿಕಾರಿಯಾದ ಈತ ವಿಲಕ್ಷಣೆಯಿಂದ ಆಡಳಿತ ಸೂತ್ರಗಳನ್ನು ೧೮ವರ್ಷಗಳ ಕಾಲ ನಿರ್ವಹಿಸಿ ಮಾಂಚೂ ಅರಸರು ನಾಮಮಾತ್ರಕ್ಕೆ ಟಿಬೆಟಿನ ಪ್ರಭುಗಳಾಗಿರುವಂತೆ ಮಾಡಿದ ಈ ಸಮಯದಲ್ಲೇ ದಲೈಲಾಮನ ಪ್ರತಿಸ್ಪರ್ಧಿ ಎನ್ನಿಸುವಂತೆ ಪಂಚೇನ್ ಲಾಮಾನನ್ನು ನಿಯಮಿಸುವ ಪದ್ಧತಿ ಆರಂಭವಾಯಿತು. ಪೋಲತೇಜಿ ೧೭೪೭ರಲ್ಲಿ ನಿಧನಹೊಂದಿದ. ಆತನ ಮಗ ಗ್ಯುರ್ಮೆ

ನಂಗ್ಯಾಲ್ ಉತ್ತರಾಧಿಕಾರಿಯಾದ. ಆದರೆ ಆತ ತಂದೆಯ ನೀತಿಯನ್ನು ಪಾಲಿಸದ್ ಚೀನೀ ಅಧಿಕಾರಿಗಳೊಂದಿಗೆ ವೈರಾಗ್ಯ ಕಟ್ಟಿಕೊಂಡ ಅಂಬೆನರು ಗ್ಯುರ್ಮೆಯನ್ನು ತಮ್ಮ ನಿವಾಸಕ್ಕೆ ಕರೆಸಿಕೊಂಡು ಕೊಲೆಮಾಡಿದರು. ಆಗ ಚೀನೀ ಚಕ್ರವರ್ತಿ ಚಿಯನ್ ಲುಂಗ್ ಮತ್ತೊಮ್ಮೆ ಟಿಬೆಟಿನ ರಾಜಕೀಯದಲ್ಲಿ ಪ್ರವೇಶಿಸಿದ, ಇದರ ಪರಿಣಾಮವಾಗಿ ಮತ್ತೊಮ್ಮೆ ದಲೈಲಾಮ ತನ್ನ ಹಿಂದಿನ ಅಧಿಕಾರಗಳನ್ನು ಪಡೆದುಕೊಂಡ. ಈತ ಏಳನೆಯ ದಲೈಲಾಮ ಕೆ ಸಂಗ್ ಗ್ಯಾಚ್ಸೊ. ಈತ ೧೭೫೭ರಲ್ಲಿ ನಿಧನ ಹೊಂದಿದ. ಆನಂತರ ಬಂದ ದಲೈಲಾಮಗಳು ತಮ್ಮ ಪ್ರತಿನಿಧಿಗಳಿಗೆ ಅಧಿಕಾರ ವಹಿಸಿಕೊಟ್ಟರು.[೫] ಸುಮಾರು ೧೨೦ ವರ್ಷಗಳ ಕಾಲ ಈ ಪರಿಸ್ಥಿತಿ ಮುಂದುವರಿಯಿತು. ಐದನೆಯ ದಲೈಲಾಮ ತನ್ನ ಗುರು ಲೊಬ್ಜಾಂಗ್ ಚೋಕ್ಯಿ ಗ್ಯಾಲ್ಸೆನ್‌ನನ್ನು ಟಾಷಿಯಂಪೊ ಮಠದ ಸನ್ಯಾಸಿಯಾಗಿ ನೇಮಿಸಿ ಆತ ಧ್ಯಾನಿ ಬುದ್ಧ ಅಮಿತಬಾನ ಅವತಾರವೆಂದು ಘೋಷಿಸಿದ್ದು ಈತನೇ ಪಂಚೆನ್ ಲಾಮ ಎನಿಸಿಕೊಂಡ.

ದಲೈಲಾಮನ ಗುರುವಿನ ಸ್ಥಾನದಲ್ಲಿದ್ದ ಈತ ಸಹಜವಾಗಿಯೇ ಲೌಕಿಕ ವಿಷಯಗಳೊಡನೆ ಯಾವ ಸಂಬಂಧವನ್ನೂ ಹೊಂದಿರದೆ ಆಧ್ಯಾತ್ಮಿಕವಾಗಿ ದಲೈಲಾಮನಿಗಿಂತ ಉನ್ನತ ಮಟ್ಟದಲ್ಲಿರುವವನೆಂದು ಭಾವಿಸಲಾಗಿತ್ತು. ಈ ಸಂದರ್ಭಕ್ಕಾಗಲೆ ಭಾರತದಲ್ಲಿ ಬ್ರಿಟಿಷರ ಆಳ್ವಿಕೆ ಆರಂಭವಾಗಿತ್ತು. ವಾರನ್‌ಹೇಸ್ಟಿಂಗ್ಸ್ ಟಿಬೆಟಿನೊಡನೆ ವಾಣಿಜ್ಯ ಸಂಪರ್ಕಗಳನ್ನು ಬೆಳೆಸಲು ಯತ್ನಿಸಿದ. ಅದಕ್ಕಾಗಿ ಜಾರ್ಜ್ ಬೋಗ್ಲ್ ಎಂಬ ಅಧಿಕಾರಿಯನ್ನು ಭೂತಾನದ ಮೂಲಕ ಟಿಬೆಟಿಗೆ ಕಳಿಸಿದ. ಆತ ಪಂಚೆನ್ ಲಾಮನನ್ನು ಟಾಷಿ ಲುಂಪೋದಲ್ಲಿ ಕಂಡು ಅವನೊಡನೆ ವ್ಯವಹಾರಗಳನ್ನು ಕುರಿತು ಚರ್ಚಿಸಿದ. ೧೭೮೮ರಲ್ಲಿ ನೇಪಾಳದ ಗೂರ್ಖರು ಟಿಬೆಟಿನ ಝಿಕಾಟ್ಸೆಯನ್ನು ಮುತ್ತಿದರು. ಆದರೆ ಮಾಂಚೊ ಅರಸರು ಅವರನ್ನು ಹೊರದೂಡಿದರು (೧೭೯೨). ೧೮೫೫ರಲ್ಲಿ ಇನ್ನೊಮ್ಮೆ ಗೂರ್ಖರು ಟಿಬೆಟನ್ನು ಮುತ್ತಿದಾಗ ಟಿಬೆಟಿನಲ್ಲಿ ಮಾಂಚೊಗಳ ಪ್ರಭಾವ ಕಡಿಮೆಯಾಗಿದ್ದ ಕಾರಣ ಗೂರ್ಖರು ಜಯಶೀಲರಾದರು. ಟಿಬೆಟ್ ಸರ್ಕಾರ ೧೦.೦೦೦ ರೂಪಾಯಿಗಳನ್ನು ಪ್ರತಿವರ್ಷವೂ ಗೂರ್ಖರಿಗೆ ಕೊಡಬೇಕೆಂಬ ಗೂರ್ಖ ವರ್ತಕರಿಂದ ಸುಂಕಗಳನ್ನು ಪಡೆಯಬಾರದೆಂಬ ಒಪ್ಪಂದವಾಯಿತು.

ಲಾರ್ಡ್ ಕರ್ಜನ್ ೧೯೦೪ರಲ್ಲಿ ಫ್ರಾನ್ಸಿಸ್ ಯಂಗ್ ಹೆಸ್ಬೆಂಡ್ ನೇತೃತ್ವದಲ್ಲಿ ಸೈನ್ಯವೊಂದನ್ನು ಟಿಬೆಟಿನ ಮೇಲೆ ಕಳಿಸಿದ. ೧೩ನೆಯ ದಲೈಲಾಮ ಆಗ ಟಿಬೆಟಿನಿಂದ ಚೀನಕ್ಕೆ ಓಡಿಹೋದ ಆದರೆ ಬ್ರಿಟಿಷ್ ಸರ್ಕಾರ ಕರ್ಜನನ ಈ ನೀತಿಯನ್ನು ಅನುಮೋದಿಸಲಿಲ್ಲ. ಚೀನ ದೇಶಕ್ಕೆ ಟಿಬೆಟ್ ಮೇಲೆ ಪ್ರಭುತ್ವವಿದೆ ಎಂಬುದನ್ನು ಒಪ್ಪಿತು. ಆಂತರಿಕ ಆಡಳಿತಗಳಲ್ಲಿ ಮಾತ್ರ ಟಿಬೆಟ್ ಸ್ವತಂತ್ರವೆಂದು ಬ್ರಿಟನ್ ಭಾವಿಸಿತು.

೧೯೧೧ರಲ್ಲಿ ಚೀನದಲ್ಲಿ ನಡೆದ ಕ್ರಾಂತಿಯ ಪರಿಣಾಮವಾಗಿ ಟಿಬೆಟಿನ ಇತಿಹಾಸದಲ್ಲಿ ನೂತನ ಘಟ್ಟವೊಂದು ಆರಂಭವಾಯಿತು. ದಲೈಲಾಮ ಚೀನದೊಡನೆ ತನ್ನ ಸಂಬಂಧಗಳನ್ನು ಕಡಿದುಕೊಂಡು ಬ್ರಿಟನ್ ಹಾಗೂ ರಷ್ಯದೇಶಗಳೊಡನೆ ಹೊಸ ಬಾಂಧವ್ಯ ಬೆಳೆಸಬೇಕೆಂದೂ ಸ್ವತಂತ್ರವಾಗಿರಬೇಕೆಂದೂ ಯೋಚಿಸಿದ, ಆದರೆ ಬ್ರಿಟನ್ ಇದಕ್ಕೆ ಬೆಂಬಲ ನೀಡಲಿಲ್ಲ. ಚೀನೀ ಗಣರಾಜ್ಯ ಟಿಬೆಟಿನ ೧೩ನೆಯ ದಲೈಯನ್ನು ದಲೈಲಾಮನೆಂದ ಮಾನ್ಯ ಮಾಡಿತು. ೧೯೧೩ರಲ್ಲಿ ಬ್ರಿಟನ್, ಚೀನಾ ಹಾಗೂ ಟಿಬೆಟ್ ಪ್ರತಿನಿಧಿಗಳು ಶಿಮ್ಲಾದಲ್ಲಿ ಸಭೆ ಸೇರಿದರು. ಹೆನ್ರಿಕ್ ಮ್ಯಾಕ್ ಮೋಹನ್ ಇದರ ಅಧ್ಯಕ್ಷತೆ ವಹಿಸಿದ

೫. ದಿ ನ್ಯೂ ಎನ್‌ಸೈಕ್ಲೋಪಿಡಿಯಾ ಬ್ರಿಟಾನಿಕಾ : ಸಂ. ೧೧: ಪು.ಸಂ. ೭೫೯

ಚೀನಾ-ಟಿಬೆಟ್‌ಗಳ ನಡುವಣ ಹಾಗೂ ಭಾರತ-ಟಿಬೆಟ್ ನಡುವಣ ಮೇರೆಗಳನ್ನು ಈ ಸಭೆಯಲ್ಲಿ ನಿರ್ಧರಿಸಲಾಯಿತು ಚೀನಾ ಈ ಒಪ್ಪಂದವನ್ನು ಅನುಮೋದಿಸಲಿಲ್ಲ. ದಲೈಲಾಮ ಹಾಗೂ ಪಂಚೆನ್ ಲಾಮಗಳ ನಡುವಣ ಭಿನ್ನಾಭಿಪ್ರಾಯವೂ ಇದಕ್ಕೊಂದು ಕಾರಣವಾಯಿತು. ೯ನೆಯ ಪಂಚೆನ್‌ಲಾಮ ಚೀನಾಕ್ಕೆ ಓಡಿಹೋದ ಜನರಲ್ ಚಿಯಾಂಗ್ ಕೈ-ಶೆಕ್ ಟಿಬೆಟನ್ನು ಚೀನಾದ ಭಾಗವೆಂದು ಘೋಷಿಸಿ ಅದನ್ನು ವಶಪಡಿಕೊಳ್ಳಲು ಯತ್ನಿಸಿದ, ಆದರೆ ಇದೂ ಫಲಿಸಲಿಲ್ಲ. ೧೯೪೭ರಲ್ಲಿ ಭಾರತ ಸ್ವಾತಂತ್ರವಾದಾಗ ಟಿಬೆಟ್‌ನಲ್ಲಿದ್ದ ಬ್ರಿಟಿಷ್ ಕಛೇರಿ ಭಾರತದ ಕಛೇರಿಯಾಗಿ ಮಾರ್ಪಟ್ಟಿತು. ಅಂದಿನಿಂದ ಬ್ರಿಟನ್ನಿನ ಸ್ಥಾನದಲ್ಲಿ ಭಾರತ ಟಿಬೆಟಿನೊಡನೆ ವ್ಯವಹಾರಗಳನ್ನು ಮುಂದುವರಿಸಿತು.

ಟಿಬೆಟಿಯನ್ನರ ವಲಸೆ

"ಇಂತಹ ಸಂದರ್ಭದಲ್ಲಿ ೧೯೫೮ರಲ್ಲಿ ಮಾವೊ ಚೀನಾದ್ಯಂತ ವಿಶೇಷ ಕಾರ್ಯಕ್ರಮವನ್ನು ಜಾರಿಗೊಳಿಸಿದರು. ಇದರ ಪರಿಣಾಮವಾಗಿ ಚೀನಿಸೇನೆ ಟಿಬೆಟ್‌ನಲ್ಲಿ ಇನ್ನೂ ದೌರ್ಜನ್ಯವನ್ನು ನಡೆಸಿತು. ವಿಶೇಷವಾಗಿ ಟಿಬೆಟಿಯನ್ನರ ಬೌದ್ಧಧರ್ಮ, ಬೌದ್ಧವಿಹಾರ, ಬೌದ್ಧಪ್ರತಿಮೆ, ಬೌದ್ಧಗ್ರಂಥಗಳ ಬಗ್ಗೆ ಅತೀವ ಶ್ರದ್ಧೆ, ಗೌರವ, ನಂಬಿಕೆ ಇವುಗಳನ್ನು ಹೊಸಕಿ ಹಾಕಿದರೆ ಟಿಬೆಟಿಯನ್ನರ ಅಂತಃಸಾಕ್ಷಿಯನ್ನು ಅರ್ಧಪ್ರಮಾಣದಲ್ಲಿ ಹತ್ತಿಕ್ಕಿದಂತೆ ಆಗುತ್ತದೆ ಎಂಬುದನ್ನು ಮಾವೋ ಬಲ್ಲರು. ಹಾಗಾಗಿ ಚೀನಾದ ಅಣತಿಯ ಮೇರೆಗೆ ಟಿಬೆಟಿನಲ್ಲಿ ಬೌದ್ಧವಿಹಾರ, ಪ್ರತಿಮೆ, ಗ್ರಂಥಗಳು ಹಾಗೂ ಅನೇಕ ಶಿಲ್ಪ, ಚಿತ್ರಗಳ ಮೇಲೆ ಹಲ್ಲೆ ನಡೆಯಿತು". ಇದರ ಜೊತೆಗೆ ಅಲ್ಲಿನ ೧೦೦-೩೦೦ ಲಾಮಾಗಳನ್ನು ಒಂದೆ ದೇವಾಲಯದ ಚಿಕ್ಕ ಕೊಠಡಿಯಲ್ಲಿ ವರ್ಷಗಟ್ಟಲೆ ಆಹಾರ ನೀಡದೆ ಕೂಡಿಹಾಕಿ ಕೊಳೆತು ಸಾಯಿಸಲಾಗಿತ್ತು. ಹಲವರನ್ನು ಬೌದ್ಧಧರ್ಮವನ್ನು ಬಿಡದಿದ್ದರೆ ಸಾಯಿಸುತ್ತೇವೆ ಎಂದು ಗುಂಪು-ಗುಂಪುಗಳ ಮೇಲೆ ಗುಂಡುಹಾರಿಸಿದರು. ಲಾಮಾಗಳು ಇರುವ ಬಿಡಾರಗಳಿಗೆ ಬಾಂಬ್ ದಾಳಿ ಮಾಡಿದರು. ಹಲವು ಸ್ತ್ರೀ ಲಾಮಾಗಳು ಹಾಗೂ ಹೆಂಗಸರುಗಳ ಮೇಲೆ ಅತ್ಯಾಚಾರ, ಲೈಂಗಿಕ ಕಿರುಕುಳ, ಸೈನಿಕರ ಕಾಮಕೃತ್ಯಕ್ಕೆ ಬಲಿಪಶುವಾಗಿ ಬಳಸಿಕೊಂಡು ಬಂದರು. ನಂತರ ಮಕ್ಕಳುಗಳನ್ನು ಕೂಲಿಗಾಗಿ ಬಳಸುವುದು ಹಾಗೂ ಗುಂಪುಮಾಡಿ ಕೊಠಡಿಯಲ್ಲಿ, ಜೈಲಿನಲ್ಲಿ ಸಾಯುವವರೆಗೆ ಕೂಡಿಹಾಕಲಾಗಿತ್ತು. ಜೊತೆಗೆ ಬೌದ್ಧಧಾರ್ಮಿಕ ಕೇಂದ್ರಗಳ ಮೇಲೆ ಹೆಚ್ಚಿನ ನಿಗವಹಿಸಿ ಧ್ವಂಸ ಮಾಡುವುದನ್ನು ನಿರಂತರವಾಗಿ ನಡೆಸಿದರು. ಈ ಮೇಲಿನ ಎಲ್ಲಾ ಘಟನೆಗಳಲ್ಲಿ ಅನೇಕ ಭಿತ್ತಿಚಿತ್ರ, ಶಿಲ್ಪಕಲಾಕೃತಿ, ಕಲಾತ್ಮಕ ಮನೆಗಳು ಬಾಂಬಿಗೆ ಹಾಗೂ ಬೆಂಕಿಗೆ ಆಹುತಿಯಾದವು.[೬]

೧೯೪೯ರಲ್ಲಿ ಚೀನಾದಲ್ಲಿ ಕಮ್ಯುನಿಸ್ಟ ಸರ್ಕಾರ ಸ್ಥಾಪಿತವಾಯಿತು. ಇದು ಟಿಬೆಟನ್ನು ಚೀನದೊಡನೆ ವಿಲೀನಗೊಳಿಸುವ ಹಂಚಿಕೆ ಹೂಡಿತು. ಟಿಬೆಟ್‌ನ ಎಲ್ಲಾ ಪ್ರದೇಶಗಳಿಗೂ ರಸ್ತೆಗಳನ್ನು ನಿರ್ಮಿಸುವ ಕಾರ್ಯವನ್ನು ಕಮ್ಯುನಿಸ್ಟ್ ಸರ್ಕಾರ ಆರಂಭಿಸಿತು. ಇದಕ್ಕಾಗಿ ಯಾವ ತಾರತಮ್ಯವನ್ನು ಮಾಡದೆ ಟಿಬೆಟಿನ ಎಲ್ಲಾ ಪ್ರಜೆಗಳನ್ನು ಕಾರ್ಯೋನ್ಮುಖರಾಗುವಂತೆ ಮಾಡಿತು. ಪರಂಪರಾನುಗತವಾಗಿ ಬೆಳೆದು ಬಂದಿದ್ದ ಪದ್ಧತಿಯಗಳನ್ನು ತ್ಯಜಿಸಿ ಭೂಮಿಯ ಒಡೆತನಕ್ಕೆ ಸಂಬಂಧಿಸಿದಂತೆ ಸುಧಾರಣೆಗಳನ್ನು ಜಾರಿಗೆ ತರಲಾಯಿತು. ಇದರ ಪರಿಣಾಮವಾಗಿ ಹಲವರು ದಂಗೆ ಎದ್ದರು. ಚೀನಿ ಸರ್ಕಾರ ಆ ದಂಗೆಯನ್ನು ಅಡಗಿಸಬೇಕೆಂದು ದಲೈಲಾಮಗೆ ಆದೇಶ ನೀಡಿತಾದರೂ ದಲೈ ಅದಕ್ಕೆ ಒಪ್ಪಲಿಲ್ಲ.

---

೬. ಮಂಗಳೂರು ವಿಜಯ: ಟಿಬೆಟ್: ಪು.ಸಂ. ೪೦

ಚೀನಿ ಸರ್ಕಾರ ದಲೈಲಾಮನ ನಿವಾಸವನ್ನು ದ್ರೆಪುಂಗ್ ಮತ್ತು ಸೆರಾ ಸಂಘಗಳನ್ನೂ ಮುತ್ತಿ ಹಾನಿ ಉಂಟುಮಾಡಿತು. ದಲೈಲಾಮ ತನ್ನ ಪರಿವಾರದೊಂದಿಗೂ ಮೂವರು ಸಂಪುಟ ದರ್ಜೆಯ ಮಂತ್ರಿಗಳು ಮತ್ತು ಇತರ ಉನ್ನತ ಅಧಿಕಾರಿಗಳೊಂದಿಗೆ ಭಾರತಕ್ಕೆ ಓಡಿಹೋದರು. ಭಾರತ ಸರ್ಕಾರ ಅವರಿಗೆ ರಾಜಕೀಯ ಆಶ್ರಯ ನೀಡಿತು. ಚೀನ ಸರ್ಕಾರ ಲಾಸದ ಸರ್ಕಾರವನ್ನು ಅಂತ್ಯಗೊಳಿಸಿ ಪಂಚೆನ್‌ಲಾಮನನ್ನು ಪೀಕಿಂಗ್‌ನ ರಾಷ್ಟ್ರೀಯ ಪ್ರಜಾಸರ್ಕಾರದ ಉಪಾಧ್ಯಕ್ಷರನ್ನಾಗಿ ನೇಮಿಸಿ ಲಾಸಕ್ಕೆ ಕಳುಹಿಸಿತು (೧೯೫೯ರಲ್ಲಿ). ವಿಶ್ವಸಂಸ್ಥೆ ಚೀನಿ ಸರ್ಕಾರದ ಈ ಕ್ರಮವನ್ನು ಖಂಡಿಸಿತಾದರೂ ಏನೂ ಪ್ರಯೋಜನವಾಗಲಿಲ್ಲ. ಟಿಬೆಟ್-ಚೀನಿ ಸಮಾಜವಾದಿ ಗಣರಾಜ್ಯದ ಸ್ವಯಂ ಆಡಳಿತ ಪ್ರದೇಶವಾಯಿತು. ತಮ್ಮ ತಾಯಿನಾಡನ್ನು ಬಿಟ್ಟುಬಂದ ಟಿಬೆಟಿನ ಜನರು ದಲೈಲಾಮಾನನ್ನು ಹಿಂಬಾಲಿಸಿ ಭಾರತಕ್ಕೆ ಬರಲಾರಂಭಿಸಿದರು. ಮೇಲಿನ ಹಿಂಸೆ ತಾಳದೆ ದಲೈಲಾಮಾನನ್ನು ನೋಡುವ ಹಾಗೂ ಬೌದ್ಧಧರ್ಮವನ್ನು ಬೆಳೆಸುವೆವು ಎಂದು ೧೯೫೯ರಲ್ಲಿ ಭಾರತವು ದಲೈಲಾಮಾರಿಗೆ ಆಶ್ರಯ ನೀಡಿತು. ಅವರೊಡನೆ ಬಂದ ಟಿಬೆಟಿನ್ ನಿರಾಶ್ರಿತರಿಗೆ ಎಲ್ಲಾ ರೀತಿಯಲ್ಲಿ ನೆರವಾಗಲು ಭಾರತದ ಪ್ರಧಾನಿ ನೆಹರೂ ಮುಂದಾದರು. ಭಾರತದಲ್ಲಿ ಒಟ್ಟು ೧೦ರಾಜ್ಯಗಳಾದ ಸಿಕ್ಕಿಂ, ಆಂಧ್ರಪ್ರದೇಶ, ಹಿಮಾಚಲ ಪ್ರದೇಶ, ಅರುಣಾಚಲ ಪ್ರದೇಶ ಮತ್ತು ಅಸ್ಸಾಂ ಇತರ ಪ್ರದೇಶಗಳಲ್ಲಿ[೭] ಟಿಬೆಟಿಯನ್ನರ ಕ್ಯಾಂಪ್‌ಗಳಿದ್ದು ಗರಿಷ್ಟ ಸಂಖ್ಯೆಯಲ್ಲಿ ಟಿಬೆಟಿನ್ನರು ನೆಲೆಸಿರುವುದು ಕಂಡುಬರುತ್ತದೆ. ಕರ್ನಾಟಕದಲ್ಲಿ ೧೯೬೦ರಲ್ಲಿ ಬಂದು ನೆಲೆಸಿದರು. ಭಾರತದಲ್ಲಿ ಟಿಬೆಟಿಯನ್ನರ ಸಂಖ್ಯೆ ಏರುತ್ತಾ ಬಂದಿದೆ.

ಟಿಬೆಟಿಯನ್ನರ ಬೌದ್ಧಮತ ಬೆಳವಣಿಗೆಯ ವಿವರಣೆ

ಟಿಬೆಟಿನಲ್ಲಿ ಬೌದ್ಧಧರ್ಮ ತನ್ನದೇಯಾದ ಒಂದು ವಿಶಿಷ್ಟ ಸಾಂಸ್ಕೃತಿಕ ಪರಿಸರವನ್ನು ಬೆಳೆಸಿಕೊಂಡು ಬೇರೆ ದೇಶಗಳ ಬೌದ್ಧಧರ್ಮಕ್ಕಿಂತ ಕೆಲವು ಅಂಶಗಳಲ್ಲಿ ಭಿನ್ನವಾಗಿದ್ದು, ಬೌದ್ಧಮತ ಸನ್ಯಾಸಿಗಳು, ಪ್ರಚಾರಕರು, ತಾವು ಪ್ರವೇಶಿಸಿದ ದೇಶದ ಸಂಸ್ಕೃತಿಯೊಡನೆ ಸುಲಭವಾಗಿ ಹೊಂದಿಕೊಳ್ಳುವ ಗುಣಗಳನ್ನು ಪಡೆದಿದ್ದಾರೆ. ಬೌದ್ಧರು ಜಾತಿ-ಭೇದ, ಆಹಾರ ಭೇದ, ಇತ್ಯಾದಿ ಭೇದಗಳನ್ನು ಪರಿಗಣಿಸದಿರುವುದರಿಂದ ಸುಲಭವಾಗಿ ತಾವು ಹೋದ ಸ್ಥಳಗಳ ಜನರೊಡನೆ ಹೊಂದಿಕೊಳ್ಳುವವರಾಗಿದ್ದು, ಭಿಕ್ಷುಗಳು ವಿನಯಶೀಲರು, ಪಾಪಿಗಳಲ್ಲೂ, ಅಶಕ್ತರಲ್ಲೂ, ಹಿಂದುಳಿದವರಲ್ಲೂ ಅಪಾರ ಅನುಕಂಪವಿದ್ದವರು. ಅಂತವರ ಸೇವೆಯೇ ತಮ್ಮ ಮತದ ಒಂದು ಮುಖ್ಯ ನಿಯಮವಾಗಿ ಭಾವಿಸಿದವರು. ಆದುದರಿಂದ ಅವರು ಹೋದ ಕಡೆಗಳಲ್ಲಿ ಅವರಿಗೆ ಆದರದ ಸ್ವಾಗತ ದೊರೆಯುತ್ತಿತ್ತು. ಈ ಕಾರಣದಿಂದ ಬೌದ್ಧಮತ ಅಶೋಕನ ಕಾಲದಿಂದ ಆಚೆ ಸಿಂಹಳ ದ್ವೀಪ, ಮಧ್ಯಏಷ್ಯಾ, ಚೀನ, ಮಲೇಸಿಯ, ಕೊರಿಯಾ, ಟಿಬೆಟ್, ಜಪಾನ್ ಮುಂತಾದ ಪೂರ್ವದೇಶಗಳಲ್ಲಿ ವ್ಯಾಪಿಸಿತು.[೮] ಚೀನದಲ್ಲಿ ಅದು ಕೊಂಗ್‌ಪೂಟ್ಸೆ ಮತ್ತು ಲಾವೊಟ್ಸೆ ತತ್ತ್ವದ ಸಾರಾಂಶಗಳನ್ನು ಹೀರಿಕೊಂಡಿದುದರಿಂದ ಚೀನಿಯರು ಅದನ್ನು ಪರದೇಶದ ಮತವೆಂದು ಗಣಿಸಿದೆ ತಮ್ಮ ದೇಶದ ಮತವೆಂದೇ ಭಾವಿಸಿದರು. ಮೌಟ್ಸು ಎಂಬ ಚೀನಿ ತಾತ್ತ್ವಿಕ ಕೊಂಗ್‌ಪೂಟ್ಸೆ ಮತ್ತು ತಾವೊ ತತ್ತ್ವಗಳನ್ನು ಬೌದ್ಧಮತದೊಡನೆ ಹೋಲಿಸಿ ಬೌದ್ಧಮತ ಎಲ್ಲ ವಿಧದಲ್ಲೂ ಕೊಂಗ್‌ಪೂಟ್ಸೆ ಮತ್ತು ತಾವೊ ತತ್ತ್ವಗಳಿಗಿಂತ ಉತ್ತಮವೆಂದು ಸಾರಿದ. ಝೆನ್ ಬೌದ್ಧಮತ ಜಪಾನಿನ ರಾಷ್ಟ್ರಮತವಾಯಿತು.

೭. ಪುರುಷೋತ್ತಮರಾವ್: ಸ್ವರ್ಣ ದೇವಸ್ಥಾನ: ಪು.ಸಂ. ೬೫

೮. ಬಸಿಲ್ ಗ್ರೇ: ಪೇಂಟಿಂಗ್ ಆಫ್ ಇಂಡಿಯಾ: ಪು.ಸಂ. ೧೦೫

ಅಂತೆಯೇ ಟಿಬೆಟಿನಲ್ಲೂ ಬೌದ್ಧಮತ ಆ ರಾಷ್ಟ್ರದ ಮತವಾಯಿತು. ಬೌದ್ಧಮತ ಯಾವಾಗ ಟಿಬೆಟನ್ನೂ ಪ್ರವೇಶಿಸಿತು, ಅದು ಅಲ್ಲಿ ಹೇಗೆ ಬೆಳೆಯಿತು ಎಂಬುದನ್ನು ಸಂಗ್ರಹವಾಗಿ ಇಲ್ಲಿ ನಿರೂಪಿಸಿದೆ.

ಬೌದ್ಧಮತ ಪ್ರಚಾರ ಟಿಬೆಟಿನಲ್ಲಿ ಕ್ರಿ.ಶ. ಏಳನೆಯ ಶತಮಾನಕ್ಕಿಂತ ಹಿಂದೆ ಇದ್ದದ್ದು ಕಂಡಬಂದರೂ ಅದಕ್ಕೆ ಲಿಖಿತ ದಾಖಲೆಗಳಿಲ್ಲ. ಏಕೆಂದರೆ ಅದಕ್ಕಿಂತ ಮುಂಚೆ ಟಿಬೆಟಿನ ಭಾಷೆ ಲಿಪಿರೂಪ ಪಡೆದಿರಲಿಲ್ಲ. ಕ್ರಿ.ಶ. ಏಳನೆಯ ಶತಮಾನಕ್ಕೆ ಹಿಂದೆ ಥೊ-ಥೊ-ರಿ ರಾಜನ ಆಳ್ವಿಕೆಯ ಕಾಲದಲ್ಲಿ ಬೌದ್ಧಭಿಕ್ಷುಗಳು ಆ ರಾಜನಿಗೆ ಬೌದ್ಧಮತ ಗ್ರಂಥಗಳನ್ನು ಕೊಟ್ಟರೆಂದು ಅಂದಿನ ಟಿಬೆಟಿಯನ್ನರು ಬರವಣಿಗೆಯನ್ನು ಅರಿಯದವರಾಗಿದ್ದರಿಂದ ಆ ಗ್ರಂಥಗಳಿಂದ ಅವರಿಗೆ ಯಾವ ಪ್ರಯೋಜನವೂ ಆಗಲಿಲ್ಲವೆಂದೂ ಟಿಬೆಟಿನಲ್ಲಿ ಕಥೆಗಳಿವೆ. ಟಿಬೆಟಿನ ಭಾಷೆ ಲಿಪಿರೂಪವನ್ನು ಕಂಡದ್ದು ಸ್ರೋಂಗ್-ಬ್ಟಸನ್ ರಾಜನ ಕಾಲದಲ್ಲಿ (ಕ್ರಿ.ಶ. ೬೧೭) ಅವನ ಇಬ್ಬರು ಹೆಂಡತಿಯರಲ್ಲಿ ಭ್ರುಕುಟಿ ಎಂಬುವಳು ನೇಪಾಳದ ರಾಜನ ಮಗಳು. ವೆನ್-ಚೆಂಗ್ ಎಂಬಾಕೆ ಚೀನಿ ಚಕ್ರವರ್ತಿಯ ಮಗಳು. ಅವರಿಬ್ಬರು ಹುಟ್ಟು ಬೌದ್ಧರು ಅವರು ಟಿಬೆಟಿಗೆ ಬಂದಾಗ ಅಕ್ಷೋಭ, ಮೈತ್ರೇಯ ಮತ್ತು ಸಾಕ್ಯಮುನಿಗಳ ವಿಗ್ರಹವನ್ನು ತಮ್ಮ ಜೊತೆಯಲ್ಲಿ ತಂದು ಪೂಜಿಸುತ್ತಿದ್ದರು. ಸ್ರೋಂಗ್-ಬ್ಟಸನ್ ಭಾರತಕ್ಕೆ ಕಳುಹಿಸಿದ ಹದಿನಾರು ಟಿಬೆಟಿಯನ್ನರು ಭಾರತದ ವಿದ್ವಾಂಸರ ಸಹಾಯ ಪಡೆದು ಟಿಬೆಟಿನ್ ಲಿಪಿಯನ್ನು ವ್ಯಾಕರಣವನ್ನೂ ರೂಪಿಸಿದರು ಮತ್ತು ಆ ವಿದ್ವಾಂಸರು ನೆರವು ಪಡೆದು ಭಾರತದ ಕೆಲವು ಬೌದ್ಧಗ್ರಂಥಗಳನ್ನು ಮೊಟ್ಟಮೊದಲಿಗೆ ಟಿಬೆಟಿಯನ್ ಭಾಷೆಗೆ ತರ್ಜುಮೆ ಮಾಡಿದರು. ಬೌದ್ಧಮತದ ಹತ್ತು ನಿಯಮಗಳಿಗೆ ಅನುಸಾರವಾಗಿ ಸ್ರೋಂಗ್-ಬ್ಟಸನ್ ಕಾನೂನುಗಳನ್ನು ಮಾರ್ಪಡಿಸಿದ. ಲಾಸದಲ್ಲಿ ಪ್ರಖ್ಯಾತವಾದ ರೋಮಾಚ ಮತ್ತು ಚೋಕ್ ಹಾಂಗ್ ಬೌದ್ಧದೇವಾಲಯಗಳನ್ನು ಕಟ್ಟಿಸಿದ,[೯] ಆದರೂ ಅವನ ಕಾಲದ ನಂತರ ಬೌದ್ಧಮತದ ಪ್ರಾಮುಖ್ಯತೆ ಕುಂದಿತು.

ಟಿಬೆಟಿನ ಪ್ರಾಚೀನ ಬೊನ್‌ಮತದವರು ಬೌದ್ಧಮತವನ್ನು ಅಲ್ಲಿಂದ ಮೂರನೇ ಶತಮಾನದ ಉತ್ತರಾರ್ಧದಲ್ಲಿ ಆಳಿದ ಖ್ರಿ-ಸ್ರೋಂಗ್-ಲ್ಡೆ-ಗಿಬ್ಟಸನ್ ರಾಜ (ಕ್ರಿ.ಶ.೭೫೫-೯೭) ನಲಂದ ಬೌದ್ಧ ವಿಶ್ವವಿದ್ಯಾಲಯದಿಂದ ಶಾಂತರಕ್ಷಿತ ಭಿಕ್ಷುವನ್ನು ಟಿಬೆಟಿಗೆ ಕರೆಸಿಕೊಂಡ. ಆತ ಟಿಬೆಟಿನಲ್ಲಿ ಸಂಚರಿಸಿ ಬೌದ್ಧರ ಹತ್ತು ಸದ್ಗುಣಗಳು ಮತ್ತು ಕಾರ್ಯಕಾರಣ ಚಕ್ರವನ್ನು ಟಿಬೆಟಿನವರಿಗೆ ಬೋಧಿಸಿ ಅವರನ್ನು ಬೌದ್ಧಮತಕ್ಕೆ ಪರಿವರ್ತಿಸಲು ಪ್ರಯತ್ನಿಸಿದ. ಆಗ ದೇಶದಲ್ಲಿ ಹಠಾತ್ತನೆ ಬಿರುಗಾಳಿಯೂ ಸಂಪ್ರದಾಯಕ್ಕೆ ವಿರುದ್ಧವಾದ ಬೌದ್ಧಮತ ಪ್ರಚಾರ ಕಾರಣವೆಂದು ಭಾವಿಸಿ ರೊಚ್ಚಿಗೆದ್ದರು. ಶಾಂತರಕ್ಷಿತ ತಾನು ಬೋಧಿಸಿದ ಬೌದ್ಧಶಾಖೆಯ ಧರ್ಮ ಟಿಬೆಟಿನ ಜನರಿಗೆ ಒಗ್ಗದ ಧರ್ಮವೆಂದು ತಿಳಿದು, ಟಿಬೆಟಿನಿಂದ ಭಾರತಕ್ಕೆ ಹಿಂತಿರುಗಿದ. ಟಿಬೆಟಿನವರಿಗೆ ತಾಂತ್ರಿಕ ಬೌದ್ಧಮತ ಹಿಡಿಸಬಹುದೆಂದು ನಂಬಿ ಆ ಶಾಖೆಯ ಪ್ರಸಿದ್ಧ ಭಿಕ್ಷುವಾದ ಪದ್ಮಸಂಭವನನ್ನು ಕರೆಸಿಕೊಳ್ಳಬೇಕೆಂದು ರಾಜನಿಗೆ ಸಲಹೆ ಕೊಟ್ಟ. ಅವನ ಸಲಹೆಯಂತೆ ರಾಜ ಪದ್ಮಸಂಭವನನ್ನು ಕರೆಸಿಕೊಂಡು ಅವನಿಂದ ಜನರಿಗೆ ಉಪದೇಶ ಕೊಡಿಸಿದ. ತಾಂತ್ರಿಕ ಬೌದ್ಧಮತ ಟಿಬೆಟಿನ ಜನರಿಗೆ ತುಂಬ ಮೆಚ್ಚುಗೆಯಾಯಿತು. ಕ್ರಮೇಣ ಅದು ಆ ನೆಲದಲ್ಲಿ ಬೇರೂರಿಕೊಂಡು ಅಂದಿನ ಟಿಬೆಟಿನ ರಾಷ್ಟ್ರಮತವಾಯಿತು. ರಾಜ ಬಿಹಾರದ ಓದಂತಿಪುರದ ಭಿಕ್ಷುಗಳ ವಿಹಾರ ಮಾದರಿಯಲ್ಲಿ ಬ್ಸಸಮ್-ಯಾಸ್ ವಿಹಾರವನ್ನು ಸ್ಥಾಪಿಸಿದ. ಆನಂತರದಲ್ಲಿ ಶಾಂತರಕ್ಷಿತನನ್ನು ಪುನಃ ಟಿಬೆಟಿಗೆ

೯. ರಂಗಸ್ವಾಮಿ ಅಯ್ಯಂಗಾರ್: ಕನ್ನಡ ವಿಶ್ವಕೋಶ: ಸಂ. ೮: ಪು.ಸಂ. ೫೪೦

ಕರೆಸಿಕೊಂಡು ಬೌದ್ಧಗ್ರಂಥಗಳ ಭಾಷಾಂತರ ಕೆಲಸವನ್ನು ಮುಂದುವರಿಸಿದುದಲ್ಲದೆ ಅವನ ಸಹಾಯದಿಂದ ಬೌದ್ಧಗ್ರಂಥಗಳ ಲಿಪಿಯನ್ನು ಬರೆಸಿದ.

ಶಾಂತರಕ್ಷಿತ ಗತಿಸಿದ ನಂತರ ಶೂನ್ಯವಾದಿ ಚೀನೀ ಬೌದ್ಧರ ಪ್ರಚಾರದಿಂದ ಟಿಬೆಟಿನಲ್ಲಿ ಶೂನ್ಯವಾದ ತಲೆಯೆತ್ತಿತು. ಅದನ್ನು ತಡೆಗಟ್ಟಲು ಖ್ರಿ–ಸ್ರೋನ್ ರಾಜ ಶಾಂತರಕ್ಷಿತನ ಪ್ರಸಿದ್ಧ ಶಿಷ್ಯನಾದ ಕಮಲಶೀಲನನ್ನು ನಲಂದದಿಂದ ಟಿಬೆಟಿಗೆ ಕರೆಸಿಕೊಂಡ. ಶೂನ್ಯವಾದಿಗಳಿಗೂ ಕಮಲಶೀಲನಿಗೂ ದೀರ್ಘವಾಗ್ವಾದ ನಡೆದು ಶೂನ್ಯವಾದಿಗಳು ಪರಾಭವಗೊಂಡರು. ವಾದದಲ್ಲಿ ಸೋತ ಶೂನ್ಯವಾದಿಗಳು ಕಮಲಶೀಲನನ್ನು ಕೊಲ್ಲಿಸಿದರು. ಇದನ್ನು ನೋಡಿ ಖ್ರಿ–ಸ್ರೋನ್ ಹತಾಶನಾಗಿ ಪ್ರಾಣಬಿಟ್ಟ.

ಅವನ ಮಗ ಮು–ನೆ–ಬ್ಬಸನ್–ಪೊ ಬೌದ್ಧಮತದ ಕಾರಣ್ಯ ಮತ್ತು ಸರ್ವ ಸಮತಾಭಾವಗಳಿಂದ ಪ್ರೇರಿತನಾಗಿ ರಾಜ್ಯದ ಸಂಪತ್ತನ್ನು ಜನರಲ್ಲಿ ಸಮನಾಗಿ ಹಂಚಲು ಪ್ರಯತ್ನಿಸಿದ. ಕಾಯಕದಿಂದ ಬಾಳುವುದೇ ಗೌರವಯುತ ಬಾಳೆಂದು ಘೋಷಿಸಿದ. ಶ್ರೀಮಂತರು ಕೋಪಗೊಂಡು ಅವನಿಗೆ ವಿಷಹಾಕಿಸಿ ಕೊಲ್ಲಿಸಿ ಅವನ ಸೋದರ ಖ್ರಿ–ಲ್ಡೆ–ಸ್ರೋನ್–ಬ್ಬಸನ್‌ನ್ನು ರಾಜನನ್ನಾಗಿ ಮಾಡಿಕೊಂಡರು. ಆ ರಾಜ ಮಹಾವ್ಯೂತ್ಪತ್ತಿ ಎಂಬ ಸಂಸ್ಕೃತ ಮತ್ತು ಟಿಬೆಟಿನ ಭಾಷೆಗಳ ನಿಘಂಟನ್ನು ಕ್ರಿ.ಶ. ೮೧೪ರಲ್ಲಿ ಬರೆಸಿದ. ಖ್ರಿ–ಲ್ಡೆ–ಸ್ರೋನ್–ಬ್ಬಸನ್ ತನ್ನ ಹಿರಿಯ ಮಗ ಗ್ಲಣ್–ಡರ್–ಮ ನನ್ನು ಬಿಟ್ಟು ತನ್ನ ಕಿರಿಯ ಮಗ ರಾಲ್–ಪ–ಚೆ ನನ್ನು (೮೧೬–೮೩೮) ರಾಜನನ್ನಾಗಿ ಮಾಡಿದ. ಆತನ ಆಳ್ವಕೆಯಲ್ಲಿ ಬೌದ್ಧಮತ ತುಂಬ ಬೆಳೆಯಿತು. ಆತ ಬೌದ್ಧಭಿಕ್ಷುಗಳಿಗೆ ತಾವು ಏರ್ಪಡಿಸಿದ ವಿಹಾರಗಳ ಸುತ್ತ–ಮುತ್ತ ಇದ್ದ ಪ್ರದೇಶದ ಆಳ್ವಿಕೆಯ ಅಧಿಕಾರವನ್ನು ಕೊಟ್ಟ. ಶ್ರೀಮಂತರಿಗೆ ಅದು ಹಿಡಿಸದಿದ್ದುದರಿಂದ ಅವರು ಅವನನ್ನು ಕೊಲ್ಲಿಸಿ ಗ್ಲಣ್–ಡರ್–ಮ ನನ್ನು ರಾಜನನ್ನಾಗಿ ಮಾಡಿಕೊಂಡರು. ಆತನ ಆಳ್ವಿಕೆಯಲ್ಲಿ ಬೌದ್ಧಮತಕ್ಕೆ ಬಲವಾದ ಪೆಟ್ಟುಬಿತ್ತು. ಆತ ಭಿಕ್ಷುಗಳನ್ನು ಮಠಗಳಿಂದ ಓಡಿಸಿ ಅವನ್ನು ಮುಚ್ಚಿಸಿದ. ಬುದ್ಧನ ವಿಗ್ರಹಗಳನ್ನು ಕಿತ್ತು ನೆಲದಲ್ಲಿ ಹೂಳಿಸಿದ.

ರಾಜರಿದ್ದರೆ ಬೌದ್ಧಮತಕ್ಕೆ ಉಳಿಗಾಲವಿಲ್ಲವೆಂದು ತಿಳಿದ ಜನ ಗ್ಲಣ್–ಡರ್–ಮ ನನ್ನು ಕೊಂದು ರಾಜಪ್ರಭುತ್ವವನ್ನು ಕೊನೆಗಾಣಿಸಿದರು. ಲಾಸದ ಕೊನೆಯ ರಾಜನ ಮಗ ಡ್ಪಲ್ ಹ್ಕೊರ್–ಬ್ಬಸನ್ (ಕ್ರಿ.ಶ ೯೦೬–೨೩) ಲಾಸವನ್ನು ಬಿಟ್ಟು ಟಿಬೆಟಿನ ಪಶ್ಚಿಮ ಭಾಗಕ್ಕೆ ಓಡಿಹೋಗಿ ಅಲ್ಲಿ ತನ್ನ ರಾಜ್ಯವನ್ನು ಸ್ಥಾಪಿಸಿದ. ಅವನ ಮಕ್ಕಳು ಮತ್ತು ಮರಿಮಕ್ಕಳು ಲಡಾಕ್, ಸ್ಫರಾಂಗ್ ಮತ್ತು ಗಂಗೆ ಭಾಗಗಳಲ್ಲಿ ಬೌದ್ಧಮತ ಹರಡಲು ಉತ್ತೇಜನ ಕೊಟ್ಟರು. ಪಶ್ಚಿಮ ಟಿಬೆಟಿನ ರಾಜರಲ್ಲಿ ತುಂಬ ಪ್ರಸಿದ್ಧವಾದ ಹೆ–ಹೋಲ್–ಲ್ಡೆ ಬೌದ್ಧಮತದಲ್ಲಿ ವಿಶೇಷ ಆಸಕ್ತಿ ತೋರಿಸಿದ.[೧೦] ಪರಿಣಾಮವಾಗಿ ಅವನನ್ನು ಜನ ಜ್ಞಾನಪ್ರಭುವೆಂದು ಕರೆದರು. ಅವನು ವಿಕ್ರಮಶೀಲ ವಿಹಾರದಿಂದ ಆಚಾರ್ಯ ಅತೀಶನನ್ನು (ದೀಪಂಕರ ಶ್ರೀಜ್ಞಾನ) ತನ್ನ ದೇಶಕ್ಕೆ ಕರೆಸಿಕೊಂಡು ಅವನ ಮೂಲಕ ಬೌದ್ಧಮತ ಪ್ರಚಾರ ಮಾಡಿಸಿದ. ಕಾಲಾಂತರದಲ್ಲಿ ಅವನೂ ಅವನ ಇಬ್ಬರು ಮಕ್ಕಳು ಬೌದ್ಧಭಿಕ್ಷುಗಳಾದರು.

ಅತೀಶ ಟಿಬೆಟ್‌ಗೆ ಬಂದ ಮೇಲೆ ಟಿಬೆಟಿನಲ್ಲಿ ಅನೇಕ ಬೌದ್ಧಶಾಖೆಗಳು ಬೆಳೆದವು. ಟಿಬೆಟಿನ ಹಳೆಯ ಕಾಲದ ರಿನ್ನಿಣ್–ಮ–ಪ ಎಂಬ ಬೌದ್ಧ ಸಂಘದವರು ದೇವತೆಗಳನ್ನು ದುಷ್ಟಶಕ್ತಿಗಳನ್ನು

---

೧೦. ಗೋಪಾಲ್ ಜಿ.ಆರ್: ಕನ್ನಡ ವಿಶ್ವಕೋಶ: ಸಂ. ೮: ಪು.ಸಂ. ೫೪೧

ಪೂಜಿಸುತ್ತಿದ್ದರು. ಅತೀಶ ಆ ಸಂಘದ ಧರ್ಮವನ್ನು ಯೋಗಾಚಾರ ತತ್ತ್ವಕ್ಕನುಗುಣವಾಗಿ ಮಾರ್ಪಡಿಸಿದ. ಅದಕ್ಕೆ ಅವನ ಶಿಷ್ಯ ಹಬ್ರೋಮ್-ಸ್ಟನ್‌ಬ್ನ ಆಹ್-ಗ್ಡಮ್ಸ-ಪ ಎಂಬ ಹೆಸರನ್ನು ಕೊಟ್ಟು ಅಲ್ಲಿಂದ ಮುಂದೆ ಟಿಬೆಟನ ಬೌದ್ಧಧರ್ಮದಲ್ಲಿ ಮಂತ್ರ ಮಾಟಗಳ ಆಚರಣೆ ಕುಗ್ಗಿತು.

ಬ್ನ ಆಹ್-ಗ್ಡಮ್ಸ-ಪ ಸಂಪ್ರದಾಯದವರು ಅನುಸರಿಸುತ್ತಿದ್ದ ಅನೇಕ ಆಡಂಬರದ ಸಂಸ್ಕಾರಗಳನ್ನು ಟ್ಸೋನ್-ಖ-ಪ (೧೪ನೆಯ ಶತಮಾನ) ಎಂಬ ಸುಧಾರಕ ಸರಳಗೊಳಿಸಿದ. ಇವನು ಸ್ಥಾಪಿಸಿದ ಸಂಪ್ರದಾಯವೇ ಟಿಬೆಟಿನ ಪ್ರಧಾನ ಸಂಪ್ರದಾಯವಾಯಿತು. ಅದನ್ನು ಟಿಬೆಟಿನ ಧಾರ್ಮಿಕ ಹಾಗೂ ರಾಜಕೀಯ ಮುಖಂಡರಾದ ದಲೈಲಾಮಾಗಳು ಎತ್ತಿಹಿಡಿದರು.

ಮಿ-ಲ-ರಸ್-ಪ ಎಂಬ ಟಿಬೆಬಿನ ಪ್ರಸಿದ್ಧ ಕವಿ ಚೀನಿಯರ ಧ್ಯಾನ ಬೌದ್ಧತತ್ತ್ವದಿಂದ ಸ್ಫೂರ್ತಿಪಡೆದು ಬ್ನ ಆಹ್-ರಗ್ಯುಡ್ಡ್-ಪ ಎಂಬ ಬೌದ್ಧಶಾಖೆಯನ್ನು ಬಲಪಡಿಸಿದ. ಕಾಲಾಂತರದಲ್ಲಿ ಈ ಶಾಖೆ ಒಡೆದು ಕರ್ಮಪ್ರಧಾನವಾದ ಕರ್ಮ-ಪ ಮತ್ತು ಧಾನ್ಯಪ್ರಧಾನವಾದ ಹಬ್ರುಗ್-ಪ ಎಂಬ ಎರಡು ಶಾಖೆಗಳಾದವು. ಬಸ್ಸನ್ (೧೨೯೦-೧೩೬೪) ಎಂಬ ಪ್ರಖ್ಯಾತ ವಿದ್ವಾಂಸ ಮುಖ್ಯವಾದ ಬೌದ್ಧಧರ್ಮಗ್ರಂಥಗಳ ಮೇಲೆ ಭಾಷೆಗಳನ್ನು ಬರೆದುದಲ್ಲದೆ ಅದುವರೆಗೆ ಭಾಷಾಂತರವಾಗಿದ್ದ ಬುದ್ಧನ ವಚನಗಳಿಗೆ ಸಂಬಂಧಪಟ್ಟ ನೂರು ಸಂಪುಟಗಳನ್ನು ಬ್ಕ ಆಹ್-ಹ್ಗಯೂರ್ ಎಂದೂ ಉಳಿದ ಇನ್ನೂರ ಇಪ್ಪತ್ತೈದು ಸಂಪುಟಗಳನ್ನು ಬ್ಸಟನ್-ಹಯೂರ್ ಎಂದೂ ಕರೆದ ಇವು ಇಂದಿಗೂ ಬೌದ್ಧಧರ್ಮ ಪ್ರಮಾಣ ಸಾಹಿತ್ಯವಾಗಿ ಉಳಿದಿವೆ.[೧೧]

ಟ್ಸೋನ್-ಬ-ಪ (೧೩೫೮) ಎಂಬ ಸುಧಾರಕ ಟಿಬೆಟಿನ ಆಧುನಿಕ ಬೌದ್ಧಶಾಖೆಯ ಜನಕ. ಅವನು ಸ್ಥಾಪಿಸಿದ ಶಾಖೆಗೆ ಡ್ಗೆ-ಲಗ್ಸ್-ಪ (ಸತ್‌ಚಾರಿತ್ರ್ಯ ಶಾಖೆ) ಎಂದು ಹೆಸರು. ಈ ಶಾಖೆಯವರು ಸತ್‌ಚಾರಿತ್ರವೇ ಬೌದ್ಧಧರ್ಮದ ಪ್ರಾಣವೆಂದು ಭಾವಿಸಿದರು. ಟ್ಸೋನ್-ಖ-ಪ ೧೪೦೮ರಲ್ಲಿ ಲಾಸ ಸಮೀಪದಲ್ಲಿ ಸುಪ್ರಸಿದ್ಧ ಗನ್‌ಡೆನ್ ಸನ್ಯಾಸಿ ಮಠವನ್ನು ಸ್ಥಾಪಿಸಿದ. ಅನಂತರದಲ್ಲಿ ಲಾಸದ ಬಳಿ ಅಷ್ಟೇ ಪ್ರಸಿದ್ಧವಾದ ಡೇಪಂಗ್ ಮತ್ತು ಸೆರ ಮಠವೂ ಟ್ಸಾಂಗ್ ಪ್ರಾಂತ್ಯದಲ್ಲಿ ಟಷ-ಲ್ಹುಂಪೊ ಎಂಬ ಮಠವೂ ಅವನ ಶಿಷ್ಯರಿಂದ ಸ್ಥಾಪಿತವಾದವು. ಈ ಮಠಗಳು ಮಂಗೋಲಿಯ ಮತ್ತು ಸೈಬೀರಿಯಾ ಪ್ರಾಂತ್ಯಗಳಲ್ಲಿ ಬೌದ್ಧಮತವನ್ನು ಪ್ರಚಾರ ಮಾಡಿದವು. ಮೊದಲೆಲ್ಲ ಕೆಲವು ಪ್ರಾಂತಗಳಿಗೆ ಮಾತ್ರ ದಲೈಲಾಮ ಮಠಾಧ್ಯಕ್ಷನಲ್ಲದೆ ರಾಜಕೀಯ ಅಧ್ಯಕ್ಷನೂ ಆಗಿದ್ದ.

ಟಿಬೆಟಿಯನ್ನರ ಕಲೆಯ ಹಿನ್ನೆಲೆ

ಭಾರತೀಯ ಮತ್ತು ಚೀನಿ ಕಲೆಗಳು ಟಿಬೆಟಿನ ಕಲೆಗೆ ಮೂಲ ಆಕರಗಳಾಗಿದ್ದರೂ ಅದು ತನ್ನ ತನವನ್ನು ಉಳಿಸಿಕೊಂಡಿದೆ. ಕಾಶ್ಮೀರಿಕಲೆ ಪಾಲ ಮತ್ತು ಸೇನ ಶೈಲಿಗಳು ಭಾರತದಲ್ಲಿ ಕುಂಠಿತವಾಗಿ ಕಣ್ಮರೆಯಾದ ಮೇಲೆ ಟಿಬೆಟಿನಲ್ಲಿ ಅವನ್ನು ಬೆಳೆಸಿಕೊಂಡು ಬರಲಾಗಿದೆ. ಟಿಬೆಟಿನ ಕಲೆ ಮುಖ್ಯವಾಗಿ ಬೌದ್ಧ ಮತಗಳಿಗೆ ಸಂಬಂಧಿಸಿದ್ದು. ಬೌದ್ಧಮತ ಭಾರತದಿಂದ ಇಲ್ಲಿಗೆ ಬಂದು ತನ್ನ ಪ್ರಭುತ್ವವನ್ನು ಸ್ಥಾಪಿಸಿಕೊಳ್ಳುವುದಕ್ಕೆ ಮುಂಚೆ ಇಲ್ಲಯೇ ಇದ್ದ ಮತಕ್ಕೆ ಬಾನ್ ಎಂದು ಹೆಸರು. ಈ ಮತಕ್ಕೆ ಸಂಬಂಧಿಸಿದ ಕಲೆಗೆ ಬಾನ್ಪೋ ಶೈಲಿಯನ್ನುತ್ತಾರೆ. ಈ ಬಾನ್‌ಶೋ ಮಾದರಿಯ ದೇವಾಲಯಗಳ

---

೧೧. ಜಾರ್ಜ್ ರೋನಿಚ್: ಟಿಬೆಟಿಯನ್ ಪೇಂಟಿಂಗ್ಸ್: ಪು.ಸಂ. ೧೧

ಆಕರವೆಗಿತ್ತೆಂಬುವುದು ತಿಳಿಯುವುದಾದರೂ ಪಶ್ಚಿಮ ಟಿಬೆಟಿನಲ್ಲಿ ಇರುವ ಕಿಂಗ್‌ಲುಂಗ್ ಎಂಬಲ್ಲಿರುವ ಗುಂಡಾದ ಕಟ್ಟಡವನ್ನು ಆ ಶೈಲಿಯದೆಂದು ಸೂಚಿಸುತ್ತಾರೆ. ಈ ಕಾಲದ ದೊರೆಗಳ ಗೋರಿ ದಿಬ್ಬಗಳು ಬೇರೆ ಬೇರೆ ಪ್ರಮಾಣಗಳಲ್ಲಿ ಇದ್ದರೂ ಪ್ರತಿಯೊಂದರಲ್ಲೂ ಒಂದು ಸಮಾನ ಕೋಣೆ ಇದ್ದು ಅದರ ಮೇಲೆ ನಿಲ್ಲಿಸಿರುವ ಕಂಬ ಮಾತ್ರ ಮೇಲೆ ಗೋಚರಿಸುತ್ತದೆ. ಈ ಕಂಬದ ಮೇಲಿನ ಶಾಸನಗಳಲ್ಲಿ ಜೈನ ಮಾದರಿಯ ಅಲಂಕಾರಗಳು ಇರುವುದುಂಟು. ಲ್ಹೇ ಎಂಬಲ್ಲಿ ಇರುವ ದುರ್ಗ ಮುಖ್ಯವಾದ ವಸ್ತು ಮಾದರಿಗಳಲ್ಲಿ ಒಂದು ಬೃಹತ್ ಕಟ್ಟಡವನ್ನು ಹಸಿ ಇಟ್ಟಿಗೆಯಿಂದ ಕಟ್ಟಿ ನಯಗೊಳಿಸಿ ಸುಣ್ಣ ಬಳಿಯಲಾಗುತ್ತದೆ. ಬಾನ್‌ಶೋ ಶಿಲ್ಪ ಮಾದರಿಯ ವಿಷಯ ಹೆಚ್ಚು ತಿಳಿದು ಬಂದಿಲ್ಲ. ಆ ಕಾಲಕ್ಕೆ ಸೇರಿದೆಂದು ಸೂಚಿಸಬಹುದಾದ ಕೆಲವು ಶಿಲ್ಪ ಮಾದರಿಗಳು ಜೈನ ಶಿಲ್ಪ ಮಾದರಿಗಳಿಂದ ಪ್ರಭಾವಿತಗೊಂಡವೆ. ಬಾನ್‌ಶೋ ದೇವಾಲಯಗಳಲ್ಲಿ ಇರುವ ಚಿತ್ರಕಲೆ ಹೆಚ್ಚಾಗಿ ಕಿರುಚಿತ್ರಗಳನ್ನು ಹೊಂದಿದ್ದು ಪೌರಾಣಿಕ ಕಥೆಗಳನ್ನು ಚಿತ್ರಿಸುತ್ತದೆ. ಇವುಗಳಲ್ಲಿ ಕಥಾನಾಯಕರ ಚಿತ್ರಗಳು ಕೂಡ ಕಿರು ಪ್ರಮಾಣದಲ್ಲಿರುತ್ತದೆ. ಇದನ್ನು ಬಾನ್‌ಶೋ ಸಂತಜನ್ ರಾಜ್ ಲಿಂಗ್‌ಬೋನ ಕಥೆಯನ್ನು ವಿವರಿಸಲು ಚಿತ್ರದಲ್ಲಿ ಕಾಣಬಹುದು. ಬೌದ್ಧಧರ್ಮ ಇಲ್ಲಿ ವ್ಯಾಪಕವಾಗಿ ಹರಡಿದೆ. ಭಾರತೀಯ ಕಲೆಗಳಿಂದ ಪ್ರಭಾವಿತಗೊಂಡ ಕಲೆಗಳು ವಿಶೇಷವಾಗಿ ಪ್ರವರ್ಧಮಾನಕ್ಕೆ ಬಂದವು. ಸುಮಾರು ೭ನೇ ಶತಮಾನದಿಂದ ಸ್ರಾಂಗ್ ಬೀನ್ ಸ್ಯಾಮ್ ಷೋ ಎಂಬುವನೇ ಟಿಬೆಟಿನ ಮೊದಲ ಬೌದ್ಧ ದೊರೆ ಎಂಬ ಇತಿಹಾಸವನ್ನು ತಿಳಿದುಕೊಳ್ಳಬಹುದು.

ಗೋಡೆ ತಟ್ಟಿ ರೇಷ್ಮೆ ಬಟ್ಟೆ ಅಥವಾ ಮರದ ಹಲಗೆಗಳ ಮೇಲೆ ಮೂಡಿಸಿರುವ ವರ್ಣಚಿತ್ರಗಳು ಟಿಬೆಟಿನಲ್ಲಿ ಅತ್ಯಂತ ಹೇರಳವಾಗಿದ್ದು ಇತರ ಕಲೆಗಳನ್ನು ಮೀರಿಸಿವೆ. ಇವುಗಳಲ್ಲಿ ಮುಖ್ಯವಾಗಿ ಬುದ್ಧ, ಬೋಧಿಸತ್ವ ಗುರುಗಳು ಚಿತ್ರಿಸಿರುವುದರೊಂದಿಗೆ ತಾಂತ್ರಕ ಘಟನೆಗಳನ್ನು ಹೇರಳವಾಗಿ ಚಿತ್ರಿಸಲಾಗಿದೆ. ಟಿಬೆಟ ತಾರನಾಥ ತಿಳಿಸಿರುವಂತೆ ಈ ಚಿತ್ರಕಾರರು ಭಾರತೀಯ ಚಿತ್ರಕಾರರಿಂದ ತರಬೇತಿಯನ್ನು ಹೊಂದಿದ್ದರು. ಆದ್ದರಿಂದಲೇ ಈ ಚಿತ್ರಗಳಲ್ಲಿ ಭಾರತೀಯ ಸಾಂಪ್ರದಾಯಿಕ ಛಾಯೆ ಇದೆ.[೧೨] ಇನ್ನುವೊಂದು ಹೆಜ್ಜೆ ಮುಂದೆ ಹೋಗುವುದಾದರೆ ಅಜಂತಾ ಸಂಪ್ರದಾಯಗಳ ಛಾಯೆಯನ್ನು ಮುಖ್ಯವಾಗಿ ಅವಲೋಕಿತೇಶ್ವರ ಚಿತ್ರದಲ್ಲಿ ಗುರುತಿಸಬಹುದು. ಮುಂದೆ ನೇಪಾಳ ಶೈಲಿಯ ಪ್ರಭಾವ ಹೆಚ್ಚಾಗಿತ್ತು. ಈಗ ಬೇರೆ ಪ್ರಭಾವಗಳು ಟಿಬೆಟ್ ಚಿತ್ರಕಲೆ ಮೇಲೆ ಬಿದ್ದರು, ಅದು ತನ್ನದೇ ಆದ ಕೆಲವು ವಿಶಿಷ್ಟತೆಗಳನ್ನು ಬೆಳೆಸಿಕೊಂಡು ಬಂದಿದೆ. ಇದರಲ್ಲಿ ಕಲಾದೃಷ್ಟಿಗಿಂತ ಮತ ಪ್ರಕ್ರಿಯೇಗಳ ಪ್ರಕಟಣೆ ಪ್ರಧಾನ್ಯ ಆರಾಧನೆ ಪ್ರತೀಕವಾಗಿ ಚಿತ್ರರಚನೆಯಾದ್ದರಿಂದ ಇವುಗಳಲ್ಲಿ ಚಿತ್ರಕಾರರ ಭಾವಾಭಿವ್ಯಕ್ತಕಿಂತ ಶಾಸ್ತ್ರೀಯ ರೀತಿಯ ರಚನೆ ಮುಖ್ಯವಾಗಿದೆ. ಕಟ್ಟುಪಾಡುಗಳು ವ್ಯಕ್ತಿಚಿತ್ರಗಳಲ್ಲಿನ ಸಂಯೋಜನೆಯಲ್ಲಿ ಎದ್ದು ಕಾಣುತ್ತದೆ. ಇವರುಗಳಲ್ಲಿ ಬಣ್ಣಕ್ಕೆ ಹೆಚ್ಚು ಅರ್ಥವಿದೆ.

ಬುದ್ಧರು ಮತ್ತು ಬೋಧಿಸತ್ವರಿಗೆ ಸಂಬಂಧಿಸಿದ ಇತರೆ ದೇವತೆಗಳು ಒಬ್ಬಬ್ಬರಿಗೆ ಒಂದೊಂದು ಗೊತ್ತಾದ ಬಣ್ಣವಿರುವುದರಿಂದ ಬಣ್ಣದ ಆಯ್ಕೆಯಲ್ಲಿ ಚಿತ್ರಕಾರರ ನಿರ್ವಹಣೆ ಕಟ್ಟುನಿಟ್ಟಾಗಿ ಈ ಪದ್ಧತಿಯನ್ನು ಪಾಲಿಸಬೇಕಾಗಿರುವುದು. ಭಾರತೀಯ ವ್ಯಕ್ತಿಚಿತ್ರಕಲೆಯಲ್ಲಿ ಭಾವಾಭಿವ್ಯಂಜನಕ್ಕೆ ದೊರೆತಷ್ಟು ಅವಕಾಶ ಇಲ್ಲಿ ಕಲಾವಿದನಿಗಿಲ್ಲ. ಆದರೂ ಚಿತ್ರವಿಚಿತ್ರವಾದ ಅಲಂಕಾರಣಗಳನ್ನು ತೂಗಿಸುವುದರಲ್ಲಿ

---

೧೨. ಕನ್ನಡ ವಿಶ್ವಕೋಶ: ಸಂ. ೮: ಪು.ಸಂ. ೫೪೪

ಇವರು ಮುಖ್ಯವಾಗಿದ್ದಾರೆ. ಚಿತ್ರಕಲೆಯಲ್ಲಿ ಅಲಂಕಾರ ಕಲೆ ಸೂಕ್ಷ್ಮ ಚಿತ್ರಕಲೆಯು ಹೆಚ್ಚು ನವುರಾಗಿ ಬೆಳೆದವು. ಟಿಬೆಟಿನ ಜನಜೀವನ, ಪ್ರಕೃತಿ ಚಿತ್ರಣ, ಹಸಿರು ಹುಲ್ಲುಗಾವಲು, ಜುಜಾಡುವ ಕುದುರೆ ಸವಾರರು, ಉನ್ನತ ಪರ್ವತ ಶಿಖರಗಳು, ಅನಂತ ನೀಲಾಕಾಶದಲ್ಲಿ ತೇಲಾಡುವ ಮೊಡಗಳು ಇವುಗಳಲ್ಲಿ ತನ್ನದೇ ಪ್ರತಿಭೆಯನ್ನು ಸೋರೆಗೈದಿದ್ದಾನೆ. ಈ ರೀತಿಯ ಚಿತ್ರಗಳು ಟಿಬೆಟಿಯನ್ ಚಿತ್ರಕಲೆಯಲ್ಲಿ ವಿಶೇಷವಾಗಿ ಕಂಡುಬರುತ್ತವೆ. ಇವರಲ್ಲಿ ಎದ್ದು ಕಾಣುವ ಚೀನಿ ಕಲೆ, ನೇಪಾಳಿ ಕಲೆಯ ಪ್ರಭಾವ ಮುಂದೆ ಸ್ವಲ್ಪ ಸ್ವಲ್ಪ ಬೆಳೆಯುತ್ತಾ ಹೋಗುತ್ತದೆ. ಆದರೂ ಸ್ಥಳಾವಕಾಶದ ಚೀನಿ ಮತ್ತು ನೇಪಾಳಿಯ ನವಿರು ಸೂಕ್ಷ್ಮತೆಯನ್ನು ಕಾಣಬಹುದು. ಈ ಪುರಾತನ ಚಿತ್ರಗಳ ಮತ್ತೊಂದು ವೈಶಿಷ್ಟ್ಯವೆನೆಂದರೆ ಯಾವ ಭಾಗವನ್ನು ಬಿಡದೆ ಚಿತ್ರಗಳನ್ನು ತುಂಬಿರುವುದು, ಇದರಿಂದ ಈ ಚಿತ್ರಕಲೆಯ ಮೂಲವನ್ನು ದೊಡ್ಡದಾದ ದೇವಾಲಯ ಅಥವಾ ಅರಮನೆಗಳ ಭಿತ್ತಿಚಿತ್ರಗಳ ಮೇಲೆ ಚಿತ್ರಕಾರರ ಹೆಸರು ಒಮ್ಮೊಮ್ಮೆ ಇರುವುದುಂಟು.

ಟಿಬೆಟಿನಲ್ಲಿ ಸಾಮಾನ್ಯವಾಗಿ ಕಂಡುಬರುವ ಹಸ್ತಪ್ರತಿ ಚಿತ್ರ ಭಾರತ ಮತ್ತು ನೇಪಾಳಿ ಮಾದರಿಗಳನ್ನು ಅನುಸರಿಸಿದ ಮೇಲೆ ಪಟಗಳಲ್ಲಿ ಮಾತ್ರವಲ್ಲದೇ ಪುಟ ಪುಟಗಳಲ್ಲಿ ಕಿರು ಚಿತ್ರಗಳನ್ನು ಕಾಣಬಹುದು. ಈ ಹಸ್ತಪ್ರತಿಗಳಿಗೆ ರಕ್ಷಾಕವಚಗಳಾಗಿ ಉಪಯೋಗಿಸಿರುವ ಮರದ ಹಲಗೆಗಳ ಮೇಲೆ ತಿಳಿವಾಗಿ ಸೂಕ್ಷ್ಮವಾಗಿ ಮಾಡಿರುವ ಉಬ್ಬು ವಿನ್ಯಾಸಗಳ ಮೇಲೆ ಚಿತ್ರಿತವಾಗಿದ್ದು ಇಲ್ಲಿ ಇದರ ಕೌಶಲ್ಯವನ್ನು ಕಾಣಬಹುದು. ಇವುಗಳಿಗಾಗಿ ಭಾರತ, ನೇಪಾಳಗಳಿಂದ ಮಾದರಿಗಳನ್ನು ಇಲ್ಲಿಗೆ ತರಿಸಿಕೊಂಡಿದ್ದುಂಟು. ಉಬ್ಬಿದಂತಿರುವ ಸೊಡು ಚಿತ್ರಕಲೆಯನ್ನು ಟಿಬೆಟಿನ ಚಿತ್ರಕಾರರು ಬೆಳೆಸಿದ್ದಾರೆ. ಇವು ಟಿಬೆಟ್ ಚಿತ್ರಗಳಿಗಿಂತ ಹೆಚ್ಚು ಸುಂದರವಾಗಿದ್ದು ಮುಖಭಾವಗಳು ಎದ್ದು ಕಾಣುವುದಲ್ಲದೇ ಹೂಬಳ್ಳಿ ಸುರಳಿಗಳಲ್ಲಿ ಬಣ್ಣದ ಆಯ್ಕೆ ನವಿನವಾಗಿದ್ದು ಪುಷ್ಪಾಲಂಕಾರಣಗಳು ನವುರಾಗಿವೆ. ಪವಿತ್ರ ಸ್ಥಳಗಳನ್ನು ಚಿತ್ರಿಸುವುದರಲ್ಲಿ ಈ ಚಿತ್ರಕಾರರಿಗೆ ಆಸಕ್ತಿ ಹೆಚ್ಚು ಲಾಸದಲ್ಲಿನ ದೇವಮಂದಿರಗಳನ್ನು ಚಿತ್ರಿಸಿರುವ ಇಂತಹ ಒಂದು ಚಿತ್ರದಲ್ಲಿ ಸಣ್ಣ ಗುಡಿಗಳನ್ನು ವಿವರಣಾಪೂರ್ಣವಾಗಿ ಚಿತ್ರಿಸಿರುವುದನ್ನು ನೋಡಬಹುದು. ಟಿಬೆಟಿನಲ್ಲಿ ಹೇರಳವಾಗಿ ಕಾಣಿಸುವುದೆಂದರೆ ಲೋಹ ಮೂರ್ತಿಗಳು ಇವು ಸಾಮಾನ್ಯವಾಗಿ ಮಿಶ್ರ ಲೋಹದಿಂದ ಮಾಡಿರುವ ಟೊಳ್ಳು ಮೂರ್ತಿಗಳನ್ನು ಅಷ್ಟಧಾತುಗಳಿಂದ ಮಾಡಿದ ಬೆಲೆ ಬಾಳುವ ಮೂರ್ತಿಗಳಿಗೆ ಗಿಚ್ಚು ಮಾಡುವ ಪದ್ಧತಿ ಹೆಚ್ಚು ವ್ಯಾಪಕವಾಗಿತ್ತು. ಶಿಲಾಮೂರ್ತಿಗಳನ್ನು ಗಚ್ಚಿನ ಮೂರ್ತಿಗಳು ಮರದ ಭೂಮಿಕೆಯ ಮೇಲೆ ಮಣ್ಣು, ಹುಲ್ಲು, ಬೆರೆತ ಜೇಡಿಯಿಂದ ಮಾಡಿ ಆಕಾರಕೊಟ್ಟು ಗಚ್ಚಿನ ತಿಳು ಲೇಪನದ ಮೇಲೆ ಬಣ್ಣಬಳಿದ ಮೂರ್ತಿಗಳಿವೆ. ಬೌದ್ಧಮತದಂತೆ ಶಿಲ್ಪವು ಭಾರತದಿಂದಲೇ ಇಲ್ಲಿಗೆ ಬಂದದ್ದು ಅನೇಕ ಮೂರ್ತಿಗಳ ಭಾರತಕ್ಕೆ ಭೇಟಿಕೊಟ್ಟಿದ ಬಿಕ್ಷುಗಳು ಹಾಗೂ ಇತರರು ತಮ್ಮೊಡನೆ ತಂದರೆಂದು ಹೇಳಿಕೆಯಿದೆ.[೧೩]

ಟಿಬೆಟಿನ ಅತ್ಯಂತ ಪ್ರಾಚೀನವಾದ ಬೌದ್ಧ ಮೂರ್ತಿ ಮಗಧದಿಂದ ಬಂದಿದ್ದೆಂದು, ಅದು ಚೀನಾಕ್ಕೆ ಮೊದಲು ಬಂದಿತೆಂದು ಅಲ್ಲಿನ ರಾಜಕುಮಾರಿಯೊಬ್ಬಳನ್ನು ಟಿಬೆಟಿನ ಮೊದಲ ಬೌದ್ಧ ದೊರೆ ಮದುವೆಯಾದಾಗ ಅದನ್ನು ಇಲ್ಲಿಗೆ ತಂದಿದ್ದಾಗಿ ಇತಿಹಾಸವಿದೆ. ಲಾಸದ ಜೊಬಾಂಗ್‌ನಲ್ಲಿ ಇಗಲೂ ಆ ಮೂರ್ತಿ ಇದ್ದು ಬೌದ್ಧ ಶಿಲ್ಪಗಳಲ್ಲಿ ಶ್ರೇಷ್ಠವಾದುದೆಂದು ಹೆಸರು ಪಡೆದಿದೆ. ಹತ್ತಿರ ಹತ್ತಿರ

೧೩. ಜಾರ್ಜ್ ರೋನಿಚ್: ಟಿಬೆಟಿಯನ್ ಪೇಂಟಿಂಗ್ಸ್: ಪು.ಸಂ. ೧೫

ನೆರಿಗೆಯನ್ನುಳ್ಳ ಉಡುಪನ್ನು ಉಟ್ಟಿರುವಂತೆ ತೋರಿಸಿರುವುದೇ ಇದರ ವೈಶಿಷ್ಟ್ಯ ಜೊಬಾಂಗ್‌ನಲ್ಲಿರುವ ಮೂರ್ತಿಯನ್ನು ದಕ್ಷಿಣ ಭಾರತದಲ್ಲಿನ ಹಲವು ಶಿಲ್ಪಿಗಳು ಟಿಬೆಟಿಗೆ ಹೋಗಿ ಕೆಲಸ ಮಾಡಿರುವುದುಂಟು. ಆದರೆ ಬೌನ್‌ಯಾನ್‌ನಲ್ಲಿರುವ ಕೆಲವು ಲೋಹ ಮೂರ್ತಿಗಳು ಪಾಲ ಶೈಲಿಯಲ್ಲಿವೆ. ಮುಂದೆ ಟಿಬೆಟನ ಶಿಲ್ಪ ನೇಪಾಳ ಮಾದರಿಗೆ ಹೆಚ್ಚು ಹೊಂದಿಕೊಂಡಿತು. ಲಕ್ ಎಂಬ ಊರು ಮೂರ್ತಿಗಳನ್ನು ತಯಾರಿಸುವ ಕೇಂದ್ರವಾಗಿತ್ತು. ಚಿತ್ರಕಲೆಯಂತೆ ಮೂರ್ತಿಶಿಲ್ಪವು ಹೆಚ್ಚು ಸಾಂಪ್ರದಾಯ ಬದ್ಧವಬಾಗಿರುವುದರಿಂದ ಬುದ್ಧನ ಮೂರ್ತಿಗಳಲ್ಲಿ ಅಲೌಕಿಕತೆಗಿಂತ ಸಾಂಪ್ರದಾಯಕವಾಗಿ ನಡೆದುಕೊಂಡಿರುವ ಲಕ್ಷಣಗಳು ಹೆಚ್ಚು ಆದರೆ ತಾಂತ್ರಿಕ ದೇವತೆಗಳು ಹೆಚ್ಚು ಕ್ರಿಯಾಶಿಲತೆಯನ್ನು ಕಾಣಬಹುದು. ದ್ವಾರಪಾಲಕರ ಮೂರ್ತಿಗಳಂತಹ ಕೆಲವು ಮೂರ್ತಿಗಳಿಗೆ ಚೀನಿ ಕಲೆಯ ಪ್ರಭಾವ ವ್ಯಕ್ತವಾಗುತ್ತದೆ. ಆದರೆ ತಾಂತ್ರಿಕ ದೇವತೆಗಳ ಮೂರ್ತಿಗಳನ್ನು ರಚಿಸುವುದರಲ್ಲಿ ನೇಪಾಳಿಯ ಶೈಲಿಯ ಪ್ರಭಾವವಿದ್ದರು ತಮ್ಮದೇ ಆದ ಟಿಬೆಟ ಶೈಲಿಯನ್ನು ಅವುಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಮಹಾಯಾನ, ವಜ್ರಯಾನಗಳಿಗೆ ಸಂಬಂಧಿಸಿದಂತೆ ಅನೇಕ ಮೂರ್ತಿಗಳಿದ್ದು ಅವುಗಳ ರಚನೆ ರೀತಿ ರೂಪಭಾವ, ಮುಂತಾದ ಮೂರ್ತಿ ವಿವರಗಳನ್ನು ತಿಳಿಸುವ ಗ್ರಂಥಗಳ ಕಟ್ಟುಪಾಡಿಗೆ ಒಳಗಾಗಿವೆ. ಹೇರಳವಾಗಿ ರಚಿತವಾಗಿರುವ ಮೂರ್ತಿಗಳೆಂದರೆ ಅವಲೋಕಿತೇಶ್ವರ, ತಾರಾ ಮತ್ತು ಮಂಜುಶ್ರೀ. ಅವಲೋಕಿತೇಶ್ವರನ ಹಲವು ಬಗೆಯ ಮೂರ್ತಿಗಳುಂಟು. ನಾಲ್ಕು ಕೈಗಳಿರುವ ಮೂರ್ತಿಗಳೆಂದರೆ, ನಾಲ್ಕು ತಲೆಗಳು, ಸಹಸ್ವಭಾವಗಳು ಅಥವಾ ಸಹಸ್ರ ನೇತ್ರಗಳಿರುವ ಮೂರ್ತಿಯವರೆಗು ಬಗೆ ಬಗೆಯಾದ ಮೂರ್ತಿಗಳುಂಟು. ೧೦ ರಿಂದ ೧೨ ಮೀಟರಗಳಷ್ಟು ಎತ್ತರವಾದ ಬೋಧಿಸತ್ವ ಅವಲೋಕಿತೇಶ್ವರನ ತೂಳುಗಳುಳ್ಳ ಲೋಹ ಮೂರ್ತಿಗಳು ಅನೇಕ ಇವೆ. ಟಿಬೆಟಿನ ಕಲಾಕಾರರು ವರ್ಣಚಿತ್ರಗಳಿಗಿಂತ ಶಿಲ್ಪಗಳಲ್ಲಿ ಮಾನವ ಪ್ರತಿಕೃತಿಗಳನ್ನು ಸಿದ್ಧಿ ಪಡೆದಿದ್ದಾರೆ.[೧೪]

ಇಲ್ಲಿ ದೊರೆತಿರುವ ಬೌದ್ಧ ಗುರುಗಳ ಮೂರ್ತಿ ಶಿಲ್ಪ ಅಸಂಖ್ಯಾತ ದೇವತೆಗಳ ಮೂರ್ತಿಗಳಿಗಿಂತ ಈ ಪ್ರತಿಕೃತಿಗಳು ಹೆಚ್ಚು ಸ್ವಾಭಾವಿಕವಾಗಿವೆ. ಇಂಥಹ ಪ್ರತಿಮೆಗಳನ್ನು ಜೇಡಿ ಅಥವಾ ಗಚ್ಚಿನಲ್ಲಿ ಮಾಡಿ ಅವಕ್ಕೆ ಬಣ್ಣ ಹಾಕಿರುವುದುಂಟು. ನವರಂಗದಲ್ಲಿರುವ ಕೆಲವು ದೇವಾಲಯಗಳಲ್ಲಿ ಈ ರೀತಿಯ ಸುಂದರವಾದ ಮೂರ್ತಿಗಳನ್ನು ನೋಡಬಹುದು. ಮತ್ತು ಇದೇ ರೀತಿ ಚೀನಾದ ದೇವಾಲಯದಲ್ಲಿ ಸಾಲಾಗಿ ನಿಂತಿರುವ ಭವ್ಯವಾದ ಉಡುಗೆಯನ್ನು ಬೋಧಿಸತ್ವ ಮೂರ್ತಿಗಳ ಸಾಲೇ ಇದೆ. ಇದು ಪ್ರಮಾಣ ಬದ್ಧವಾಗಿದೆ. ಸಣ್ಣ ಸಣ್ಣ ಅಲಂಕಾರಗಳನ್ನು ಇವುಗಳಲ್ಲಿ ಹೆಚ್ಚು ಶ್ರದ್ಧೆಯಿಂದ ಪೂರೈಸಲಾಗಿದೆ. ಇಂತಹ ಹೊಳಪು ಬರುವಂತೆ ನಯಗೊಳಿಸಿರುವ ಈ ಮೂರ್ತಿಗಳು ಟಿಬೆಟನ ಶಿಲ್ಪಕಲೆಗೂ ಒಳ್ಳೆಯ ಮಾದರಿಗಳಾಗಿವೆ. ಪೂರಕ ರೂಪದ ಶಿಲಾಮೂರ್ತಿಗಳು ಇಲ್ಲಿ ಅಪರೂಪವಾಗಿರುವುದಕ್ಕೆ ಕಾರಣ. ಭಾರತದಿಂದ ಸುಲಭವಾಗಿ ಸಾಗಿಸಬಹುದಾದ ಲೋಹ ಮೂರ್ತಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಇಲ್ಲಿಗೆ ತಂದು ಮತ್ತು ಅವುಗಳನ್ನು ಮಾದರಿಯಾಗಿ ಇಟ್ಟುಕೊಂಡು ಲೋಹ ಶಿಲ್ಪಗಳನ್ನು ಬೆಳೆಸಿದರು.[೧೫] ಲಾಸಾದಲ್ಲಿರುವ ರಾಮಾಂಚ ಮತ್ತಿತರ ದೇವಾಲಯಗಳನ್ನು ನ್ರಾಬ್ವಾನ್ ಶೋ ಎಂಬ ಬೌದ್ಧ ದೊರೆ ಮತ್ತು ಅವನ ರಾಣಿಯರು. ಕಟ್ಟಿಸಿದರು ಎಂಬ ಇತಿಹಾಸವಿದೆ. ಮಂಡಲಾಕಾರಾದ ತಳವಿನ್ಯಾಸ ಇರುವ ಈ ದೇವಾಲಯಗಳು ಭಾರತದ ವದಂತಿಪುರಗಳ ದೇವಾಲಯಗಳ ಮಾದರಿಗಳಿರುವುದಾಗಿ

೧೪. ಲೋಕೇಶ್ ಚಂದ್ರ: ಬುದ್ದಿಸ್ಟ್ ಐಕಾನೋಗ್ರಫಿ, ಪು.ಸಂ. ೧೬

೧೫. ಕನ್ನಡ ವಿಶ್ವಕೋಶ: ಸಂ. ೮: ಪು.ಸಂ. ೫೪೫

ಹೇಳುತ್ತಾರೆ. ಈ ಕೆಲವು ದೇವಾಲಯಗಳಲ್ಲಿ ಅದೇ ಕಾಲದ ಭಿತ್ತಿಚಿತ್ರಗಳನ್ನು ನೋಡಬಹುದು. ಇನ್ನೂ ಕೆಲವು ದೇವಾಲಯಗಳು ದೀರ್ಘ ಚತುರ ಆಕಾರದಲ್ಲಿದ್ದು ಬುದ್ಧನ ಅವಶೇಷಗಳಿಗಾಗಿ ನಿರ್ಮಿತವಾದವು. ದೊಡ್ಡ ದೇವಾಲಯಗಳ ಸುತ್ತಲೂ ಮಠಗಳುಂಟು.

ಬೃಹದ್ಧಾಕಾರದ ಲೋಹದ ಮೂರ್ತಿಗಳಿಗಾಗಿ ಕಟ್ಟಿರುವ ದೇವಾಲಯಗಳಲ್ಲಿ ಹಲವು ಅಂತಸ್ತುಗಳಿದ್ದು ಆ ಮೂರ್ತಿಗಳಲ್ಲಿ ಬೇರೆ ಬೇರೆ ಹಂತದ ದರ್ಶನ ಮಾಡಲು ಭಾರತದ ಸ್ತೂಪ ಮಾದರಿಯಲ್ಲಿರುವ ಕಟ್ಟಡಗಳು, ಮಹಾ ಮಠಗಳು, ಬೌದ್ಧಮತ ಟಿಬೆಟಿನಲ್ಲಿ ಹರಡಿದಾಗ ಕಟ್ಟಿದ್ದವು. ಬೃಹತ್ ಆಕಾರದಲ್ಲಿರುವ ಇವು ತಮ್ಮದೇ ಆದ ಶೈಲಿಯಲ್ಲಿದ್ದು ಉನ್ನತವಾದ ಜಗತಿ ಮೇಲೆ ನಿರ್ಮಿತವಾಗಿವೆ. ಕೆಲವು ವೇಳೆ ಈ ಜಗತಿಯ ಒಂದು ಗುಡಿಯಾಗಿರುವುದು. ತುದಿಯಲ್ಲಿ ಗುಂಡಾದ ಗೊಮ್ಮಟ ಅದರ ಮೇಲೆ ಚಕ್ರಗಳು ಇರುತ್ತವೆ. ಚೌಕಾಕಾರದ ತಳವಿನ್ಯಾಸದ ಕಟ್ಟಡಗಳಲ್ಲಿ ಹೊರ ಗೋಡೆಗು ಒಳ ಗೋಡೆಗು ಪ್ರದಕ್ಷಿನಾಪಥವು ಇರುವುದುಂಟು. ಇವುಗಳ ಮೇಲಿನ ಭಾಗದಲ್ಲಿ ಗೀಟುಮಾಡಿದ ತಾಮ್ರದ ಹೊದಿಕೆ ಇರುವುದು. ಸಾಮಾನ್ಯ ದುರ್ಗಾ ಹಾಗೂ ಅರಮನೆಗಳ ಬೃಹತ್ ಕಟ್ಟಡಗಳಲ್ಲಿ ವೈವಿಧ್ಯತೆಯ ಅಂಚು ಕೆಂಪು ಪಟ್ಟಿಗಳನ್ನು ಬಿಡಿಸಿರುವುದುಂಟು.

ಟಿಬೆಟಿನ ಜನರ ಅಲಂಕಾರ ಪ್ರಿಯತೆಯ ಪರಿಣಾಮವಾಗಿ ಕೆಲವು ರೀತಿಯ ಕುಶಲ ಕಲೆಗಳು ಅಲ್ಲಿ ಬೆಳೆದುಬಂದವು. ತಾಮ್ರದ ಕುಂಚಗಳು, ಕತ್ತಿಯ ಹಿಡಿಗಳು, ತಾಮ್ರದ ಚಹಾ ಪಾತ್ರೆ ಮುಂತಾದ ಘಂಟೆಗಳ ಮೇಲೆ ಎಲ್ಲ ನವುರಾಗಿ, ನಾಜುಕಾಗಿ ಅಲಂಕಾರಗಳು ಕಂಡುಬರುವುದು ಇಲ್ಲಿನ ವೈಶಿಷ್ಟ್ಯ. ನೂರಾರು ವರ್ಷಗಳಿಂದ ಭಾರತ ಮತ್ತು ಟಿಬೆಟ್ ನಡುವಣ ಚಿತ್ರಕಲೆ ಮತ್ತು ಶಿಲ್ಪಕಲೆ ಅವು ಅವುಗಳಿಗೆ ಧಾರ್ಮಿಕ ನಂಬಿಕೆಗಳಂತಹ, ಸಾಂಸ್ಕೃತಿಕ ಚೌಕಟ್ಟು, ಗಾಢವಾದ ಸಂಬಂಧ ಮತ್ತು ಪರಸ್ಪರ ನಂಬಿಕೆ ಬೆಳೆದುಬಂದಿದೆ. ಟಿಬೆಟಿನ ಬಾನ್ ಎಂಬ ಸಂಸ್ಕೃತಿ ಮತ್ತು ಬೌದ್ಧ ಧರ್ಮದ ಮೇಲಿನ ಗಾಢವಾದ ನಂಬಿಕೆಯಿಂದ ಟಿಬೆಟಿಯನ್ ಅಕ್ಷರಗಳನ್ನು ಭಾರತದ ದೇವನಾಗರಿ ಲಿಪಿಯಿಂದ ನೇರವಾಗಿ ಪಡೆಯಲಾಯಿತು. ೫ನೆಯ ಶತಮಾನದಲ್ಲಿ (೪೩೩ ಕ್ರಿ.ಪೂ) ಭಾರತದ ಶಾಂತರಕ್ಷಿತ ಎಂಬ ವಿದ್ವಾಂಸ ಡೊಡೆಜ ಮಾಮೊಂಗ್ ಎಂಬ ಮೂಲ ಗ್ರಂಥವನ್ನು ಮತ್ತು ಪಂಗ್ಕಾಂಗ್ ಥಗ್ಯಪ (ಒಂದು ನೂರು ಪ್ರಾರ್ಥನೆ ಮತ್ತು ವಿಧಿಗಳು) ಲಾಥೊಥೊರಿಜ್ಞನಸನ ಎಂಬ ೨೮ನೆಯ ಟಿಬೆಟ್ ರಾಜರಿಗೆ ನೀಡಿದರು. ಈ ರೀತಿಯಾಗಿ ಬೌದ್ಧ ಮತ ಮೊದಲನೆಯದಾಗಿ ಟಿಬೆಟಿಗೆ ಆಗಮಿಸಿತು. ನಂತರ ೭ನೆಯ ಶತಮಾನದಲ್ಲಿ ೩೩ನೆಯ ರಾಜ ಸಾಂಗ್‌ತ್ಸೆನ್ ಗಾಂಪೋರವರ ಆಳ್ವಿಕೆಯನ್ನು ಆಚಾರ್ಯ ಕುಸರ ಮತ್ತು ಬ್ರಹ್ಮನ್ ಶಂಗ್ಕರ ಮತ್ತು ಅನೇಕ ಭಾರತದ ವಿದ್ವಂಸರನ್ನು ಟಿಬೆಟಿಗೆ ಆಹ್ವಾನ ಮಾಡಿ ಬೌದ್ಧ ಧರ್ಮವನ್ನು ಸ್ಥಾಪಿಸಲಾಯಿತು.[೧೬]

ಕ್ರಮೇಣ ೮ನೆಯ ಶತಮಾನದಲ್ಲಿ ಭಾರತದ ಸಂಸ್ಕೃತಿ ಮತ್ತು ಧರ್ಮದ ಮೇಲಿನ ಗಾಡವಾದ ನಂಬಿಕೆಯಿಂದ ಟ್ರಿಸೊಂಗ್ ಡ್ಯಟ್ ತ್ಸನ್ ೩೮ನೆಯ ಟಿಬೆಟ ರಾಜರು ಪೂರ್ವಭಾರತ ಗುರುಪದ್ಮಸಂಭವ ಮತ್ತು ಮಹಾಮಹಿಮರ ಧರ್ಮಾಧಿಪತಿ ಶಾಂತರಕಿತರನ್ನು ಟಿಬೆಟಿಗೆ ಅಹ್ವಾನಿಸಿದರು. ಭಾರತದ ಉತ್ತಾಂತಪುರಿ ದೇವಾಸ್ಥಾನದ ಮಾದರಿಯಂತೆ ಟಿಬೆಟನಲ್ಲಿ ಸಾಮ್ ಯೆ ಬೌದ್ಧ ವಿಹಾರಗಳನ್ನು ವಿಧಿಯುಕ್ತವಾಗಿ ಸ್ಥಾಪಿಸಿದರು. ಬೌದ್ಧ ಧರ್ಮ ಪ್ರಸಾರಕ್ಕಾಗಿ ಸ್ಥಾಪಿಸಿದರು. ಪದ್ಮಸಂಭವ ಮತ್ತು

---

೧೬. ಪಾಲ್ಜುಲ್ ಪೆಮಾ ನಾರ್ಬು: ದಿ ಹಿಸ್ಟರಿ ಆಫ್ ಪಾಲರಿ ಫೋಟ್ರಾಂಗ್: ಪು.ಸಂ. ೧೫

ಶಾಂತರಕ್ಷಿತರ ಅವಿರತ ಶ್ರಮವು ಟಿಬೆಟಿನ ರಾಜಕೀಯ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೆ ಮತ್ತು ಅಭಿವೃದ್ಧಿಗೆ ಕಾರಣವಾಯಿತು. ಇವರಿಬ್ಬರ ಪ್ರಯತ್ನದಿಂದ ೧೦೮ ವಿದ್ವಾಂಸರನ್ನು ಟಿಬೆಟಿಗೆ ಆಹ್ವಾನಿಸಿ ಬೌದ್ಧ ಧರ್ಮದ ಪವಿತ್ರ ಗ್ರಂಥಗಳನ್ನು ಸಂಸ್ಕೃತದಿಂದ ಟಿಬೆಟನ ಭಾಷೆಗೆ ಭಾಷಾಂತರ ಮಾಡಿಸಲಾಯಿತು. ಈ ಅಪರಿಮಿತ ಮೂಲ ಗ್ರಂಥಗಳು ಬಗವಾನ್ ಬುದ್ಧ ಶಾಕ್ಯಮುನಿಯರ ಬೋಧನೆಗಳಿಗೆ. ಸುಮಾರು ೩೦೦ ಕಿಂತ ಹೆಚ್ಚಿನವುಗಳು ಭಾರತದ ಮಹಾನ್ ವಿದ್ವಾಂಸರ ಅತ್ಯುತ್ತಮ ವ್ಯಾಖ್ಯಾನ ವಿವರಣೆಗಳನ್ನು ಒಳಗೊಂಡಿರುತ್ತವೆ. ಈ ವ್ಯಾಖ್ಯಾನ ವಿವರಗಳನ್ನು ಎಲ್ಲ ಟಿಬೆಟಿಯನ್ ಬೌದ್ಧ ಧರ್ಮದ ವಿದ್ಯಾಲಯಗಳಲ್ಲಿ ಕೇಂದ್ರ ಬಿಂದುವಿನಂತೆ ಬೌದ್ಧ ಧರ್ಮದ ತತ್ವವನ್ನು ಕಲಿಯುವಾಗ ಉಪಯೋಗಿಸಲಾಗಿತ್ತು. ಈಗಲೂ ಟಿಬೆಟಿಯನ್ನರು ತಾಂತ್ರಿಕ ಧರ್ಮಗ್ರಂಥವನ್ನು ಅಧ್ಯಾಯನ ಮಾಡುವಾಗ ಗುರುಪದ್ಮಸಂಭವ ಮತ್ತು ೮ ವಿದ್ವಾಂಸರ ಮೂಲ ಕೃತಿಗಳ ಮೇಲೆ ಅವಲಂಬಿತರಾಗಿದ್ದಾರೆ.[೧೭] ಇದರಿಂದ ಟಿಬೆಟಿಯನ್ನರು ಭಾರತದ ಉದಾತ್ತ ಮನಸ್ಸಿನ ವ್ಯಕ್ತಿತ್ವದ ಮಹಾ ಪುರುಷರ ಜನ್ಮಸ್ಥಳವೆಂದು ಚನ್ನಾಗಿ ಮನಪೂರ್ವಕವಾಗಿ ತಿಳಿದು ಅದರಲ್ಲೂ ದಕ್ಷಿಣ ಭಾರತವನ್ನು ಅರಿವಿನ ಜನ್ಮಸ್ಥಳ ಮತ್ತು ಅರಿವಿನ ಪಾಲನೆಯ ಪವಿತ್ರ ಭೂಮಿ ಎಂದು ಅಭಿಮಾನದಿಂದ ತಿಳಿದು ಹಾಗೂ ಅನ್ಯ ಸಂಪ್ರಾದಾಯವನ್ನು ಗೌರವದಿಂದ ಸಂರಕ್ಷಿಸುವ ಸ್ಥಳವೆಂದು ೫ನೆಯ ಶತಮಾನದಿಂದ ಇಂದಿನವರೆಗೂ ಭಾರತ ಮತ್ತು ಟಿಬೆಟಿನ ಸಂಸ್ಕೃತಿ ಮತ್ತು ಧರ್ಮ ಬಹಳ ಅನ್ಯೂನ್ಯವಾಗಿ ಮತ್ತು ಸಾಮರಸ್ಯದಿಂದ ಸಮರ್ಪಕವಾಗಿ ಒಂದಕ್ಕೊಂದು ಬೆಸೆದುಕೊಂಡಿದೆ ಎಂದು ತಿಳಿದಿದ್ದಾರೆ.

ಈ ಸಂದರ್ಭದಲ್ಲಿ ಚೀನಾದವರು ೧೯೫೯ರಲ್ಲಿ ಟಿಬೆಟಿಯನ್ನರ ನಡುವೆ ರಾಜಕೀಯ ಆರಾಜಕತೆಯಿಂದ ಟಿಬೆಟ್ ಸಾಮ್ರಾಜ್ಯವನ್ನು ಚೀನಾದ ಅಧಿಕಾರಿಗಳು ತನ್ನ ವಶಕ್ಕೆ ತೆಗೆದುಕೊಂಡು ತನ್ನದೇ ಆದ ಕಮ್ಯೂನಿಸ್ಟ್ ಸರ್ಕಾರವನ್ನು ರೂಪಿಸಿ ಅಲ್ಲಿನ ಅಧಿಕಾರಿಗಳು ಸರ್ಕಾರದ ಆಡಳಿತ ಕಛೇರಿಗಳು ಧಾರ್ಮಿಕ ಕ್ಷೇತ್ರಗಳ ಮೇಲೆ ಅಧಿಕಾರವನ್ನು ಸ್ಥಾಪಿಸಿದರಿಂದ ಪರತಂತ್ರದ ಬದುಕಿನಿಂದ ಬೆಸತ್ತು ಹಿರಿಯ ಧರ್ಮಗುರುಗಳಾದ ದಲೈಲಾಮಾ ಅವರ ನೇತ್ರತ್ವದಿಂದ ಭಾರತಕ್ಕೆ ವಲಸೆ ಬಂದರು.

***



ಅಧ್ಯಾಯ–ಮೂರು

ಕರ್ನಾಟಕದಲ್ಲಿ ಟಿಬೆಟಿಯನ್ನರ ನೆಲೆಗಳ ಸಾಂಸ್ಕೃತಿಕ ಪರಿಸರ, ಕಲೆಯ ಹರವು.

ಒಂದು ದೇಶದ ಧರ್ಮಾಧಾರಿತ ಸಂಸ್ಕೃತಿಗಳು ಪ್ರಬುದ್ಧಮಾನಕ್ಕೆ ಬೆಳೆದುಕೊಂಡು ಹೋಗಲು ಇನ್ನೊಂದು ದೇಶದ ಸಾಂಸ್ಕೃತಿಕ ಪರಿಸರದೊಂದಿಗೆ ಗೊತ್ತುಗೊತ್ತಿಲ್ಲದೆ ಅಶ್ರಯಪಡೆದು ಕೊಳ್ಳವುದು ಸಹಜವಗಿದ್ದು ಇದರಲ್ಲಿ ಧಾರ್ಮಿಕ ಸಾಂಸ್ಕೃತಿಕ ಮತ್ತು ರಾಜಕೀಯ ಲಾಭ–ನಷ್ಟಗಳ ಜೊತೆಗೆ ಭೌಗೋಳಿಕ, ಸಮಾಜಿಕ, ಅರ್ಥಿಕ ಮತ್ತು ವೈಜ್ಞಾನಿಕ ಇತ್ಯಾದಿ ಕ್ಷೇತ್ರಗಳಿಂದ ಇತರ ನಾಡಿನೊಂದಿಗೆ ಸಂಭಂದ–ಅನುಬಂಧಗಳನ್ನು ಹೊಂದಿರುತ್ತವೆ. ಇಂಥಹ ಸಂದರ್ಭಗಳಲ್ಲಿ ಹೆಚ್ಚಾಗಿ ಕಲೆ ಮತ್ತು ಸಂಸ್ಕೃತಿಗಳಲ್ಲಿ ಬದಲಾವಣೆಗೊಂಡಿರುವುದನ್ನು ಕಲಾಇತಿಹಾಸದಲ್ಲಿ ಕಾಣಬಹುದು.

ಬೌದ್ಧ ಧರ್ಮ ಕಾಲಿಟ್ಟೆಡೆಯಲ್ಲೆಲ್ಲಾ ಲಲಿತಕಲೆಗಳು ಚೆನ್ನಾಗಿ ವರ್ಧಿಸಿದವು ಇಂದು ತಾರಾನಾಥ (೧೭ನೇಯ ಶತಮಾನದ ತತ್ವಜ್ಞಾನಿ) ಹೇಳಿರುವುದು ಒಣ ಹೆಮ್ಮೆಯ ಮಾತಲ್ಲ. ಭಾರತ, ಸಿಂಹಳದ್ವೀಪ, ಸಿಯಾಂ, ಬರ್ಮ, ನೇಪಾಲ್, ಖೊಟಾಗ್, ಟಿಬೆಟ್, ಜಪಾನ್, ಚೀನ ದೇಶಗಳ ಲಲಿತಕಲೆಗಳ ಉಚ್ಛ್ರಾಯಕ್ಕೆ ಬೌದ್ಧ ಧರ್ಮದ ಪ್ರೇರಣೆಯೇ ಕಾರಣವಾಗಿದೆ.[೧]

ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಇತಿಹಾಸದಲ್ಲಿ ಧರ್ಮವನ್ನಾಧರಿಸಿ ಲಲಿತಕಲೆಗಳು ಬೆಳವಣಿಗೆ ಹೊಂದಿರುವೂ. ತುಂಬ ಮೌಲಿಕವಾದುದ್ದು ಇಂತಹ ಪ್ರಯತ್ನದಲ್ಲಿ ಬೌದ್ಧಧರ್ಮವು ಹೊರತಾದುದಲ್ಲ ಬೌದ್ಧಧರ್ಮವು ಕರ್ನಾಟಕದಲ್ಲಿ ಮೌರ್ಯರ ದೊರೆ ಅಶೋಕನ ಕಾಲದಿಂದ ಕಾಣಿಸಿಕೊಂಡಿದ್ದು. ನಂತರ ರಾಷ್ಟ್ರಕೂಟರ ಕಾಲದಲ್ಲಿ ಅವನತಿಯ ಹಂತಕ್ಕೆ ತಲುಪಿತ್ತು. ಬೌದ್ಧಧರ್ಮಕ್ಕೆ ಸಂಭಂದಿಸಿದ ಆಶೋಕನ ಶಾಸನಗಳು ರಾಯಚೂರು ಜಿಲ್ಲೆಯ ಮಸ್ಕಿಯಲ್ಲಿ, ಕೊಪ್ಪಳದ ಗವಿಮಠ ಮತ್ತು ಪಾಲ್ಕಿಗುಂಡು ಎಂಬಲ್ಲಿ, ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿಯ ಸಿದ್ದಾಪುರಸ ಮತ್ತು ಜಟಿಂಗ ರಾಮೇಶ್ವರ, ಬಳ್ಳಾರಿ ಜಿಲ್ಲೆಯ ನಿಟ್ಟೂರು ಮತ್ತು ಉದಗೊಳಂ, ಗುಲ್ಬರ್ಗ ಜಿಲ್ಲೆಯ ಸನ್ನತಿ ಎಂಬಲ್ಲಿ ಶಾಸನಗಳು ದೊರೆತಿದ್ದು. ಇವುಗಳ ಬಗ್ಗೆ ಎಂ.ಎಚ್. ಕ್ರಿಷ್ಣ, ಎಂ. ಚಿದಾನಂದಮೂರ್ತಿ ಇತ್ಯಾದಿ ಸಂಶೋಧನ ತಜ್ಞಾರು ಕರ್ನಾಟಕದಲ್ಲಿ ಬೌದ್ಧ ಧರ್ಮದ ಅತ್ಯಂತ ಪ್ರಾಚೀನ ಕುರುಹುಗಳೆಂದರೆ ಅಶೋಕನ ಶಾಸನಗಳೆಂದು ಅಭಿಪ್ರಾಯಟ್ಟಿದ್ದಾರೆ.[೨]

---

೧. ಶೀಲಾಕಾಂತ ಪತ್ತಾರ: ಬಾದಾಮಿ ಒಂದು ಸಾಂಸ್ಕೃತಿಕ ಅಧ್ಯಯನ: ಪಿಎಚ್.ಡಿ. ಪ್ರಬಂಧ, ಕ.ವಿ.ಹಂ. : ಪು.ಸಂ. ೧೮೯

೨. ಡಾ. ವಸಂತಕುಮಾರ್ ತಾಳ್ತಜೆ: ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ: ಪು.ಸಂ. ೬೭–೭೦

ಸಿಲೋನಿನ ಸಾಹಿತ್ಯ ಕೃತಿಗಳಾದ ಮಹಾವಂಶ ಮತ್ತು ದೀಪವಂಶಗಳು, ಅಶೋಕನು ಕ್ರಿ.ಶ. ಮೂರನೆಯ ಶತಮಾನದಲ್ಲಿ ಬೌದ್ಧ ಧರ್ಮ ಪ್ರಚಾರಕ್ಕಾಗಿ ಭಿಕ್ಷು ಮಹದೇವನನ್ನು ಮಹಿರ್ಷಿಮಂಡಲಕ್ಕೊ ಭಿಕ್ಷು ರಕ್ಷಿತನನ್ನು ಬನವಾಸಿಗೂ ಕಳಿಸಿದುದ್ದನ್ನು ತಿಳಿಸುತ್ತವೆ.[೨] ಕ್ರಿ.ಶ. ೬೪೦ ರ ವೇಳೆಗೆ ಚಾಲುಕ್ಯ ಸಾಮ್ರಾಜ್ಯವನ್ನು ಸಂದರ್ಶಿಸಿದ ಹೂಯನತ್ಸಾಂಗನು ಈ ನಾಡಿನಲ್ಲಿ ನೂರು ಸಂಘರಾಮಗಳು ಮತ್ತು ಐದು ಸಾವಿರ ಭಿಕ್ಷುಗಳು ಇದ್ದ ಬಗ್ಗೆ ವರದಿಮಾಡಿದ್ದಾನೆ, ೧೦ ಅಷ್ಟು ಮಾತ್ರವಲ್ಲದೆ ಹೀನಯಾನ ಮತ್ತು ಮಹಾಯಾನ ಶಾಖೆಗಳೆರಡೂ ಇಲ್ಲಿ ಇದ್ದುದನ್ನು ದಾಖಲಿಸಿದ್ದಾನೆ ಹಾಗೂ ಕನ್ನಡದಲ್ಲಿ ಬೌದ್ಧಧರ್ಮಕ್ಕೆ ಸಂಬಂಧಿಸಿದಂತೆ ಪ್ರಾಚೀನ ಸಾಹಿತ್ಯಗಳು ಲಭ್ಯವಿಲ್ಲವೆಂದು ತಿಳಿಸಿದ್ದಾನೆ.

ಬಾದಾಮಿಯಲ್ಲಿ ಒಂದು ಬೌದ್ಧಶಿಲ್ಪವು ಗುಹೆ ೨ ಮತ್ತು ೩ ರ ನಡುವೆ ಇರುವ ನೈಸರ್ಗಿಕ ಗುಹೆಯಲ್ಲಿದೆ. ಇಲ್ಲಿಯ ಹುಬ್ಬು ಶಿಲ್ಪದಲ್ಲಿ ಸಣ್ಣ, ದೊಡ್ಡವಿಗ್ರಹಗಳು ಕತ್ತನೆಗೊಂಡಿವೆ ಅತಿ ದೊಡ್ಡದಾದ ವಿಗ್ರಹವು ಬೋಧೀಸತ್ವ ಪದ್ಮಪಾಣಿಯದೆಂದು ಗುರುತಿಸಲಾಗಿದೆ. ಪುಟ್ಟ ಶಿಲ್ಪಗಳು ಅಷ್ಟಭಯಗಳ ದೃಶ್ಯವನ್ನು ಚಿತ್ರಿಸಿವೆ.[೪] ಇದೆ ಪ್ರದೇಶದ ಪಕ್ಕದ ಊರಿನ ಐಹೊಳೆಯಲ್ಲಿ ಬೌದ್ಧ ಸಂಪ್ರದಾಯಕ್ಕೆ ಸಂಬಂಧಿಸಿದಂತೆ ಏಕ ಮಾತ್ರ ವಾಸ್ತು ರಚನೆಯ ಬೌದ್ಧ ಗುಹೆಯು ಕರ್ನಾಟಕದ ಗುಹೆಗಳಲ್ಲಿಯೇ ಅತ್ಯಂತ ಪ್ರಾಚೀನದ್ದು. ೧೯ ಗರ್ಭಗೃಹ ಬಾಗಿಲು ಎದುರಿಗೆ ಮಧ್ಯ ಅಂಕಣದ ಮೇಲ್ಭಾಗದಲದಲ್ಲಿ ವ್ಯಾಖ್ಯಾನ ಮುದ್ರೆಯ ಬುದ್ಧನ ಸುಂದರವಾದ ಉಬ್ಬು ಚಿತ್ರವಿದೆ. ಹೇನ್ರಿ ಕಜಿನ್ಸ ಮಾದಲಾದ ವಿದ್ವಾಂಸರು ಇದು ಜಿನನ ವಿಗ್ರಹವೆಂದು ತಪ್ಪಾಗಿ ಭಾವಿಸಿದ್ದರು ಈ ಗುಹಾಲಯವು ಬೌದ್ಧ ವಿಹಾರವೆಂದು ಮೊದಲು ಗುರುತಿಸಿದವರು. ಎಸ್. ಶೆಟ್ಟರ್,[೫] ಅವರು ಕೆಳಗಿನ ಅಂತಸ್ತಿನ ಬಾಗಿಲುವಾಡದ ಶಾಖೆಗಳಲ್ಲಿಯ ಉಬ್ಬು ಚಿತ್ರಗಳಲ್ಲಿ ಬುದ್ಧನ ಜೀವನದ ಕೆಲವು ಘಟನೆ ಮತ್ತು ಜಾತಕ ಕಥೆಗಳ ಸನ್ನಿವೇಶಗಳಿವೆ. ಅದ್ದರಿಂದ ಇಲ್ಲಿ ಮಹಯಾನ ಶಾಖೆಯು ರೂಢಿಯಲಿತ್ತೆಂದು ತಿಳಿದುಬರುತ್ತದೆ.

ಚತ್ರದುರ್ಗ ಜಿಲ್ಲೆ ಚಂದ್ರವಳ್ಳಿಯಲ್ಲಿ ಚೈತ್ರದ ಚಿತ್ರ ಬೋಧಿವೃಕ್ಷದ ಚಿತ್ರಗಳಿರುವ ನಾಣ್ಯಗಳು ದೊರಕಿವೆ. ದೊಡ್ಡದಾದ ಶಿಲ್ಪ ಸಾಮಗ್ರಿ ದೊರೆಯದಿದ್ದರೂ ಸಣ್ಣಸಣ್ಣ ಶಿಲ್ಪಿತ ಪದಾರ್ಥಗಳು ಅನೇಕವಾಗಿ ದೊರೆತಿವೆ. ಇವುಗಳಲ್ಲಿ ಬುದ್ಧ, ಯಕ್ಷ, ಗಂಧರ್ವರು ಮೊದಲದ ಆಕಾರಗಳು ದೊರೆತಿವೆ. ಇವೆಲ್ಲವುಗಳು ಎಂ. ಎಚ್. ಕ್ರಿಷ್ಣರವರ ಶೋಧನ ಕಾರ್ಯದಿಂದ ಬೆಳಕಿಗೆ ಬಂದವುಗಳು.

ಬೌದ್ಧ ಧರ್ಮವು ಚಂದ್ರವಳ್ಳಿಯಲ್ಲಿ ವಿಶೇಷ ಪ್ರಭಾವ ಬಿರಿದ್ದು ಸ್ಪಷ್ಟವಿದೆ. ಪುರಾತತ್ವ ಇಲಾಖೆಯ ಶೋಧನೆಯ ಪ್ರಕಾರ ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲುಕಿನಲ್ಲಿ ಭೀಮಾನದಿಯ ಎಡದಡೆಯಲ್ಲಿ ಬೌದ್ಧಸ್ಮಾರಕಗಳು ನದಿಯ ಎರಡೂ ಬದಿಯಲ್ಲಿ ೨ ಮೈಲುಗವರೊಗೆ ಸನ್ನತಿಯಿಂದ ಕಣಗನ ಹಳ್ಳಯವರೆಗೂ ವ್ಯಾಪಿಸಿದೆ.

ಬನವಾಸಿಯ ಸಮೀಪದ "ಕಾಡಗೋಡು" ಎಂಬಲ್ಲಿ ಕ್ರಿ.ಶ. ೧೯೭೧ ರಲ್ಲಿ ಅಗೆತ ನಡೆಸಿದಾಗ ಬೌದ್ಧ ಸ್ತೂಪದ ಅವಶೇಷಗಳು ದೊರೆತಿವೆ. ಈ ಸ್ತೂಪದ ಇಟ್ಟಿಗೆಗಳ ರಚನೆಯ ಅಧಾರದಿಂದ ಇದರ ಕಾಲವನ್ನು ಕ್ರಿ.ಶ. ೨-೩ನೆಯ ಶತಮಾನಕ್ಕೆ ನಿಗದಿಪಡಿಸಿದ್ದಾರೆ.[೬]

---

೩. ಅಣ್ಣಿಗೇರಿ ಎ.ಎಮ್. : ೧೯೭೮, ರಿಲಿಜಿಯನ್ ಅಚಿಡರ್ ದಿ ಚಾಲುಕ್ಯಾಸ್ ಆಫ್ ಬಾದಾಮಿ: ಪು.ಸಂ. ೨೩೨

೪. ಬ್ಯಾನರ್ಜಿ ಆರ್. ಡಿ. : ೧೯೨೮: ಓಪಿ. ಸಿಟ್: ಪು.ಸಂ. ೧೨೯

೫. ಡಾ. ಎಸ್. ಸೆಟ್ಟರ್: ೧೯೬೯: ಎ ಬುದ್ಧಿಸ್ಟ್ ವಿಹಾರ ಎಟ್ ಐಹೊಳೆ, ಈಸ್ಟ ಅಂಡ್ ವೆಸ್ಟ್ ಸಂ. ೧೯. ೧-೨ ರೋಮ್

೬. ಡಾ. ರಾಜಶೇಖರ್ ಎಸ್. ೧೯೮೮: ಪೂರ್ವೋಕ್ತ: ಪು.ಸಂ. ೩೮-೩೯

ಬನವಾಸಿಯ ಮಧುಕೇಶ್ವರ ದೇವಾಲಯದ ಬಳಿಯೇ ಮೈತ್ರೇಯ ಬುದ್ಧನ ಒಂದು ವಿಗ್ರಹವೂ ದೊರೆತಿದೆ. ವಿಗ್ರಹವೂ ಲಂಬೋದರವಾಗಿದ್ದು ನಿರಲಂಕೃತವಾಗಿದೆ. ಎಡಗೈಯಲ್ಲಿ ಕಲಶ, ಧರ್ಮಚಕ್ರ ಮುದ್ರೆಯ ಬಲಗೈ ಬಿಗಿದುಟ್ಟ ದೋತ್ರಗಳಿದ್ದು ಇದನ್ನೂ ಅಮರಾವತಿ ಶೈಲಿಯ ವಿಗ್ರಹವೆಂದು ಗುರುತಿಸಲಾಗಿದೆ. ಅ. ಸುಂದರ ಅವರೆನ್ನುವಂತೆ ಬನವಾಸಿಯ ಪರಿಸರದಲ್ಲಿ ಕ್ರಿ.ಶ. ನೆರೆಹೊರೆಯ ದಿನಗಳಲ್ಲಿ ಬೌದ್ದ ಧರ್ಮವು ಉಚ್ಚಾರಾಯ ಸ್ಥಿತಿಯಲ್ಲಿದ್ದುದರ ನೇರ ಅಧಾರಗಳಿವು.[೭]

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನಲ್ಲಿ ಇರುವ ಬೌದ್ಧ ದೀಪಸ್ಥಂಭವೊಂದು, ನಂತರ ಬನವಾಸಿಯಲ್ಲಿ ಅನೇಕ ಭೂತಪಾಲನು ಕಾರ್ಲೆಯಲ್ಲಿ ನಿರ್ಮಿಸಿದ ಬೌದ್ಧ ಚೈತ್ಯಾಲಯವೇ ಸಾಕ್ಷಿಯಾಗಿದೆ. ನಂತರ ಬನವಾಸಿಯ ವಸ್ತು ಸಂಗ್ರಹಾಲಯದಲ್ಲಿ ಈಗ ಇಟ್ಟಿರುವ ತಾರಾಭಗವತಿಯ ಭಗ್ನ ಮೂರ್ತಿಯೂ ವಿಶಿಷ್ಟವಾಗಿದೆ.

ಮಂಗಳೂರಿನ ಕದರಿಯಲ್ಲಿನ ಮಂಜುನಾಥ ದೇವಾಲಯದಲ್ಲಿ ಧ್ಯಾನಸ್ಥ ಬುದ್ಧನ ಕೆತ್ತನೆಯಿದೆ. ದೇವಾಲಯದಲ್ಲಿ ಲೋಕೇಶ್ವರ, ಮಂಜುಶ್ರೀ ಹಾಗು ಧ್ಯಾನಿ ಬುದ್ಧರ ಪ್ರತಿಮೆಗಳು ಲೋಕೆಶ್ವರ ಪ್ರತಿಮೆಯ ಪಾದ ಪೀಠದ ಶಾಸನದಲ್ಲಿ ವಿಹಾರವೆಂದು ಹೆಸರಿಸಿದೆ. ಇಲ್ಲಿನ ಪಾಂಡವರ ಗುಹೆಗಳು ಪ್ರಾಚೀನ ಬೌದ್ಧ ಅವಶೇಷಗಳು ಸಿಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಸರಕಾರಿ ವಸ್ತು ಸಂಗ್ರಾಹಾಲಯದಲ್ಲಿ ಬೋಧಿಸತ್ವ ಮಂಜುಘೋಷನ ಬುದ್ಧನವಿಗ್ರಹ ಉಡುಪಿ ಸಮೀಪದ ಕಾಪು, ಮೂರೂರಿನಲ್ಲಿ ದೊರೆತ ಭೂ ಸ್ಪರ್ಶ ಮುದ್ರೆಯ ವಿಗ್ರಹ ಮೂಡಬಿದರೆಯ ಸಮೀಪದಲ್ಲಿ ದೊರೆತ ಬೋಧಿಸತ್ತ್ವ ಆಕ್ಷೋಭ್ಯ ವಿಗ್ರಹಗಳು ಬೌದ್ಧ ಧರ್ಮದ ಇರುವಿಕೆಯ ಕುರುವುಗಳಾವೆ.[೮]

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲೂಕಿನ ಹರಳ ಕೋಟೆಯಲ್ಲಿ ಸುಮರು ೧೨ "ಎತ್ತರ ೪೦" ವ್ಯಾಸದ ದಿಬ್ಬವಿದ್ದು, ಇದನ್ನು ಬೌದ್ದ ಸ್ತೂಪವೆಂದು ಮೈಸೂರು ಪುರಾತ್ತ್ವ ಇಲಾಖೆಯ ೧೯೩೦ ರ ವರದಿಯಲ್ಲಿ ಗುರುತಿಸಲಾಗಿದೆ.

ಡಂಬಳದ ಶಾಸನವು ಕ್ರಿ.ಶ.೧೦೯೫–೯ ಕ್ಕೆ ಸೇರಿದುದಾಗಿದ್ದು ಇದರಲ್ಲಿ ತಾರಾದೇವಿಯ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗುವುದು. "ಬುದ್ಧತಥಾತ", "ವಿಹಾರ", "ಬುದ್ಧಶಾಸನ" "ಬುದ್ಧದಕ್ಷಿಣಾ" "ಭಗವತಿ ತಾರಸ್ತುತಿ" ಇತ್ಯಾದಿ ಅಂಶಗಳು ದೊರೆಯುತ್ತವೆ. ಕ್ರಿ.ಶ. ೧೦೯೫ ರಲ್ಲಿ ಬಳ್ಳಗಾವೆಯಲ್ಲಿ ತಾರಾಗುಡಿ ಇತ್ಯಾದಿಗಳ ಸ್ಥಾಪನೆ ನಡೆಯಿತ್ತು. ಇದರಿಂದ ಬೌದ್ಧ ಧರ್ಮ ಕಲ್ಪನೆ ಸಿಗುತ್ತದೆ. ಡಂಬಳದ ಕೋಳಿವಾಡದಲ್ಲಿ ಭಗ್ನತಾರಾಗುಡಿ ವಿಗ್ರಹವೊಂದು ದೊರಕಿದೆ ಎಂದು ಡಾ. ಚಿದಾನಂದ ಮೂರ್ತಿಯವರು ತಿಳಿಸಿದ್ದಾರೆ.

ಮೇಲಿನ ಅನೇಕ ಶಾಸನದ ಲಿಖಿತ ಹಾಗೂ ಚಿತ್ರ, ಶಿಲ್ಪ ಹಾಗೂ ವಾಸ್ತುಶೈಲಿ, ಮೌಖಿಕ ಗ್ರಂಥಗಳ ಶೋಧನೆ ಅಧಾರಗಳನ್ನು ಗಮನಿಸಿದರೆ, ಬೌದ್ಧ ಧರ್ಮವು ಕ್ರಿ. ಪೂ. ೨ನೇ ಶತಮಾನದಿಂದ

೭. ಕೋಸಂಬಿ ಡಿ.ಡಿ. : ದಿ ಕಲ್ಚರ್ ಅಚೆಡ್ ಸಿವಿಲಿಜೇಷನ್ ಆಫ್ ಏನ್ಸಿಯೆಂಟ್ ಇಂಡಿಯಾ: ಪು.ಸಂ. ೧೮೬

೮. ಡಾ. ತಾಳ್ತಜೆ. ವಸಂತಕುಮಾರ: ಬೌದ್ಧಾಯನ: ಪು.ಸಂ. ೧೩೩

ಕ್ರಿ.ಶ. ೮ನೇ ಶತಮನದವರೆಗೆ ಎಷ್ಟರ ಮಟ್ಟಿಗೆ ತನ್ನ ಪ್ರಭಾವ ಬೀರಿತ್ತು ಎಂಬುದು ತಿಳಿಯುತ್ತದೆ. ಇದರ ಜೊತೆಗೆ ಬುದ್ಧ, ಮಂಜುಶ್ರೀ, ಅವಲೋಕಿತೇಶ್ವರ, ವಜ್ರ, ತಾರ, ಹೇಮ, ಚಂದ್ರ, ಭಗವತಿ ಇತ್ಯಾದಿ ದೇವತೆಗಳನ್ನು ಕರ್ನಾಟಕದ ಪ್ರಾಚೀನ ಬೌದ್ಧನೆಲೆಗಳಾದ ಬನವಾಸಿ, ಬಳ್ಳಿಗಾವೆ, ಡಂಬಳ, ಕೋಳಿವಾಡ, ಕದರಿ, ಮಂಗಳೂರ, ಬ್ರಹ್ಮಗಿರಿ, ತೊರ್ಕೆ, ಗೋಕರ್ಣ, ಬಾದಾಮಿ, ಚಂದ್ರವಳ್ಳಿಯ ಸಿದ್ದಾಪುರ, ಬ್ರಹ್ಮಗಿರಿ, ಮಸ್ಕಿ, ಸನ್ನತಿ, ಬಿಜಾಪುರದ ಇಂಡಿಯ ಭಾಗ, ಕೋಲಾರ ಇತ್ಯಾದಿ ಭಾಗಗಳಲ್ಲಿ ಕಾಣಬಹುದು.[೯]

ಬೌದ್ಧ ಧರ್ಮವು ರಾಷ್ಟ್ರಕೂಟರ ಕಾಲಕ್ಕೆ ಹೆಚ್ಚು ಕ್ಷೀಣಿಸಿತು, ಅದ್ವೈತ ಸಿದ್ಧಾಂತದ ಮುನ್ನಡೆ ಮತ್ತು ಜೈನ ಧರ್ಮದ ಪ್ರಾಬಲ್ಯದಿಂದಾಗಿ ಬೌದ್ಧ ಧರ್ಮ ಮಾಯವಾಗಿತ್ತು. ಇಂಥಹ ಸಂದರ್ಭಗಳಲ್ಲಿ ಗುರುಪದ್ಮಸಂಭವ ಮತ್ತು ಶಂತರಕ್ಷಿತರು ಟಿಬೆಟ್‌ನ ರಾಜರ ಅಹ್ವಾನದ ಮೇರೆಗೆ ಬೌದ್ಧಧರ್ಮದ ಗ್ರಂಥಗಳನ್ನು ಟಿಬೆಟಿ ಭಾಷೆಗೆ ತರ್ಜುಮೆ ಮಾಡಿದರು ಹಾಗೂ ಬೌದ್ಧಧರ್ಮದ ಪ್ರಚಾರ ಕಾರ್ಯವನ್ನು ಟಿಬೆಟಿನಲ್ಲಿ ಕೈಗೊಂಡರು, ಈಗೆ ಹಲವಾರು ಬೌದ್ಧ ಸನ್ಯಾಸಿಗಳು ಕಾಶ್ಮೀರದ ಕಣಿವೆಯ ಮೂಲಕ ಟಿಬೆಟಿಗೆ ಹೋಗಿ ನೆಲೆಸಿದರು, ಇಂಥಹ ಸಂದರ್ಭದಲ್ಲಿ ಭಾರತೀಯ ಗಾಂಧಾರ ಕಲೆಯನ್ನದರಿಸಿದ ಬೌದ್ಧ ಧರ್ಮದ ಚಿತ್ರ ಶಿಲ್ಪ, ಹಸ್ತಪ್ರತಿಗಳು, ಸಂಸ್ಕೃತ ಗ್ರಂಥಗಳು ಟಿಬೆಟಿನಲ್ಲಿ ಉಳಿದು ಥಾಂಕಾ ಶೈಲಿಯೊಂದಿಗೆ ವಿಲೀನಗೊಂಡು ತನ್ನದೇಯಾದ ಬೌದ್ಧಧರ್ಮದ ಅಚರಣೆ ಮತ್ತು ಕಲೆಯನ್ನು ಬೆಳೆಸಿಕೊಂಡು ಹೋಗಿತ್ತು. ಈಗೆ ನಿರಂತರವಾಗಿ ಭಾರತ ಕಲೆಯೊಂದಿಗೆ ಟಿಬೆಟಿ ತನ್ನದೇಯಾದ ಸಹ ಸಂಬಂದವನ್ನು ಉಳಿಸಿ ಬೆಳೆಸಿಕೊಂಡು. ಜೊತೆಗೆ ನೇಪಾಳದ ಕಲೆಯ ಸಹ ಸಹಕಾರ ನೀಡಿತ್ತು. ೧೨ನೇ ಶತಮಾನಗಳ ನಂತರ ಟಿಬೆಟಿನಲ್ಲಿ ಉಂಟಾದ ರಾಜಕೀಯ ಅರಾಜಕತೆ ಹಾಗೂ ಧಾರ್ಮಿಕ ಸಹಿಷ್ಣತೆಯಿಂದ ಮತ್ತೆ ಅದೇ ಬೌದ್ಧ ಭಿಕ್ಷುಗಳ ರೀತಿಯಲ್ಲಿ (ಟಿಬೆಟಿನ ಲಾಮಗಳ) ಮೂಲಕ ನಿರಾಶ್ರಿತರಾಗಿ ಬಂದವರು. ಜೊತೆಯಲ್ಲಿ ತಮ್ಮ ಟಿಬೆಟಿನ ಬೌದ್ಧ ಧರ್ಮವನ್ನಾಧರಿತ ಪ್ರಬುದ್ಧ ಕಲೆಯನ್ನು ಥಾಂಕ ಶೈಲಿಯ ಮೂಲಕ ಟಿಬೆಟಿನ ನೈಸರ್ಗಿಕ ಪರಿಸರವನ್ನು ಬೆರೆಸಿ ಕರ್ನಾಟಕದ ಅನೇಕ ನೆಲೆಗಳಲ್ಲಿ ಮತ್ತೆ ಕಾಣುವಂತೆ ಅಗಿದೆ. ಆಂತಹ ನೆಲೆಗಳೆಂದರೆ ಬೈಲುಕುಪ್ಪೆ, ಒಡಯರ ಪಾಳ್ಯೆ, ಗುರುಪುರ, ಕೂರಮಂಗಲ, ಮುಂಡಗೂಡದ ಪರಿಸರದಲ್ಲಿ ತನ್ನದೇಯಾದ ಬೌದ್ದ ಧರ್ಮಾಧಾರಿತ ಸಂಸ್ಕೃತಿಯನ್ನು ಕಾಣಬಹುದು. ಅವುಗಳನ್ನು ಈ ಕೆಳಗಿನಂತ ಪ್ರತ್ಯೇಕವಾಗಿ ಪರಿಚಯಿಸಲಾಗಿದೆ.

ಬೈಲುಕುಪ್ಪೆ ಪರಿಸರ

ಮೈಸೂರು ಅತ್ಯಂತ ರಮಣೀಯವಾದ ಪ್ರಶಾಂತ ವಾತಾವರಣವುಳ್ಳ ಸುಂದರವಾದ ಜಿಲ್ಲೆಯಾಗಿದ್ದು. ಬಹಳ ಹಿಂದೆ ಗಂಗರು, ಚೋಳರು, ಹೊಯ್ಸಳರು ಹಾಗೂ ವಿಜಯನಗರ ಸಂಸ್ಥಾನ ರಾಜರು ಅಳಿದ್ದು ಕಂಡು ಬರುತ್ತದೆ. ನಂತರ ಕಾಲ ಕಾಲಕ್ರಮೇಣ ಮೈಸೂರಿನ ಒಡೆಯರು ಅಳಿದರು. ಕ್ರಿ .ಶ. ೧೮೩೧-೧೮೮೧ ರ ಕಾಲದಲ್ಲಿ ಬ್ರಿಟೀಷರು ಮೈಸೂರು ರಾಜ್ಯವನ್ನು ತಮ್ಮ ವಶಮಾಡಿಕೊಂಡರು. ಮುಂದೆ ರಾಜ ರಾಜ್ಯವನ್ನು ಒಡೆಯರಿಗೆ ಬಿಟ್ಟುಕೊಟ್ಟರು.[೧೦] ಮೈಸೂರು ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ ಲಲಿತಕಲೆ, ಸಾಹಿತ್ಯ , ಸಂಸ್ಕೃತಿಗೆ ಪ್ರೋತ್ಸಹವು ಉತ್ತುಂಗಕ್ಕೇರಿ ಅತ್ಯಂತ ಪ್ರಸಿದ್ದಿಯನ್ನು

---

೯. ಡಾ. ತಾಳ್ತಜೆ ವಸಂತಕುಮಾರ: ಬೌದ್ಧಾಯನ: ಪು.ಸಂ. ೧೪೫

೧೦. ಕೆ. ಅನಂತರಾಮ್ ರಾವ್ : ಕರ್ನಾಟಕ ದರ್ಶನ: ಪು.ಸಂ. ೩೯

ಪಡೆದಿತ್ತು. ೬೨೬೯ ಚ.ಕಿ. ಮೀಟರ್ ಭೂವಿಸ್ತೀರ್ಣ. ೨೬.೪೧ ಲಕ್ಷ ಜನಸಂಖ್ಯೆಯನ್ನು ಹೊಂದಿದ್ದು. ಮೈಸೂರು. ಹೆಗ್ಗಡದೇವನ ಕೋಟೆ. ಹುಣಸೂರು, ಕೃಷ್ಣರಾಜನಗರ , ನಂಜನಗೂಡು , ಪಿರಿಯಾಪಟ್ಟಣ, ತಿರುಮಕೊಡಲು ನರಸೀಪುರ , ಹೀಗೆ ೭ ತಾಲೂಕುಗಳನ್ನೊಳಗೊಂಡಿದೆ. ಇಲ್ಲಿನ ಜೀವ ನದಿಗಳೆನಿಸಿಕೊಂಡ ಕಾವೇರಿ, ಕಬಿನಿ. ನುಗು ನದಿಗಳು ಜಿಲ್ಲೆಯ ಕೃಷಿಗೆ ಅಸರೆ ನೀಡಿವೆ. ಪ್ರಮುಖ ಬೆಳೆಯಾಗಿ ಭತ್ತ, ರಾಗಿ, ಕಾಫಿ, ಕಬ್ಬು , ಹತ್ತಿ. ರೇಷ್ಮೆ ಮತ್ತು ಹಗುರ ಇಂಜಿನಿಯರಿಂಗ್, ಅಹಾರಸಂಸ್ಕರಣೆ, ರಾಸಾಯನಿಕ ವಸ್ತುಗಳು, ದೂರವಾಣಿ. ವಾಹನಗಳು, ಎಲೆಕ್ಟ್ರಾನಿಕ್ಸ, ಶ್ರೀಗಂಧ ಪ್ರಮುಖ ಕೈಗಾರಿಕೆಗಳಾಗಿವೆ.

ತನ್ನದೆಯಾದ ಪ್ರೇಕ್ಷಣೀಯ ಹಾಗೂ ರಮಣೀಯ ಕ್ಷೇತ್ರಗಳಾದ ಚಾಮುಂಡಿ ಬೆಟ್ಟ. ಮುಡುಕುತೊರೆ ಬೆಟ್ಟ ಇಲ್ಲಿ ಭಿತ್ತಿಚಿತ್ರಗಳು ಇವೆ. ಚುಂಚನಕಟ್ಟೆ ಜಲಪಾತ, ಸೋಮನಾಥಪುರ ಸುಂದರವಾದ ಶಿಲ್ಪಹೊಂದಿರುವ ದೇವಾಲಯ. ನಂಜನಗೂಡು ದೇವಸ್ಥಾನ, ಸುತ್ತೂರು, ನಾಗರಹೊಳೆ. ರಾಷ್ಟ್ರೀಯಉದ್ಯಾನ, ಅರಾಬಿತಿಟ್ಟು.. ವನ್ಯಜೀವಿಧಾಮ ತಲಕಾಡು ದೇವಾಲಯಗಳು, ಚುಂಚನಕಟ್ಟೆ ಜಲಪಾತ, ಮೈಸೂರು ಅರಮನೆಯಲ್ಲಿ ಭಿತ್ತಿಚಿತ್ರಗಳು ಹಾಗೂ ಸುಂದರ ಶಿಲ್ಪಗಳನ್ನು ಕಾಣಬಹುದು. ಇತ್ತೀಚಿನ ವರ್ಷಗಳಲ್ಲಿ ನಿರ್ಮಾಣವಾದ ಟಿಬೆಟಿಯನ್ನರ ಸ್ವರ್ಣದೇವಾಲಯ. ಸ್ತೂಪಗಳು, ವಿಹಾರಗಳನ್ನು ಬೈಲುಕುಪ್ಪೆ, ಗುರುಪುರ ಪರಿಸರದಲ್ಲಿ ಕಾಣಲೇ ಬೇಕಾದ ಪ್ರೇಕ್ಷಣೀಯ ಸ್ಥಳಗಳಾಗಿವೆ.

ಮೈಸೂರು ಪರಿಸರದಲ್ಲಿ ಎಲ್ಲಾ ಧರ್ಮಗಳಿಗೆ ಸಂಬಂಧಿಸಿದ ಜನರುಗಳನ್ನು ವಾಸವಾಗಿದ್ದು ಹೊಂದಿದ್ದು. ಅವರುಗಳು ತಮ್ಮದೇಯಾದ ಧಾರ್ಮಿಕ ಅಚರಣೆಯಲ್ಲಿ ತೊಡಗಿದ್ದಾರೆ. ಅಂತಹ ಪ್ರದೇಶಗಳಲ್ಲಿ ಬೈಲುಕುಪ್ಪೆಯ ಪರಿಸರವು ಒಂದು. ಇದು ಮೈಸೂರಿನಿಂದ ಕೊಡಗಿನ ಭಾಗಕ್ಕೆ ಹೋಗುವ ರಸ್ತೆಯ ಮಧ್ಯಭಾಗದಲ್ಲಿ ಇದ್ದು. ಮೈಸೂರಿನಿಂದ ೮೩ ಕಿ,ಮೀ ದೂರದ ಬೈಲುಕುಪ್ಪೆ ಪ್ರದೇಶವು ದಕ್ಷಿಣ ಕಾಶ್ಮೀರವಾದ ಕೂಡಗಿನ ಪರಿಸರಕ್ಕೆ ಸಮೀಪವಾಗಿದ್ದು ರಮಣೀಯ ನಿಸರ್ಗವನ್ನು ಹೊಂದಿದ್ದು, ಮೈಸೋಕುವ ತಂಗಾಳಿ, ಹಸಿರು ತುಂಬಿದ ದಟ್ಟ ಅರಣ್ಯದ ಮಧ್ಯಭಾಗವಿದ್ದು. ಸುತ್ತಲು ಸಾಧಾರಣ ಹಸಿರು ಪರ್ವತವಿದ್ದು ಟಿಬೆಟಿಯನ್ನರ ಪರಿಸರವನ್ನು ನೆನಪಿಗೆ ತರುವಂತೆ ಹಾಗೂ ಅಲ್ಲಿನ ಸ್ತೂಪಗಳು. ದೇವಾಲಯಗಳು, ವಿಹಾರಗಳು, ಪರಿಸರದ ತುಂಬೆಲ್ಲ ಸಿಗುವಂತಹ ಲಾಮಗಳು ಹಾಗೂ ಅವರ ವೇಷಭೂಷಣವನ್ನು ಗಮನಿಸಿದಂತೆ ಹಾಗೂ ಕರಕುಶಲ ಮಳಿಗೆಗಳು ಮತ್ತು ಪರಿಸರದ ತುಂಬೆಲ್ಲ ಹಾರಾಡುವ ಪಂಚಭೂತ ಬಾವುಟಗಳು, ಲಾಮಗಳು ಪರಿಸರದಲ್ಲಿ ಬೌದ್ಧಧರ್ಮ ಪಟಿಸುವ ರೀತಿ. ಶೃಂಗಾರವಾದ ದ್ವಾರಬಾಗಿಲುಗಳನ್ನು ನೋಡಿದರೆ ನಮಗೆ ಟಿಬೆಟಿನಲ್ಲಿ ಇವೆ ಎಂಬ ಭಾವನೆ ಉಂಟಾಗುತ್ತದೆ.

ಬೈಲುಕುಪ್ಪೆಯಲ್ಲಿ ನೆಲೆಸಿರುವ ಟಿಬೆಟಿಯನ್ನರು ತಮ್ಮ ಸಂಸ್ಕೃತಿಕ ಪರಿಸರವನ್ನು ತಮ್ಮದೇಯಾದ ನಿಟ್ಟಿನಲ್ಲಿ ೧೬ ಕ್ಯಾಂಪುಗಳನ್ನು ರೂಪಿಸಿಕೊಂಡಿದ್ದು. ವಿಶೇಷವಾಗಿ ಧಾರ್ಮಿಕ ಅಧ್ಯಯನ ಮತ್ತು ಪ್ರಚಾರದ ಜೊತೆಗೆ ೩೨೦೦ ಏಕರೆ ವಿಸ್ತೀರ್ಣದಲ್ಲಿ ಕೃಷಿ ಭೂಮಿ ಹೊಂದಿದ್ದು. ಇದರಲ್ಲಿ ಮೆಕ್ಕೆಜೋಳ, ಹೊಗೆಸೊಪ್ಪು, ಭತ್ತ, ಕಬ್ಬು, ಕಾಫಿ, ಅಡಿಕೆ, ತೆಂಗು, ಮಾವು, ಹಲಸು, ವಿವಿಧ ಧವಸ-ಧಾನ್ಯಗಳು ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ. ಹೈನುಗಾರಿಕೆ ಹಾಗೂ ಕರಕುಶಲವಸ್ತುಗಳನ್ನು ಇದರ ಜೊತೆಗೆ ಥಾಂಕ ಶೈಲಿಯ ಚಿತ್ರ, ಶಿಲ್ಪಗಳನ್ನು ತಯಾರಿಸುತಾರೆ, ಜೊತೆಗೆ ರಚಿಸಿದವುಗಳನ್ನು ಮಾರಟ ಮಾಡುವ ಹಾಗೂ ಧಾನವಾಗಿ ಕೊಡುವ ಸಂಪ್ರದಾಯವನ್ನು ಹೊಂದಿದ್ದಾರೆ ಮೇಲಿನ ಎಲ್ಲಾ ಸಂಪತ್ತುಗಳನ್ನು

ತಾವೇ ನಿರ್ಮಿಸಿದ ಟಿಬೆಟಿಯನ್ನರ ಸಹಕಾರ ಸಂಘಗಳಿಗೆ ನೀಡಿ, ಬಂದ ಹಣದಿಂದ ಜೀವನ ನಡೆಸುತ್ತಿದ್ದು, ಕೆಲವು ಪದಾರ್ಥಗಳನ್ನು ಬೈಲುಕುಪ್ಪೆಯ ಹತ್ತಿರದ ಪಟ್ಟಣಗಳಾದ ಮೈಸೂರು, ಬೆಂಗಳೂರುಗಳಿಗೆ ವಲಸೆ ಹೋಗಿ ತಾವು ತಯಾರಿಸಿದ ಚಿತ್ರಪಟ. ಶಿಲ್ಪಗಳು ಕರಕುಶಲವಸ್ತುಗಳನ್ನು ಮಾರಿ ಹಾಗೂ ಬೆಂಗಳೂರಿನಲ್ಲಿನ ಕರಕುಶಲ ಕೇಂದ್ರಗಳಿಗೆ ನೀಡಿ ಹಣ ಪಡೆದು ಜೀವನ ಸಾಗಿಸುತ್ತಿದ್ದಾರೆ.

ಬೈಲುಕುಪ್ಪೆಯ ಪರಿಸರದಲ್ಲಿ ಸುಮಾರು ೧೬ ಕ್ಯಾಂಪುಗಳನ್ನು ನಿರ್ಮಿಸಿಕೊಂಡಿದ್ದು. ಒಂದೊಂದು ಕ್ಯಾಂಪಿನಲ್ಲಿ ೨೦ರಿಂದ ೩೦ ಮನೆಗಳನ್ನು ನಿರ್ಮಿಸಿಕೊಂಡಿದ್ದು ಕೆಲವು ವಿಶಿಷ್ಟ ಕ್ಯಾಂಪುಗಳಲ್ಲಿ ಬೌದ್ಧ ದೇವಾಲಯ, ವಿಹಾರಗಳು ಹಾಗೂ ಸ್ತೂಪಗಳನ್ನು ನಿರ್ಮಿಸಿಕೊಂಡಿದ್ದಾರ? ಹಾಗೂ ಕೆಲವು ಲಾಮಗಳ ವಸತಿ ಗೃಹಗಳನ್ನು ಕಾಣಬಹುದು. ಪರಿಸರ ಸುತ್ತಲು ವ್ಯವಸಾಯದ ಪ್ರದೇಶವನ್ನು ಹೊಂದಿರುತ್ತದೆ, ಒಂದೊಂದು ಕ್ಯಾಂಪಿಗೆ ಒಬ್ಬ ನಾಯಕತ್ವವನ್ನು ಹೊಂದಿರತ್ತಾನೆ, ಧಾರ್ಮಿಕವಾಗಿ ಇವರು ಬೌದ್ಧ ಗುರುವಾದ ಪರಮಪೂಜ್ಯ ಪೇನೋರ್ ರೀನ್‌ರನ್ನು ಪೂಜಿಸುತ್ತಾರೆ. ಕೆಲವರು ದಲೈಲಾಮರವರನ್ನು ಹಾಗೂ ಬೌದ್ಧ ಧರ್ಮದ ಶಾಸ್ತ್ರಗ್ರಂಥಗಳನ್ನು ಅಭ್ಯಸಿಸುತ್ತಿರುತ್ತಾರೆ.

ಇಡಿ ಪರಿಸರಕ್ಕೆ ಪ್ರಮುಖವಾದ ಹಾಗೂ ವಿಶಿಷ್ಠವಾದ ೩ನೇ ಕ್ಯಾಂಪಿನಲ್ಲಿ ೧೯೬೩ರಲ್ಲಿ ನಮ್‌ಡ್ರೋಲಿಂಗ್ ಬೌದ್ಧವಿಹಾರ ಅಥವಾ ಸ್ವರ್ಣದೇವಾಲಯವನ್ನು ಸ್ಥಾಪಿಸಿಕೊಂಡಿದ್ದಾರೆ. ಈ ದೇವಾಲಯಕ್ಕೆ ದೇಶ-ವಿದೇಶಗಳಿಂದ ಬೌದ್ಧ ಧರ್ಮವನ್ನು ಅಭ್ಯಾಸಿಸಲು ವಿದ್ಯಾರ್ಥಿಗಳು, ವಿಶೇಷವಾಗಿ ಬೌದ್ಧ ಭಿಕ್ಷುಗಳು (ಲಾಮಗಳು) ಬೌದ್ಧ ಧರ್ಮದ ಅಧ್ಯಯನ ಮಾಡಲು ಬರುತ್ತಾರೆ. ಬೌದ್ಧಧರ್ಮ ಅಧ್ಯಯನದಲ್ಲಿ ಇವರಿಗೆ ಪದವಿ ಹಾಗೂ ಸ್ನಾತಕೋತ್ತರ ಪದವಿಗಳನ್ನು ನೀಡುತ್ತಾರೆ. ಈ ವಿದ್ಯಾರ್ಥಿಲಾಮಗಳಿಗೆ ಹಾಗೂ ಲಾಂಬಿಣಿ ಅಥವಾ ಬೌದ್ಧಸನ್ಯಾಸಿ-ಸನ್ಯಾಸಿನಿಯರೆಂದು ಕರೆಯಲಾಗಿದ್ದು. ಇವರಿಗೆ ಊಟ. ವಸತಿ, ವಸ್ತ್ರ, ಪುಸ್ತಕ ಇತ್ಯಾದಿಗಳನ್ನು ಉಚಿತವಾಗಿ ಒದಗಿಸಿಕೊಡಲಾಗುತ್ತದೆ. ನೆನನ್ಸ ಭಾಷೆ, ವಾರತುಭಾಷೆ, ಟಿಬೆಟ್, ಹಿಂದಿ, ಇಂಗ್ಲೀಷ್ ಭಾಷೆಯಲ್ಲಿ ಅಧ್ಯಯನ ಮಾಡಲು ಇಲ್ಲಿ ಅವಕಾಶವಿದೆ. ಸುಮಾರು ೧೦೦೦ ದಿಂದ ೨೦೦೦ವರೆಗೂ ಬೌದ್ಧ ಸನ್ಯಾಸಿಗಳು ಇಲ್ಲಿ ಅಧ್ಯಯನದಲ್ಲಿ ತೊಡಗಿದ್ದಾರೆ.

ಬೈಲುಕುಪ್ಪೆಯ ಪರಿಸರದಲ್ಲಿ ಒಟ್ಟಾರೆ ಇರುವಂತಹ ದೇವಾಲಯಗಳೆಂದರೆ ನಮ್‌ಡ್ರೋಲಿಂಗ್ ಬೌದ್ಧವಿಹಾರ ಹಾಗೂ ಸ್ವರ್ಣದೇವಸ್ಥಾನ, ಗುರುಪದ್ಮಸಂಭವ ದೇವಾಲಯ, ಧರ್ಮಕಾಯ ದೇವಾಲಯ, ತಾರದೇವಿ ದೇವಾಲಯ, ಜಾಂಗ್ ಡಾಂಗ್. ಪಾಲ್-ರಿ-ಪೆಲು-ಬಡ್-ಕಿ-ಪೋಡ್ರಾಂಗ್ ದೇವಾಲಯಗಳಿವೆ ಇವುಗಳ ತುಂಬೆಲ್ಲ ಭಿತ್ತಿಚಿತ್ರಗಳನ್ನು ಕಾಣಬಹುದು. ದೇವಾಲಯದ ದೇವರಿಗೆ ಸಂಭಂದಿಸಿದ ವಸ್ತುವಿಷಯಗಳಡಿಯಲ್ಲಿ ಭಿತ್ತಿಚಿತ್ರ ಹಾಗೂ ಶಿಲ್ಪಗಳು ಹೆಚ್ಚಾಗಿ ಕಂಡುಬರುತ್ತವೆ. ದೇವಾಲಯಗಳನ್ನು ಹಾಗೂ ಚಿತ್ರ, ಶಿಲ್ಪಗಳಲ್ಲಿವು ಥಾಂಕ ಶೈಲಿಯಲ್ಲಿ ನಿರ್ಮಿಸಿರುವುದು ಕಂಡುಬರುತ್ತದೆ. ದೇವಾಲಯಗಳ ಪರಿಸರ ಪಕ್ಕದಲ್ಲಿ ಎಂಟು ಸ್ತೂಪಗಳನ್ನು. ೧೯೯೩ರಲ್ಲಿ ನಿರ್ಮಿಸಿದವು ಮತ್ತೆ ಎಂಟು ಸ್ತೂಪಗಳನ್ನು ೨೦೦೦ರಲ್ಲಿ ನಿರ್ಮಿಸಿದ್ದಾರೆ. ಹಾಗೂ ಒಂದು ಪ್ರತ್ಯೇಕ ಸ್ತೂಪವೂ ಇದೆ ಒಟ್ಟು ೧೭ ಬೌದ್ಧ ಸ್ತೂಪಗಳನ್ನು ಇಲ್ಲಿ ಕಾಣಬಹುದು.

ನಂತರ ಅದೇ ಪರಿಸರದಲ್ಲಿ ದೊಡ್ಡದಾದ ೮ ಪ್ರಾರ್ಥನ ಚಕ್ರದ ದೇವಾಲಯವಿದೆ. ಅವುಗಳ ಮೇಲೆ ಟಿಬೆಟಿನ ಲಿಪಿ ಹಾಗೂ ಚಿತ್ರಗಳನ್ನು ಕಾಣಬಹುದು. ಹಾಗೂ ಸುತ್ತಣ ಪ್ರಕಾರದ ರೀತಿಯಲ್ಲಿ ೨೦೦೦ಕ್ಕೂ ಅಧಿಕ ಚಿಕ್ಕ ಚಿಕ್ಕ ಪ್ರಾರ್ಥನಚಕ್ರಗಳನ್ನು ನಿರ್ಮಿಸಿದ್ದಾರೆ, ಇವುಗಳನ್ನು ಬೌದ್ಧಸನ್ಯಾಸಿ-

ಸನ್ಯಾಸಿನಿಯರು ನಡೆಯುತ್ತ ಚಕ್ರವನ್ನು ತಿರುಗಿಸುತ್ತ ಮಂತ್ರ ಪಟಿಸುತ್ತಾ ಬಳಸುತ್ತಾರೆ. ಇದು ಒಂದು ಬೌದ್ಧಧರ್ಮ ಅಚರಣೆಯಾಗಿದೆ.

ಇವುಗಳಲ್ಲದೆ ಸನಾಸಿನಿಶಯರ ಬೌದ್ಧವಿಹಾರ, ಡ್ರಟ್‌ಸ್ಯಾಂಗ್ ಧರ್ಮಾಚರಣೆ ಮತ್ತು ಶಾಸ್ತ್ರೋಕ್ತ ಕೆಲಸ ಮಾಡುವ ಸ್ಥಳ, ತ್ಸೊಗ್ಯಲ್, ಶೆಡ್ರೈಗ್. ಧಾರ್ಗೆಲಿಂಗ್ ಸನ್ಯಾಸಿನಿಯರ ಬೌದ್ಧವಿಹಾರ, ತೊಗಲ್ ಶೆಡ್ರುಬ್‌ಧೋಸಂ ಗವಾಂಲ್ ತ್ಸಲ್ ಸನ್ಯಾಸಿಯ ಮಹಾವಿದ್ಯಾಲಯದ ಸಂಸ್ಥೆ ಹಾಗೂ ಸಹಕಾರ ಸಂಘ. ವಸತಿ ಗೃಹಗಳು, ಗ್ರಂಥಾಲಯ, ಸಂಪಾದಕೀಯ ಸಮಿತಿ. ಗಣಕಯಂತ್ರ ಮತ್ತು ಮುದ್ರಣಾಲಯ ವಿಭಾಗಗಳಿವೆ. ಅನೇಕ ಕರಕುಶಲ ಮಳಿಗೆಗಳು ಅಲ್ಲದೆ ವೃದ್ಧಾಶ್ರಮ, ಅಸ್ಪತ್ರೆ , ನೀರು ಶುದ್ಧೀಕರಣ ಘಟಕಗಳನ್ನು ಕಾಣಬಹುದು.

ಇತರ ಕ್ಯಾಂಪುಗಳನ್ನು ಹೊಲಿಸಿದರೆ ವಿಶೇಷವಾಗಿ ೧ನೇ ಕ್ಯಾಂಪು, ೨ನೇ ಕ್ಯಾಂಪುಗಳಲ್ಲಿ ಚಿತ್ರಶಾಲೆಗಳು ಹಾಗೂ ಕರಕುಶಲ ಕೇಂದ್ರಗಳು. ಶೃಂಗಾರಗೊಂಡ ದ್ವಾರಬಾಗಿಲುಗಳು, ದೇವಾಲಯಗಳು, ಪ್ರಾರ್ಥನಚಕ್ರಮಂದಿರಗಳು. ಬೌದ್ಧವಿಹಾರಗಳು ಹಾಗೂ ನಲಂದ ವಿಶ್ವವಿದ್ಯಾಲಯ (೨ ಕ್ಯಾಂಪ್)ನಲ್ಲಿ ಕಾಣಬಹುದು.

೧೬ ಕ್ಯಾಂಪಿನ ತುಂಬೆಲ್ಲ ೮ ದೇವಾಲಯಗಳು, ೧೮ ಸ್ತೂಪಗಳು, ೧೦ ದ್ವಾರ ಬಾಗಿಲುಗಳು. ೪ ಚಿತ್ರಶಾಲೆಗಳು'ದೂಪದ ಗೂಡುಗಳನ್ನು ಕಾಣಬಹುದು ಉಳಿದ ಕ್ಯಾಂಪುಗಳ ಸ್ಥಳದಲ್ಲಿ ಟಿಬೆಟಿಯನ್ನರು ಸಾಮಾನ್ಯವಾಗಿ ವಾಸಿಸುವ ಸ್ಥಳಗಳಾಗಿವೆ, ಮೊದಲನೆಯ ಕ್ಯಾಂಪು ಗೊಲ್ಲರಸಹಳ್ಳಿಯಲ್ಲಿದೆ, ೨ನೇ ಕ್ಯಾಂಪ್ ಕೈಲಾಸ ಪುರದಲ್ಲಿದೆ. ೩ ಮತ್ತು ೪ ನೇ ಕ್ಯಾಂಪುಗಳು ಅರಳಿಕುಮಾರಿಯಲ್ಲಿವೆ, ೫ ಮತ್ತು ೬ನೇ ಕ್ಯಾಂಪ್‌ಗಳು ಗುಲಾಡ್ ಹಳ್ಳಿಯಲ್ಲಿವೆ. ೪ ನೇ ಕ್ಯಾಂಪುಗಳಲ್ಲಿ ಸ್ವರ್ಣದೇವಾಲಯವಿದೆ. ಟಿಬೆಟಿಯನ್ನರ ಪರಿಸರದಲ್ಲಿ ನಾಲ್ಕು ಸಂಘಟನೆಗಳಿದ್ದು ನಿಂಗ್‌ಮಾಪಾ, ಸಖ್ಯಾಪಾ. ಗುಲ್‌ಕಪಾ, ಕಾಗೋಡ ಪಾ ಕ್ಕೆ ಸೇರಿದ ೮ ದೇವಸ್ಥಾನಗಳನ್ನು ಕಾಣಬಹುದು.

ಇವುಗಳಲ್ಲಿ ಶ್ರೇಷ್ಠಾವಾದ ಹಾಗೂ ಬಹು ದೊಡ್ಡದಾದ ದೇವಾಲಯದ ಕುರಿತು ವಿವರಿಸಿ ಹೇಳುವುದಾದರೆ ಗುರುಪದ್ಮ ಸಂಭವ ಬೌದ್ಧವಿಹಾರ ಇದನ್ನು ದಲೈಲಾಮದ ಅಶೀರ್ವಾದ ಹಾಗೂ ಕರ್ನಾಟಕದ ಜನತೆಯ ಸಹಕಾರದಿಂದ ೧೯೯೫ ರಲ್ಲಿ ಪ್ರಾರಂಭಿಸಿ ೧೯೯೯ರಲ್ಲಿ ಪೂರ್ಣಗೊಳಿಸಿದರು.[೧೧] ವರ್ತಮಾನ ಪತ್ರಿಕೆ. ದೂರದರ್ಶನಗಳಲ್ಲಿ ಈ ಮಂದಿರಕ್ಕೆ ಸ್ವರ್ಣದೇವಸ್ಥಾನವೆಂದು ಹೆಸರುಬಂದಿದೆ. ಈ ದೇವಾಲಯವು ೩ ಅಂತಸ್ತಿನಲ್ಲಿ ಚೌಕಕಾರದಲ್ಲಿ ನಿರ್ಮಾಣವಾಗಿದ್ದು. ಒಳಗೋಡೆ ಹಾಗೂ ಹೊರ ಗೊಡೆ ಭಾಗಗಳಲ್ಲಿ ದೊಡ್ಡ ಅಳತೆಯ ಥಾಂಕ ಶೈಲಿಯ ಚಿತ್ರಗಳಿಂದ ತುಂಬಿಕೊಂಡಿದ್ದು ದೇವಾಲಯದ ಗರ್ಭಗುಡಿ ಭಾಗದಲ್ಲಿ ೧ ಅಡಿಯಿಂದ ೬೦ ಅಡಿಯವರೆಗಿನ ವಿವಿಧ ಮಧ್ಯಮ ಮೂರ್ತಿಗಳಿಂದ ಅಲಂಕರಿಸಿದ್ದಾರೆ. ಇವುಗಳ ನಿರ್ಮಾಣವು ನಿಪುಣ ಟಿಬೆಟಿಯನ್ ಹಾಗೂ ನೇಪಾಳ, ಹಿಮಾಚಲಪ್ರದೇಶದ ಕಲಾಶಾಲೆಯ ಕಲಾವಿದರುಗಳಿಂದ ನಿರ್ಮಿಸಿದ ಪರಿಶ್ರಮದ ಬೆವರಿನ ಫಲ. ಈಗೆ ಎಲ್ಲಾ ದೇವಾಲಯಗಳಲ್ಲಿ ಆಯಾ ದೇವತೆಗೆ ಸಂಬಂಧಿಸಿದ ಭಿತ್ತಿಚಿತ್ರ. ಶಿಲ್ಪಗಳನ್ನು ಕಾಣಬಹುದು. ಕಂಬ. ಪಟ್ಟಿಕೆಗಳಲ್ಲಿನ ನಕ್ಷಾ ಚಿತ್ರಗಳನ್ನು ಅಲಂಕಾರಿಕವಾಗಿ ರಚಿಸಿದ್ದಾರೆ. ಹಾಗೂ ದೇವಾಲಯಗಳಲ್ಲಿ ಪಟಚಿತ್ರ, ಸುರುಳಿಚಿತ್ರಗಳನ್ನು ಕಾಣಬಹುದು ಇವುಗಳ ಹೊರತಾಗಿ ಪರಿಸರದ ಪ್ರಮುಖ ರಸ್ತೆಗಳ

೧೧. ಡಿ.ಎಸ್.ಪುರುಷೋತ್ತಮ್‌ರಾವ್: ಸ್ವರ್ಣ ದೇವಸ್ಥಾನ: ಪು.ಸಂ. ೬೭

ಮೇಲೆ ಭಿತ್ತಿಚಿತ್ರಗಳನ್ನು ಕಾಣಬಹುದು. ಹೆಬ್ಬಾಗಿಲಿನ ಮೇಲಿನ ಚಿತ್ರಕಲೆಯನ್ನು ವಿಶೇಷವಾಗಿ ಇವು ಟಿಬೆಟಿನ ಲಿಪಿ ಹಾಗೂ ಬೌದ್ಧ ಧರ್ಮದ ಶ್ರೇಷ್ಠಾ ಚಿನ್ಹೆಗಳನ್ನು ಚಿತ್ರಿಸಿರುವುದು ಕಂಡುಬರುತ್ತದೆ. ಇವುಗಳ ಜೋತೆಯಲ್ಲಿ ಟಿಬೆಟಿಯನ್ನರ ಮನೆಗಳ ಮೇಲೆ, ಪಕ್ಕದ ಮರ ಗಿಡಗಳ ಮೇಲೆ ಪಂಚಭೂತಗಳಿಗೆ ಸಂಬಂಧಿಸಿದ ಬಾವುಟಗಳನ್ನು ಪಂಚವರ್ಣದಲ್ಲಿ ಅವರಿಗೆ ಇಷ್ಟವಾದ ದೇವತೆಗಳ ಚಿತ್ರಗಳನ್ನು ಒಳಗೊಂಡಿರುವುದನ್ನು, ನೇತುಹಾಕಿರುವುದನ್ನು ಇಡೀ ಪರಿಸರದ ಸುತ್ತೆಲ್ಲ ಕಾಣಬಹುದು.

ನಂತರ ಕೆಂಪು ಮತ್ತು ಹಳಾದಿ ವಸ್ತ್ರವನ್ನು ತೊಟ್ಟ, ತಲೆ ಬೋಳಿಸಿಕೊಂಡು ಕೈಯಲ್ಲಿ ಮಣಿಸರವನ್ನು ಹಿಡಿದುಕೊಂಡು ಜಪಮಾಡುತ್ತಿರುವರು, ತಿರುಗುವ ಪ್ರಾರ್ಥನಚಕ್ರ, ಹಸ್ತಪ್ರತಿ ಮಾದರಿಯ ಬೌದ್ಧ ಧರ್ಮದ ಶಾಸ್ತ್ರ ಪುಸ್ತಕಗಳನ್ನು ಕೈಯಲ್ಲಿ ಹಿಡಿದು ಪ್ರಾರ್ಥಿಸುತ್ತಿರುವರನ್ನು ಪರಿಸರದ ತುಂಬೆಲ್ಲ ಕಾಣಬಹುದು. ಇವರು ತಮ್ಮ್ಮಯಾದ ಸಮಯದಲ್ಲಿ ದೇವಾಲಯದಲ್ಲಿ ಪ್ರಾರ್ಥನೆ ಮಾಡಲು ದೇವಾಲಯಗಳಿಗೆ ಹೋಗುವುದು ಹಾಗೂ ಅಧ್ಯಾಯನ ಮಾಡುವುದರಲ್ಲಿ ತುಂಬ ಉತ್ಸಹದಾಯಕವಾಗಿರುವುದನ್ನು ಕಾಣಬಹುದು.

ಗುರುಪುರ ಪರಿಸರ

ಮೈಸೂರಿನ ಸಾಂಸ್ಕೃತಿಕ ಪರಿಸದಲ್ಲಿಯೆ ಇರುವ ಹುಣಸೂರು ತಾಲೂಕಿನ ಗುರುಪುರ ಗ್ರಾಮವು ಯಾವುದೇ ವಿಶಿಷ್ಟ ಐತಿಹಾಸಿಕ ನೆಲೆ ಹೊಂದಿರುವುದಿಲ್ಲ, ಇಂತಹ ಪರಿಸರಕ್ಕೆ ಟಿಬೆಟಿಯನ್ನರು ೧೯೭೧ರಲ್ಲಿ ಮೈಲಾಡ ಮತ್ತು ಭಾರತ ಸರ್ಕಾರದ ಸಹಯೋಗ (ಅನುಮತಿ) ಮೇರೆಗೆ ಒಂದು ನೆಲೆಸಿದ್ದರಿಂದ ಗುರುಪುರ ಪರಿಸರಕ್ಕೆ ತನ್ನದೇಯಾದ ಬೌದ್ಧಧರ್ಮದ ಚರಿತ್ರೆ ಹುಟ್ಟಿಕೊಂಡಿದೆ. ಈ ಪ್ರದೇಶವು ಸಮುದ್ರ ಮಟ್ಟಕ್ಕಿಂತ ೮೨೬ಮೀಟರ್ ಎತ್ತರದಲ್ಲಿ ಇದ್ದು. ೧೫ರಿಂದ ೩೫ ಸೆಂಟಿಗ್ರೇಡ್ ವಾತಾವರಣ ಹೊಂದಿದ್ದು, ವರ್ಷಕ್ಕೆ ೩೦-೩೪ ಇಂಚು ಮಳೆಯಾಗುತ್ತಿದೆ. ಇದು ಮೈಸೂರಿನಿಂದ ೬೦ ಕಿ.ಮೀ. ದೂರದಲ್ಲಿದ್ದು. ಹೆಚ್.ಡಿ.ಕೋಟೆಗೆ ಹೋಗುವ ದಾರಿಯಲ್ಲಿ ಹುಣಸೂರಿನಿಂದ ೭ ಕಿ.ಮೀ. ದೂರದಲ್ಲಿ ಇದೆ.

ಇಲ್ಲಿನ ಪರಿಸರವು ಉತ್ತಮ ವಾತಾವರಣವನ್ನು ಹೊಂದಿದೆ. ಇಂಥಹ ಪರಿಸರದಲ್ಲಿ ೨೩೨೦ ಟಿಬೆಟಿಯನ್ನರ ಜನರಿದ್ದು, ೨೦೦೦ ಏಕರೆ ಭೂ ಪ್ರದೇಶವಾದ ಭೂಮಿಯಲ್ಲಿ ತನ್ನದೇಯಾದ ೧೩ ಕ್ಯಾಂಪುಗಳನ್ನು ನಿರ್ಮಿಸಿಕೊಂಡಿದ್ದಾರೆ. ಈಗಿನ ಜನಸಂಖ್ಯೆ ೩೯೬೪ಕ್ಕೆ ಹೆಚ್ಚಾಗಿದೆ ಒಂದೊಂದು ಕ್ಯಾಂಪುಗಳು ೩೨ ಕುಟುಂಬಗಳನ್ನು ಹೊಂದಿದ್ದು ಒಂದೊಂದು ಕ್ಯಾಂಪುಗಳಿಂದ ಮತ್ತೊಂದು ಕ್ಯಾಂಪುಗಳಿಗೆ ೩ರಿಂದ ೪ ಕಿ.ಮೀ. ದೂರದಲ್ಲಿ ನಿರ್ಮಾಣ ಮಾಡಿಕೊಂಡಿದ್ದಾರೆ ಪರಿಸರದ ಸುತ್ತಲು ಒಂದು ಕುಟುಂಬಕ್ಕೆ ನೀಡಿದ ೨ ರಿಂದ ೩ ಏಕರೆ ಭೂಮಿಯಲ್ಲಿ ಮಳೆಯಾದರಿತ ಬೆಳೆಗಳಾದ ಮೆಕ್ಕೆಜೋಳ, ಹೊಗೆಸೊಪ್ಪು, ಭತ್ತ, ಕಾಫಿ, ತೆಂಗು, ಸುಂಟಿ,ಸಾಗುನಿಮರ. ಉದ್ದು ಹೆಸರು ಇತ್ಯಾದಿ ತರಕಾರಿ. ದವಸ ಧಾನ್ಯಗಳ ಬೆಳೆಯುವುದರ ಜೊತೆಗೆ ಹೈನುಗಾರಿಕೆ ಮತ್ತು ಕರಕುಶಲ ವಸ್ತುಗಳಾದ ಸ್ವೆಟರ್ ಮಾರಾಟ, ರೆಸೋರೆಂಟ್ ವಿವಿಧ ವ್ಯಾಪಾರಿ ಮಳಿಗೆಗಳು, ಚಿತ್ರಪಟ ಹಾಗೂ ಶಿಲ್ಪಗಳ ತ್ಯಯಾರಿಕೆ ಇತ್ಯಾದಿ ವ್ಯವಹಾರಿಕ ಚಟುವಟಿಕೆಗಳನ್ನು ಕಾಣಬಹುದು.

ಹಾಲಿನ ಸಂಘ-ಸಂಸ್ಥೆ, ವ್ಯವಸಾಯ ಸಂಘಸಂಸ್ಥೆಗಳನ್ನು ಹೊಂದಿದೆ ನಂತರ ಇದೇ ಪರಿಸರದಲ್ಲಿ ಪ್ರಾಥಮಿಕ ಶಾಲೆ ಹಾಗೂ ನರ್ಸರಿ ಶಾಲೆಗಳು ಕಂಡು ಬರುತ್ತವೆ, ಪ್ರಾಥಮಿಕ ಶಾಲೆಯಿಂದ ೧೦ನೇ

ತರಗತಿಯವರೆಗೂ ಇಲ್ಲಿ ಶಿಕ್ಷಣ ನೀಡಲಾಗುತ್ತದೆ. ಅದು ಟಿಬೆಟಿಯನ್ನರ ಶಿಕ್ಷಣ ಪದ್ದತಿಯೇ ಹಾಗಿರುತ್ತದೆ. ಇದನ್ನು ಸೆಂಟನಲ್ ಸ್ಕೂಲ್ ಅಫ್ ಟಿಬೆಟಿಯನ್. (ಸಿ ಎಸ್. ಟಿ. ಅಥವಾ ಸಿ.ಬಿ. ಎಸ್. ಇ.) ದೆಹಲಿ ಸಂಸ್ಥೆಯ ಅದೀನದಲ್ಲಿ ನಡೆಸುವುದಕ್ಕೆ ಭಾರತ ಸರ್ಕಾರ ಅನುಮತಿ ನೀಡಿದೆ. ಉನ್ನತ ಶಿಕ್ಷಣಕ್ಕಾಗಿ ಗ್ಯಾಡಸೇಡ್ ಮಾನಸ್ಟಿಕ್ ಶಾಲೆಯಲ್ಲಿ ತಾಂತ್ರಿಕ ಮತ್ತು ಸೂತ್ರಗಳ ಹೆಚ್ಚಿನ ಅಧ್ಯಾಯನ ಮಾಡಲಾಗುತ್ತದೆ. ಇಲ್ಲಿ ಮುಗಿದ ನಂತರ ಬೈಲುಕುಪ್ಪೆಯಲ್ಲಿ ಲಾಮರಾಗಿ ಬೌದ್ಧಧರ್ಮ ಅಧ್ಯಾಯವನ್ನು ನಡೆಸಬಹುದು.

ಟಿಬೆಟಿಯನ್ನರ ಔಷಧಿ ಮತ್ತು ಅಸ್ಪತ್ರೆಗಳಂತಹ ಸಂಸ್ಥೆಯನ್ನು ಹೊಂದಿದೆ. ಇಲ್ಲಿನ ಟಿಬೆಟಿಯನ್ನರ ಸಹಕಾರ ಸಂಸ್ಥೆಯಲ್ಲಿ ರಸಗೊಬ್ಬರ ಭಿತ್ತನೆಬೀಜ, ಉಳುವ ಯಂತ್ರೋಪಕರಣಗಳು ಮತ್ತು ಇವುಗಳನ್ನು ರಿಪೇರಿ ಮಾಡುವ ಮಳಿಗೆಗಳು, ಹಾಲಿನ ಕೇಂದ್ರ.. ಸಂಚಾರಿ ವಾಹನ ಕೇಂದ್ರ, ಕಡಿಮೆ ದರದಲ್ಲಿ ಮನೆ ನಿರ್ಮಾಣ, ಕರಕುಶಲಕೇಂದ್ರಗಳು ಹಾಗೂ ಸ್ವ ಉದ್ಯೋಗ ದೂರಕಿಸುವ ಕಾರ್ಯಕ್ಕೆ ಪರಂಪರಾಗತವಾಗಿ ಬಂದ ಸಂಪ್ರದಾಯಿಕ ಚಿತ್ರ ಮತ್ತು ಶಿಲ್ಪ ಇತ್ಯಾದಿ ಕರಕುಶಲ ವಸ್ತುಗಳನ್ನು ತಯಾರಿಸಲು ಹಣಸಹಾಯ ನೀಡುವುದು. ಇಲ್ಲಿನ ಎಲ್ಲಾ ಅಡಳಿತ ವ್ಯವಸ್ಥೆಯು ಸೆಂಟರಲ್ ಟಿಬೆಟಿಯನ್ ಅಡಮ್ಮಿನಿಸ್ಟ್ರೇಷನ್ (ಸಿ.ಟಿ.ಎ) ಧರ್ಮಶಾಲದ ಅಧೀನದಲ್ಲಿ ನಡೆಯುತ್ತದೆ. ಇದಕ್ಕೆ ಒಬ್ಬ ಅಡಳಿತಾಧಿಕಾರಿಯನ್ನು ನೇಮಿಸಲಾಗಿದ್ದು, ಇಲ್ಲಿನ ಎಲ್ಲಾ ಅಡಳಿತವನ್ನು ಇತನೇ ನೋಡಿಕೊಳ್ಳುತ್ತಾನೆ. ಸಹಕಾರ ಸಂಘಕ್ಕೆ ಒಬ್ಬ ಚೀಪ್ ಏಗ್ಸೇಕ್ಯೂಟಿವ್ ಅಫೀಸರ್ ಇರುತ್ತರೆ. ಇತನನ್ನು ಸಹ (ಸಿ.ಟಿ.ಎ) ಸಂಸ್ಥೆಯಿಂದ ಅಯ್ಕೆಮಾಡಿ. ಕಳುಹಿಸಲಾಗುತ್ತದೆ. ಟಿಬೆಟಿನ ಎಲ್ಲಾ ಪರಿಸರಕ್ಕೂ ಈ ರೀತಿಯ ಅಡಳಿತವಸ್ಥೆಯನ್ನು ವಹಿಸಲಾಗುತ್ತದೆ.

ಇವರು ತನ್ನ ಕ್ಯಾಂಪ್‌ನಲ್ಲಿನ ಅಗು-ಹೋಗುಗಳನ್ನು ಗಮನಿಸಿಕೊಂಡು, ಉತ್ತಮವಾದ ಅಡಳಿತವನ್ನು ನಡೆಸಿಕೊಂಡು ಹೋಗುವುದರ ಜವಬ್ದಾರಿ ಹೊಂದಿರುತ್ತಾರೆ. ತಮ್ಮದೇಯಾದ ಕ್ಯಾಂಪಿನ ಸಮಸ್ಯೆಯನ್ನು (ನಾಯಕ) ಸರಿಮಾಡುತ್ತಾರೆ. ಇವರು ದಷ್ಟ ಪುಷ್ಟರಾಗಿದ್ದು ಹಾಗೂ ಸಾಮಾನ್ಯ ಜನರೊಂದಿಗೆ ಹೊಂದಿಕೊಳ್ಳುವ ಅತಿ ಬುದ್ಧಿವಂತ ವ್ಯಕ್ತಿತ್ವವುಳ ಹಾಗೂ ಹೆಚ್ಚು ಭಾಷೆಯನ್ನು ಬಲ್ಲವನು ಎಲ್ಲರಿಗೂ ಇಷ್ಟ ವ್ಯಕ್ತಿಯಾಗುತ್ತಾನೆ. ಈ ಕ್ಯಾಂಪಿನಲ್ಲಿ ಯಾವುದೇ ತೊಂದರೆ ಸಂಭವಿಸಿದರೆ ಹಾಗೂ ಅರ್ಥಿಕ ಸಹಾಯ, ವಸುಲಿ, ಶುಭಸಂದರ್ಭಗಳಲ್ಲಿ ಜವಾಬ್ಧರಿಯುತ ವ್ಯಕ್ತಿಯಾಗಿರುತ್ತಾನೆ. ಪ್ರಮುಖವಾಗಿ ೩ ದೇವಾಲಯಗಳನ್ನು ಹೊಂದಿದ್ದು. ಇದರಲ್ಲಿ ೧೪ನೇ ದಲೈಲಾಮರವರನ್ನು ವಿಶೇಷವಾಗಿ ಪೂಜಿಸುವ ಪದ್ಧತಿ ಇದೆ. ಕ್ಯಾಂಪ್ ಜಿ ಯಲ್ಲಿ ಗ್ಯಾಡ್‌ಮುಡ್ ತಾಂತ್ರಿಕ ದೇವಾಲಯವನ್ನು ೧೪ನೇ ದಲೈಲಾಮರವರು ದಿನಾಂಕ ೦೬-೦೮-೧೯೯೦ರಲ್ಲಿ ಉದ್ಘಾಟಿಸಿದರು. ಇದನ್ನು ಕಟ್ಟಲು ಸಹಾಯ ಧನ ನೀಡಿದವರು. ಎಂ.ಆರ್. ಇಡನ್‌ಬೊ ಹಿರೇಕಾ ಮತ್ತು ಅವರ ಕುಟುಂಬ ಮತ್ತು ಅವರ ಸ್ನೇಹಿತರು ಜಪಾನಿನವರು. ಈ ದೇವಾಲಯದಲ್ಲಿ ಪಟಚಿತ್ರಗಳು ಹಾಗೂ ಶಿಲ್ಪಗಳು ಮಾತ್ರ ಇವೆ, ಇವುಗಳು ವಿನೂತನವಾಗಿ ನಿರ್ಮಾಣಿಸುವುದರಿಂದ ಯಾವುದೇ ಗೂಡೆ ಭಿತ್ತಿಚಿತ್ರಗಳು ಕಂಡುಬರುವುದಿಲ್ಲ. ಬರಿ ಕಂಬ ಮತ್ತು ಪಟ್ಟಿಕೆಯಲ್ಲಿ ನಕ್ಷಾ ಚಿತ್ರಗಳನ್ನು ಹಾಗೂ ಬಾಗಿಲುಗಳನ್ನು ಚಿತ್ರಗಳಿಂದ ಶೃಂಗರಿಸಿರುವುದನ್ನು ಕಾಣಬಹುದು.

ಮತ್ತೊಂದು ದೇವಾಲಯವಾದ ಝೊಂಗ್‌ಕರ್ ಜ್ಯೊದೇ ಬೌದ್ಧವಿಹಾರ ಈ ಪರಿಸರಕ್ಕೆ ಅತಿ ದೊಟ್ಟದಾದ ದೇವಾಲಯವಾಗಿದ್ದು. ಗಾಡೆನ್ ಪೆಹಗ್ಯಾಲಿಂಗ್ ಬುದ್ದ ವಿವಾದ ದ್ಸೊಂಗ್ ಕಾಲ್ ಚೋಡೆ ದೇವಾಲಯದ ಪ್ರಾರ್ಥನ ಮಂದಿರವು ದಿನಾಂಕ ೧೬ನೆ ಡಿಸೆಂಬರ್ ೨೦೦೪ರಂದು ಬೌದ್ಧ

ಧಾರ್ಮಿಕ ಅಧ್ಯಯನ. ಆಭ್ಯಾಸ, ಹಾಗೂ ಟಿಬೆಟಿಯನ್ನು, ಸಂಸ್ಕೃತಿಯ ಉಳಿವಿಗಾಗಿ ಟಿಬೆಟಿಯನ್ ಧರ್ಮಗುರುಗಳು ಹಾಗೂ ನೋಬೆಲ್ ಶಾಂತಿ ಪ್ರಶಸ್ತಿ ವಿಜೇತರಾದ ಪರಮ ಪೂಜ್ಯ ಸನ್ಮಾನ್ಯ ಶ್ರೀ ದಲೈಲಾಮ ರಿಂದ ಉದ್ಘಾಟಿಸಲ್ಪಟ್ಟಿದೆ.

ಇದರ ಹಿಂಬದಿಯಲ್ಲಿ ಎಂಟು ಸ್ತೂಪಗಳು ನಿರ್ಮಾಣವನ್ನು ಮಾಡುತಿದ್ದು, ಮೂಲ ನೇಪಾಳದ ಕಲಾವಿದರು ಹಾಗೂ ಬೈಲುಕುಪ್ಪೆಯ ಕಲಾವಿದರು ಸ್ತೂಪಗಳ ಮೇಲಿನ ಸಿಮೆಂಟ್ ಭಿತ್ತಿಮಾಡುತ್ತಿದ್ದಾರೆ. ಸ್ಥಳಿಯ ಗಾರೆ ಕೆಲಸದ ಜನಗಳು ಸಹಾಯಕ್ಕೆ ತೆಗೆದುಕೊಂಡಿದ್ದು ಕಂಡುಬರುತ್ತದೆ. ಈ ದೇವಾಲಯವು ಟಿ ಅಕಾರದಲ್ಲಿ ನಿರ್ಮಾಣ ಮಾಡಲಾಗಿದ್ದು. ಎರಡು ಅಂತಸ್ತುನ್ನು ಹೊಂದಿದ್ದು. ದೇವಾಲಯದ ಗೂಡೆಯ ಹೊರಗೆ ಹಾಗೂ ಒಳಭಾಗದ ದೇವಾಲಯದಲ್ಲಿ ಯಾವುದು ಭಿತ್ತಿಚಿತ್ರಗಳಲ್ಲಿ ಬರೀ ಕಂಬ ಮತ್ತು ಪಟ್ಟಿಕೆಗಳು ಹಾಗೂ ಬಾಗಿಲಿನ ಮೇಲೆ ಅಲಂಕಾರಿಕ ನಕ್ಷ ಚಿತ್ರಗಳನ್ನು ಕಾಣಬಹುದು. ಹಾಗೂ ದೇವಾಲಯದ ದ್ವಾರ ಬಾಗಿಲನ್ನು ಸಹ ಥಾಂಕ ಮಾದರಿಯ ಶೈಲಿಯಲ್ಲಿ ನಿರ್ಮಿಸಿದ್ದು, ಟಿಬೆಟಿಯನ್ನರ ಶ್ರೇಷ್ಠ ಎಂಟು ಚಿನ್ಹೆಗಳ ಭಿತ್ತಿಚಿತ್ರಗಳನ್ನು ಕಾಣಬಹುದು. ಹಾಗೂ ದೇವಾಲಯದ ಬಲ ಮತ್ತು ಎಡ ಭಾಗದಲ್ಲಿ ಅಲಂಕೃತವಾದ ವಾಸ್ತು ಶೈಲಿಯ ಧೂಪದ ಗೂಡನ್ನು ಕಾಣಬಹುದು. ದೇವಾಲಯದ ಸೂತ್ತಲು ಲಾಮಗಳು ವಾಸಿಸುವ ಮನೆಗಳು ನಿರ್ಮಾಣ ಮಾಡಿದ್ದಾರೆ. ಇದರಲ್ಲಿ ಲಾಮಗಳು ಶಾಸ್ತ್ರ ಗ್ರಂಥ ಹಾಗೂ ಬೌದ್ಧಧರ್ಮದ ಅಭ್ಯಾಸವನ್ನು ಮಾಡುತ್ತಿರುತ್ತಾರೆ. ಹಾಗೂ ಅವರ ಬಾಗಿಲುಗಳ ಮೇಲೆ ಹಾಗೂ ಗೋಡೆಗಳ ಮೇಲೆ ಭಿತ್ತಿಯೇತರ ಚಿತ್ರಕಲೆಯ ಸಾಮಾಗ್ರಿಗಳನ್ನು ಕಾಣಬಹುದು. ಹಾಗೂ ಪೂಜೆಗಾಗಿ ದೇವಾಲಯದ ಒಳ ಭಾಗದಲ್ಲಿ ಗೋಧಿ ಹಿಟ್ಟು ಹಾಗೂ ಬೆಣ್ಣೆಯಿಂದ ಮಾಡಿದ ಗೊಂಬೆಗಳನ್ನು ಕಾಣಬಹುದು, ಅದರ ಮೇಲೆ ವರ್ಣಗಾರಿಕೆಯು ಬಹು ಉತ್ತಮ ರೀತಿಯಲ್ಲಿ ಕಂಡುಬರುತ್ತದೆ.

ಮೂರನೇಯು ದೇವಾಲಯುವು ಪ್ರಾರ್ಥನ ಚಕ್ರವಾಗಿದ್ದು, ಇದರಲ್ಲಿ ಪ್ರಾರ್ಥನೆಗೆ ಸಹಾಯಕವಾಗುವಂತೆ ಒಂದು ದೊಡ್ಡ ಚಕ್ರವನ್ನು ನಿರ್ಮಾಣ ಮಾಡಿಕೊಂಡಿದ್ದರೆ. ಮಂದಿರದಲ್ಲಿ ಕಟ್ಟಿಗೆಯಿಂದ ಸಿಲಿಂಡರ ರೂಪದಲ್ಲಿ ಮಾಡಿದ್ದು. ಇದರ ಸೂತ್ತಲು ಟಿಬೆಟಿಯನ್ನರ ಲಿಪಿಗಳಿಂದ ವರ್ಣರಂಚಿತವಾಗಿರುತ್ತೆ. ಇಲ್ಲಿನ ಟಿಬೆಟಿಯನ್ನರು ತಮ್ಮದೇಯಾದ ಜನಪದ ನೃತ್ಯೆ ಹಾಗೂ ಸಂಗೀತವನ್ನು ಪ್ರದರ್ಶಿಸಲು ದಸರ ಹಾಗೂ ಹಂಪಿ ಉತ್ಸವದಲ್ಲಿ ಭಾಗವಹಿಸುತ್ತಾರೆ. ಹಾಗೂ ಬೌದ್ಧ ಧರ್ಮಕ್ಕೆ ಸಂಬಂದಿಸಿದ ಹಬ್ಬದ ದಿನಗಳಲ್ಲಿ ಮನೂರಂಜನೆಗಾಗಿ ಪ್ರದರ್ಶಿಸುವುದು ಪರಿಸರದಲ್ಲಿ ಕಂಡುಬರುತ್ತದೆ. ಇದರ ಜೊತೆಗೆ ಇಲ್ಲಿನ ಜನರೊಂದಿಗೆ ಹೊಂದಿಕೊಂಡು ಯಾವುದೇ ಜಗಳಗಳಿಗೆ ಅಸ್ಪದಕೊಡದೆ ತಮ್ಮ ಪಾಡಿಗೆ ತಾವು ಜೀವನ ನಡೆಸಿಕೊಂಡು, ಈ ಪರಿಸರವನ್ನು ನೋಡುವುದಕ್ಕೆ ಟಿಬೆಟಿಗೆ ಪ್ರದೇಶಿಸಿದೆವೆ ಎಂಬ ಅನುಭವ ನೀಡುವಂತೆ ನಿರ್ಮಾಣ ಮಾಡಿಕೊಂಡು. ಕೆಲವು ಟಿಬೆಟಿಯನ್ನರು ಉತ್ತಮವಾಗಿ ಕನ್ನಡ ಭಾಷೆಯನ್ನು ಮಾತಾಡಬಲ್ಲವರಾಗಿದ್ದಾರೆ. ತಮ್ಮ ಪರಿಸರದ ತುಂಬೆಲ್ಲ ಬುದ್ಧನು ಇನ್ನೂ ಜೀವಂತವಾಗಿ ಇದ್ದಾನೆಂಬ ಭಾವನೆಯಲ್ಲಿ ಬದುಕು ನಡೆಸಿಕೊಂಡು ಹೋಗುತಿದ್ದಾರೆ ಕರ್ನಾಟಕದಲ್ಲಿ ತಮ್ಮದೇಯಾದ ಸಂಸ್ಕೃತಿಯನ್ನು ಪರಿಸರವನ್ನು ಬೆಳೆಸಿಕೊಂಡು ಬರುತ್ತಿದ್ದಾರೆ.

ಕೊಳ್ಳೆಗಾಲ ಪರಿಸರ

ಮೈಸೂರು ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ತಂದೆ ಚಾಮರಾಜ

ಒಡೆಯರ ಜನಿಸಿದ್ದು ಈ ಪ್ರದೇಶದಲ್ಲಿ. ೧೮೧೮ರಲ್ಲಿ ಈ ಪ್ರದೇಶ ಚಾಮರಾಜನಗರ ಎನಿಸಿತು. ನಂತರ ೧೯೯೭ರ ಅಗಸ್ಟ್ ೧೫ರಂದು ಜಿಲ್ಲೆಯಾಗಿ ಉದಯವಾಯಿತು. ೯.೬೫ ಲಕ್ಷ ಜನಸಂಖ್ಯೆಹೊಂದಿದ್ದು. ಗುಂಡ್ಲುಪೇಟೆ ಕೊಳ್ಳೆಗಾಲ, ಯಳಂದೂರುಗಳೆಂಬ ४ ತಾಲೂಕುಗಳಿಂದ ಆವೃತವಾಗಿದೆ. ಇದೇ ಮೈಸೂರು ಜಿಲ್ಲೆಯಾಗಿದ್ದು ಈ ಪ್ರದೇಶವನ್ನು ೧೦ನೇ ಶತಮಾನಗಳವರೆಗೆ ಗಂಗರ ಅಧಿಕಾರಕ್ಕೊಳಪಟಿತ್ತು. ಕ್ರಿ.ಶ. ೧೦೦೦ರಿಂದ ೧೧೧೬ರವರೆಗೆ ಚೋಳರು ಈ ಪ್ರಾಂತ್ಯದ ಅಧಿಕಾರಿಗಳಾಗಿದ್ದರು ೧೧೧೬ ರಿಂದ ವಿಜಯನಗರ ಅರಸರು ಪ್ರಬಲರಾಗಿ ತಮ್ಮ ಅಳ್ವಿಕೆಗೆ ಒಳಪಡಿಸಿದರು. ಕಲಾನಂತರ ಒಡೆಯರ ಅಳ್ವಿಕೆಗೆ ಒಳಗಾಗಿ ನಂತರ ಕ್ರಿ .ಶ. ೧೭೬೧-೧೭೯೯ ರ ಕಾಲದಲ್ಲಿ ಹೈದರಾಲಿ ಹಾಗೂ ಟಿಪ್ಪು ಪ್ರಬಲರಾಗಿ ಒಡೆಯರ ಅಧಿಕಾರವನ್ನು ಬದಿಗೊತ್ತಿ ತಮ್ಮ ವರ್ಚಸ್ಸನು ಬೀರಿದರು. ಮುಂದೆ ಒಡೆಯರು ಅಧಿಕಾರಕ್ಕೆ ಬಂದರು.[೧೨] ನಂತರ ಲಲಿತಕಲೆಗೆ ಪ್ರೋತ್ಸಹ ಕೊಟ್ಟರು ಇಂಥಹ ಸಂದರ್ಭದಲ್ಲಿ ಕೊಳ್ಳೇಗಾಲದ ಪರಿವಾರ ಚಾವಡಿ ಹಾಗೂ ರಾಮಮಂದಿರದಲ್ಲಿ ಭಿತ್ತಿಚಿತ್ರಣಗಳನ್ನು ಮಾಡಿಸಿದರು. ಟಿಪ್ಪು ಮತ್ತು ಒಡೆಯರ ಅಡಳಿತ ದೃಶ್ಯ ಹಾಗೂ ರಾಮಾಯಣ ಮತ್ತು ಮಹಾಭಾರತದ ದೃಶ್ಯಗಳಿವೆ ಎಂಬುವುದನ್ನು ಕಲಾ ಇತಿಹಾಸಕಾರರಿಂದ ತಿಳಿಯಬಹುದು.

ಈ ಪರಿಸರದ ಮೂಲ ಬೆಳೆ ರಾಗಿ, ಜೊಳ, ಕಬ್ಬು, ಭತ್ತ, ಹಿಪ್ಪೆ ನೇರಳೆ, ಹೊಗೆಸೊಪ್ಪು ಬೆಳೆಗಳು ವಿಶೇಷವಾಗಿದ್ದು ಗ್ರಾನೈಟ್, ಗ್ರಾಫೈಟ್, ಕಲ್ನಾರು. ಮೆಗ್ನೇಷಿಯಂ, ಕ್ರೋಮೈಟ್ ಖನಿಜ ಸಂಪತ್ತುಗಳಾಗಿವೆ. ಇವುಗಳಲ್ಲದೆ ಪ್ರೇಕ್ಷಣಿಯ ಸ್ಥಳಗಳೆಂದರೆ ಮಲೈ ಮಹದೇಶ್ವರ ಬೆಟ್ಟದಲ್ಲಿ ಮಹಾದೇಶ್ವರ ದೇವಾಸ್ಥಾನ, ಹಿಮ್ ವದ್ ಗೋಪಾಲ ಸ್ವಾಮಿ ಬೆಟ್ಟ, ಚಾಮರಾಜೇಶ್ವರ ದೇವಾಲಯ ಭಿತ್ತಿಚಿತ್ರಗಳನ್ನು ಕಾಣಬಹುದು. ಬಿಳಿಗಿರಿ ರಂಗನ ಬೆಟ್ಟ ಇಂಥಹ ಪರ್ವತ ಶ್ರೇಣಿಯ ತಪ್ಪಲಿನ ಪರಿಸರವಾದ ಒಡೆಯರ ಪಾಳ್ಯದಲ್ಲಿ ಇತ್ತಿಚಿಗೆ ಬೌದ್ಧಧರ್ಮದ ದೇವಾಲಯ. ಸ್ತೂಪಗಳು, ದ್ವಾರಬಾಗಿಲುಗಳು ಹಾಗೂ ವಿಹಾರಗಳು ನಿರ್ಮಾಣಗೊಂಡು ಇಡೀ ಜಿಲ್ಲೆ ಒಂದು ಧಾರ್ಮಿಕ, ಅರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ವಲಯದಲ್ಲಿ ಟಿಬೆಟಿಯನ್ನರು ತಮ್ಮದೇಯಾದ ಕೊಡುಗೆ ನೀಡುವುದು ಕಾಣಬಹುದು, ನಂತರ ಬಂಡಿಪುರ ಅರಣ್ಯಧಾಮ. ರಾಷ್ಟ್ರೀಯ ವನ್ಯಪ್ರಾಣಿ ಮತ್ತು ಪಕ್ಷಿಧಾಮಗಳಿಗೆ ಪ್ರಸಿದ್ಧಿ ಇರುವುದರಿಂದ ಟಿಬೆಟಿಯನ್ನರು ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ತಾಲೂಕಿನ ಒಡಯರಪಾಳ್ಯ ಗ್ರಾಮದ ಪರಿಸರವು ಬೌದ್ಧ ಧರ್ಮ ಅಧ್ಯಾಯನಕ್ಕೆ ಹಾಗೂ ಟಿಬೆಟಿಯನ್ನರ ಪರಿಸರಕ್ಕೆ ತಕ್ಕಂತೆ ಹೊಂದಿಕೊಳ್ಳುತ್ತದೆ ಎಂದು ಅಯ್ಕೆಮಾಡಿಕೊಂಡರು.

ಭಾರತ ಸರ್ಕಾರದ ಅನುಮತಿ ಮೇರೆಗೆ ೧೯೭೪ರಲ್ಲಿ ದಲೈಲಾಮರವರ ಅಮೃತ ಹಸ್ತದಿಂದ ಅರಂಭಗೊಂಡ ಈ ಪ್ರದೇಶವು ಬಿಳಿಗಿರಿ ರಂಗ ಬೆಟ್ಟದ ಪರ್ವತ ಸೀಮೆಯಲ್ಲಿನ "ಬಸವನಗಿರಿ" ಎಂಬ ಭಾಗದ ಕೆಳತಪ್ಪಲಿನಲ್ಲಿ ತಮ್ಮದೇಯಾದ ಕ್ಯಾಂಪುಗಳನ್ನು ನಿರ್ಮಿಸಿ ವಾಸಿಸುತ್ತಿದ್ದಾರೆ. ಇದು ಕೊಳ್ಳೆಗಾಲದಿಂದ ಸುಮಾರು ೬೦ ಕಿ.ಮೀ, ದೂರದಲ್ಲಿದೆ. ಸುಮಾರು ೫೩೨೦ ಜನಸಂಖ್ಯೆಯನ್ನು ಹೊಂದಿರುವ ಟಿಬೆಟಿಯನ್ನರು ಹಾಗೂ ೨೦೦ ಕ್ಕೂ ಹೆಚ್ಚು ಲಾಮಗಳನ್ನು ಹೊಂದಿದ್ದು. ತನ್ನದೇಯಾದ ಸಾಂಸ್ಕೃತಿಕ ಪರಿಸರದಲ್ಲಿ ಆರು ಕ್ಯಾಂಪ್‌ಗಳಾನ್ನು ನಿರ್ಮಿಸಿಕೊಂಡು. ಪ್ರತಿ ಕ್ಯಾಂಪುಗಳಲ್ಲಿ ೧೦-೨೫ ಮನೆಗಳನ್ನು ನಿರ್ಮಿಸಿಕೊಂಡು. ೬೦೦೦ ಏಕರೆ ಭೂ ವಿಸ್ತೀರ್ಣದ ಭೂಮಿಯಲ್ಲಿ ಕೃಷಿ ಭೂಮಿಯಾಗಿ

೧೨. ಕೆ. ಅನಂತರಾಮರಾವ್: ಕರ್ನಾಟಕ ದರ್ಶನ: ಪು.ಸಂ. ४೯

ಪರಿವರ್ತಿಸಿಕೊಂಡು ಮಳೆ ಅಧಾರಿತವಾದ ವ್ಯಾವಸಾಯ ಪದ್ಧತಿಯನ್ನು ರೂಢಿಸಿಕೊಂಡಿದ್ದಾರೆ. ಒಬ್ಬರಿಗೆ ಒಂದರಿಂದ ಮೂರು ಏಕರೆಯವರಿಗೆ ಭೂಮಿ ನೀಡಲಾಗಿದ್ದು. ಇದರಲ್ಲಿ ಮೆಕ್ಕೆ ಜೋಳ, ಹೆಸರು. ಅಲಸಂದಿ, ತೆಂಗು, ಉದ್ದು ಇತ್ಯಾದಿ ಧವಸ-ಧಾನ್ಯಗಳು ಹಾಗೂ ತರಕಾರಿಗಳನ್ನು ಬೆಳೆಯುತ್ತಿದ್ದಾರೆ. ಕೃಷಿಯೇತರ ಚಟುವಟಿಕೆಗಳಾದ ಹೈನುಗಾರಿಕೆ ಕರಕುಶಲವಸ್ತು ತ್ಯಯಾರಿಕೆ ಸ್ವೆಟರ್ ಮಾರಟ ಮಳಿಗೆಗಳು ರೆಸ್ಟೋರೆಂಟ್ ಇದರೊಂದಿಗೆ ಬೌದ್ಧ ಧರ್ಮ ಅಧ್ಯಯನ ಕರಕುಶಲ ವಸ್ತುಗಳು ಹಾಗೂ ಭಿತ್ತಿಚಿತ್ರ ನಿರ್ಮಾಣ ಹಾಗೂ ಸ್ತೂಪಗಳ ನಿರ್ಮಾಣಗಳನ್ನು ಕಾಣಬಹುದು. ಹೀಗೆ ಹಲವಾರು ಬಗೆಯ ಇವರುಚಟುವಟಿಕೆಯಲ್ಲಿ ನಿರತರಾಗಿದ್ದು, ಇತರ ಮೂಲ ಜನರೊಂದಿಗೆ ಸಹ ಸಂಬಂಧವನ್ನು ಹೊಂದಿದ್ದಾರೆ. ಕೆಲವರು ಮೈಸೂರಿನ ನಗರದಲ್ಲಿ ಉದ್ಯೋಗಗಳನ್ನು ಮಾಡುತ್ತಿದ್ದಾರೆ.

ಇವರು ತಮ್ಮ ಪರಿಸರದ ಅಡಳಿತವನ್ನು ನಿರ್ವಹಿಸುವಂತಹ ಅಡಳಿತ ಕಛೇರಿ (Representive office) ಡಿ. ಎಲ್. ಪಿ. ಅಗ್ರೀ ಕೋ ಅಫರೇಟಿವ್ ಬ್ಯಾಂಕ್ ಇದರಿಂದ ಕೃಷ್ಷಿ ಹಾಗೂ ಕೃಷಿಯೋತರ ಚಟುವಟಿಕೆಗೆ ಅರ್ಥಿಕ ಸಹಾಯ ಪಡೆದು ಕೊಳ್ಳುತ್ತಾರೆ. ಕೇಂದ್ರೀಯ ಟಿಬೆಟಿಯಾನ್ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣದವರೆ ಮಾತ್ರ ಇದ್ದು. ಮುಂದಿನ ಶಿಕ್ಷಣಕ್ಕೆ ಬೈಲುಕುಪ್ಪೆ ಪರಿಸರಕ್ಕೆ ಕಳುಹಿಸುತ್ತಾರೆ. ಅಲ್ಲಿ ಇವರಿಗೆ ವಸತಿ ನಿಲಯದ ವ್ಯವಸ್ಥೆ ಇದೆ. ಜೆ . ಟಿ . ಟಿ.ಎನ್ . ನೆ ಸಂಸ್ಥೆ, ಡೊನೆಡೀನ್ ಲೈನ್ ಪ್ಯಾನ್ ತೇಲಿ ಅಸ್ಪತ್ರೆ ಇದ್ದು. ಇದರಲ್ಲಿ ಪರಿಸರದ ಎಲ್ಲರಿಗೂ ಅರೋಗ್ಯದ ಬಗ್ಗೆ ಉಚಿತ ತಪಾಷಣೆ ಮಾಡಲಾಗುತ್ತದೆ ಹಾಗೂ ಟಿಬೆಟಿಯನ್ನರ ಮೂಲ ನೈಸರ್ಗಿಕ ಔಷಧಿಯನ್ನು ನೀಡಲಾಗುತ್ತದೆ. ನಂತರ ಇಲ್ಲಿನ ಪ್ರಮುಖ ದೇವಾಲಯಗಳಾದ “ಡ್ರೋಚೆನ್ ದೇವಾಲಯ (Dzogehen monastory), ಚೊಕೋರ್‌ಲಿಂಗ್ ದೇವಾಲಯ (chokhonling monastory), ತೊಸೀಡ್ರೊಗ್ಯೆಲ್ ದೇವಾಲಯ (Tashildhargyal monostery) ಮತ್ತು ಗಾಡಿಯನ್ ಕಚಿಯಾ ದೇವಾಲಯ (goden kachoemonestery) ಹಾಗೂ ತಾರಾದೇವಿ ದೇವಾಲಯ ಎಂಬ ಐದು ದೇವಾಲಯಗಳನ್ನು ಹೊಂದಿದೆ.

ಎಲ್ಲಾ ಭೂ ಪ್ರದೇಶವು ಒಡಯರಪಾಳ್ಯೆದಿಂದ ಬಸವನಗುಡಿ ಗ್ರಾಮದವರೆಗೂ ಹಬ್ಬಿಕೊಂಡಿದೆ. ಒಂದು ಕ್ಯಾಂಪ್ ಪ್ರದೇಶದಿಂದ ಮತ್ತೊಂದು ಕ್ಯಾಂಪ್ ಪ್ರದೇಶಗಳಿಗೂ ೨ ರಿಂದ ೩ ಕಿ.ಮೀ ದೂರದಲ್ಲಿ ನಿರ್ಮಿಸಿಕೊಂಡಿದ್ದು. ಸುತ್ತಲು ಕೃಷಿಭೂಮಿಯನ್ನು ಒಳಗೊಂಡಿದೆ ಪ್ರತಿಯೊಂದು ದೇವಾಲಯದ ಪಕ್ಕದಲ್ಲಿ ೧ ರಿಂದ ೮ ಸ್ತೂಪಗಳನ್ನು ಒಳಗೊಂಡಿದೆ ಇವುಗಳಲ್ಲಿ ಮೂರು ದೇವಾಲಯಗಳು ಪ್ರಮುಖವಾಗಿ ಗುರುತಿಸಿ ಕೊಂಡಿವೆ ಅವುಗಳೆಂದರೆ. ಒಡೆಯರ ಪಾಳ್ಯೆ ಸಮೀಪದಲ್ಲಿರುವ ೧ನೇ ಕ್ಯಾಂಪಿನಲ್ಲಿ ಇರುವ ಡ್ರೋಚೆನ್ ದೇವಾಲಯವು ದಲೈಲಾಮನ ಅರಮನೆಯ ಕಟ್ಟಡದ ಪಕ್ಕ ಹಾಗೂ ಕೇಂದ್ರಿಯ ಕಛೇರಿಯ ಸಮೀಪದಲ್ಲಿದೆ. ಈ ದೇವಾಲಯವು ಚೌಕ ಅಕಾರದಿಂದ ಕಟ್ಟಿದ್ದು ಒಂದೇ ಅಂತಸ್ತಿನದಾಗಿದ್ದು, ಎದುರು ಬಾಗಿಲಿನ ಗೋಡೆಯ ಎಡ ಹಾಗೂ ಬಲ ಭಾಗದಲ್ಲಿ ಟಿಬೆಟಿಯನ್ನರ ದಿಕ್ಪಾಲಕರ ಚಿತ್ರಗಳನ್ನು ಹೊಂದಿದೆ ಹಾಗೂ ಜನ್ಮ ಮತ್ತು ಮುಕ್ತಿಯ ಮಂಡಲ ಭಿತ್ತಿಚಿತ್ತಗಳನ್ನು ಕಾಣಬಹುದು. ದೇವಾಲಯದ ಒಳ ಭಾಗದಲ್ಲಿ ಯಾವುದೇ ವಿಗ್ರಹವು ಪ್ರತಿಷ್ಠಾಪಿಸಿದ ಬುದ್ಧನ ಕಂಚಿನ ವಿಗ್ರಹವನ್ನು ಪ್ರತಿಸ್ಥಾಪಿಸಲು ಬಿಡಿಭಾಗಗಳನ್ನು ಧರ್ಮಶಾಲೆಯಿಂದ ನುರಿತ ಕಲಾವಿದರಿಂದ ತಯಾರಿಸಿ ತಂದಿದ್ದಾರೆ. ಅದನ್ನು ಜೋಡಿಸಿ ಶಿಲ್ಪ ನಿರ್ಮಿಸುವ. ಕೆಲಸ ಅರಂಭಿಸಬೇಕಾಗಿದೆ.

ಈ ಪರಿಸರದಲ್ಲಿ ಕಬ್ಬಿಣದ ದ್ವಾರಬಾಗಿಲು ನಿರ್ಮಿಸಿದ್ದು ಅವುಗಳ ಮೇಲೆ ಭಿತ್ತಿಗಳಾದ ಟಿಬೆಟಿಯನ್ನು ಶ್ರೇಷ್ಠ ಚಿನ್ನೆಯನ್ನು ಚಿತ್ರಿಸಿದ್ದು. ದೇವಾಲಯದ ಹೊರ ವಲಯದ ರಸ್ತೆಯ ಮೇಲೆ ಅನೇಕ ಭಿತ್ತಿಚಿತ್ರವನ್ನು

ರೇಖಾಪ್ರಧಾನವಾಗಿ ರಚಿಸಿದ್ದಾರೆ, ಬಲಭಾಗಕ್ಕೆ ಬೌದ್ಧವಿಹಾರವಿದ್ದು. ಎಡಭಾಗದಲ್ಲಿ ಎಂಟು ಸ್ತೂಪಗಳನ್ನು ಹಾಗೂ ಅವುಗಳ ಮೇಲೆ ಭಿತ್ತಿಚಿತ್ರಗಳ ಅಲಂಕಾರಿಕ ನಕ್ಷೆಗಳನ್ನು ಕಾಣಬಹುದು. ಇದೇ ರೀತಿ ದೇವಾಲಯದ ಕಂಬದ ಪಟ್ಟಿಕೆ ಛಾವಣಿಯಲ್ಲಿ ಬಾಗಿಲಿನಲ್ಲಿ ನೋಡಲು ಸಿಗುತ್ತವೆ. ಈ ಪರಿಸರಕ್ಕೆ ದೇವಾಲಯವೆ ದೊಡ್ಡದಾಗಿದೆ ಈ ದೇವಾಲಯವು ಪ್ರಾರ್ಥನ ಮಂದಿರವಾಗಿ ಬೌದ್ಧಲಾಮಗಳು ಹಾಗೂ ಅಲ್ಲಿನ ಟಿಬೆಟಿನ ಜನರು ಬಳಸುತ್ತಿದ್ದಾರೆ. ಎರಡನೇ ದೇವಾಲಯವು ೨ನೇ ಕ್ಯಾಂಪಿನಲ್ಲಿ ನಿರ್ಮಾಣಗೊಂಡಿದೆ, ತೊಸೀಡ್ರೊಗ್ಯೆ ದೇವಾಲಯ ಇದು ಮಂಜುಶ್ರೀಯ ಶಿಲ್ಪವನ್ನು ಹೊಂದಿದ ದೇವಾಲಯವಾಗಿದ್ದು. ಇಲ್ಲಿಯ ಸಹ ಅಲಂಕಾರಿಕ ನಕ್ಷಾ ಚಿತ್ರಗಳು ಪ್ರಮುಖವಾಗಿದ್ದು. ಪಟಚಿತ್ರಗಳಿದ್ದು ಯಾವುದೇ ರೀತಿಯ ವಸ್ತುವಿಷಯದ ಭಿತ್ತಿಚಿತ್ತಗಳು ದೂರೆತಿಲ್ಲ ಇದೀಗ ನಿರ್ಮಿಸುತ್ತಿದ್ದು. ಪಕ್ಕದಲ್ಲಿ ೮ ಸ್ತೂಪಗಳನ್ನು ಸಿಮೇಂಟಿನಿಂದ ನಿರ್ಮಿಸುತ್ತಿದ್ದಾರೆ ಇಲ್ಲಿನ ಸ್ತೂಪಗಳ ನಿರ್ಮಾಣಮಾಡಲು ಧರ್ಮಶಾಲೆ ಮತ್ತು ಟಿಬೆಟಿನಿಂದ ಕಲಾವಿದರನ್ನು ಕರೆಸಿಕೊಂಡಿದ್ದಾರೆ. ಇವರೆಲ್ಲರು ಗುರು ಕುಲಮಾದರಿಯ ಕಲಾ ಶಿಕ್ಷಣ ಪಡೆದವರಾಗಿದ್ದಾರೆ, ಇವರಲ್ಲಿ ಲಾಮಗಳು ಸಹ ಇದ್ದಾರೆ.

ಮೂರನೇ ದೇವಾಲಯವು ಗಾಡಿಯನ್ ಕಂಚೀಯಾ ದೇವಾಲಯವಾಗಿದ್ದು. ಯಾಮಂತಕ ದೇವರ ವಿಗ್ರಹವನ್ನು ಹೊಂದಿದ್ದು. ಚಿಕ್ಕಿ ಪುಟ್ಟ, ಬುದ್ಧ, ಮೈತ್ರಿಯಾ, ಪದ್ಮಸಂಭವ, ಮಂಜುಶ್ರೀ ವಿಗ್ರಹಗಳಿದ್ದು. ದೇವಾಲಯದ ಒಳಭಾಗದಲ್ಲಿ ಅನೇಕ ಪಟಚಿತ್ರಗಳಿವೆ, ದೇವಾಲಯದ ಹೊರಭಾಗದಲ್ಲಿ ಬರಿಕಂಬಗಳು ಮತ್ತು ಪಟ್ಟಿಕೆಗಳಲ್ಲಿ ಇನ್ನುಳಿದ ದೇವಾಲಯಗಳಲ್ಲಿ ದೇವರ ಪೋಟೋಗಳನ್ನಿಟ್ಟು ಪೂಜಿಸುತ್ತಿದ್ದಾರೆ. ಅದೇ ರೀತಿ ತಾರಾದೇವಿಯ ದೇವಾಲಯದಲ್ಲಿಯು ಪೋಟೋಗಳಿಗೆ ಪೂಜೆಯನ್ನು ಹಾಗೂ ಪ್ರಾರ್ಥನೆಯನ್ನು ಸಲ್ಲಿಸುತ್ತಿದ್ದಾರೆ. ಇದರಲ್ಲಿ ೨೫ ರಿಂದ ೩೫ ಜನಸಂಖ್ಯೆವುಳ್ಳ ಬುಡ್ಡ ಬುಡ್ಡಿ ವೃದ್ಧರ ಪ್ರಾರ್ಥನ ಮಂದಿರವಾಗಿದೆ, ಪರಿಸರದಲ್ಲಿ ವಿಶೇಷವಾಗಿ ಪಂಚಭೂತಗಳ ಬಾವುಟದ ಚಿತ್ರಕಲೆಯನ್ನು ಸಹ ಹೆಚ್ಚಾಗಿ ಕಾಣಬಹುದು. ಕರ್ನಾಟಕದ ಮಿಕೆಲ್ಲ ಪರಿಸರಕ್ಕಿಂತ ಚಿಕ್ಕಿ ಸಾಂಸ್ಕೃತಿಕ ಪರಿಸರವನ್ನು ಹಾಗೂ ಬೌದ್ಧಧರ್ಮದ ಚಟುವಟಿಕೆಯನ್ನು ಹೊಂದಿದ ಪ್ರದೇಶ ಇತ್ತೀಚೆಗೆ ಟಿಬೆಟಿನಿಂದ ವಲಸೆ ಬಂದ ಲಾಮಗಳು ಹಾಗೂ ಸಾಮನ್ಯ ಟಿಬೆಟಿನ ಜನರನ್ನು ಇಲ್ಲಿಗೆ ಕರೆಸಿಕೊಳ್ಳುತ್ತಿದ್ದಾರೆ.

ಕೊರಮಂಗಲ ಪರಿಸರ

ಕೊರಮಂಗಲವು ಬೆಂಗಳೂರು ಜಿಲ್ಲೆಯ ಒಂದು ಭಾಗ. ಬ್ರಿಟೀಷ್ ಕಮೀಷನರ್ ಮೈಸೂರು ರಾಜರಿಂದ ಮೈಸೂರು ರಾಜ್ಯದ ಅಡಳಿತವನ್ನು ವಹಿಸಿಕೊಂಡ ನಂತರ ಅಂದರೆ ಕ್ರಿ,ಶ,೧೮೩೧ ರಿಂದ ಬೆಂಗಳೂರಿಗೆ ರಾಜಧಾನಿ ಸ್ಥಾನಲಭಿಸಿತು. ಹಿಂದೆ ಬೆಂಗಳೊರು ವಿಜಯನಗರ ಸಾಮ್ರಾಜ್ಯದ ಅಧೀನದಲ್ಲಿ ಆಳ್ವಿಕೆ ನಡೆಸುತ್ತಿದ್ದ ಯಲಹಂಕ ನಾಡ ಪ್ರಭುಗಳ ಕೇಂದ್ರ ಸ್ಥಾನವಾಗಿತ್ತು. ಒಂದನೇ ಕೆಂಪೇಗೌಡರು ವಿಜಯನಗರದ ಸಾಮ್ರಾಟ್ ಅಚ್ಚುತರಾಯನ ಅದೇಶದ ಪ್ರಕಾರ ಕ್ರಿ.ಶ.೧೫೩೭ರಲ್ಲಿ ಕೋಟೆಯನ್ನು ರಚಿಸಿದರೆಂಬುದು. ಜನಜನಿತವಾದ ವಿಚಾರವಾಗಿದೆ. ದೇಶದಾದ್ಯಂತ ಗಮನಸೆಳೆವ ವಿಧಾನ ಸಭಾ ಕಟ್ಟಡ ಅತ್ಯಂತ ಅಕಷಣಿಯ ಕಬ್ಬನ್‌ಪಾರ್ಕ, ಲಾಲ್ ಬಾಗ್, ಗಾಜಿನ ಮನೆ, ಟಿಪ್ಪು ಅರಮನೆ, ಗಾಂಧಿಭವನ, ಬೆಂಗಳೂರು ಅರಮನೆ, ರಾಮಾಂಜನೇಯ ದೇವಸ್ಥಾನ, ಕೋಟೆ ವೆಂಕಟ್ರಮಣ ದೇವಸ್ಥಾನ, ಗವಿ ಗಂಗಾಧರೇಶ್ವರ ದೇವಾಸ್ತಾನ, ಶೃಂಗೇರಿಮಠ, ಗಾಳಿಅಂಜನೇಯ, ರಾಜರಾಜೇಶ್ವರಿ ದೇವಸ್ಥಾನ ಇತ್ಯಾದಿ ಅನೇಕ ಪ್ರೇಕ್ಷಣಿಯ ಸ್ಥಳಗಳನ್ನು ಬೆಂಗಳೂರು ಒಂದಿದೆ. ೨೧೯೦ ಚ.ಕಿ.ಮೀಟರ್

ವಿಸ್ತೀರ್ಣ ಹೊಂದಿದ್ದು ೬೫.೩೭ ಲಕ್ಷ ಜನಸಂಖ್ಯೆ ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಅನೇಕಲ್ ಎಂಬ ಮೂರು ತಾಲ್ಲುಕುಗಳನ್ನು ಹೊಂದಿದ್ದು, ಬೆಂಗಳೂರು ನಗರದ ಕೊರಮಂಗಲದಲ್ಲಿನ ಪ್ರದೇಶದಲ್ಲಿ ಟಿಬೆಟಿಯನ್ನರು ತನ್ನದೇಯಾದ ಜಾಗದಲ್ಲಿ ೧೯೬೧ರಲ್ಲಿ ಕೇಂದ್ರಿಯ ಕಛೇರಿಯ ಭವನವನ್ನು ಕಟ್ಟಿಕೊಂಡು ಕರ್ನಾಟಕದ ನಾಲ್ಕು ನೆಲೆಯಲ್ಲಿನ ಟಿಬೆಟಿನ ಪರಿಸರದ ಅಡಳಿತವನ್ನು ನೋಡಿಕೊಳ್ಳುತ್ತಿದ್ದರೆ. ಇದಕ್ಕೆ ಒಬ್ಬ ಅಡಳಿತಾಧಿಕಾರಿಯಾಗಿದ್ದು ಕರ್ನಾಟಕಕ್ಕೆ ಬರುವ ಟಿಬೆಟಿಯನ್ನರ ಗಣತಿ, ಅರ್ಥಿಕ ವ್ಯವಸ್ಥೆಮಾಡುವುದು ಹಾಗೂ ನೆಲೆಗಳಲ್ಲಿರುವ ಉಪ ಅಡಳಿತ ಕಛೇರಿಗಳಿಗೆ ಮಾಹಿತಿ ಒದಗಿಸುವ ಇತ್ಯಾದಿ ಸಹಕಾರಿ ಸಹಾಯವನ್ನು ನೋಡಿಕೂಳ್ಳುವ ಕಾರ್ಯವನ್ನು ಮಾಡುತ್ತದೆ. ಇಲ್ಲಿನ ಪರಿಸರದಲ್ಲಿ ಲಾಮ ಮಕ್ಕಳಿಗೆಯಾದ ಬೌದ್ಧ ವಿಹಾರವನ್ನು ನಿರ್ಮಿಸಿದ್ದು, ಎರಡು ಸ್ತೂಪ, ಒಂದು ಪ್ರಾರ್ಥನಾ ಮಂದಿರ, ಎರಡು ಹೆಬ್ಬಾಗಿಲುಗಳು, ಕರಕುಶಲ ಕೇಂದ್ರವನ್ನು ಹೊಂದಿದೆ. ಇಲ್ಲಿ ಯಾವುದೆ ಭಿತ್ತಿಚಿತ್ರಗಳು ವಿಶಿಷ್ಟವಾಗಿ ಕಂಡುಬರುವುದಿಲ್ಲ, ಸೂಮಾರು ೧೫೦ ಲಾಮಗಳು ಇದ್ದು ತಾಂತ್ರಿಕ ವಿದ್ಯಾಭ್ಯಾಸವನ್ನು ನಡೆಸುತ್ತಾರೆ. ಎಲ್ಲಾ ನೆಲೆಗಳಿಗಿಂತಲು ಚಿಕ್ಕ ಸಾಂಸ್ಕೃತಿಕ ಚಟುವತಿಕೆಯನ್ನು ಹೊಂದಿದ ಕೇಂದ್ರವಾಗಿದೆ ಎಂದು ಹೇಳಬಹುದು. ನಮ್‌ಗೆಲ್ ಕಲಾವಿದರಚಿಸಿದ ಲಾಸದ ಅರಮನೆಯ ಚಿತ್ರವನ್ನು ಕಾಣಬವುದು. ಇದನ್ನು ತೈಲ ವರ್ಣದಿಂದ ರಚಿಸಿದ್ದಾರೆ. ಪ್ರಾರ್ಥನ ಮಂದಿರದಲ್ಲಿ ಅನೇಕ ಬೌದ್ಧದ ದೇವರುಗಳ ಪೋಟೂಕ್ಕೆ ಪೊಜೆಸಲಿಸುತ್ತಾರೆ. ಇದೆ ಇಲ್ಲಿನ ವಿಷಯವಾಗಿದೆ.

ಮುಂಡಗೋಡ ಪರಿಸರ

ಮುಂಡಗೋಡವು ಉತ್ತರಕನ್ನಡ ಜಿಲ್ಲೆಯ ಒಂದು ಭಾಗ. ಸಾತವಾನರು ರಚಿಸಿದ ಕಟ್ಟಡದ ಅವಶೇಷಗಳು ಈ ಜಿಲ್ಲೆಯಲ್ಲಿ ದೊರೆತಿರುವುದರಿಂದ ಸಾತವಾಹನರ ಆಧಿಪತ್ಯಕ್ಕೆ ಈ ಜಿಲ್ಲೆ ಒಳಗಾಗಿತ್ತು ಎಂಬುದಾಗಿ ಊಹಿಸಲಾಗಿದೆ. ಕಾಂಚೀಪುರದ ಪಲ್ಲವರು, ಬನವಾಸಿಯ ಚುರು ವಂಶದವರು, ಗೋವೆಯ ಚಂದೋರರು ಈ ಜಿಲ್ಲೆಯನ್ನು ಅಳಿದರೆಂದು ಕಂಡುಬಂದಿದೆ. ಅಮೇಲೆ ಬನವಾಸಿಯ ಕದಂಬರು ಆಳಿರುತ್ತಾರೆ. ೬ನೆ ಶತಮಾನದಲ್ಲಿ ಈಜಿಲ್ಲೆ ಬಾದಾಮಿಯ ಚಾಲುಕ್ಯರ ವಶವಾಗಿತ್ತು. ಚಾಲುಕ್ಯರ ನಂತರ ' ರಾಷ್ತ್ರಕೂಟರು ದೊರೆಗಳಾಗಿದ್ದರು. ಕ್ರಿ. ಶ. ೧೭೬೪ರಲ್ಲಿ ಹೈದರಾಲಿಯ ವಶವಾದುದು ಚರಿತ್ರೆಯಿಂದ ತಿಳಿದು ಬರುತ್ತದೆ. ಕ್ತಿ.ಶ. ೧೭೯೯ರಲ್ಲಿ ಟಿಪ್ಪುವಿನ ಅವಸಾನವಾದ ಬಳಿಕ ಬ್ರಿಟೀಷರಿಂದ ಉತ್ತರ ಕನ್ನಡ ಪ್ರಾಂತ್ಯಗಳು ಸೇರಿ ಕೆನರಾ ಜಿಲ್ಲೆಯಾಯಿತು. ಶಿರಸಿಯ ಮಾರಿಕಾಂಬಾ ದೇವಿಯ ಮೂರ್ತಿಯು ಮರದಿಂದ ನಿರ್ಮಿತವಾಗಿದ್ದು ಅಕರ್ಷಣೀಯವಾಗಿದೆ.[೧೩] ಎರಡು ವರ್ಷಗಳಿಗೊಮ್ಮೆ ಇಲ್ಲಿ ಜಾತ್ರೆ ನಡೆಯುತ್ತದೆ. ಲಕ್ಷಕ್ಕೂ ಮೀರಿ ಭಕ್ತರು ಜಾತ್ರಯಲ್ಲಿ ಭಾಗವಹಿಸುತ್ತಾರೆ. ಶಿರಸಿ ಮಾರಿಕಾಂಬ ಜಾತ್ರೆ ಅತ್ಯಂತ ಪ್ರಸಿದ್ದಿಯನ್ನು ಪಡೆದಿದೆ. ಬನವಸಿಯ ಹತ್ತಿರದ ಕಂತ್ರಾಜಿ ಎಂಬಲ್ಲಿ ಶಿಲಾಯುಗದ ಮಡಕೆ ಚೂರುಗಳು ದೊರೆತಿವೆ.

ಹಾಲಕ್ಕಿ ಒಕ್ಕಲ ಬುಡಕಟ್ಟಿನ ಜನರು ಈ ಜಿಲ್ಲೆಯಲ್ಲಿರುವುದು ಒಂದು ವಿಶೇಷವಾಗಿದೆ. ೧೦೨೯೧ ಚ. ಕಿ. ಮೀಟರ್ ವಿಸ್ತೀರ್ಣ ಹೊಂದಿದ್ದು ೧೩.೫೪ ಲಕ್ಷ ಜನಸಂಖ್ಯೆ ಹೊಂದಿದ್ದು. ಕಾರವಾರ, ಸೂಪಾ, ಹಳಿಯಾಳ, ಯಲ್ಲಾಪುರ, ಮುಂಡಗೋಡ, ಶಿರಸಿ, ಸಿದ್ದಾಪುರ, ಭಟ್ಕಳ, ಹೊನ್ನಾವರ,

೧೩. ಕೆ. ಅನಂತರಾಮರಾವ್: ಕರ್ನಾಟಕ ದರ್ಶನ: ಪು.ಸಂ. ೨೮

ಕುಮಟ, ಅಂಕೋಲಾ ಸೇರಿ, ೧೧ ತಾಲೂಕುಗಳನ್ನೊಳಗೊಂಡಿದೆ. ಭತ್ತ, ಅಡಿಕೆ, ತೆಂಗು, ಕಾಫಿ, ಕಬ್ಬು, ಮುಖ್ಯ ಬೆಳೆಗಳು, ಶರಾವತಿ, ಬೇಡ್ತಿ, ಕಾಳಿ ಅಘನಾಶಿನೀ, ಶಾಲ್ಮಲಾ ಎಂಬ ನದಿಗಳು ಹರಿಯುವ ಪರಿಸರವಾಗಿದ್ದು.

ಇಲ್ಲಿನ ಪ್ರೇಕ್ಷಣಿಯ ಸ್ಥಳಗಳು ಹೆಚ್ಚಾಗಿ ಧಾರ್ಮಿಕ ಮನೋಭಾವ ಪರಿಪಕ್ವಗೊಂಡಿದ್ದು ಗೋಕರ್ಣ, ಮುರುಡೇಶ್ವರ, ಸೋಂದಾಮಠ, ದೇಗುಲಗಳು, ಶಿರಸಿ ಮಾರಿಕಾಂಬ ದೇವಸ್ಥಾನ, ಕಾರವಾರದ ಕಡಲ ಕಿನಾರೆ, ಅಣಶಿ ರಾಷ್ಟ್ರಿಯ ಉದ್ಯಾನ, ದಾಂಡೇಲಿ ವನ್ಯಮೃಗ ಧಾಮ, ಮಾಗೋಡು ಜಲಪಾತ, ಲಾಲ್‌ಗುಳಿ ಜಲಪಾತ, ಬನವಾಸಿ, ಸದಾಶಿವಗಡ, ಮೈಲೆ ಮನೆ ಜಲಪಾತ, ಯಾಣ, ಉಳವಿ ಮೂದಲಾದವು ಹೃದಯಂಗಮ ಸ್ಥಳಗಳಾಗಿವೆ, ಕುದ್ರೋಳಿ ಗೋಕರ್ಣದ ದೇವಸ್ಥಾನ, ಹಾಗೂ ಇತ್ತಿಚಿಗೆ ನಿರ್ಮಾಣಗೊಂಡ ಮುಂಡಗೋಡದ ಟಿಬೆಟಿನ ಬೌದ್ಧಧರ್ಮಕ್ಕೆ ಸಂಬಂಧಿಸಿದ ಬೌದ್ಧ ದೇವಾಲಯಗಳು. ಸ್ತೂಪಗಳು ಹಾಗೂ ವಿಹಾರಗಳನ್ನು ಕಾಣಬಹುದು. ಅಂದಿನಿಂದ ಇಂದಿನವರೆಗೂ ಬೌದ್ಧಧರ್ಮದ ಸಹ ಸಂಬಂಧ ನಿರಂತರವಾಗಿ ಇರಲು ಈ ಸಾಂಸ್ಕೃತಿಕ ಪರಿಸರ ಉತ್ತೇಜನ ನೀಡುತ್ತಾ ಬಂದಿದೆ.

ಇಂಥಹ ಪರಿಸರದಲ್ಲಿನ ತಟ್ಟಹಳ್ಳಿ ಗ್ರಾಮದ ಮುಂಡಗೋಡದಲ್ಲಿ ತನ್ನದೆಯಾದ ಆರು ಕ್ಯಾಂಪ್‌ಗಳನ್ನು ೧೯೭೩ರಲ್ಲಿ ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆ. ಈ ಪ್ರದೇಶವು ವ್ಯವಸಾಯಕ್ಕೆ ಯೋಗ್ಯವಾದ, ಸಮತ್ತಟ್ಟಾದ ಭೂಪ್ರದೇಶವನ್ನು ಹೊಂದಿದ್ದು ೨೦೦೦ ಏಕರೆ ಭೂಪ್ರದೇಶದಲ್ಲಿ ಟಿಬೆಟಿಯನ್ನರ ದೇವಾಲಯ, ಬೌದ್ಧವಿಹಾರ ಹಾಗೂ ಮನೆಗಳನ್ನು ನಿರ್ಮಿಸಿಕೊಂಡು, ಇನ್ನಿತರ ವ್ಯಾಪಾರಿಮಳಿಗೆ, ಸಂಘ, ಸಂಸ್ಥೆಗಳ ಕಛೇರಿ ನಿರ್ಮಿಸಿಕೊಂಡು ಉಳಿದ ಭಾಗವನ್ನು ತಲಾ ಒಂದು ಮತ್ತು ಎರಡು ಏಕರೆಯವರೆಗೆ ವ್ಯಾವಸಾಯಕ್ಕೆ ಬಳಸಿಕೊಂಡಿದ್ದಾರೆ. ಇದರಲ್ಲಿ ಭತ್ತ, ಜೋಳ, ತೆಂಗು, ಹಲಸು, ಹಾಗೂ ಹೈನುಗಾರಿಕೆಯನ್ನು ಮಾಡಿಕೊಂಡು ಜೀವನವನ್ನು ನಡೆಸುತ್ತಿದ್ದಾರೆ. ತಮ್ಮ ಹೆಚ್ಚಿನ ಅಗತ್ಯವಸ್ತುಗಳನ್ನು ಕೊಂಡುಕೊಳ್ಳಲು ಪಕ್ಕದಲ್ಲಿ ಇರುವ ಮುಂಡಗೋಡದಲ್ಲಿ ಪಡೆದುಕೊಳ್ಳುತ್ತಾರೆ. ೩ನೇ ಹಾಗೂ ೨ ನೇ ಕ್ಯಾಂಪುಗಳಲ್ಲಿ ಹೆಚ್ಚು ಸಂಖ್ಯೆ ಜನರನ್ನು ಹೊಂದಿದ್ದು. ವಿಶೇಷವಾದ ಬೌದ್ಧವಿಹಾರ; ದೇವಾಲಯಗಳನ್ನು ,ಸ್ತೂಪಗಳು, ಕರಕುಶಲ ವ್ಯಾಪಾರಿ ಕಛೇರಿ ಮಳಿಗೆಗಳು ಹಾಗೂ ಕೆಲವು ವಿಶ್ವವಿದ್ಯಾಲಯಗಳು, ಪ್ರಾಥಮಿಕ ಶಾಲೆಗಳನ್ನು ಹೊಂದಿರುವುದನ್ನು ಕಾಣಬಹುದು.

ಒಂದನೇ ಕ್ಯಾಂಪಿನಿಂದ ಪರಿಸರವನ್ನು ಪ್ರವೇಶಿಸಿದರೆ ದೊಡ್ಡದಾದ ದ್ವಾರಬಾಗಿಲು ಕಾಣಿಸುತ್ತದೆ. ಅದರ ಮೇಲೆಲ್ಲ ಟಿಬೆಟಿನ ಶ್ರೇಷ್ಠ ಚಿನ್ನೆಗಳ ಭಿತ್ತಿಚಿತ್ರಗಳು ಹಾಗೂ ಸುಂದರವಾದ ಅಲಂಕಾರಿಕ ನಕ್ಷೆಗಳನ್ನು ಕಾಣಬಹುದು. ಬಲ ಬದಿಗೆ ಒಂದು ಗಾಂದೀನ್ ಸಾಜಿ ಮಾನೂಸ್ಟಿಕ್ (ದೇವಾಲಯ) ಹಾಗೂ ಒಂದೂ ಸ್ತೂಪವಿರುವುದನ್ನು ಕಾಣಬಹುದು. ಇದರ ಒಳ ಪ್ರವೇಶಿಸುತಿದ್ದಂತೆ ಬೌದ್ಧಲಾಮಗಳು ಪ್ರಾರ್ಥನೆ ಮಾಡುತ್ತಿರುವ ದೃಶ್ಯ ೩ ಪ್ರಧಾನ ಮೂರ್ತಿಗಳನ್ನು ಒಳಗೊಂಡಿದೆ. ದೇವಾಲಯವು ಎರಡು ಅಂತಸ್ತು ಹೊಂದಿರುತ್ತದೆ ಮೇಲಿನ ಅಂತಸ್ಥಿನಲ್ಲಿ ದೇವಾಲಯವಾಗಿದೆ. ಅಲ್ಲಿ ಪಟಚಿತ್ರಗಳು ಹಾಗೂ ದೇವಾಲಯದ ಹೊರ ಗೂಡೆಯ ಮೇಲೆ ಭಿತ್ತಿಚಿತ್ರಗಳನದನು ನಾಲ್ಕು ದೊಡ್ಡ ಅಳತೆಯಲ್ಲಿ ನೋಡಬಹುದು. ದೇವಾಲಯದ ಮುಂದಿನ ರಸ್ತೆಗಳ ಮೇಲೆ ಭಿತ್ತಿಚಿತ್ತಗಳು ನೋಡಲು ಸಿಗುತ್ತವೆ. ಇದರ ಎದುರಿನ ಭಾಗದಲ್ಲಿ ಪ್ರಾರ್ಥನ ಮಂದಿರವನ್ನು ಕಾಣಬಹುದು. ಇದರ ಬಲ ಮತ್ತು ಎಡಭಾಗದಲ್ಲಿ

ಬೌದ್ಧವಿಹಾರಗಳು ಇದ್ದು. ಇದರಲ್ಲಿ ಬೌದ್ಧ ಸನ್ಯಾಸಿಗಳ ವಸತಿಗೃಹಗಳಾಗಿದ್ದು ಬೌದ್ಧಧರ್ಮ ಅಧ್ಯಯನ ಮಾಡಲು ಬರುವಂತಹವರಿಗೆ ವ್ಯವಸ್ಥೆ ಮಾಡಲಾಗಿದೆ. ಈ ಪ್ರಾರ್ಥನ ಮಂದಿರದ ಹಿಂಭಾಗಕ್ಕೆ ಹೊರಟರೆ ಸಕ್ ಗಾಂದೀ ನಂಬರ್ ಗೇ ಪುಂಗ್ ದೇವಾಲಯವನ್ನು ಎರಡು ಅಂತಸ್ತಿನಲ್ಲಿ ನಿರ್ಮಿಸಿದ್ದಾರೆ. ಇದರ ಒಳಭಾಗದಲ್ಲಿ ೩ ಪ್ರಧಾನ ಮೂರ್ತಿ ನಿರ್ಮಾಣ ಕಾರ್ಯವು ಅರಂಭವಾಗಿದ್ದು ಹಿನ್ನೆಲೆಯ ಗೋಡೆಯ ಮೇಲೆ ೪-೫ ಕಲಾವಿದರು ಭಿತ್ತಿ ಚಿತ್ರವನ್ನು ಬಿಡಿಸುತ್ತಿರುವುದು ಕಾಣಲಾಗಿದೆ. ಇವರು ಮೂಲ ಧರ್ಮಶಾಲೆ ಹಾಗೂ ನೇಪಾಳದ ಕಲಾವಿದರೆಂದು ತಿಳಿದು ಬರುತ್ತದೆ. ಈ ದೇವಾಲಯದ ತಳ ಅಂತಸ್ಥಿನಲ್ಲಿ ಪ್ರಾರ್ಥನೆಗೆ ಬಳಸಿಕೊಳ್ಳಲಾಗುತ್ತದೆ. ನಂತರ ಇದರ ಪಕ್ಕದ ಬೀದಿಗೆ ಹೋಗುವಾಗ ಒಂದು ದೊಡ್ಡ ಪ್ರಾರ್ಥನ ಮಂದಿರವನ್ನು ಕಾಣಬಹುದು. ಇದರಲ್ಲಿ ೧೭೬೦ ಚಿಕ್ಕ ಮಂಜುಶ್ರೀ ಮೂರ್ತಿಗಳು ಹಾಗೂ ೩ ಪ್ರಧಾನ ಮೂರ್ತಿಗಳನ್ನು ಕಾಣಬಹುದು. ಅವುಗಳೆಂದರೆ ಬುದ್ಧ. ಮಂಜುಶ್ರೀ, ಅಮೀತಾಬ್‌ರ ಮೂರ್ತಿಗಳು. ಇದರ ಮುಂದಿನ ಪ್ರಾಂಗಣವನ್ನು ಪ್ರಾರ್ಥನೆಗೆ ಬಳಸುತ್ತಾರೆ. ಈ ದೇವಾಲಯದಲ್ಲಿ ಯಾವುದೇ ಭಿತ್ತಿ ಚಿತ್ರಗಳಿರುವುದಿಲ್ಲ ಈಗೆ ಪ್ರಧಾನ ರಸ್ತೆಯಲ್ಲಿ ಸಂಚರಿಸುತ್ತಿದ್ದರೆ ಗಾಡೇನ್ ಶಾರ್ಟ್ಸ್ ಕರ ಕುಶಲ ವಸ್ತುಗಳ ತಯಾರಿಕಾ ಕೇಂದ್ರವಿದೆ. ನಂತರ ಗಾಡೇನ್ ಟಿಬೆಟಿನ ಬೌದ್ಧ ವಿಶ್ವವಿದ್ಯಾಲಯವಿದ್ದು ಇದನ್ನು ದಲೈಲಾಮರವರು ಡಿಸೆಂಬರ್ ೨೧ ನೇ ತಾರೀಖು ೧೯೮೬ರಲ್ಲ ಪ್ರಾರಂಭಿಸಿದರು.

ಮುಂದಿನ ೩ನೇ ಕ್ಯಾಂಪ್ ಪ್ರವೇಶಿಸುತ್ತಿದ್ದಂತೆ ಲೊಸ್‌ಲಿಂಗ್ ಅಡಳಿತ ಕಛೇರಿ ಸಿಗುತದೆ. ಇಲ್ಲಿನ ಪರಿಸರದ ಎಲ್ಲಾ ಕ್ಯಾಂಪ್‌ಗಳ ಅಡಳಿತ ವ್ಯವಸ್ಥೆ ನಡೆಸುತ್ತಾರೆ. ಇದರ ಅಕ್ಕ ಪಕ್ಕದಲ್ಲಿ ಸಿಂಡಿಕೇಟ್ ಬ್ಯಾಂಕ್, ಟಿಬೆಟಿಯನ್ನರ ಸಂಘ ಸಂಸ್ಥೆಗಳನ್ನು ಕಾಣಬಹುದು. ಸ್ವಲ್ಪ ಮುಂದೆ ಪ್ರವೇಶಿದರೆ ಕರಕುಶಲ ವಸ್ತುಗಳ ಮಾರಟ ಮಳಿಗೆಗಳನ್ನು ಕಾಣಬಹುದು. ಇವುಗಳಲ್ಲಿ ಟಿಬೆಟಿಯನ್ನರ ಪಟಚಿತ್ರಗಳು, ಬಾವುಟಗಳು. ಚಿತ್ರಿತ ಹಾಗೂ ಸ್ಟಿಚಿಂಗ್ ಮಾಡಿದ ಬ್ಯಾಗ್‌ಗಳು ಚಿಕ್ಕ ಚಿಕ್ಕ ಶಿಲ್ಪಕಲಾ ಕೃತಿಗಳು ಹಾಗೂ ಇತ್ಯಾದಿ ಚಿತ್ರಿತವಾದ ಹಾಗೂ ಅಲಂಕೃತವಾದ ಚಿತ್ರಗಳು ಇತ್ಯಾದಿ ಚಿತ್ರಿತವಾದ ಹಾಗೂ ಅಲಂಕೃತವಾದ ಚಿತ್ರಗಳು, ಬೌದ್ಧ ಧರ್ಮಕ್ಕೆ ಸಂಭಂದಿಸಿದ ಪುಸ್ತಕಗಳು ದೊರೆಯುತ್ತವೆ ಹಾಗೂ ಇತ್ಯಾದಿ ಪೂಜಾ ಸಾಮಗ್ರಿಗಳನ್ನು ಇಲ್ಲಿ ಕಾಣಬಹುದು, ಈ ಕ್ಯಾಂಪಿನ ಸುತ್ತಲು ಸುಮಾರು ೪೦ ರಿಂದ ೫೦ ಕ್ಕೂ ಅಧಿಕ ಟಿಬೆಟಿಯನ್ನರ ಮನೆಗಳು ಕಂಡುಬರುತ್ತವೆ. ಈ ಪ್ರದೇಶದಲ್ಲಿ ಅನೇಕ ಅಂಗಡಿಗಳು ಹಾಗೂ ಟಿಬೆಟಿನ ಸಹಕಾರಿ ಸಂಸ್ಥೆಗಳು ಸಿಗುತ್ತವೆ.

ಹಿರಿಯ ಬುಡ್ಡ ಬುಡ್ಡಿ ಸನ್ಯಾಸಿಗಳು ಇರುವ ಸ್ಥಳ ಹಾಗೂ ದೇವಾಲಯಕ್ಕೆ ಹೋಗುವ ಮಾರ್ಗವಾಗಿದ್ದು "ದಿ ರಿಜನಲ್ ಟಿಬೆಟಿಯನ್ ಯುವ ಕಾಂಗ್ರೇಸ್‌ನ ಕಛೇರಿ ಸಿಗುತ್ತದೆ. ಇದು ಎಲ್ಲಾ ಟಿಬೆಟಿನ ಕ್ಯಾಂಪ್‌ಗಳಿಗಿಂತ ವಿಶೇಷವಾದ ಅಂಶವಾಗಿದೆ. ಟಿಬೆಟಿಯನ್ನರ ಅಯುರ್ವೇಧ ಅಸ್ಪತ್ರೆ, ಇದರಲ್ಲಿ ಟಿಬೆಟನ ಗಿಡ ಮೂಲಿಕೆ ಔಷಧಿ ದೊರೆಯುತ್ತವೆ ಇಲ್ಲಿಗೆ ಹೆಚ್ಚಾಗಿ ಲಾಮಗಳು ಬರುತ್ತಾರೆ. ಬುಡ್ಡ-ಬುಡ್ಡಿ ಕ್ಯಾಂಪ್ ಪ್ರವೇಶಿಸಿದರೆ ೫೦ ರಿಂದ ೧೦೦ ಕ್ಕೂ ಅಧಿಕ ವೃದ್ಧರಿಗೆ ಅಶ್ರಯನೀಡಿದ ಮನೆಗಳ ರೀತಿಯಲ್ಲಿ ಕಾಣಬಹುದು. ಒಂದು ಪ್ರಾರ್ಥನಚಕ್ರ ದೇವಾಲಯವನ್ನು ಚಿಕ್ಕದಾಗಿ ನಿರ್ಮಿಸಿಕೊಂಡಿದ್ದಾರೆ. ನಂತರದ ರಸ್ತೆಯ ಕೊನೆಯ ಭಾಗದಲ್ಲಿ ಬೌದ್ಧ ಸನ್ಯಾಸಿನಿಯರ ತಾರದೇವಾಲಯವಿದೆ. ಇದರಲ್ಲಿ ಬೌದ್ಧಸನ್ಯಾಸಿನಿಯರು ಪ್ರಾರ್ಥನೆಮಾಡಲು ಬಳಸುತ್ತಾರೆ. ಇದರ ಕೆಲವು ಪಟಚಿತ್ರಗಳು ಹಾಗೂ ತಾರ ದೇವಿಯ ವಿಗ್ರಹವನ್ನು ವರತುಪಡಿಸಿದರೆ ಯಾವುದೇ ಭಿತ್ತಿಚಿತ್ರಗಳು

ಕಂಡುಬರುವುದಿಲ್ಲ. ೨೦೦ ಕ್ಕೂ ಅಧಿಕ ಬೌದ್ಧ ಲಾಂಬಿಣಿಯರು ಇದ್ದು. ಇವರಿಗೆ ದೇವಾಲಯದ ಪಕ್ಕದಲ್ಲಿ ವಸತಿ ಗೃಹಗಳನ್ನು ನಿರ್ಮಿಸಿಕೊಂಡಿದ್ದಾರೆ.

ಮುಂದಿನ ಎರಡನೆಯ ಕ್ಯಾಂಪಿಗೆ ಪ್ರವೇಶಿಸಿದರೆ ಈ ಪರಿಸರಕ್ಕೆ ಅತಿ ದೊಡ್ಡದಾದ ದೇವಾಲಯವನ್ನು ಕಾಣಬಹುದು ವಿಶಾಲವಾದ ಭೂ ಪ್ರದೇಶದಲ್ಲಿ ನಿರ್ಮಾಣವಾದ ಈ ದೇವಾಲಯವು ಎರಡು ದ್ವಾರ ಬಾಗಿಲುಗಳನ್ನು ಹೊಂದಿದ್ದು ವರವಲಯದಲ್ಲಿ ಒಂದು ಸ್ತೂಪವನ್ನು ಹಾಗೂ ದೇವಾಲಯದ ಎದುರು ಭಾಗದಲ್ಲಿ ದೀಪಸ್ಥಂಭಗಳಂತೆ ಅಶೋಕನ ಸ್ತಂಭವನ್ನು ಹೊಂದಿರುವ ರೀತಿಯಲ್ಲಿ ರಾಷ್ಟ್ರದ್ವಜದ ಇದೆ. ಇದೇ ಪರಿಸರದಲ್ಲಿ ಡ್ರೆಪುಂಗ ಲೊಸಲಿಂಗ್ ಕಾಲೇಜು ಇದರ ಸ್ಥಾಪನೆಯು ೧೯೮೮ರಲ್ಲಿ ಆಗಿದೆ. ಇದಕ್ಕೆ ಮುಂಚೆ ೧೯೮೦ ರಲ್ಲಿ ಡ್ರೆಪುಂಗ್ ದೇವಾಲಯದ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದ್ದು. ಇದರಲ್ಲಿ ಬೌದ್ಧ ತಾಂತ್ರಿಕ ವಿಷಯದ ಬಗ್ಗೆ ಅಭ್ಯಾಸ ನಡೆಸುತ್ತಾರೆ. ಈ ಪರಿಸರದ ಸುತ್ತಲು ಎಲ್ಲಾ ಪರಿಸರದಂತೆ ಬಾವುಟಗಳು. ಇನ್ನಿತರ ಪ್ರದೇಶದಲ್ಲಿ ಸಾಮಾನ್ಯವಾಗಿ ವಾಸಿಸುವ ಸ್ಥಳಗಳಂತೆ ಗುರುತಿಸುವ ಲಾಮಗಳು ತನ್ನದೇಯಾದ ಬೌದ್ಧವಿಹಾರ ಹಾಗೂ ವಸತಿ ನಿಲಯಗಳನ್ನು ಹೊಂದಿದ್ದಾರೆ. ಒಟ್ಟಿನಲ್ಲಿ ಸಿಂಹಗಳುಳ್ಳ ೧೦ ಅಡಿ ಎತ್ತರದ ಕಂಬವನ್ನು ನಿರ್ಮಿಸಿದ್ದಾರೆ. ದ್ವಾರಬಾಗಿಲುಗಳ ಎಂದಿನಂತೆ ಭಿತ್ತಿಚಿತ್ರ ಹೊಂದಿದ್ದು. ಟಿಬೆಟಿಯನ್ನರ ಥಾಂಕ ಶೈಲಿಯಲ್ಲಿವೆ. ೨ ಅಂತಸ್ತಿನ ದೇವಾಲಯವಾಗಿದೆ ಇದಕ್ಕೆ ಲೋಸೋಲಾ ದೇವಾಲಯವೆಂದು ಹೆಸರಿಸಿದ್ದು. ಇದನ್ನು ದಲೈಲಾಮರವರ ಹಸ್ತಂತರದಿಂದ ಪ್ರಾರಂಭಿಸಲಾಗಿದೆ. ದೇವಾಲಯದ ಮುಂದಿನ ಬಾಗಿಲಿನ ಎಡ ಮತ್ತು ಬಲ ಭಾಗದಲ್ಲಿ ದೊಡ್ಡದಾದ ಭಿತ್ತಿಚಿತ್ರಗಳಿವೆ. ಇವುಗಳೆಲ್ಲವು ಬೈಲುಕುಪ್ಪೆಯ ಸ್ವರ್ಣದೇವಾಲಯದಲ್ಲಿನ ಭಿತ್ತಿಚಿತ್ರಗಳನ್ನು ಹೋಲುತ್ತವೆ ಇವು ೧೦ ವಿವಿಧ ವಸ್ತುವಿಷಯಕ್ಕೆ ಸಂಬಂಧಿಸಿದ ಭಿತ್ತಿ ಚಿತ್ರಗಳಾಗಿರುತ್ತವೆ.

ಒಳ ಪ್ರವೇಶಿಸಿದರೆ ಬೃಹತ್ ಬುದ್ಧ, ಮಂಜುಶ್ರೀ, ಪದ್ಮಸಂಭವ, ಅವಲೋಕಿತೇಶ್ವರ ಮೈತ್ರೇಯ. ತಾರಾದೇವಿ ಹೀಗೆ ೬ ವಿಗ್ರಹಗಳನ್ನು ಕಾಣಬಹುದು. ವಿಗ್ರಹದ ಹಿಂದಿನ ಗೋಡೆಯ ಕೆಳಪಟ್ಟಿಕೆಯಲ್ಲಿ ಟಿಬೆಟಿಯನ್ನರ ಶ್ರೇಷ್ಠ ವಸ್ತುಗಳನ್ನು ಅದರಿಸಿದ ೨೦ಕ್ಕೆ ಅಧಿಕ ಟಿಬೆಟಿಯನ್ನರ ಪೂಜಾ ಸಾಮಗ್ರಿ ೮ (ಶ್ರೇಷ್ಠ) ವಸ್ತುಗಳನ್ನು ಕೈಯಲ್ಲಿ ಹಿಡಿದಿರುವ ಸಪ್ತ ಮದನಿಕೆಯರ ಚಿತ್ರಗಳನ್ನು ಕ್ರಮವಾಗಿ ಚಿತ್ರಿಸಿದ್ದಾರೆ. ಅದೇ ದೊಡ್ಡ ಗೋಡೆಯ ಎಡ. ಬಲ ಹಾಗೂ ಮದ್ಯಭಾಗದಲ್ಲಿ ೧X೧ ಅಡಿ ಅಳತೆಯ ಚಿಕ್ಕ ಚಿಕ್ಕ ಗಂಜೀಫಾ ಮಾದರಿಯ ೪.೧೭.೩೧೬ ಸಾವಿರ ಚಿತ್ರಗಳೆಲ್ಲವು ಒಂದೇ ರೀತಿ ಇರುವುದನ್ನು ಇಲ್ಲಿ ವಿಶೀಷ್ಟವಾಗಿ ಕಾಣಬಹುದು. ಸುಮಾರು ೬೦ ಕ್ಕೂ ಅಧಿಕ ಕಂಬಗಳೂಳ್ಳ ದೇವಾಲಯವಾಗಿದೆ.

ಕರ್ನಾಟಕದ ಟಿಬೆಟಿನ ನೆಲೆಗಳಲ್ಲಿ ಈ ಪ್ರದೇಶವು ಸಾಂಸ್ಕೃತಿಕ ಚಟುವಟಿಕೆಯಲ್ಲಿ ಎರಡನೇ ಸ್ಥಾನಪಡೆದಿದೆ. ಹಾಗೂ ಇಲ್ಲಿನ ಹುಬ್ಬಳ್ಳಿ, ಮಂಗಳೂರು ನಗರ ಪ್ರದೇಶಗಳಲ್ಲಿ ಕೆಲವು ವಿಶಿಷ್ಟ ಸಾಂಸ್ಕೃತಿಕ ಪ್ರದೇಶಕ್ಕೆ ಇಲ್ಲಿನ ಟಿಬೆಟಿಯನ್ನರು ಜನಪದ ನೃತ್ಯ ಹಾಗೂ ಸಂಗೀತಗಳನ್ನು ಪ್ರದರ್ಶಸಿದ್ದರೆ ಹಾಗೂ ಕೆಲವು ವಸ್ತುಗಳು ಬೇಕಾದಲ್ಲಿ ಅಲ್ಲಿಂದಲೇ ಕೊಂಡು ತರುತ್ತಾರೆ. ಕೆಲವರು ಬೇರೆ ಬೇರೆ ಪ್ರದೇಶಗಳಿಗೆ ಉದ್ಯೋಗ ಅರಸಿ ಹೋಗಿದ್ದು. ಬೌದ್ಧ ಧರ್ಮದ ಹಬ್ಬಗಳಲ್ಲಿ ಬಂದು ಹೋಗುತ್ತಾರೆ. ಅನ್ಯ ಧರ್ಮದವರ ಸಹವಾಸಕ್ಕೆ ಹೋದವರಲ್ಲ, ಧರ್ಮಕ್ಕೆ ತೊಂದರೆ ಕೊಟ್ಟವರಲ್ಲ ಬದಲಾಗಿ ಅನ್ಯಧರ್ಮಿಯರ ಜೊತೆ ಮಧುವೆಯ ಸಂಬಂಧವನ್ನು ಹೊಂದಿರುವುದಲ್ಲದೆ ತಮ್ಮ ಜೀವನವನ್ನು ಸುಂದರ ಹಾಗೂ ಶಾಂತಿಗಳಿಂದ ಸಮೃದ್ಧ ಗೊಳಿಸಿಕೊಂಡಿದ್ದಾರೆ.

***

ಟಿಬೆಟಿನ ಪರಿಸರ



ಬಾವುಟ ತೂಗು ಹಾಕಿರುವುದು



ಕ್ಯಾಂಪಿನ ಹೊರನೋಟ



ಪದ್ಮ ಸಂಭವ ಅರಮನೆ



ಬೌದ್ಧ ವಿಹಾರ

ಟಿಬೆಟಿಯನ್‌ರ ದೇವಾಲಯಗಳ ಪರಿಸರ



■ ದೇವಾಲಯದ ಒಳಭಾಗ



■ ಪ್ರಾರ್ಥನಾ ಮಂದಿರ



■ ದೇವಾಲಯದ ಮುಖ್ಯದ್ವಾರ



■ ಸ್ತೂಪ

ಧಾರ್ಮಿಕ ಪರಿಸರ



ಪ್ರಾರ್ಥನಾ ಮಂದಿರ



ಲಾಮಾಗಳು ಪ್ರಾರ್ಥಿಸುತ್ತಿರುವುದು



ಸ್ತೂಪಗಳ ಸಾಲು



ತಿರುಗುವ ಪ್ರಾರ್ಥನಾ ಚಕ್ರ



ಅಧ್ಯಾಯ–ನಾಲ್ಕು

ಟಿಬೆಟಿಯನ್ನರ ಚಿತ್ರಕಲೆ

ದಕ್ಷಿಣಭಾರತದ ಸಾಂಸ್ಕೃತಿಕ ನಗರ ಎನಿಕಿಕೊಂಡ ಹೆಗ್ಗಳಿಕೆಗೆ ಪಾತ್ರವಾದ ಕರ್ನಾಟಕಕ್ಕೆ ಬಂದು ನೆಲೆಸಿದ ನಿರಾಶ್ರಿತ ಟಿಬೆಟಿಯನ್ನರು ತಮ್ಮದೆಯಾದ ಐದು ನೆಲೆಗಳಲ್ಲಿ ಅನೇಕ ವೈವಿದ್ಯೆಮಯವಾದ ಚೈತ್ಯಾಲಯಗಳು, ಸ್ತೂಪಗಳು, ಬೌದ್ಧಮಂದಿರಗಳು, ದ್ವಾರಬಾಗಿಲುಗಳು, ಪ್ರಾರ್ಥನಚಕ್ರಗಳ ಮೇಲೆ ಟಿಬೆಟಿಯನ್ನರ ಬೌದ್ಧಧರ್ಮವನ್ನು ಆಧರಿಸಿ ಅನೇಕ ಚಿತ್ರಕಲೆ ಮತ್ತು ಶಿಲ್ಪಕಲೆ, ವಸ್ತುನಿರ್ಮಾಣವನ್ನು ರಚಿಸಿಕೊಂಡು ತಮ್ಮ ಜೀವನ ನಡೆಸುತ್ತಾರೆ. ಇವುಗಳೆಲ್ಲವೂ ನಮ್ಮ ನಾಡಿನ ಸಂಸ್ಕೃತಿಕ ಪರಂಪರಿಕ ಆಸ್ತಿಗಳಾಗಿ ಉಳಿದುಕೊಂಡಿವೆ. ತಮ್ಮದೇಯಾದ ಅಧ್ಯಾತ್ಮಿಕ ಸಂಸ್ಕೃತಿಯ ಅಧ್ಯಯನದ ವಸ್ತುವಾಗಿದ್ದು, ಕರ್ನಾಟಕದ ಚಿತ್ರಕಲೆಯ ಕಲಾ ಇತಿಹಾಸಧ ಸೃಷ್ಟಿಸುವಲ್ಲಿ ತನ್ನದೇಯಾದ ಪಾತ್ರವನ್ನುವಹಿಸಿದ್ದು, ಮುಂದಿನ ಕಲಾ ಪಿಳಿಗೆಯವರಿಗೆ ದಾರಿ ದೀಪದಂತಿವೆ. ಇಂತಹ ವ್ಯವಿಧ್ಯಮಯ ಟಿಬೆಟಿಯನ್ನರ ಚಿತ್ರಕಲೆಯನ್ನು ಈ ಅಧ್ಯಯನದಲ್ಲಿ ವರ್ಗೀಕರಿಸಿಕೊಂಡು ಚರ್ಚಿಸಲಾಗಿದೆ.

ಟಿಬೆಟಿಯನ್ನರ ಚಿತ್ರಕಲೆಯನ್ನು ಎರಡು ಭಾಗಗಳಾಗಿ ವಿಂಗಡಿಸಿದ್ದು, ಭಿತ್ತಿಚಿತ್ರಕಲೆ ಮತ್ತು ಭಿತ್ತಿಯೇತರ ಚಿತ್ರಕಲೆಗಳೆಂದು ಗುರುತಿಸಲಾಗಿದ್ದು, ಭಿತ್ತಿಚಿತ್ರಕಲೆಗಳನ್ನು (೧) ದೇವಾಲಯದ ಭಿತ್ತಿಚಿತ್ರಕಲೆ (೨) ಹೆಬ್ಬಾಗಿಲಿನ ಮೇಲಿನ ಚಿತ್ರಕಲೆ (೩) ರಸ್ತೆಯ ಮೇಲಿನ ಭಿತ್ತಿಚಿತ್ರಕಲೆ (೪) ಸ್ತೂಪಗಳ ಮೇಲಿನ ಭಿತ್ತಿಚಿತ್ರಕಲೆ.

ನಂತರ ಭಿತ್ತಿಯೇತರ ಚಿತ್ರಕಲೆಯಲ್ಲಿ (೧) ಪಟಚಿತ್ರಕಲೆ (೨) ಬಾವುಟಗಳ ಮೇಲಿನ ಚಿತ್ರಗಳು (೩) ಕರಕುಶಲ ವಸ್ತುಗಳ ಮೇಲಿನ ಚಿತ್ರಗಳು (೪) ಸುರುಳಿಚಿತ್ರಗಳು.

ಹೀಗೆ ಮೇಲಿನಂತೆ ವಿಭಾಗಿಸಿಕೊಂಡು, ಟಿಬೆಟಿಯನ್ನರ ಚಿತ್ರಕಲೆಯನ್ನು ಅಧ್ಯಯನ ಮಾಡಲಾಗಿದೆ. ವಿಶೇಷವಾಗಿ ಭಿತ್ತಿಚಿತ್ರಕಲೆಗೆ ಸಂಭಂದಿಸಿದ ಚಿತ್ರವು ಒಂದೆ ನೆಲೆಯಲ್ಲಿ ಸ್ಥಿರವಾಗಿ ಉಳಿದುಕೊಳ್ಳುವುದನ್ನು ಕಾಣಬಹುದಾಗಿದೆ. ಭಿತ್ತಿಯೇತರ ಚಿತ್ರಕಲೆಗಳು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಗಳಿಗೆ ಸಂಚರಿಸುವ ಚಿತ್ರಗಳಾಗಿವೆ. ಇವು ಈ ಬೌದ್ಧ ಧರ್ಮದ ಇತಿಮಿತಿಯನ್ನು ಪ್ರಚುರ ಪಡಿಸುವುದಾಗಿದೆ. ಹಾಗೂ ತಮ್ಮದೆಯಾದ ಟಿಬೆಟಿಯನ್ನರ ಸಾಂಸ್ಕೃತಿಕ ಪರಿಸರವನ್ನು ಚಿತ್ರಕಲೆಯಿಂದ ನಿರ್ಮಾಣ ಮಾಡಿಕೊಳ್ಳುವುದಾಗಿದ್ದು, ನಂತರದಲ್ಲಿ ತಮ್ಮ ಧರ್ಮ ಇತರರಿಗೆ ಅರ್ಥವಾಗಲೆಂದೆ ಬೌದ್ಧಧರ್ಮಕ್ಕೆ ಸಂಬಂಧಿಸಿದ ಚಿತ್ರಗಳನ್ನು ಮೇಲಿನಂತೆ ರಚಿಸಿರುವುದನ್ನು ಕಾಣಬಹುದು.

ಮೇಲಿನ ಎಲ್ಲಾ ಬಗ್ಗೆಯ ಚಿತ್ರಕಲೆಗಳನ್ನು ಬೌದ್ಧ ಧರ್ಮದ ಹಾಗೂ ಇತರ ಸಹ ಧರ್ಮದೊಂದಿಗಿನ ದೇವರುಗಳ ವಸ್ತುವಿಷಯಗಳನ್ನು ಆಧರಿಸಿ ರಚಿಸಿದಂತಹ ಚಿತ್ರಗಳಾಗಿರುವುದನ್ನು ಕಾಣಬಹುದು. ವಿಶೇಷವಾಗಿ ಭಿತ್ತಿ ಚಿತ್ರಕಲೆ, ಭಿತ್ತಿಯೇತರ ಚಿತ್ರಕಲೆ ಹಾಗೂ ಸಂಕೀರ್ಣ ಮಾಧ್ಯಮಗಳ ಚಿತ್ರಕಲೆಗಳಲ್ಲಿ ಕಂಡುಬರುವಂತಹ ವಸ್ತು ವಿಷಯಗಳನ್ನು ಈ ಕೆಳಗಿನಂತೆ ೨೨ ವಿಷಯಕ್ಕೂ ಅಧಿಕ ಪ್ರಕಾರಗಳಲ್ಲಿ ವಿಂಗಡಿಸಿ ಅಧ್ಯಯನ ಮಾಡಬಹುದಾಗಿದೆ.

೧ ಅವಲೋಕಿತೇಶ್ವರ (೪ಕೈಯಿಂದ ೧೧೨ ಕೈಗಳನ್ನು ಹೊಂದಿರುವ)

೨ ಮಂಜುಶ್ರೀ ಅಥವಾ ಮಂಜುಘೋಷ

೩ ಬುದ್ಧ ಮತ್ತು ಅರ್ಹೆಸ್ (೧೬ ಅವತಾರಗಳು) ಇತ್ಯಾದಿ ೭೫ ಅವತಾರಗಳನ್ನು ಕಾಣಬಹುದು.

೪ ತಾರದೇವಿ (೨೧ ಅವತಾರ, ವಿಶೇಷವಾದ ೪ ಬಣ್ಣಗಳನ್ನು ಹೊಂದಿವಂತೆ)

೫ ವಜ್ರಕೇಲ (ಅನೇಕ ಅವತಾರಗಳು)

೬ ಮೈತ್ರೇಯ

೭ ಪದ್ಮಸಂಭವ (೧೬ ವಿಧವಾದ ಗುರುಪದ್ಮ ಸಂಭವರು)

೮ ಸಂವಾದ (ಅನೇಕ ಅವತಾರಗಳು)

೯ ಬುದ್ಧ ಮತ್ತು ಆತನ ೪ ಉನ್ನತ ಶಿಷ್ಯರು.

೧೦ ಟಿಬೆಟಿಯನ್ನರ ಬೌದ್ಧ ಧರ್ಮವನ್ನು ಗುರುತಿಸುವ ಚಿನ್ನೆ (ಲೋಗೋ)

೧೧ (ನ್ಯಾಯಚಕ್ರದ ಎದುರು ಬದುರಿಗೆ ಕುಳಿತ ಜಿಂಕೆ).

೧೨ ನಾಲ್ಕು ದಿಕ್ಕಿನ ದ್ವಾರಪಾಲಕರು ಅಥವಾ ರಾಜದಿಕ್ಕಪಾಲಕರು (ದೃತರಾಷ್ಟ್ರ, ವಿರುದಕ, ವಿಶ್ರವಾನ, ವಿರುಪಾಕ್ಷ)

೧೩ ಸಂಗೀತ ಅರಮನೆ

೧೪ ನವಗ್ರಹ ದೇವರು (ಟಿಬೆಟಿಯನ್ನರ ರೀತಿಯಲ್ಲಿ)

೧೫ ತಾಂತ್ರಿಕ ಮಂಡಲ (ಕಾಲಚಕ್ರಮಂಡಲ, ಹುಟ್ಟು ಸಾವಿನ, ಮಾಟಮಂತ್ರ)

೧೬ ಡ್ರಲೊಗನ್, ಕೀರ್ತಿಮೂಖ, ಯಾಕ್ ಪ್ರಾಣಿ ಇತ್ಯಾದಿ ನಕ್ಷಚಿತ್ರಗಳನ್ನು.

೧೭ ಅದೃಷ್ಟ ಅಥವಾ ವಿಶೇಷ ಶ್ರೇಷ್ಠವಾದ ೮ ರೀತಿಯ ಚಿನ್ನೆಗಳು (ಶಂಖ, ಚಕ್ರ, ಕಮಲ, ಛತ್ರಿ, ಸ್ತೂಪ, ಆನೆದಂತ ಸುತ್ತಿದ ಬಟ್ಟೆ,-ವಜ್ರ, ಏಂಟು ಚೌಕಮಂಡಲ ಅಥವಾ ಕೊನೆಯಿಲ್ಲದ ಮಂಡಲ)

೧೮ ಪಂಚಭೂತ ಬಣ್ಣದ ಬಾವುಟಗಳು (ಇದರ ಮೇಲೆ ಬುದ್ಧ, ಮಂಜುಶ್ರೀ ಇತ್ಯಾದಿ ಟಿಬೆಟಿಯನ್ನರ ದೇವತೆಗಳ ಚಿತ್ರ-ಲಿಪಿಗಳು ಇರುತ್ತದೆ.)

೧೯ ಸರಸ್ವತಿ, ಗಣೇಶ, ಹನುಮಂತ, ಶ್ರೀಕೃಷ್ಣ, ಈಶ್ವರ, ರಾಮ, ಗಿಳಿ ಇತ್ಯಾದಿ ಅನ್ಯ ಧರ್ಮಕ್ಕೆ ಸಂಬಂಧಿಸಿದ ದೇವತೆಗಳು.

೨೦ ಹಿರಿಯ ಲಾಮಗಳು ಮರಣ ಹೊಂದಿದ ಸವಿ ನೆನಪಿಸುವ ಸ್ತೂಪ ನಿರ್ಮಾಣ.

೨೧ ಬುದ್ಧನ ಅನೇಕ ಜಾತಕ ಕಥೆಗಳು ಹಾಗೂ ಅನೇಕ ಅವತಾರಗಳನ್ನು ಕಾಣಬಹುದು.

೨೨ ವಿಷ್ಣುವಿನ ದಶವತಾರಕ್ಕೆ ಸಂಬಂಧಿಸಿದ ಹಾಗೂ ಬ್ರಹ್ಮನ ವಿವಿಧ ಅವತಾರದ ಟಿಬೆಟಿಯನ್ನರ ಶೈಲಿಯಲ್ಲಿ ವಿವಿಧ ರೀತಿಯಲ್ಲಿ ಬಳಸಿರುವುದು ಕಾಣಬಹುದು.

೨೩. ನಕ್ಷಚಿತ್ರಣದಲ್ಲಿ ಭೂ ನಕ್ಷ ಚಿತ್ರಣ, ನೈಸರ್ಗಿಕ ನಕ್ಷಚಿತ್ರಣ. ಜಾಮಿತಿಕ ನಕ್ಷ ಚಿತ್ರಣ ಸರಳ ನಕ್ಷ ಚಿತ್ರಣಗಳನ್ನು ಕಾಣಬಹುದು.

ಮೇಲಿನಂತ ವಸ್ತುವಿಷಯವನ್ನು ಆಧರಿಸಿ ಟಿಬೆಟಿಯನ್ನರು ತಮ್ಮದೇಯಾದ ಐದು ನೆಲೆಗಳಲ್ಲಿ ದೇವಾಲಯಗಳು (ಚೈತ್ರಾಲಯ), ಸ್ತೂಪಗಳು, ಹೆಬ್ಬಾಗಿಲುಗಳು ಪ್ರಾರ್ಥನಮಂದಿರ ಬೌದ್ಧವಿಹಾರ ಪರಿಸರದ ಇತ್ಯಾದಿ ಪ್ರದೇಶಗಳಲ್ಲಿ ಭಿತ್ತಿಚಿತ್ರಕಲೆಯನ್ನು ರಚಿಸಿರುವುದನ್ನು ಈ ಕೆಳಗಿನಂತೆ ಪ್ರತ್ಯೇಕವಾಗಿ ಚರ್ಚಿಸಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

I. ಭಿತ್ತಿಚಿತ್ರಕಲೆ

ಭಾರತೀಯ ಪ್ರಾಚೀನ ಶಿಲ್ಪಶಾಸ್ತ್ರಗ್ರಂಥಗಳು ಭಿತ್ತಿಚಿತ್ರಣ ರಚನಾಕ್ರಮಗಳ ಬಗೆಗೆ ತಮ್ಮದೇ ವಿವರಣೆಗಳನ್ನು ಕೊಟ್ಟಿವೆ. ವಿಷ್ಣುಧರ್ಮೋತ್ತರ ಪುರಾಣ, ಮಾನಸೋಲ್ಲಸ, ಅಪರಾಜೀನಪಚ್ಚೆ, ಶಿಲ್ಪರತ್ನ, ಸಮರಾಂಗಣ ಸೂತ್ರಧಾರ ಮುಂತಾದ ಗ್ರಂಥಗಳಲ್ಲಿ ಗೋಡೆಯ ಮೇಲ್ಛಾವಣಿ ಅಥವಾ ವಸ್ತುವಿನ ಯಾವುದೇ ಭಾಗದಲ್ಲಿ ಗಾರೆ ಲೇಪನ ಮಾಡಿ ಅದರ ಮೇಲೆ ಚಿತ್ರರಚನೆ ಮಾಡುವುದನ್ನು "ಭಿತ್ತಿಚಿತ್ರ " ಎಂದು ಉಲ್ಲೇಖಿಸಲಾಗಿದೆ. ಅಲ್ಲದೆ ಚಿತ್ರ ಬರೆಯಲಾಗುವ ಮೂಲಾಧಾರ ಮತ್ತು ಚಿತ್ರಣಕ್ಕಾಗಿ ಲೇಪಿಸುವ ಗಾರೆ ಮಿಶ್ರಣ " ಭಿತ್ತಿ" ಎಂದು ಕರೆಯಲಾಗಿದೆ.

ಭಿತ್ತಿಚಿತ್ರಣವನ್ನು ಆಂಗ್ಲಭಾಷೆಯಲ್ಲಿ "Mural painting" ಎಂದು ಕರೆಯಲಾಗಿದೆ. ಈ "Mural" ಶಬ್ದವು ಲ್ಯಾಟಿನ್ ಭಾಷೆಯ ಮ್ಯೂರಸ್ (Murals) ದಿಂದ ಮೂಡಿಬಂದಿದೆ. "Murals"ನ ಅರ್ಥವು ಗೋಡೆ ಎಂದಾಗುವುದು.[೧] ಗೋಡೆಯ ಮೇಲೆ ಬಣ್ಣದಿಂದ ಬರೆದ ಚಿತ್ರ ಮತ್ತು ಕೆತ್ತಿ ಕೊರೆದು ಅಂಟಿಸಿ ಹೀಗೆ ಇತರ ಯಾವುದೇ ವಿಧಾನದಿಂದ ಗೋಡೆಯ ಮೇಲೆ ರೂಪಿಸಿದ ಚಿತ್ರಗಳು "Mural" ವ್ಯಾಪ್ತಿಯಲ್ಲಿ ಬರುತ್ತದೆ ಎಂದು ಕೇಂಬ್ರಿಡ್ಜ್ ವಿಶ್ವಕೋಶ ತಿಳಿಸುತ್ತದೆ.[೨]

ಗೋಡೆ ಮತ್ತು ಮೇಲ್ಛಾವಣೆಗಳನ್ನು ವರ್ಣಚಿತ್ರಗಳಿಂದ ಅಲಂಕರಿಸುವ ವಿಧಾನವನ್ನು ಭಿತ್ತಿಚಿತ್ರಕಲೆ ಎಂದು ಆಕ್ಸಫರ್ಡ ಶಬ್ದಕೋಶದಲ್ಲಿ ಹೇಳಲಾಗಿದೆ.[೩] ಗೋಡೆಗಳ ಮೇಲ್ಛಾವಣೆ ಮತ್ತು ಗುಹೆಗಳನ್ನು ಮಸ್ಕೋಮುಕ್ಕೋ ಟೆಂಪರಾ, ತೈಲವರ್ಣ ಇಲ್ಲಿವೇ ಎನಕ್ಯಾಪ್ಟಿಕ್ ವಿಧಾನಗಳಿಂದ ಚಿತ್ರರಚಿಸಿ ಅಲಂಕಾರಿಸುವ ವಿಧಾನವನ್ನೇ ಭಿತ್ತಿಚಿತ್ರಕಲೆ (Mural painting) ಎಂದು ಮಾನ್ ಸ್ಟಾರ್ಸನ್ಯೊವರ್ಲ್ಬ ಸೈಕ್ಲೋಪಿಡಿಯಾ ಪರಿಗಣಿಸುತ್ತದೆ.[೪] ಗೋಡೆ ಮತ್ತು ಮೇಲ್ಛಾವಣೆಗಳ ಮೇಲೆ ವರ್ಣದಿಂದ ರಚಿಸಿದ ಚಿತ್ರಗಳು ಮತ್ತು ಬಣ್ಣದ ಕಲ್ಲಿನ ತುಂಡುಗಳನ್ನು ಅಂಟಿಸಿರೂಪಿಸಿದ ಮೊಸಾಯಿಕ್ ಚಿತ್ರಗಳು ಭಿತ್ತಿಚಿತ್ರಗಳ ವ್ಯಾಪ್ತಿಯಲ್ಲಿ ಒಳಗೊಳ್ಳುತ್ತವೆ ಎಂದು ಬ್ರಿಟಾನಿಕಾ ಎನ್ ಸೈಕ್ಲೋಪಿಡಿಯಾ ಹೇಳುತ್ತದೆ.[೫]

ಭಾರತದ ಭಿತ್ತಿಚಿತ್ರ ಪರಂಪರೆಯಲ್ಲಿ ಬೌದ್ಧರೇ ಮೊದಲಿಗರೆಂದು ಇತಿಹಾಸಕಾರರಿಂದ ತಿಳಿಯಬಹುದು. ಕ್ರಿ.ಪೂ ಕಾಲದಲ್ಲಿ ಪಾಲಿ ಭಾಷೆಯಲ್ಲಿ ರಚನೆಯಾದ 'ವಿನಯಪಿಟಕ" ಎಂಬ

---

೧. ಜಯಂತ ಚಕ್ರವರ್ತಿ. ಟೆಕ್ನಿಕ್ ಇನ್ ಇಂಡಿಯನ್ ಮ್ಯೂರಲ್ ಪೇಂಟಿಂಗ್ಸ್: ಪು.ಸಂ. ೧೨
೨. ಡೇವಿಡ್ ಕ್ರಿಸ್ಟಲ್. : ದಿಕೇಂಬ್ರಿಜ್ ಎನ್‌ಸೈಕ್ಲೋಪಿಡಿಯಾ : ಪು.ಸಂ. ೮೨೨
೩. ದಿ. ಆಕ್ಸ್‌ಪರ್ಡ್ ಇಂಗ್ಲಿಶ್. ಡಿಕ್ಷನರಿ: ವ್ಯಾಲ್ಯೂಮ್ ೧೦: ಪು.ಸಂ. ೧೦೬
೪. ವೆಬ್‌ಸ್ಟರ್ ನ್ಯೂ ವರ್ಲ್ಡ್ ಎನ್‌ಸೈಕ್ಲೋಪಿಡಿಯಾ : ಪು.ಸಂ. ೭೭೨
೫. ಜಯಂತ ಚಕ್ರವರ್ತಿ. ಟೆಕ್ನಿಕ್ ಇನ್ ಇಂಡಿಯನ್ ಮ್ಯೂರಲ್ ಪೇಂಟಿಂಗ್ಸ್: ಪು.ಸಂ. ೬೦

ಬೌದ್ಧಕೃತಿಯಲ್ಲಿ ಪಸೀನರ ಎಂಬ ರಾಜನ ಅರಮನೆಯಲ್ಲಿ ಸಂತೋಷರ್ಥ ಚಿತ್ರಗೃಹಗಳಿವೆಂದು ತಿಳಿದು ಬರುತ್ತದೆ.[೬] ಕ್ರಿ.ಪೂ. ೩೨೨ರಲ್ಲಿ ಶತಮಾನದ ಬೌದ್ಧ ತ್ರಿಪೀಠಕಗಳಲ್ಲಿರುವ ಚಿತ್ರಗೃಹಗಳ ಚಿತ್ರಶಾಲೆಗೆ ಪ್ರಸ್ತಾಪ ಬರುತ್ತದೆ.[೭] ನಂತರ ಕ್ರಿ.ಪೂ. ೩ನೇ ಶತಮಾನದಲ್ಲಿ ರಚನೆಯಾಗಿರಬಹುದೆಂದು ಹೇಳಲಾಗುವ ಕಲ್ಲವಗ್ಗ ಗ್ರಂಥದಲ್ಲಿ ಭಿತ್ತಿಚಿತ್ರಕಲೆ ಕುರಿತು ವಿವರಗಳಿವೆ.[೮]

ಮಹಾರಾಷ್ಟ್ರದ ಪೂನಾ ಜಿಲ್ಲೆಯ ಕಾರ್ಲೆ, ನಾಕಿಕ, ಭಾಜು ಬೇಡ್ಸ ಮತ್ತು ಕೊಂಡಾನೆ ಗುಹೆಗಳಲ್ಲಿ ಕ್ರಿ.ಪೂ. ೧೫೧೦ ರಿಂದ ಕ್ರಿ.ಶ.೧೦೦ ಅವಧಿಯಲ್ಲಿ ರಚನೆಯಾದ ಬೌದ್ಧ ಭಿತ್ತಿಚಿತ್ರಗಳಿದ್ದರೆ ಜುನ್ನಾರ ತಾಲೂಕಿನ ಜುನ್ನಾರ ಗುಹೆಗಳಲ್ಲಿ ಕ್ರಿ.ಪೂ. ೧೦೦ ರಿಂದ ಕ್ರಿ.ಶ. ೨ನೇ ಶತಮಾನದ ಅವಧಿಯಲ್ಲಿ ೧೦೦ ರಿಂದಲೇ ಭಿತ್ತಿಚಿತ್ರ ರಚನೆ ಪ್ರಾರಂಭವಾಗಿ ಕ್ರಿ.ಶ. ೭ನೇ ಶತಮಾನದ ತನಕ ಮುಂದುವರಿಯಿತು ಎಂದು ಹೇಳಲಾಗಿದೆ.[೯] ಅದೇ ರೀತಿ ಅಜಂತಾದಲ್ಲಿಯೂ ಕ್ತಿ.ಪೂ. ೧ನೇ ಶತಮಾನದಿಂದ ಕ್ರಿ.ಶ. ೮ನೇ ಶತಮಾನದವರೆಗೆ ಭಿತ್ತಿಚಿತ್ರರಚನೆ ನಡೆಯಿತೆಂದು ಬಹುಜನ ವಿದ್ವಾಂಸರ ಅಭಿಪ್ರಾಯ. ಕುಶಾನರ ಕಾಲದ ಕ್ರಿ.ಶ.೧ನೇ ಶತಮಾನದ ಭಿತ್ತಿಚಿತ್ರಗಳು ಪೂರ್ವ ತುರ್ಕಿಸ್ಥಾನದಲ್ಲಿರುವ "ನಿಯ" ಎಂಬ ಓಯೆಸಿಸ್ ಬಳಿಯ" ಮಿರಾನ್ ಸ್ತೂಪ ಒಂದರಲ್ಲಿ ರಚನೆಯಾಗಿದ್ದು ಹಾರಾಡುವ ಅಪ್ಸರೆಯರು ಬೌದ್ಧಜಾತಕ ಕಥೆಗಳು ಇಲ್ಲಿನ ಭಿತ್ತಿಚಿತ್ರಗಳಿಗೆ ವಸ್ತುವಾಗಿವೆ ಎಂಬಂತಹ ಸಂಗತಿಗಳು ತಿಳಿದುಬರುತ್ತದೆ.[೧೦] ನಂತರ ೭ನೇ ಶತಮಾನದಲ್ಲಿ ಮಧ್ಯ ಏಶಿಯಾ ಪ್ರದೇಶದಲ್ಲಿ ಕಂಡುಬರುತ್ತವೆ ಎಂಬ ಅಭಿಪ್ರಾಯವಿದೆ.[೧೧]

ಅಜಂತಾದಲ್ಲಿ ವಾಕಾಟಕರ ಕಾಲದಲ್ಲಿ ಕ್ರಿ.ಶ. ೪ ರಿಂದ ೬ನೇ ಶತಮಾನಗಳ ಅವಧಿಯಲ್ಲಿ ೧೬.೧೭.೨೦. ಮತ್ತು ೨೬ನೇ ಗುಹೆಯಲ್ಲಿ ಭಿತ್ತಿಚಿತ್ರ ರಚನೆ ಮಾಡಲಾಯಿತೆಂಬ ವಿವರಗಳು ತಿಳಿದುಬರುತ್ತದೆ. ಕ್ರಿ..ಶ. ೧೧ ರಿಂದ ೧೨ನೇ ಶತಮಾನಕ್ಕೆ ಸೇರಿದ ಭಿತ್ತಿಚಿತ್ರಗಳು ಉತ್ತರಭಾರತದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಜಮ್ಮು-ಕಾಶ್ಮೀರದ ಲಡ್ಡಾಕ್‌ದಲಿರುವ ಅಲ್ಜೀ ಮತ್ತು ಹೇಮಿಸ್ ಬೌದ್ಧಸನ್ಯಾಸಿ ಮಠಗಳಲ್ಲಿ ಲಡ್ಡಾಕ ಜಿಲ್ಲೆಯ ಲೇಹ ಪ್ರದೇಶದ ಬೌದ್ಧಗೋಂಪ್ಸಗಳಲ್ಲಿ ಹಿಮಾಚಲ ಪ್ರದೇಶದ ಸ್ಪಿಟೀಕೊಳ್ಳ ಪ್ರದೇಶದ ಭಿತ್ತಿಚಿತ್ರಗಳಿರುವ ಬೌದ್ಧಗೋಂಪ್ಸಗಳಲ್ಲಿ ಈ ಕಾಲದ ಭಿತ್ತಿಚಿತ್ರಗಳು ಕಂಡುಬರುತ್ತವೆ.[೧೨]

ಮೇಲಿನ ಉಲ್ಲೇಖಿತ ಮಾಹಿತಿಯಂತೆ ಭಾರತೀಯ ಧರ್ಮದ ಭಿತ್ತಿಚಿತ್ರ ಪರಂಪರೆ ಬೆಳೆದು ೮ನೇ ಶತಮಾನದಲ್ಲಿ ಭಾರತೀಯ ಬೌದ್ಧಭಿಕ್ಷುಗಳಿಂದ ಧರ್ಮತತ್ವಗಳನ್ನು ಸಾರುತ್ತಾ ಹಸ್ತಪ್ರತಿ, ಚಿತ್ರಪಟ, ಶಿಲ್ಪಗಳ ಪಾಳಿ ಭಾಷೆಯ ಸಮೇತ ನೇಪಾಳ, ಟಿಬೆಟ್, ಚೀನಾ, ಜಾವ, ಬರ್ಮ, ಜಪಾನ್, ಸಿಲೋನ್ ಮುಂತಾದ ಪ್ರದೇಶಗಳಿಗೆ ಹೋಗಿ ಅಲ್ಲಿ ಭಿತ್ತಿಚಿತ್ರರಚನೆ ಮಾಡಿರಬೇಕು ಎಂಬ ಅಭಿಪ್ರಾಯವಿದೆ.[೧೩] ನಂತರ ಟಿಬೆಟಿಯನ್ನರ ಸಾಂಸ್ಕೃತಿಕ ಪರಿಸರದೊಂದಿಗೆ ವಿಲಿನಗೊಂಡು ಥಾಂಕಶೈಲಿಯ ಚಿತ್ರ-ಶಿಲ್ಪಗಳಾಗಿ ಬೆಳೆದು. ೧೯ನೇ ಶತಮಾನಕ್ಕೆ ಮತ್ತೇ ಭಾರತಕ್ಕೆ ಟಿಬೆಟಿನ ಲಾಮ ಸನ್ಯಾಸಿಗಳ

---

೬. ಬಿ.ಪಿ. ಬಾಯಂ: ಭಾರತೀಯ ಚಿತ್ರಕಲೆ: ಪು.ಸಂ. ೮
೭. ಪಿ.ಆರ್.ತಿಪ್ಪೇಸ್ವಾಮಿ : ಚಿತ್ರಕಲಾ ಪ್ರಪಂಚ: ಪು.ಸಂ. ೧೧೨
೮. ಪಿ.ಆರ್.ತಿಪ್ಪೇಸ್ವಾಮಿ : ಚಿತ್ರಕಲಾ ಪ್ರಪಂಚ: ಪು.ಸಂ. ೧೪೦
೯. ಫರ್ಗುಸನ್ ಜೆ. ಅಚಿಡ್ ಜರ್ಬಸ್ ಜೆ: ಕೇವ್ ಟೆಂಪಲ್ಸ್ ಆಫ್ ಇಂಡಿಯಾ : ಪು.ಸಂ. ೮೪
೧೦. ಎಸ್.ಕೆ.ರಾಮಚಂದ್ರರಾವ್: ಕರ್ನಾಟಕದ ಕಲೆಗಳು: ಸಂ. ೮: ಪು.ಸಂ. ೧೦೭
೧೧. ಸಿ. ಶಿವಮೂರ್ತಿ: ಇಂಡಿಯನ್ ಪೇಂಟಿಂಗ್ಸ್: ಪು.ಸಂ. ೧೩
೧೨. ಜೆ.ಸಿ.ನಾಣ್‌ಪಾಲ್: ಮ್ಯೂರಲ್ ಪೇಂಟಿಂಗ್ಸ್ ಇನ್ ಇಂಡಿಯಾ: ಪು.ಸಂ. ೫
೧೩. ಡಾ. ಎಚ್.ತಿಪ್ಪೇರುದ್ರಸ್ವಾಮಿ: ಕರ್ನಾಟಕ ಸಾಂಸ್ಕೃತಿಕ ಸಮೀಕ್ಷೆ: ಪು.ಸಂ. ೭೨೪

ಮೂಲಕ ಬಂದು ಕರ್ನಾಟಕದ ಅವರದೇಯಾದ ಐದು ನೆಲೆಗಳಲ್ಲಿ ಸಾಂಸ್ಕೃತಿಕ ಪರಿಸರವನ್ನು ನಿರ್ಮಿಸಿಕೊಂಡು, ಪರಿಸರದ ತುಂಬೆಲ್ಲ ಚಿತ್ರಕಲೆಯ ಸೊಗಡನ್ನು ಭಿತ್ತಿಚಿತ್ರದ ಮೂಲಕ ನೀಡಿದ್ದಾರೆ.

ಚಿತ್ರಗಳನ್ನು ರಚಿಸುವುದು ಕಲಾವಿದನ ಸ್ವಾತಂತ್ರ್ಯಕ್ಕೆ ಬಿಟ್ಟಿದ್ದು. ಆತ ತನ್ನ ಅನುಕೂಲಕ್ಕೆ ತಕ್ಕಂತೆ ತನ್ನದೇಯಾದ ಪರಿಸರದಲ್ಲಿ ದೊರಕುವ ಪರಿಕರಗಳನ್ನು ಬಳಸಿ ಚಿತ್ರ ರಚಿಸುವ ತಂತ್ರಗಾರಿಕೆಯನ್ನು ಆದಿಮ ಕಾಲದಿಂದ ಇಂದಿನವರೆಗೂ ನಾನಾ ವಿಧದಲ್ಲಿ ತನ್ನದೇಯಾದ ಮಾಧ್ಯಮದ ಮೂಲಕ ಚಿತ್ರಗಳನ್ನು ಅಭಿವ್ಯಕ್ತ ಗೊಳಿಸಿದ್ದಾನೆ. ಟಿಬೆಟಿಯನ್ ಪರಿಸರದಿಂದ ಭಾರತಕ್ಕೆ ವಲಸೆ ಬಂದು ನೆಲೆಸಿರುವಂತಹ ಥಾಂಕ ಶೈಲಿಯ ಚಿತ್ರಕಲಾವಿದರು ಹಾಗೂ ಅವರ ದೇಶಿಯ ಪರಿಕರಗಳು ಮತ್ತು ರಚನಾ ವಿಧಾನ ಹಾಗೂ ತಂತ್ರಗಾರಿಕೆಯನ್ನು ಉಳಿಸಿಕೊಂಡು ಬಂದಿರುತ್ತಾರೆ. ಇವರ ಚಿತ್ರಕಲೆಯನ್ನು ಭಿತ್ತಿಚಿತ್ರಕಲೆ, ಪಟಚಿತ್ರಕಲೆ, ಲೋಹದ ಮೇಲಿನ ಚಿತ್ರಕಲೆ, ರಸ್ತೆಯ ಮೇಲಿನ ಚಿತ್ತಕಲೆ, ಸಂಕೀರ್ಣ ಮಾಧ್ಯಮ ಚಿತ್ರಕಲೆ ಎಂದು ವಿಂಗಡಿಸಿಕೊಂಡು ಆಧ್ಯಯನ ಮಾಡಲಾಗಿದೆ. ಅಲ್ಲದೆ ಇಂತಹ ಚಿತ್ರಗಳನ್ನು ರಚಿಸಲು ಬಳಸುವ ಪರಿಕರಗಳು ಹಾಗೂ ರಚನಾ ವಿಧಾನಗಳನ್ನು ಪ್ರತ್ಯೇಕವಾಗಿ ಚರ್ಚಿಸಲಾಗಿದೆ.

ಟಿಬೆಟಿಯನ್ನರು ಥಾಂಕಾ ಮಾದರಿಯ ಭಿತ್ತಿಚಿತ್ರಗಳನ್ನು ರಚಿಸುತ್ತಾರೆ. ಇವುಗಳಿಗೆ ಪ್ರತ್ಯೇಕವಾಗಿ ಥಾಂಕಾ ಚಿತ್ರಗಳೆಂದು ಹೆಸರಿಸುವುದುಂಟು. ಭಿತ್ತಿಚಿತ್ರಗಳನ್ನು ನಿರ್ಮಿಸುವ ಮೊದಲು ಬಿಳಿಯ ರೇಷ್ಮೆ, ಹತ್ತಿ ಅಥವಾ ಕ್ಯಾನ್‌ವಾಸ್ ವಿವಿಧ ಬಗೆಯ ಬಟ್ಟೆಗಳನ್ನು ಅಂಟುವಾಳ ಮತ್ತು ಸೋಡ ನೀರಿಗೆ ಅದ್ದಿ ಒಣಗಿಸಿ ನಂತರ ಅದನ್ನು ಬಿದಿರು ಮರದ ಬೊಂಬು ಅಥವಾ ಕಟ್ಟಿಗೆಗೆ ಚೌಕಾಕಾರದ ಫ್ರೇಮ್‌ಗೆ ಬಟ್ಟೆಯನ್ನು ನಾಲ್ಕು ಮೂಲೆಗೆ ಸರಳು ಸೇರಿಸಿ ಹೊಲಿಗೆ ದಾರದಿಂದ ಬಾಂಬುವಿಗೆ ಕಟ್ಟುತ್ತಾರೆ. ಕಟ್ಟುವಾಗ ಬಟ್ಟೆಯ ಮೇಲೆ ನೇರಿಗೆ ಬಾರದಂತೆ ನೋಡಿಕೊಳ್ಳುತ್ತಾರೆ. ನಂತರ ಮರವಜ್ರ, ಮೇಣಸರಿ, ರಾಸಾಯನಿಕ ಬಣ್ಣವಾದ ಡಿಸ್ಟೆಂಪರ್ ಲೇಪಿಸಿ ಒಣಗಿಸುತ್ತಾರೆ. ಅರ್ಧ ಬೋರ್ಡ್ ಪ್ಲೈವುಡ್‌ನ ಮೇಲೆ ಬಟ್ಟೆಯನ್ನು ಅಂಟಿಸುವುದರ ಮೂಲಕ ಭಿತ್ತಿ ತಯಾರಿಸುತ್ತಾರೆ. ನಂತರ ಪೆನ್ಸಿಲ್‌ನಿಂದ ಬಟ್ಟೆಯ ಪರದೆಯ ಅಳತೆಯ ಮಧ್ಯ ಭಾಗದ ಲಂಬರೇಖೆ ಹಾಗೂ ಭೂರೇಖೆಗಳನ್ನು ಕೈವಾರದ ಸಹಾಯದಿಂದ ವೃತ್ತ, ಚೌಕ, ಆಯತಾಕಾರದ ಅಳತೆಯ ಪಟ್ಟಿಕೆಗಳನ್ನು ಎಳೆದು ನಂತರ ಥಾಂಕಾ ಚಿತ್ರದಲ್ಲಿ ಬರುವಂತಹ ಟಿಬೆಟಿನ ತಾಳಮಾನದ ಅನುಸಾರವಾಗಿ ರೇಖಾಚಿತ್ರಗಳನ್ನು ರಚಿಸುತ್ತಾರೆ.

ಭಿತ್ತಿಯ ಮಧ್ಯಭಾಗದಲ್ಲಿ ದೊಡ್ಡ ಆಕಾರದ ಚಿತ್ರಗಳು ಅದರ ಸುತ್ತ ಚಿಕ್ಕ ಚಿಕ್ಕ ಆಕಾರದ ಚಿತ್ರಗಳನ್ನು ಬಿಡಿಸುತ್ತಾರೆ. ಮುಖದಿಂದ ಆರಂಭಿಸಿ ಕೈಕಾಲು, ದೇಹ, ಕುಳಿತಿರುವ ಪೀಠದವರೆಗೆ ಚಿತ್ರ ರಚಿಸಿ ಹೃದಯ ಭಾಗದ ಚಿತ್ರದ ಬಟ್ಟೆಯ ಹಿಂದೆ ಶ್ರೀ, ಅಹಂ, ಓಂ ಇತ್ಯಾದಿ ಟಿಬೆಟಿಯನ್ ಶುಭನುಡಿಗಳನ್ನು ಬರೆದಿರುತ್ತಾರೆ. ಚಿತ್ರದ ಹಿನ್ನೆಲೆಯಲ್ಲಿ ಆಕಾಶ, ಹೂಬಳ್ಳಿ, ಹಣ್ಣು, ಪ್ರಾಣಿಗಳು ಸೇರಿದ ನಕ್ಷ ವಿನ್ಯಾಸ ರಚನೆ ಮಾಡುತ್ತಾರೆ. ಒಂದೇ ಚಿತ್ರಗಳನ್ನು ಪದೇ ಪದೇ ಚಿತ್ರಿಸುವುದಾದರೆ ಟ್ರೇಸಿಂಗ್ ಕಾಗದವನ್ನು ಬಳಸಿಕೊಂಡು ನಕಲು ಮಾಡುತ್ತಾರೆ, ಈ ರೀತಿಯ ಸಂಯೋಜನ ಚಿತ್ರಗಳನ್ನು ರಚಿಸಿಕೊಂಡು ಸಮಗ್ರ ಚಿತ್ರಗಳನ್ನು ಪೂರ್ಣಗೊಳಿಸಿ ನಂತರ ಮೊದಲ ಚಿತ್ರಗಳ ಹಿನ್ನೆಲೆಯ ಆಕಾರಕ್ಕೆ ತಿಳಿ ನೀಲಿ ಬಣ್ಣ ಹಾಗೂ ಬಿಳಿ ಬಣ್ಣಗಳಿಂದ ತುಂಬುತ್ತಾರೆ. ಸಾಮಾನ್ಯವಾಗಿ ಚೌಕಟ್ಟನ್ನು ಗೋಡೆಗೆ ಒರಗಿಸಿ ನೆಲದ ಮೇಲೆ ಇಟ್ಟುಕೊಂಡು, ತೊಡೆಯ ಮೇಲೆ ಇಟ್ಟುಕೊಂಡು ಬರೆಯುತ್ತಾರೆ. ಸಾಮಾನ್ಯವಾಗಿ ಬಲಗೈಯಲ್ಲಿ ಬರೆಯತಕ್ಕವರು ಬಲಗೈಯಲ್ಲಿ ಚೌಕಟ್ಟನ್ನು, ಎಡಗೈಯಲ್ಲಿ ಬ್ರಷ್‌ನ್ನು ಇಟ್ಟಕೊಳ್ಳುತ್ತಾರೆ.

ಚಿತ್ರಗಳನ್ನು ಬರೆಯುವಾಗ ಕೆಲವು ಬಾರಿ ಗಂಟೆಗಟ್ಟಲೆ ಬರೆಯಬಹುದು ಅಥವಾ ದಿನದಲ್ಲಿ ಕೆಲವು ಗಂಟೆಗಳು ವಾರಗಟ್ಟಲೆ ಆಗಬಹುದು. ಆಗ ಆ ದಿನಕ್ಕೆ ಬೇಕಾದಂತಹ ಬಣ್ಣವನ್ನು ಆ ದಿನವೇ ಕಲಸಿಕೊಳ್ಳುತ್ತಾರೆ ಹಾಗೂ ಚಿನ್ನದ ಬಣ್ಣವನ್ನೂ ಸಹ ಆ ದಿನವೇ ಬೆರೆಸಿಕೊಂಡಿರುತ್ತಾರೆ. ಚಿತ್ರವನ್ನು ಮುಗಿಸಿದ ನಂತರ ಕುಂಚ ಗಳು ಹಾಗೂ ಬಣ್ಣಗಳ ಬಾಟಲಿಗಳನ್ನು ಚೆನ್ನಾಗಿ ತೊಳೆದು ಇಡುತ್ತಾರೆ. ನಂತರ ಹೊಸದಾಗಿ ಮಾರನೆಯ ದಿನ ಬಣ್ಣಗಳನ್ನು ಮಿಶ್ರಣಮಾಡಿ ಕೊಳ್ಳುತ್ತಾರೆ. ಬಣ್ಣ ಹಚ್ಚುವಾಗ ದಪ್ಪ ಲೇಪನ ಕಂಡ ಜಾಗದಲ್ಲಿ ಬ್ಲೇಡ್‌ನಿಂದ ಕೆರೆಯುತ್ತಾರೆ. ಚಿತ್ರದ ಧೂಳನ್ನು ಸೂಕ್ಷ್ಮವಾದ ಪಕ್ಷಿಗಳ ಗರಿಯಿಂದ ಜಾಡಿಸಿ, ನಂತರ ಒಣಗಿದ ಅಕ್ಕಿ ಹಿಟ್ಟಿನ ಉಂಡೆಗಳಿಂದ ಚಿತ್ರಗಳನ್ನು ಉಜ್ಜುತ್ತಾರೆ. ಹೀಗೆ ಬಣ್ಣವನ್ನು ಲೇಪಿಸಿಕೊಂಡು ಬಂದು ಕೊನೆಯಲ್ಲಿ ಕಣ್ಣು ಹಾಗೂ ಮುಖದ ಚಿತ್ರ ಬರೆಯುತ್ತಾರೆ. ನಂತರ ಚಿನ್ನದ ಲೇಪನವನ್ನು ಮಾಡುತ್ತಾರೆ ಚಿನ್ನದ ಪುಡಿಯನ್ನು ವನಸ್ಪತಿ ಅಥವಾ ರಿಪೈನ್ಡ್ ಆಯಿಲ್‌ಗೆ ಬೆರೆಸಿ, ಸ್ವಲ್ಪ ಕಾಯಿಸಿ, ಸಂಗ್ರಹಿಸಿ ಇಟ್ಟುಕೊಂಡಿರುತ್ತಾರೆ. ಮೇಲಿನ ಬಣ್ಣಗಳ ಮೂಲ ನೈಸರ್ಗಿಕ ಖನಿಜ ಹಾಗೂ ರಾಸಾಯನಿಕ ಬಣ್ಣಗಳಾಗಿರುತ್ತವೆ. ಕಲಾವಿದರುಗಳು ಶ್ರದಾಭಾವ, ಅತಿಯಾದ ತಾಳ್ಮೆ, ಚಿತ್ರ ಕೆಟ್ಟಲ್ಲಿ ಸಂಯಮ ಕಳೆದುಕೊಳ್ಳದೆ ಇರುವುದು ಗಮನಾರ್ಹ. ಒಂದು ಚಿತ್ರವು ಪೂರ್ಣಗೊಳಿಸಲು ಸುಮಾರು ೨ ತಿಂಗಳ ಅವಧಿಯವರೆಗೆ ಘಂಟೆಗಟ್ಟಲೆ ಕುಳಿತು ಚಿತ್ರ ರಚಿಸಲು ಅವರು ವೃದ್ಧಿಸಿಕೊಂಡ ಯೋಗ, ಧ್ಯಾನಗಳೇ ಸಾಕ್ಷಿಯಾಗಿವೆ. ಇಂತಹ ಭಿತ್ತಿಚಿತ್ರಗಳ ರಚನೆಯಲ್ಲಿ ಬಣ್ಣಗಳು ಪ್ರಮುಖ ಸ್ಥಾನವನ್ನು ವಹಿಸಿವೆ.

ಬಣ್ಣಗಳು : ಬೈಲುಕುಪ್ಪೆಯ ಚಿತ್ರಕಲಾವಿದರು ನೈಸರ್ಗಿಕ ಮತ್ತು ಖನಿಜಮೂಲ ಮತ್ತು ರಾಸಾಯನಿಕ ಮೂಲದ ಬಣ್ಣಗಳನ್ನು ಮಿಶ್ರ ಮಾಧ್ಯಮದಲ್ಲಿ ರಚಿಸುವ ಪದ್ಧತಿಯಲ್ಲಿ ಕಂಡು ಬರುತ್ತದೆ. ಬಣ್ಣಗಳು ಸಿಗುವ ಸ್ಥಳ, ತಯಾರಿಸಿಕೊಳ್ಳುವ ವಿಧಾನ ಹಾಗೂ ಅವುಗಳ ವರ್ಗವನ್ನು ವಿವರಿಸಲಾಗುತ್ತದೆ.

ವೀನಲ್ ನೀಲಿ : ಖನಿಜ ನೀಲಿ ಮತ್ತು ಹಸಿರು ಇದರಲ್ಲಿ ಅಜುಕೀಟ್ ಬಣ್ಣ ನೈಸರ್ಗಿಕವಾಗಿ ಸಿಗುವ ಖನಿಜ. ಈ ಬಣ್ಣವನ್ನು ಚಿತ್ರದಲ್ಲಿ ಆಕಾಶ, ನೀರು, ನಕ್ಷೆ, ಬಟ್ಟೆ ವಿವಿಧ ಭಾಗಗಳಿಗೆ ಬಳಸುತ್ತಾರೆ. ಸಾಮಾನ್ಯವಾಗಿ ಟಿಬೆಟಿನಲ್ಲಿಯೇ ದೊರಕುತ್ತದೆ.

ಕಿತ್ತಲೆ ಬಣ್ಣ : ಕಲ್ಲಿನ ರೂಪದಲ್ಲಿ ಹಾಗೂ ಸಸ್ಯಗಳ ರೂಪದಲ್ಲಿ ಸಿಗುತ್ತದೆ. ಮೂಲ ಚೀನಾ, ನೇಪಾಳದಲ್ಲಿ ದೊರೆಯುವ ಸತುವಿನಿಂದ ಆದದ್ದು. ಕೆಲವು ಸಂಸ್ಕರಣೆ ರೂಪದ ಮೂಲಕ ಸತುವನ್ನು ಕೇಸರಿ, ಕಿತ್ತಾಲೆ ಬಣ್ಣವನ್ನಾಗಿ ಮಾಡುತ್ತಾರೆ. ನೇಪಾಳ, ಚೀನಾ, ಭಾರತದಿಂದ ಆಮದು ಮಾಡಿಕೊಳ್ಳುತ್ತಾರೆ. ಸಿಂಧೂರ ಎಂದು ಕೆರೆಯುವುದುಂಟು.

ಹಸಿರು ವ್ಯಲಾಟಲ್ ಗ್ರೀಲ್ : ಕಲ್ಲಿನ ರೂಪದಲ್ಲಿ ಸಿಗುವುದು. ಪುಡಿಮಾಡಿ ಬೆಚ್ಚಗಿನ ನೀರಿನಲ್ಲಿ ಬೆರೆಸಿ ಬಣ್ಣವಾಗಿ ಪರಿವರ್ತಿಸಿಕೊಂಡು ಅಜುಕೀಟ್ ಬಣ್ಣ, ವ್ಯಲಾಟಲ್ ಗ್ರೀನ್ ಎರಡನ್ನು ತಾಮ್ರದ ಕಾರ್ಬನೇಟ್‌ನಿಂದ ಪಡೆದುಕೊಂಟು ಇದರ ಶುದ್ಧತೆ ಹೋಗುವ ಸಂಭವ ಬಂದಾಗ ಬೇರೆ ರೀತಿ ಸಂಸ್ಕರಿಸುವ ಮೂಲಕ ಶುದ್ಧತೆಯನ್ನು ಕಾಪಾಡಿಕೊಳ್ಳುತ್ತಾರೆ.

ಲಾಪಿಸ್ ಲಾಜುಲಿ ಆಲ್‌ಟ್ರಾಮರೇನ್ : ಲಾಪಿಸ್ ಲಾಜುಲಿ ಸೋಡಿಯಂ ಅಲ್ಯುಮಿನಿಯಂ ಗಂಧಕವನ್ನು ಬೆರೆಸುವುದರಿಂದ ತಯಾರಿಸುತ್ತಾರೆ. ನವಾನ್ಬಾಗ್ ಉತ್ತರ, ಅಫ್ಘಾನಿಸ್ತಾನ್, ಮಧ್ಯ ಯುರೋಪ್‌ನಲ್ಲಿ ಸಿಗುತ್ತದೆ. ಕೃತಕ ಅಲ್‌ಟ್ರಾಮರೇನ್ ಲಾಪಿಸ್ ಲಾಜುಲಿ ಚಿನ್ನಕ್ಕಿಂತ ದುಬಾರಿ ಆದುದರಿಂದ ೧೮೨೦

ರಲ್ಲಿ ಫ್ರೇಂಚ್‌ನ ತಜ್ಞ ಟಾನಾಮನಿಕ ಸುಣ್ಣದಕಲ್ಲು ಮತ್ತು ಗಂಧಕಗಳನ್ನು ಮಿಶ್ರ, ಮಾಡಿ ಕೃತಕವಾದ ನೀಲಿ ಬಣ್ಣ ತಯಾರಿಕೆಯನ್ನು ಕಂಡು ಹಿಡಿದ. ಈಗ ಸಿಂಥೆಟಿಕ್ ಬಣ್ಣಗಳು ಕಂಡು ಬರುತ್ತಿವೆ. ಸಿಂಥೆಟಿಕ್ ಬಣ್ಣಗಳು ಎಂದರೆ ಹಸಿರು ಮತ್ತು ನೀಲಿ. ಸಿಂಥೆಟಿಕ್ ಬಣ್ಣವನ್ನು ಲಾಸಾವಿಧ ಮತ್ತು ಭಾರತೀಯ ವಿಧ ಎಂದು ಎರಡು ವಿಧಗಳಾಗಿ ವಿಭಾಗಿಸುತ್ತಾರೆ. ಇದಲ್ಲದೇ ಸಿಂಥೆಟಿಕ್ ಬಣ್ಣಗಳನ್ನು ಚೀನಾದಲ್ಲೇ ತಯಾರಿಸಿಕೊಳ್ಳಲಾಗುತ್ತದೆ. ಟಿಬೆಟಿನ ನೈರುತ್ಯ ಭಾಗದಲ್ಲಿ ಸನೋಬಾರ್ ವರುಮಲೀನ್ ಖನಿಜ ಕಂಡು ಬರುತ್ತದೆ. ಈ ರೀತಿ ಮೂಲತಃ ಚೈನಾ ಮತ್ತು ಭಾರತದಿಂದ ಬಂದವುಗಳು ಸೀನೊಬಾರ್‌ನಿಂದ ಪಾದರಸವನ್ನು ತಯಾರಿಸುತ್ತಾರೆ. ಇದನ್ನು ಸಿನೋಬಾರ್‌ನ್ನು ಕಾಯಿಸುವುದರಿಂದ ಗಂಧಕ ಮತ್ತು ಪಾದರಸ ಬೇರ್ಪಡಿಸಬಹುದು.

ಆಪಿಮೆಂಟ್ ಹಳದಿ ಮತ್ತು ರೀಲ್‌ಗ್ರರ್ : ನೀರು ಇರುವ ಕೊಳ್ಳಗಳಲ್ಲಿ ಬೆಳ್ಳಿಯ ನಿಕ್ಷೇಪದ ಪಕ್ಕದಲ್ಲಿ ಕಂಡು ಬರುತ್ತದೆ. ಅತಿ ವಿಷಕಾರಿ ಬಣ್ಣವಾದ್ದರಿಂದ ಉಪಯೋಗಿಸಿದ ನಂತರ ಮತ್ತೆ ಕುಂಚವನ್ನು ತೊಳೆದು ಬೇರೆ ಬಣ್ಣವನ್ನು ಹಾಕಿಕೊಳ್ಳುತ್ತಾರೆ. ಚೀನಾ, ಟಿಬೆಟ್‌ನ ಪೂರ್ವದ ಬಾಮ್ಮೊಡೊ ಹತ್ತಿರ ಕಂಡು ಬರುತ್ತದೆ. ಇದನ್ನು ಯುರೋಪಿನ ಕಲಾವಿದರು ಉಪಯೋಗಿಸುತ್ತಾರೆ.

ಯೆಲ್ಲೋ ಆಕರ್ಸ : ಇದು ಖನಿಜ ಬಣ್ಣವಾಗಿದೆ. ಪುಡಿ ಮಾಡಬಹುದು. ಯೆಲ್ಲೋ ಆಕರ್ಸ ರೀತಿಯಲ್ಲಿ ಕೆಂಪು ಆಕರ್ಸ ಕೂಡ ದೊರೆಯುತ್ತದೆ. ಮನೆಗಳಲ್ಲಿ ಬಣ್ಣ ಬಳಿಯಲು ಕೂಡ ಬಳಸುತ್ತಾರೆ. ಮಧ್ಯೆ ಟಿಬೆಟ್‌ನಲ್ಲಿ ಹೆಚ್ಚಾಗಿ ದೊರೆಯುತ್ತದೆ.

ಆರ್ಥವೈಟ್ : ಕ್ಯಾಲ್ಸಿಯಂ ತುಣುಕು, ಸುಣ್ಣದಕಲ್ಲು, ಅಮೃತಶಿಲೆ, ಬಳಪದ ಕಲ್ಲು ಇವೆಲ್ಲ ಆರ್ಥವೈಟ್ ಜಾತಿಗೆ ಸೇರಿದ್ದು ಹೆಚ್ಚು ಬೆಲೆ ಬಾಳುವಂತಹದ್ದು. ಟಿಬೆಟ್‌ನ ವೀನ್‌ಪುಂಗ ಪ್ರದೇಶದಲ್ಲಿ ಕಂಡು ಬರುತ್ತದೆ.

ಕಾರ್ಬನ್ ಬ್ಲ್ಯಾಕ್ : ಉದಾ – ಕಲ್ಲಿದ್ದಲು, ಇದ್ದಿಲು. ಇಂಗಾಲದ ಖನಿಜಗಳಿಂದ ಪಡೆಯಬಹುದು.

ಚಿನ್ನದ ಬಣ್ಣ : ಚಿನ್ನದ ಪೌಡರ್, ತೆಳುವಾದ ತಗಡನ್ನು ಕತ್ತರಿಸಿ ಎಲೆಗಳಿಗೆ, ಅಂಚಿಗೆ, ವಸ್ತ್ರಗಳ ಮೇಲೆ ಅಲಕಾರಿಕ ನಕ್ಷೆಗಳಿಗೆ ಬಳಸುತ್ತಾರೆ. ಸಂಸ್ಕರಿಸಿದ ಚಿನ್ನದ ಪುಡಿ ವನಸ್ಪತಿ ಮತ್ತು ಲಿನ್‌ಸೀಡ್ ಆಯಿಲ್‌ನಲ್ಲಿ ಬೆರೆಸಿದ ಬಣ್ಣವನ್ನು ಸಣ್ಣ ಬಟ್ಟಲಿನಲ್ಲಿ ಹಾಕಿ ಸ್ವಲ್ಪ ಬಿಸಿ ಮಾಡಿ ಸಂಗ್ರಹಿಸಿಡಲಾಗುತ್ತದೆ.

ಬಣ್ಣಗಳ ವಿಧಗಳು : ಬಣ್ಣಗಳಲ್ಲಿ ೧೬ ವಿಧಗಳಿವೆ. ಮೊದಲಿನ ಹಂತದ ಬಣ್ಣವೆಂದರೆ ನೀಲಿ, ಹಸಿರು, ಕೆಂಪು, ಕೇಸರಿ, ಹಳದಿ, ಯೆಲ್ಲೋಆಕರ್ಸ. ಸಾಮಾನ್ಯ ದಟ್ಟ ವರ್ಣವಾದ ತಿಳಿ, ಅತಿ ತಿಳಿ ಅಂದರೆ ಕಡು ನೀಲಿ, ಸಾಮಾನ್ಯ ನೀಲಿ, ತಿಳಿ ನೀಲಿ, ಅತಿ ತಿಳಿ ನೀಲಿ ಬಣ್ಣಗಳೆಂದು ವಿಂಗಡಿಸಲಾಗಿದೆ. ಬೇರೆ ಬಣ್ಣಗಳು ಬೇಕಾದ ಸಂದರ್ಭದಲ್ಲಿ ಇವುಗಳ ಜೊತೆ ಸುಣ್ಣವನ್ನು ಸೇರಿಸಿ ಹಾಗು ಕಪ್ಪು ಮತ್ತು ಬಿಳಿ ಮಿಶ್ರಣ ಮಾಡುವುದರಿಂದ ಬೇರೆ ಬೇರೆ ಬಣ್ಣಗಳು ದೊರೆಯುತ್ತವೆ. ಇಂತಹ ಮಿಶ್ರಣವನ್ನು ಮಾಡುವುದಕ್ಕೆ ಒಂದು ನಿಯಮವಿದೆ. ಎಲ್ಲ ಬಣ್ಣಗಳು ಐದು ಮೂಲ ಬಣ್ಣಗಳಿಂದ ಆಗಿವೆ. ಅವುಗಳೆಂದರೆ ಬಿಳಿ, ಕೆಂಪು, ನೀಲಿ, ಹಳದಿ ಮತು ಕಪ್ಪು. ಇದಲ್ಲದೆ ಎಂಟು ಪ್ರಮುಖ ಬಣ್ಣಗಳು ಅವುಗಳಲ್ಲಿ ಏಳು ಪಿತೃ ಬಣ್ಣ ಹಾಗೂ ಒಂದು ಮಾತೃ ಬಣ್ಣ. ಮಾತೃ ಬಣ್ಣವೇ ಬಿಳಿ ಬಣ್ಣವಾಗಿದೆ.

ಪಿತೃ ಬಣ್ಣಗಳು : ಗಾಢನೀಲಿ, ಹಸಿರು, ವರ್ಮಿಲಿಯನ್, ಮಿನಿಯಾಮ್ ಕಿತ್ತಲೆ, ಲಾಕ್ ಡೈ ಮೆರೂನ್, ಆರ್ಫಿ ಮೇಲ್ ಹಳದಿ ಮತ್ತು ನೇರಳೆ.

ಬಣ್ಣಗಳ ಮಿಶ್ರಣ

ಬಿಳಿ + ಮಿನಿಯಂ ಆರೇಂಜ್ = ತೆಳುವಾದ ಕಿತ್ತಲೆ

ಆಫಿವೇಟ್ ಹಳದಿ + ಮಿನಿಯಂ ಕಿತ್ತಲೆ = ಎಲ್ಲೋಯಿಶ್ ಆರೆಂಜ್

ಬಿಳಿ + ವರ್ ಮಿಲಿಯಂ(ಸಮ ಪ್ರಮಾಣ) = ಪಿಂಕ್

ವರ್ ಮಿಲಿಯಂ + ಹೆಚ್ಚಿನ ಭಾಗ ಬಿಳಿ = ಮಾಂಸದ ಬಣ್ಣ

ಬಿಳಿ + ಅನುರೈಟ್ ನೀಲಿಯ ತೆಳುವಾದ ಬಣ್ಣ = ಹಾಲಿನ ಬಣ್ಣ

ಬಿಳಿ + ತೆಳು ಹಸಿರು ಬಣ್ಣ = ತೆಳು ಹಸಿರು ಹಾಲಿನ ಬಣ್ಣ

ಬಿಳಿ + ಗಾಢ ಹಸಿರು ಬಣ್ಣ = ತೆಳು ಹಸಿರು ಬಣ್ಣ

ಬಿಳಿ + ತೆಳು ಮಿನಿಯಂ ಬಣ್ಣ = ಸಪ್ಪೆ ಹಳದಿ

ಬಿಳಿ + ವರ್‌ಮಿಲಿಯಂ ಪಿಂಕ್ = ತೆಳುವಾದ ಮಾಂಸದ ಬಣ್ಣ

ಬಿಳಿ + ಹೆಚ್ಚಚು ಪ್ರಮಾಣದ ವರ್‌ಮಿಲಿಯಂ ಪಿಂಕ್ = ಮಾಂಸದ ಗಾಢ ಕೆಂಪು ಬಣ್ಣ

ಮಾಂಸದ ಗಾಢ ಕೆಂಪು ಬಣ್ಣ + ಆರ್ಪಿಮೆಂಟ್ ಹಳದಿ ಬಣ್ಣ = ಬ್ಲೂಯಿಷ್ ಮಾವೋ

ತೆಳು ಮಾವೋ + ತೆಳು ಹಳದಿ = ಪಿತ್ತಜನಕಾಂಗ (ಲಿವರ್) ಬಣ್ಣ

ಲಿವರ್ ಬಣ್ಣ + ಲಾಕ್‌ಡ್ ಡೈ = ಮೇರೋನಿಕ ಲಿವರ್ ಕಲರ್

ಬಿಳಿ + ಇಂಕ್ ಬ್ಲ್ಯಾಕ್ = ಬೂದಿ

ವೈಟ್ ಗ್ರೇ + ತೆಳು ನೀಲಿ = ಬ್ಲೂಯಿಷ್ ಗ್ರೇ

ವೈಟ್ + ಆರ್ಪಿಮೆಂಟ್ ಹಳದಿ = ಮೂಳೆ ಬಣ್ಣ

ಬಿಳಿ + ವರ್‌ಮಿಲಿಯಂ ಪಿಂಕ್ + ಹಳದಿ = ಯೆಲ್ಲೋಆಕ್ಕರ್

ಎಲ್ಲೋ ಆಕ್ಕರ್ + ಮಿನಿಯಂ ಕತ್ತಲೆ = ಚಿನ್ನದ ಬಣ್ಣ

ವರ್‌ಮಿಲಿಯಂ ಪಿಂಕ್ + ಆರ್ಪಿವೇಟ್ ಹಳದಿ + ಬಿಳಿಯ ಬಣ್ಣಕ್ಕೆ ಸೇರುವ ಕಪ್ಪು ಮಸಿ = ಟೀ ಬಣ್ಣ

ನೇರಳೆ + ಆರ್ಪಿಮೆಂಟ್ ಹಳದಿ = ಕಂಪೌಂಡಿನ ಹಸಿರು

ಟೀ ಕಲರ್ + ಕಂಪೌಂಡಿನ ಗ್ರೀನ್ = ಗ್ರೀನಿಷ್ ಟೀ ಕಲರ್

ರೆಡ್ಡಿಷ್ ಟೀ ಕಲರ್ + ಇಂಕ್ ಬ್ಲಯಾಕ್ + ಲ್ಯಾಕ್ ಡೈ = ಡಾರ್ಕ ರೆಡ್ ಸ್ಯಾಂಡಲ್‌ವುಡ್

(ಗಾಢ ಕೆಂಪು ಗಂಧದ ಬಣ್ಣ)

ವೈಟ್ + ಲ್ಯಾಕ್‌ಡೈ ಮೆರೋನಿಶ್ = ಪಿಂಕ್

ಗ್ರೀನ್ + ವೈಟ್ ಎಲ್ಲೋಯಿಷ್ = ಗ್ರೀನ್

ಇದು ಸರಿಯಾಗಿ ಬೆರೆತಿದೆಯೋ ಇಲ್ಲವೋ ಎಂದು ತಿಳಿಯಲು ಕುಂಚದಿಂದ ಸ್ವಲ್ಪ ಬಣ್ಣ ತೆಗೆದು ಬಟ್ಟೆಯ ಮೇಲೆ ಬಳಸಿ ನೋಡುತ್ತಾರೆ. ಸ್ವಲ್ಪ ಒಣಗಿದ ನಂತರ ಬೆರಳಿನಿಂದ ಉಜ್ಜಿದಾಗ ಅಥವಾ ಉಗುರಿನಿಂದ ಕರೆದು ನೋಡಿದಾಗ ಬಣ್ಣ ಹೊರ ಬಂದರೆ ಅದಕ್ಕೆ ಸ್ವಲ್ಪ ಅಂಟನ್ನು ಸೇರಿರುತ್ತಾರೆ. ಹಾಗೆ ಒಂದು ಹಾಳೆ ಅಥವಾ ಬಟ್ಟೆ ಹಾಗೂ ಮರದ ಹಲಗೆ ಮೇಲೆ ಬಳೆದು ಒಣಗಿದ ನಂತರ ಅದನ್ನು ನೋಡಿದಾಗ ಅದು ಮೃದುವಾಗಿದ್ದರೆ ಅದರಲ್ಲಿ ಗಂಜಿಯ ಅಂಶ ಜಾಸ್ತಿ ಇದೆ ಎಂದೂ, ಒರಟಾಗಿದ್ದರೆ ಅಂಟು ಜಾಸ್ತಿ ಇದೆ ಎಂದೂ ತಿಳಿಯುತ್ತಾರೆ.

ಬಣ್ಣಗಳನ್ನು ಬಳೆಯುವಿಕೆ

ಬಣ್ಣ ಹಚ್ಚುವಾಗ ನಾಲ್ಕು ನಿಯಮಗಳನ್ನು ಅನುಸರಿಸುತ್ತಾರೆ. ಮೊದಲಿಗೆ, ಅತಿ ಹೊರಭಾಗದ ಅಥವಾ ದೂರದ ಚಿತ್ರ ಬಿಡಿಸುತ್ತಾರೆ. ಇದರಲ್ಲಿ ಮೂರು ರೀತಿ ಇವೆ. (೧) ಅತಿ ದೂರದ ಭಾಗವೆಂದರೆ, ಆಕಾಶ, (೨) ಪ್ರಕೃತಿ ಚಿತ್ರ, (೩) ಇತರ ಸಣ್ಣ ದೇವತೆಗಳು.

ಎರಡನೆಯದು, ಒಂದೇ ಬಣ್ಣವನ್ನು ಪದೇ ಪದೇ ತಯಾರಿಸುವುದಿಲ್ಲ. ಒಂದೇ ಸಾರಿ ತಯಾರಿಸುತ್ತಾರೆ. ಒಂದೇ ಸಾರಿ ಚಿತ್ರವನ್ನು ಹಲವು ಚಿತ್ರಪಟಗಳಾಗಿ ಮಾಡುವಾಗ ಎಲ್ಲಾ ಚಿತ್ರಪಟಗಳನ್ನು ಒಂದೇ ಬಾರಿ ಮಾಡುತ್ತಾರೆಯೇ ಹೊರತು ಒಂದು ಚಿತ್ರ ಪೂರ್ಣವಾದ ನಂತರ ಇನ್ನೊಂದು ಚಿತ್ರ ಮಾಡುವುದಿಲ್ಲ. ಉದಾ–ಒಂದೇ ರೀತಿಯ ಚಿತ್ರದಲ್ಲಿ ಬರುವ ಆಕಾಶವನ್ನು ಎಲ್ಲಾ ಚಿತ್ರಪಟಗಳಲ್ಲಿ ಬರೆದು ನಂತರ ಎಲ್ಲಾ ಚಿತ್ರಪಟಗಳಲ್ಲೂ ಪ್ರಕೃತಿ ಮತ್ತು ಇತರ ಚಿತ್ರಗಳನ್ನು ಬರೆಯುತ್ತಾರೆ.

ಮೂರನೆಯದು, ತೆಳುವಾದ ಬಣ್ಣಗಳನ್ನು ಬಳಸುವ ಚಿತ್ರಗಳನ್ನು ಸಾಮಾನ್ಯವಾಗಿ ಕಡೆಯಲ್ಲಿ ಚಿತ್ರಿಸುತ್ತಾರೆ. ಏಕೆಂದರೆ ಚಿತ್ರಕಾರನ ಕೈ ಗುರುತುಗಳು ಆ ಬಣ್ಣದ ಮೇಲೆ ಬೀಳುವ ಸಂಭವ ಇರುತ್ತದೆ.

ಶೇಡಿಂಗ್ (ಬಣ್ಣಗಳ ಮಿಶ್ರಣದ ಛಾಯಾಂಕರಣ)

ಇದರಲ್ಲಿ ಬಣ್ಣವನ್ನು ತೆಗೆದುಕೊಂಡು ಚಿತ್ರದ ಮೇಲೆ ಹಚ್ಚುತ್ತಾರೆ. ತೆಳು ಬಣ್ಣ ಬೇಕಾದಾಗ ಅದನ್ನು ಬಿಳಿ ಬಣ್ಣಕ್ಕೆ ಸೇರಿಸಿಕೊಂಡು ಹಚ್ಚುತ್ತಾರೆ. ಒಂದು ಕುಂಚದಿಂದ ಹಾಗೆಯೇ ಎರಡು ಕುಂಚಗಳಿಂದ ಮಾಡುತ್ತಾರೆ. ಇದರಲ್ಲಿ ಗಾಢ ಬಣ್ಣಕ್ಕೆ ಒಂದು ತೆಳು ಬಣ್ಣಕ್ಕೆ ಒಂದೊಂದು ಇಟ್ಟುಕೊಂಡು ಆ ಸಮಯದಲ್ಲಿ ಉಪಯೋಗಿಸುತ್ತಾರೆ.

ಪ್ರಾಥಮಿಕ ಹಂತದ ಚಿತ್ರಕಲೆಯ ನಂತರ ಅದಕ್ಕೆ ಶೇಡಿಂಗ್ ಮಾಡುತ್ತಾರೆ. ಶೇಡಿಂಗ್‌ನಲ್ಲಿ ಎರಡು ವಿಧ. ಅದರಲ್ಲಿ ಮೊದಲನೆಯದು ಡ್ರೈ ಶೇಡಿಂಗ್, ಎರಡನೆಯದು ವೆಟ್ ಶೇಡಿಂಗ್.

ಡ್ರೈ ಶೇಡಿಂಗ್ : ಈ ಪದ್ಧತಿಯಲ್ಲಿ ಪ್ರಥಮವಾಗಿ ಹಾಕಿದ ಬಣ್ಣ ಒಣಗಿದ ನಂತರ ಅದರ ಅಂಚಿಗೆ ಬೇರೆ ಬಣ್ಣ ತುಂಬುತ್ತಾರೆ. ನೀಲಿ ಆಕಾಶ ಸೃಷ್ಟಿಸಲು ಕಡುನೀಲಿಯನ್ನು ಹಾಕಿ ಅದು ಒಣಗಿದ ಮೇಲೆ ಇನ್ನೊಂದು ಪ್ರಾಥಮಿಕ ಬಣ್ಣದೊಂದಿಗೆ ಸೇರಿಸಿ ಹಚ್ಚುತ್ತಾರೆ. ಈ ಪದ್ಧತಿಯಲ್ಲಿ ಪ್ರಾಥಮಿಕ ಬಣ್ಣವಾಗಿ ನೇರಳೆಯನ್ನು ನೀಲಿ ಬಣ್ಣದೊಂದಿಗೆ ಸೆರಿಸಿ ಥಾಂಕಾ ಚಿತ್ರಕಾರರು ಬಳಸುತ್ತಾರೆ.

ನೀಲಿ ಆಕಾಶದ ನಂತರ ಚಿತ್ರದಲ್ಲಿ ಬರುವ ನೀಲಿ ಬಣ್ಣ ಜಾಗ ತುಂಬುತ್ತಾರೆ. ನಂತರ ಹಸಿರು ಬಣ್ಣವನ್ನು ಪ್ರಕೃತಿ ಚಿತ್ರಗಳಲ್ಲಿ ಬಳಸುತ್ತಾರೆ. ಮರ, ಗಿಡ, ಎಲೆ, ನಕ್ಷೆ, ಬಟ್ಟೆ, ಹುಲ್ಲುಗಾವಲುಗಳಿಗೆ ಪ್ರಮುಖವಾಗಿ ಹಸಿರು ಬಣ್ಣವನ್ನು ಬಳಸುತ್ತಾರೆ. ಅದರಲ್ಲಿ ಹುಲ್ಲುಗಾವಲು ಬರೆಯುವಾಗ ಚಿತ್ರಕಾರ ಚಿತ್ರದ ತಳಭಾಗದಿಂದ ಮೇಲಕ್ಕೆ ಹೋಗುತ್ತಾರೆ. ಹುಲ್ಲುಗಾವಲಿನಲ್ಲಿ ಸಾಮಾನ್ಯವಾಗಿ ತಳವು ಗಾಢ ಹಸಿರು ಬಣ್ಣವಾಗಿದ್ದು ಮೇಲೆ ಹೋದಂತೆ ತೆಳುವಾಗುತ್ತದೆ. ನಕ್ಷೆಗಳನ್ನು ಚಿತ್ರಗಳು ಹೊರ ಭಾಗಕ್ಕೆ ಹೂವು, ಬೆಂಕಿ ಜ್ವಾಲೆ ಅವುಗಳ ಹೊರ ಭಾಗಕ್ಕೆ ಗಾಢ ಕೆಂಪು ಬಣ್ಣದಿಂದ ಶೇಡ್ ಮಾಡುವುದರಿಂದ ಅವುಗಳು ಕಾಣುತ್ತವೆ. ಮಿಕ್ಕ ಬಣ್ಣವನ್ನು ಕಡೆಯಲ್ಲಿ ಬೇಕಾದ ಕಡೆ ಉಪಯೋಗಿಸುತ್ತಾರೆ. ಉದಾ-ರತ್ನಗಂಬಳಿ ವಸ್ತುಗಳು ಇವುಗಳ ಬೇರೆ ಬೇರೆ ರೀತಿಯಂತಹ ಕಿತ್ತಳೆ, ನೇರಳೆ, ಹಳದಿ, ಕೆಂಪು ಬಣ್ಣವನ್ನು ಉಪಯೋಗಿಸುತ್ತಾರೆ.

ವೆಟ್ ಶೇಡಿಂಗ್ : ವೆಟ್ ಶೇಡಿಂಗ್ ಎಂದರೆ ಹಾಕಿರುವ ಬಣ್ಣ ಹಸಿಯಿರುವಾಗಲೇ ಅದರ ಅಂಚಿನಲ್ಲಿ ಅದೇ ಬಣ್ಣದ ಗಾಢ ಮತ್ತು ತಿಳಿ ಬಣ್ಣ ಜೊತೆಗೆ ಸೇರಿಸಿ ಹಚ್ಚುತ್ತಾರೆ. ಹಾಗೆಯೇ ಬೇರೆ ಬಣ್ಣವನ್ನು ಹಾಕಬಹುದು. ಉದಾ-ಹಸಿಯಿರುವಾಗಲೇ ಕೇಸರಿ, ಕೆಂಪು ಬಣ್ಣವನ್ನು, ತುದಿಯಲ್ಲಿ ಕಪ್ಪು ಬಣ್ಣವನ್ನು ಹಾಕುತ್ತಾರೆ. ಇದರಿಂದ ಬೆಂಕಿಯಂತೆ ಕಾಣಿಸುತ್ತದೆ.

ತಳಭಾಗದಲ್ಲಿ ಗಾಢ ಬಣ್ಣವನ್ನು ಹಾಕಿ ಇದು ಹಸಿ ಇರುವಾಗಲೇ ಮೇಲು ಭಾಗಕ್ಕೆ ಹೊದಂತೆ ಅದೇ ಬಣ್ಣದ ಕುಂಚಕ್ಕೆ ಸ್ವಲ್ಪ ಸ್ವಲ್ಪ ನೀರು ಸೇರಿಸಿಕೊಂಡು ಬಣ್ಣವನ್ನು ಸೇರಿಸಿಕೊಳ್ಳದೆ ಬರಿ ನೀರು ಸೇರಿಸಿದಾಗ ಅದು ತಿಳಿಯಾಗುತ್ತದೆ. ಇದು ವೆಟ್ ಶೇಡಿಂಗ್‌ಗೆ ಸೇರುತ್ತದೆ. ಮೋಡವನ್ನು ರಚಿಸುವಾಗ ಎರಡು ರೀತಿಯ ಮೋಡ ಗಮನಿಸಬಹುದು. ಒಂದು ಕಪ್ಪಗೆ ದಟ್ಟವಾಗಿರುತ್ತದೆ. ಎರಡನೆಯ ಬಿಳಿ ಮೋಡಗಳು, ಕಪ್ಪು ಮೋಡಗಳು, ನೇರಳೆ ಬಣ್ಣಕ್ಕೆ ಶೇಡಿಂಗ ಹಾಕುತ್ತಾರೆ. ಬಿಳಿ ಮೋಡಗಳಿಗೆ ಹಳದಿ ಬಣ್ಣವನ್ನು ಶೇಡಿಂಗ್‌ಗೆ ಉಪಯೋಗಿಸುತ್ತಾರೆ. ಯಾವುದೇ ಚಿತ್ರ ಚಿತ್ರಿಸುವಾಗ ಅದರ ಹಿಂಬದಿಗೆ ' ಗಾಢವಾದ ಬಣ್ಣವನ್ನು ಕೊಡುತ್ತಾರೆ.

ಕಮಲದ ಹೂವನ್ನು ಮೂರ್ತಿಯು ಕುಳಿತಿರುವ ಪೀಠಿಕೆ ಬರೆಯುತ್ತಾರೆ. ಕಮಲದ ಹೂವಿಗೆ ಗುಲಾಬಿ ಬಣ್ಣ ಉಪಯೋಗಿಸುತ್ತಾರೆ. ಅಲ್ಲದೆ ಅಂಚಿನಲ್ಲಿ ಕೂಡ ಬಳ್ಳಿ ಹೂಗಳು ಬರೆಯಲು ಶೇಡಿಂಗ್ ಉಪಯೋಗಿಸುತ್ತಾರೆ. ಮುಖ್ಯ ಚಿತ್ರಗಳು ಗಾಢ ಬಣ್ಣದಲ್ಲಿ, ಅವುಗಳ ಶೇಡಿಂಗ್‌ನ್ನು ತೆಳು ಬಣ್ಣದಲ್ಲಿ ಕೊಡುತ್ತಾರೆ. ಕೆಲವೊಮ್ಮೆ ಎರಡು ಮೂರು ಹೆಚ್ಚಿನ ಬಣ್ಣಗಳನ್ನು ಶೇಡಿಂಗ್‌ಗೆ ಉಪಯೋಗಿಸುತ್ತಾರೆ.

ಚಿತ್ರಕಾರ ಚಿತ್ರ ಬರೆಯುವ ಕ್ರಮ

ಚಿತ್ರಕಾರನು ಬಟ್ಟೆಯ ನಾಲ್ಕು ಮೂಲೆಯನ್ನು ಒಂದು ಮರದ ಚೌಕಟ್ಟಿಗೆ ಬಿಗಿಯಾಗಿ ಕಟ್ಟುತ್ತಾನೆ.

ನಂತರ ಚಿತ್ರ ಬರೆಯಲು ಪ್ರಾರಂಭಿಸಿ ಪೆನ್ಸಿಲ್‌ನಿಂದ ಸರಿಯಾಗಿ ಸ್ಕೆಚ್‌ನ್ನು ಮಾಡಿ ಬಣ್ಣವನ್ನು ಹಾಕಲು ಪ್ರಾರಂಭಿಸುತ್ತಾನೆ. ಮೇಲು ಭಾಗ ಬರೆಯುವಾಗ ಚೌಕಟ್ಟನ್ನು ನೆಲದ ಮೇಲೆ ಇಟ್ಟು ಬರೆಯುತ್ತಾರೆ. ಚಿತ್ರದ ಕೆಳಭಾಗವನ್ನು ಬರೆಯುವಾಗ ಚೌಕಟ್ಟನ್ನು ತೊಡೆಯ ಮೇಲೆ ಇಟ್ಟುಕೊಂಡು ಚಿತ್ರ ಬರೆಯುತ್ತಾರೆ. ಚೌಕಟ್ಟಿನ ಮೇಲು ಭಾಗಕ್ಕೆ ದಾರದಿಂದ ನೇತು ಹಾಕಿದ ಹಾಗೆ ಕೆಳಭಾಗವು ತೊಡೆಯ ಮೇಲೆ ಇಟ್ಟು ಬರೆಯುತ್ತಾರೆ. ಸಾಮನ್ಯವಾಗಿ ಬಲಗೈಯಲ್ಲಿ ಬರೆಯತಕ್ಕ ಚಿತ್ತಕಾರನು ಬ್ರಷ್‌ನ್ನು ಬಲಗೈಯಲ್ಲಿ, ಚೌಕಟ್ಟನ್ನೂ ಎಡಗೈಯಲ್ಲಿ ಇಟ್ಟುಕೊಂಡು ಬರೆಯುತ್ತಾರೆ ಹಾಗೆಯೇ ಎಡಗೈಯಲ್ಲಿ ಬರೆಯತಕ್ಕವರು ಬಲಗೈಯಲ್ಲಿ ಚೌಕಟ್ಟನ್ನೂ. ಎಡಗೈಯಲ್ಲಿ ಕುಂಚವನ್ನು ಇಟ್ಟುಕೊಳ್ಳುತ್ತಾರೆ. ಚಿತ್ತಗಳನ್ನು ಬರೆಯುವಾಗ ಕೆಲವು ಬಾರಿ ಗಂಟೆಗಟ್ಟಲೆ ಬರೆಯಬಹುದು ಅಥವಾ ದಿನದಲ್ಲಿ ಕೆಲವು ಗಂಟೆಗಳು ವಾರಗಟ್ಟಲೆ ಆಗಬಹುದು. ಆಗ ಆ ದಿನಕ್ಕೆ ಬೇಕಾದಂಥಹ ಬಣ್ಣವನ್ನು ಆ ದಿನವೇ ಬೆರೆಸಿಕೊಳ್ಳುತ್ತಾರೆ. ಚಿನ್ನದ ಬಣ್ಣವನ್ನೂ ಸಹ ಆ ದಿನ ಕೆಲಸದ ನಂತರ ಉಪಯೋಗಿಸಿದ ಕುಂಚಗಳನ್ನು ಚೆನ್ನಾಗಿ ತೊಳೆದು ಇಡಬೇಕು. ಅದೇ ರೀತಿ ಬಣ್ಣ ಉಳಿದರೆ ಅದನ್ನು ತೊಳೆಯುತ್ತಾರೆ. ಪುನಃ ಹೊಸದಾಗಿ ಮಾರನೆ ದಿನ ಬಣ್ಣಗಳನ್ನು ಕಲಿಸಿಕೊಳ್ಳುತ್ತಾರೆ.

ಚಿತ್ರ ಒಣಗಿದ ನಂತರ ಬಣ್ಣ ದಟ್ಟವಾಗಿದ್ದರೆ ಅದನ್ನು ಚೂಪಾದ ಚಾಕುವಿನಿಂದ ಅಥವಾ ಬ್ಲೇಡ್‌ನಿಂದ ಒರೆಯುತ್ತಾರೆ. ನಂತರ ಸೂಕ್ಷ್ಮವಾಗಿ ಗಮನಿಸಿ ಚಿತ್ರದ ಮೇಲೆ ಪಕ್ಷಿಗರಿ. ಪುಕ್ಕದಿಂದ ಒರೆಸುತ್ತಾರೆ ನಂತರ ಸ್ವಲ್ಪ ಒಣಗಿದ ಅಕ್ಕಿ ಹಿಟ್ಟಿನ ಉಂಡೆಗಳಿಂದ ಚಿತ್ರಗಳನ್ನು ಉಜ್ಜುತ್ತಾರೆ. ಇದರಿಂದ ಇರತಕ್ಕೆ ಕೊಳೆಯನ್ನು ತೆಗೆಯುತ್ತಾರೆ.

ಚಿನ್ನವನ್ನು ಉಪಯೋಗಿಸುವ ವಿಧಾನ

ಚಿತ್ರ ಸಂಪೂರ್ಣವಾಗಿ ಸಿದ್ಧವಾದ ನಂತರ ಕಡೆಯಲ್ಲಿ ಚಿನ್ನದ ಬಣ್ಣವನ್ನು ತುಂಬುತ್ತಾರೆ. ಕಾರಣವೆಂದರೆ ಇದು ಅತಿ ಬೆಲೆಯುಳ್ಳದಾದುರಿಂದ ದುರುಪಯೋಗ ತಪ್ಪಿಸಲು ಈ ಚಿನ್ನದ ಬಣ್ಣವನ್ನು ಮುಖ್ಯ ಚಿತ್ರಕ್ಕೆ ಮತ್ತು ಚಿತ್ರದಲ್ಲಿ ಅಂಚುಗಳಿಗೆ. ಬಟ್ಟೆ (ವಸ್ತ್ರ)ಯ ಮೇಲೆ, ಹೂ ಅಲಂಕಾರಗಳಿಗೆ, ಚಿತ್ರದ ಒಡವೆಗಳಿಗೆ ಅವಶ್ಯಕವಾದ ಕಡೆಗಳಲ್ಲಿ ಉಪಯೋಗಿಸುತ್ತಾರೆ. ಕೆಲವು ಕಡೆ ಶುದ್ಧ ಚಿನ್ನದ ಬಣ್ಣದ ಬದಲು ಹಳದಿ ಅಕರ್ಸ ಬಳಸುತ್ತಾರೆ. ಅಲ್ಲದೆ ಆರ್ಪಿಮೆಂಟ್ ಹಳದಿ ಬಿಳಿಗಳ ಮಿಶ್ರಿಣ ಬಳಸುತ್ತಾರೆ. ಚಿನ್ನದ ಬಣ್ಣ ಹಾಕಿದ ಮೇಲೆ ಕೊನೆಯಲ್ಲಿ ಮೃದುವಾದ ಕಲ್ಲಿನ ಮೇಲೆ ಉಜ್ಜುತ್ತಾರೆ. ಅದನ್ನು ಉಜ್ಜಿದ ನಂತರ ಹೊಳಪು ಬರುತ್ತದೆ.


ಕುಂಚದ ಬಳಕೆ

ಚಿತ್ರ ಬರೆಯುವಾಗ ಬ್ರಷ್ (ಕುಂಚ) ಅತಿ ಮುಖ್ಯವಾದುದು. ಈ ಕುಂಚಗಳನ್ನು ಸಾಮಾನ್ಯವಾಗಿ ಬೆಕ್ಕು ಅಥವಾ ಮೇಕೆಯ ಕೂದಲಿನಿಂದ ತಯಾರಿಸುತ್ತಾರೆ. ಇದನ್ನು ಪೈನ್ ಮರ, ಗಂಧದ ಮರ ಅಥವಾ ಔಷಧಿಯ ಸಸ್ಯಗಳ ಕಡ್ಡಿಗೆ ರಂಧ್ರ ಮಾಡಿ ಅಥವಾ ವಿಶೇಷವಾಗಿ ಸುತ್ತಿರುತ್ತಾರೆ.

ತೆಳುವಾಗ ಗೆರೆ ಎಳೆಯಲು ನವಿರಾದ ಕೂದಲನ್ನೂ, ದಪ್ಪವಾದ ಗೆರೆ ಎಳೆಯಲು ದಪ್ಪವಾದ ಕೂದಲು ಬಳಸುತ್ತಾರೆ. ಬೇರೆ ಬೇರೆ ರೀತಿಯಾದ ಕೂದಲು ಸಂಗ್ರಹಿಸಿ ಅದನ್ನು ಕಡ್ಡಿಗಳಿಗೆ ಸುತ್ತುತ್ತಾರೆ. ನಂತರ ಕೂದಲನ್ನು ಅಂಟಿನಲ್ಲಿ ಅದ್ದಿ ಕಡ್ಡಿಯ ರಂಧ್ರದಲ್ಲಿ ಇಟ್ಟು ಅದನ್ನು ಚೆನ್ನಾಗಿ ಒಣಗಿಸುತ್ತಾರೆ. ಕುಂಚಗಳನ್ನು ನಾವು ಸರಿಯಾಗಿ ಗಮನಿಸಬೇಕು. ಇಲ್ಲದಿದ್ದರೆ ಒಂದು ಕೂದಲು ಸೊಟ್ಟವಾಗಿದ್ದರೆ, ಆಗ ಅದನ್ನು ತೆಗೆಯಬೇಕು. ಇಲ್ಲದಿದ್ದರೆ ಅದು ಬಣ್ಣ ಬಳಿಯುವಾಗ ತೊಂದರೆ ಕೊಡುತ್ತದೆ.


ಟಿಬೆಟಿಯನ್ ಕಲಾವಿದರು ಚಿತ್ರವನ್ನು ಬರೆಯಲು ಬಳಸುವ ಥಾಂಕಾ ಶೈಲಿಯ ರೇಖಾಚಿತ್ರಗಳು ಮತ್ತು ಥಾಂಕಾ ಶೈಲಿಯ ತಾಳಮಾನಗಳನ್ನು ಚಿತ್ರದಲ್ಲಿ ಕಾಣಬಹುದು.

ಅವಲೋಕೇಶ್ವರ ಅಳತೆ ಮತ್ತು ಚಿತ್ರ






ಬುದ್ಧಶಾಕ್ಯಮುನಿಯ ಅಳತೆ ಮತ್ತು ಚಿತ್ರ






ಟಿಬೆಟಿಯನ್ ಕಲಾವಿದರು ಚಿತ್ರವನ್ನು ಬರೆಯಲು ಬಳಸುವ ಥಾಂಕಾ ಶೈಲಿಯ ರೇಖಾಚಿತ್ರಗಳು ಮತ್ತು ಥಾಂಕಾ ಶೈಲಿಯ ತಾಳಮಾನಗಳನ್ನು ಚಿತ್ರದಲ್ಲಿ ಕಾಣಬಹುದು.

ಚಕ್ರಸಂವರನ ಅಳತೆ ಮತ್ತು ಚಿತ್ರ






ಅವಲೋಕೇಶ್ವರ ಅಳತೆ ಮತ್ತು ಚಿತ್ರ





ಟಿಬೆಟಿಯನ್ ಕಲಾವಿದರು ಚಿತ್ರವನ್ನು ಬರೆಯಲು ಬಳಸುವ ಥಾಂಕಾ ಶೈಲಿಯ ರೇಖಾಚಿತ್ರಗಳು (ವಿಶಿಷ್ಟ ವಸ್ತುವಿನ ರೇಖಾಚಿತ್ರಗಳು)

ಶಾಂತದೇವತೆಗಳಿಗೆ ಮುಡಿಪು



ಕುಪಿತ ದೇವತೆಗಳಿಗೆ ಮುಡಿಪು



ಎಂಟು ಪವಿತ್ರ ಚಿಹ್ನೆಗಳು





ಬ್ರಷನ್ನು ಅತಿ ಬಣ್ಣದಲ್ಲಿ ಒಣಗಿಸುವುದರಿಂದ ಅದು ಹಾಳಾಗುವ ಸಂಭವವಿರುತ್ತದೆ. ಆ ಬ್ರಷ್‌ನ ಕೆಲಸ ಮುಗಿದ ನಂತರ ಅದನ್ನು ತೊಳೆದಿಡಬೇಕು. ಬ್ರಷ್‌ಗಳಲ್ಲಿ ಅತಿ ತೆಳುವಾದ ಬ್ರಷ್‌ಗಳಿಂದ ಹಿಡಿದು ದಪ್ಪನಾದ ಬ್ರಷ್‌ಗಳ ತನಕ ಇದೆ. ಚಿಕ್ಕ ಹಾಗೂ ದೊಡ್ಡ ಬ್ರಷ್‌ಗಳನ್ನು ಇಡಲು ಬಿದುರಿನ ಕೊಳವೆಯನ್ನು ಉಪಯೋಗಿಸುತ್ತಾರೆ. ಯಾವಾಗಲೂ ಬ್ರಷ್‌ಗಳನ್ನು ಇಡುವಾಗ ಕೂದಲು ಮೇಲು ಭಾಗಕ್ಕೆ ಬರುವ ಹಾಗೆ ಜೋಡಿಸಬೇಕು.

ಗಿಡಮೂಲಿಕೆಯ ಬಣ್ಣಗಳು

೧೯೦೦ರವರೆಗೆ ಗಿಡ, ಸಸ್ಯದ ರೂಪದಲ್ಲಿದ್ದ ಬಣ್ಣಗಳನ್ನು ಉಪಯೋಗಿಸುತ್ತಿದ್ದರು. ಸಸ್ಯದ ಎಲೆ, ಕಾಂಡ, ಬೇರು ಬೇರ್ಪಡಿಸಿ ಸಂಸ್ಕರಿಸಿ ಬಣ್ಣಗಳನ್ನು ಪಡೆಯುತ್ತಿದ್ದರು. ಈಗ ಖನಿಜ ಮತ್ತು ಹೆಚ್ಚಾಗಿ ರಾಸಾಯನಿಕ ಕೃತಕ ಬಣ್ಣವನ್ನು ಬಳಸುತ್ತಿದ್ದಾರೆ. ಲಾಕಡ್ ಡೈ ಅಥವಾ ಶ್ಯಾಲಾಕ್ ಡೈಯನ್ನು ಗೆದ್ದಲು ಹುಳುವಿನಿಂದ ತಯಾರಿಸುತ್ತಾರೆ. ಈಗ ಹುಳುವಿನ ಬದಲು ಸಸ್ಯಜನ್ಯವಾದ ರೆಜ್‌ಪಾತ್ ಸಸ್ಯವನ್ನು ಕುದಿಸಿ ತಯಾರಿಸುತ್ತಾರೆ. ಇನ್ನು ಮಿಕ್ಕ ಡೈಗಳೆಂದರೆ ಹಳದಿ. ಇದು ಗಿಡ, ಮರ, ಅರಣ್ಯ ಸಂಪತ್ತು ತುಂಬಿರುವ ಗುಡ್ಡ ಪ್ರದೇಶದಲ್ಲಿ ಕಂಡು ಬರುತ್ತದೆ. ಮೂರು ಮುಖ್ಯ ಹಳದಿ ಬಣ್ಣವನ್ನು ಕಾಡು ಗುಲಾಬಿಯ ಎಲೆಗಳಿಂದ ಹಳದಿ ಉತ್ಪಲ್ ಹೂವಿನ ಎಲೆಗಳಿಂದ ಜೊನ್‌ಕಾನ್ ಹೂವಿನಿಂದ ಬಣ್ಣ ತಯಾರಿಸುತ್ತಾರೆ.

ಕೆಂಪು ಅಥವಾ ಕೇಸರಿ

ಎರಡು ರೀತಿಯ ಕೆಂಪು ಹಾಗೂ ಕೇಸರಿ ಬಣ್ಣಗಳು ರೆಡ್ಡಿಷ್ ಬ್ರೌನ್, ಇದನ್ನು ಕೆಂಪು ಗಂಧದ ಮರದಿಂದ ತಯಾರಿಸುತ್ತಾರೆ. ಕಿತ್ತಲೆ ಮಿಶ್ರಿತ ಹಳದಿ ಬಣ್ಣದ ಡೈಯಿಂದ ಕೇಸರಿಯನ್ನು ತಯಾರಿಸುತ್ತಾರೆ.

ಹೊರ ರೇಖೆ


ಚಿತ್ರಗಳನ್ನು ಬರೆದ ನಂತರ ಕಡೆಯಲ್ಲಿ ಸಣ್ಣ ವಿಶೇಷಗಳನ್ನು ಕೂಡ ಉದಾ–ಹುಬ್ಬು, ಕಣ್ಣಿನ ರೆಪ್ಪೆಗಳು ಮತ್ತು ಆಭರಣಗಳನ್ನು ತೆಳುವಾದ ಬಣ್ಣಗಳಿಂದ ಗುರುತಿಸುತ್ತಾರೆ. ಇದರ ನಂತರ ಚಿತ್ರ ಮುಗಿಯುತ್ತದೆ. ಕಪ್ಪು ಹೂರರೇಖೆ ಹಾಕಲು ಸಾಮಾನ್ಯವಾಗಿ ನೀಲಿ ಮತ್ತು ಲಾಕ್ ಡೈ ಕೆಂಪು ಬಣ್ಣ ಉಪಯೋಗಿಸುತ್ತಾರೆ. ಈ ಬಣ್ಣಗಳು ಶೇಡಿಂಗ್‌ಗಳಿಗೆ ಉಪಯೋಗಿಸುವಾಗ ಬೇರೆ ಬಣ್ಣಗಳಿಗಿಂತ ಗಾಢವಾಗಿರುತ್ತದೆ.

ನೇರಳೆ ಬಣ್ಣವನ್ನು ಔಟ್ ಲೈನಾಗಿ ನೀಲಿ; ನೇರಳೆ ಮತ್ತು ಹಸಿರು ಬಣ್ಣ ತುಂಬಿರುವುದಕ್ಕೆ ಬಳಸುತ್ತಾರೆ. ಲ್ಯಾಕ್‌ಡೈಯನ್ನು ಅದೇ ಬಣ್ಣದ ಸುತ್ತ ಬರೆಯುತ್ತಾರೆ. ನೀರಿನ ಬಣ್ಣಕ್ಕೆ ನೀಲಿ ಬಣ್ಣ ಹಾಗೂ ಅಲೆಗಳಿಗೆ ಬಿಳಿ ಬಣ್ಣವನ್ನು ಉಪಯೋಗಿಸುತ್ತಾರೆ. ಅಲ್ಲದೆ ಮಾಲೆಗಳು, ಆಭರಣಗಳು ಮುಖ್ಯ ಚಿತ್ರ ಪ್ರಭಾವಳಿಗೆ ಉಪಯೋಗಿಸುತ್ತಾರೆ. ಇದಲ್ಲದೆ ಕಪ್ಪು ಇಂಕ್, ತಿಳಿ ನೀಲಿ ಬಣ್ಣವನ್ನು ಕೂಡ ಲೈನ್‌ಗಳಾಗಿ ಉಪಯೋಗಿಸುತ್ತಾರೆ. ಅಲ್ಲದೆ ಬೇರೆ ಬೇರೆ ಬಣ್ಣಗಳನ್ನು ಉಪಯೋಗಿಸುತ್ತಾರೆ. ಉದಾ–ಕಾಮನಬಿಲ್ಲು, ಮೋಡಗಳು.

ಭಿತ್ತಿ ಮತ್ತು ಶಿಲ್ಪ ಚಿತ್ರಕಲೆ ಪರಿಕರಗಳು



■ ಭಿತ್ತಿಚಿತ್ರದ ಪರಿಕರಗಳು



■ ಟ್ರೇಸಿಂಗ ಪೇಪರ್





■ ಶಿಲ್ಪಗಳ ಮೇಲಿನ ಚಿತ್ರದ ಪರಿಕರಗಳು

ಚಿತ್ರದ ಕಡೆಯಲ್ಲಿ ಮುಖ್ಯ ದೇವ-ದೇವತೆಗಳ ಮುಖ ಬರೆಯುತ್ತಾರೆ. ಕಣ್ಣು ಬರೆಯುವುದು, ಅತಿ ಮುಖ್ಯವಾದುದು. ಕಣ್ಣುಗಳಲ್ಲಿ ಬೇರೆ ಬೇರೆ ರೀತಿಯ ಕಣ್ಣುಗಳು ಕಂಡು ಬರುತ್ತವೆ. ಕಣ್ಣು ಬರೆಯುವಾಗ ಮಧ್ಯಕ್ಕೆ ಬಿಳಿ ಬಣ್ಣವನ್ನು ಬರಸಿ ಕೆಳಭಾಗಕ್ಕೆ ಲ್ಯಾಕ್‌ಡೈನ ಕಣ್ಣಿನ ಒಳಭಾಗದ ತೆಳುಗಿರುತ್ತದೆ. ಬಣ್ಣವನ್ನು ಕಣ್ಣಿನ ಇತರ ಭಾಗಗಳಿಗೆ ಬರೆಯುತ್ತಾರೆ. ಆದರೆ ಸಣ್ಣ ಚಿತ್ರಗಳಲ್ಲಿ ಈ ಪ್ರತಿಯೊಂದಕ್ಕೂ ಬರೆಯಲು ಆಗುವುದಿಲ್ಲ. ಆದ್ದರಿಂದ ಒಂದು ಸಣ್ಣ ಗೆರೆಯನ್ನು ಕಪ್ಪು ನೀಲಿ ಬಣ್ಣದಿಂದ ಸೂಚಿಸುವಾಗ ಕಣ್ಣಿನ ರೆಪ್ಪೆ ರೀತಿ ಕಂಡು ಬರುತ್ತದೆ. ನಂತರ ಕಡೆಯಲ್ಲಿ ಚಿನ್ನದ ಬಣ್ಣವನ್ನು ಉಜ್ಜಿ ಹೊಳಪು ಬರಿಸುತ್ತಾರೆ. ಚಿತ್ರಗಳು ಮುಗಿದ ನಂರ ಚಿತ್ರದ ಹಿಂಭಾಗದಲ್ಲಿ ಮೃದು ಕಲ್ಲಿನಿಂದ ಉಜ್ಜುತ್ತಾರೆ ಮತ್ತು ಚಿತ್ರದ ಹೃದಯ ಭಾಗದಲ್ಲಿ ಓಂ, ಅಹಾ, ಅಂ ಎಂದು ಬರೆದು ನೇತು ಹಾಕಿ ಅದರ ಮುಂದೆ ಗುರುಗಳು ಮತ್ತು ಸಭಾ ಜನರು ಸೇರಿ ಪ್ರಾರ್ಥನೆ ಮಾಡಿ ಆ ಚಿತ್ರದಲ್ಲಿರುವ ದೇವ ದೇವತೆಯನ್ನು ಆಹ್ವಾನಿಸುತ್ತಾರೆ.

ಟಿಬೆಟ್ಟಿನ ಸಂಸ್ಕೃತಿಯ ಐದು ಪ್ರಮುಖ ಅಂಗಗಳಲ್ಲಿ ವೈಜ್ಞಾನಿಕ ಚಿತ್ರಗಳು ಮತ್ತು ಅದರ ರಚನೆ ಕ್ರಮ ಸಹ ಒಂದು ಶಾಂತಿ ಮತ್ತು ಸೌಹಾರ್ದಯುತವಾದ ಸರ್ವೋಚ್ಛ ಕ್ಷೇತ್ರಗಳಲ್ಲಿ ಧಾನ ಮತ್ತು ಧರ್ಮ ಒಟ್ಟುಗೂಡಿದ ಅರ್ಹತೆಗಳ ಮಾದರಿಯಾಗಿ ಕಾಣ ಸಿಗುತ್ತದೆ. ಇದರಲ್ಲಿ ಅತಿ ವಿಶೇಷವೆಂದರೆ ಶ್ರದ್ಧೆ ಮತ್ತು ಆಸಕ್ತಿಗಳು ಪ್ರಮುಖ ಕಾರಣವಾಗಿ ಅಭಿವೃದ್ಧಿ ಶೀಲವಾಗಿರುವಲ್ಲಿ ನಡವಳಿಕೆಯ ವರ್ಗೀಕರಣ. ದೇಶಭಕ್ತಿಯ ವಿಧಿ ವಿಧಾನಗಳು ಬುದ್ಧನ ಶಾಂತಿಯುತ ಮುನ್ನಡೆಯ ರೂಪಾಂತರ ಅಂಶಗಳಾಗಿವೆ.

೧. ದೇವಾಲಯದ ಭಿತ್ತಿ ಚಿತ್ರಕಲೆ

ಕರ್ನಾಟಕದಲ್ಲಿ ದೇವಾಲಯದ ಭಿತ್ತಿಚಿತ್ರಕಲೆಗಳು ಅನೇಕ ಧರ್ಮಗಳನ್ನು ಆಧರಿಸಿದ ಭಿತ್ತಿಚಿತ್ರಗಂತೆ ಟಿಬೆಟಿಯನ್ನರ ಪರಿಸರದಲ್ಲಿನ ದೇವಾಲಯಗಳಲ್ಲಿ ಬೌದ್ಧ ಧರ್ಮವನ್ನಾಧರಿಸಿದ ಹಾಗೂ ವಿದೇಶಿಯ ಶೈಲಿಗಳ ಮಾದರಿಯಲ್ಲಿ ಥಾಂಕ ಶೈಲಿಯ ಭಿತ್ತಿಯನ್ನು ಕಾಣಬಹುದು. ದೇವಾಲಯದ ಭಿತ್ತಿಚಿತ್ರಕಲೆಯ ಒಂದು ಪ್ರಕಾರವಾಗಿ ಟಿಬೆಟ್ ಪರಿಸರದಲ್ಲಿ ರಚನೆಗೊಂದೆ.

ಬೈಲುಕುಪ್ಪೆ ಪರಿಸರದಲ್ಲಿರುವ ನಮ್‌ಡ್ರೋಲಿಂಗ್ ಬೌದ್ಧವಿಹಾರ ಅಥವಾ ಸ್ವರ್ಣದೇವಾಸ್ಥಾನ, ತಾರಾದೇವಿದೇವಾಲಯ, ಗುರು ಪದ್ಮಸಂಭವ ಬೌದ್ಧವಿಹಾರ. ಧರ್ಮಕಾಯಮಂದಿರ, ಸಂಭೂಗಕಾಯ ದೇವಾಲಯಗಳ ಗೋಡೆಯ ಮೇಲಿನ ಭಿತ್ತಿಚಿತ್ರಗಳನ್ನು ಕಾಣಬಹುದು. ಇವುಗಳನ್ನು ೧೯೯೫ರ ಕಾಲದಲ್ಲಿ ನಿಪುಣ ಟಿಬೆಟಿಯನ್ನರಿಂದ, ನೇಪಾಳ ಬಂದ ೧೦೦ ರಿಂದ ೨೦೦ಕ್ಕೂ ಅಧಿಕ ಕಲಾವಿದರು ಹಾಗೂ ನೇಪಾಳ ಬೌದ್ಧ ಸನ್ಯಾಸಿಗಳು ರಚಿಸಿದ್ದಾರೆ.

೧.೧ ಸ್ವರ್ಣ ದೇವಾಲಯದ ಭಿತ್ತಿಚಿತ್ರಗಳು

ಟಿಬೆಟಿನ ವಾಸ್ತುಶಾಸ್ತ್ರದಡಿಯಲ್ಲಿ ಆಯತಾಕಾರದಲ್ಲಿ ಕಟ್ಟಿಸಿ ಮೂರು ಅಂತಸ್ತಿನಿಂದ ಕೂಡಿದ್ದು ವರ್ಣರಂಜಿತ ಹಾಗೂ ಶಿಲ್ಪದಾರಿತ ನಕ್ಷಾಚಿತ್ರಗಳನ್ನು ಒಳಗೊಂಡು ಮಧ್ಯಭಾಗದಲ್ಲಿ ನ್ಯಾಯಚಕ್ರ ಎಡ ಮತ್ತು ಬಲ ಭಾಗದಲ್ಲಿ ಜಿಂಕೆಮರಿಗಳು ಕಾವಲು ಕಾಯುತ್ತಾ ಕುಳಿತಿದ್ದು ಇದು ಟಿಬೆಟಿಯನ್ನರ ರಾಷ್ಟ್ರ ಚಿನ್ಹೆಯನ್ನು ಸೂಚಿಸುತ್ತದೆ. ಗೋಪುರವು ಮೂರು ಅಂತಸ್ತನ್ನು ಹೊಂದಿದ್ದು, ಮೊದಲನೆಯದು ಕೆಳವರ್ಗದ ಧಾರ್ಮಿಕ ವಿಧಿ, ಎರಡನೆಯದು ಮಧ್ಯಮ ವರ್ಗದವಿಧಿ ಹಾಗೂ ಮೇಲಿನ ಅಂತಸ್ತು ಉತ್ತಮ ಗುಣಮಟ್ಟದ ಧಾರ್ಮಿಕ ವಿಧಿಯ ಸ್ಥಾನವನ್ನು ನೀಡಿ ರಚಿಸಿದ್ದಾರೆ. ಗೋಪುರವು ಚಿನ್ನೆ

ದೇವಾಲಯದ ಪರಿಸರದ ಭಿತ್ತಿ ಚಿತ್ರಗಳು









ಮತ್ತು ತಾಮ್ರ ಮಿಶ್ರಿತ ವರ್ಣವನ್ನು ಲೇಪಿಸಿದ್ದಾರೆ. ಟಬೆಟಿಯನ್ನರ ವಾಸ್ತು ಶಾಸ್ತ್ರಕ್ಕಿಂತ ಚಿತ್ರಕಲೆಗೆ ಸಂಬಂಧಿಸಿದ ಅಧ್ಯಯನವಾದ್ದರಿಂದ ದೇವಾಲಯದ ಚಿತ್ರಕಲೆಯನ್ನು ಆಧರಿಸಿ ಚರ್ಚಿಸಲಾಗಿದೆ.

ದೇವಾಲಯದ ಮುಂದಿನ ಎಡ ಬದಿಯಿಂದ ನೋಡುವುದಾದರೆ ತನು ಪಂಜಿ ಎಂಬ ವಿಷಯವನ್ನು ಆಧರಿಸಿದ ಭಿತ್ತಿಚಿತ್ರವಾಗಿದೆ , ಇಲ್ಲಿನ ಚಿತ್ರಗಳು ಸುಮಾರು ಕಡಿಮೆ ಎಂದರೆ ೬ ಅಡಿ ಯಿಂದ ೧೨ ಅಡಿಗಳಿಗೆ ಹೆಚ್ಚೆಂದರೆ ೧೦ ಅಡಿಗಳಿಗೆ ಅಥವ ೨೦ ಅಡಿಯವರೆಗೂ ಚಿತ್ರಿಸಿದ್ದಾರೆ. ಮೇಲ್ಭಾಗದಲ್ಲಿ ವಿವಿಧ ವಿನ್ಯಾಸದ ನಕ್ಷೆಗಳನ್ನು ರಚಿಸಿ ಸೀಲಿಂಗ್ ನಿಂದ ೪ ಅಡಿಗಳಿಗೆ ಕಳೆಗೆ ನಕ್ಷೆಗಳು, ನೆಲದಿಂದ ೩ ಅಡಿ ಮೇಲಕ್ಕೆ ನಕ್ಷೆಗಳನ್ನು ರಚಿಸಿದ್ದಾರೆ. ಇವು ಮಣಿ ಮಧ್ಯಭಾಗದಲ್ಲಿ ನಕ್ಷಚಿತ್ರಗಳನ್ನು ಹೊಂದಿದ್ದು ಅನೇಕ ಹೂ ಬಳ್ಳಿಗಳು ಡ್ರಯಾನ್ ಗಳಂತಹ ನಕ್ಷೆಚಿತ್ರಣವನ್ನು ಹೊಂದಿವೆ ಉತ್ತಮ ನಯಗಾಯರಿಕೆ ಮತ್ತು ಸೂಕ್ಷ್ಮತೆಯನ್ನು ನಕ್ಷೆಯಲ್ಲಿ ಕಾಣಬಹುದು, ದೇವಾಲಯದ ಮುಂಭಾಗದ ಬಾಗಿಲಿನ ಬಳಿಯ ಗೋಡೆಯ ಮೇಲೆ ಟಬೆಟಿನ ನಾಲ್ಕು ದಿಕ್ಕಿನ ರಾಜರುಗಳು (೧) ಉತ್ತಮ ರಾಜ (೨) ವೈಷ್ಣವರ್ಣರಾಜ (೩) ಪಶ್ಚಿಮರಾಜ (೪) ವಿರುಪಾಕ್ಷ ಗೋಡೆಯಲ್ಲಿ ಚಿತ್ರಿಸಿದ್ದಾರೆ,

ನಂತರ ಬಲಭಾಗದ ಮೊದಲ ಚಿತ್ರವು ಬೇಸೀರಿಂಗ್ ನಾಮ್ ಡುಗ್ ರವರ ವಿಷಯಕ್ಕೆ ಸಂಬಂಧಿಸಿದ್ದಾಗಿದೆ, ದೇವಾಲಯದ ಒಳ ಪ್ರವೇಶಿಸಲು ಲೋಹ ಮಿಶ್ರತ ಚಿನ್ನ ಲೇಪನದ (೫) ಬೃಹದಾಕಾರದ ಅಂದರೆ ೬೦ ಅಡಿ ಹೊಂದಿದ ಗುರು ಪದ್ಮಸಂಭವ ಮತ್ತು ೫೮ಅಡಿ ಎತ್ತರದ ಬುದ್ಧ ಅಮಿತಾಯಸ್ ಮೂರ್ತಿಗಳನ್ನು ಕಾಣಬಹುದು. ಚಿತ್ರದಲ್ಲಿ ತೋರಿಸಿದಂತೆ ಸುಂದರವಾಗಿರುತ್ತದೆ, ದೇವಾಲಯದ ಮೊದಲ ಅಂತಸ್ತಿನ ಗೋಡೆಯ ಗುರುದೇವ ಲಾಮ, ಹಿದಮಾ ಮತ್ತು ಡಾಕಿನಿ ಮೂರು ದೇವತೆಗಳ ಚಿತ್ರಗಳನ್ನು ಹೊಂದಿದೆ. ಈ ಚಿತ್ರದಲ್ಲಿ ನಾವು ತಾಂತ್ರಿಕ ಬೌದ್ದ ಧರ್ಮದ ಪ್ರಭಾವಗಳನ್ನು ಕಾಣಬಹುದಾಗಿದೆ. ಪದ್ಮಸಂಭವ, ಬುದ್ಧ, ಹರುಕ , ಆಯುರ್ವೇದಿಕ, ಬುದ್ಧ, ಮಂಜುಶ್ರಿ, ವಜ್ರಾಂಗಿಣಿ, ವಜ್ರಂಧರ, ಮಂಡಲಗಳು, ಯಕ್ಷಿಣಿಯರು ಮುಂತಾದವು ಇಲ್ಲಿ ದೇವ, ದೇವತೆಗಳು ಕ್ರೂರವಾಗಿ ತಾಂತ್ರಿಕ ಬೌದ್ದ ಧರ್ಮದ ಪ್ರಕಾರ ಶಾಂತದೇವತೆಗಳು ರೇಷ್ಮೇ ವಸ್ತುಗಳನ್ನು ಮತ್ತು ಅಮೂಲ್ಯ ಲೋಹ ಮತ್ತು ಹರಳುಗಳನ್ನು ಧರಿಸಿದ್ದಾರೆ. ಕೋಪದ ದೇವತೆಗಳು ಚರ್ಮ ಮತ್ತು ಮೂಳೆಯ ಆಭರಣಗಳನ್ನು ಹಿಡಿದಿರುವುದು ಮತ್ತು ಕೆಲವು ಗಂಡು ದೇವತೆಗಳು ಹೆಣ್ಣುದೇವತೆಗಳನ್ನು ಅಲಂಗಿಸಿರುವುದರ ಉದ್ದೇಶ, ಬುದ್ಧರು ಕ್ರೂರಿಗಳನ್ನು ಉತ್ತಮ ಸ್ಥಿತೆಗೆ ತರಲೆಂದು ಉಗ್ರವಾಗಿ ಕಾಣಿಸಿಕೊಳ್ಳುತ್ತಾರೆ, ಭಗವಾನ್ ಬುದ್ಧ ಸಂಗಾತಿಗಳೊಡನೆ ಸಂಗಮವಾಗಿರುವಂತೆ ಚಿತ್ರಿಸಲಾಗಿದೆ. ನಲವತ್ತಕ್ಕೂ ಆಧಿಕ ಭಿತ್ತಿಚಿತ್ರಣಗಳನ್ನು ಸಂಯೋಜಿಸಿದ್ದಾರೆ, ಮೊದಲಿನ ಅಂತಸ್ತಿನ ಚಿತ್ರಣಗಳನ್ನು ಕೆಳವರ್ಗದ ದೇವತೆಯ ಅವತಾರವೆಂದು ಧಾರ್ಮಿಕ ಕ್ರಿಯೆಯಲ್ಲಿ ಕೆಳದರ್ಜೆಯ ಸ್ಥಾನವನ್ನು ನೀಡುತ್ತಾರೆ. ಇವುಗಳು ಜನಸಾಮಾನ್ಯರಿಗೆ ತಿದ್ದುವಂತಹ ವಸ್ತುವಿಷಯಗಳೆಂದು ತಿಳಿದುಬರುತ್ತದೆ.

ಎರಡನೆಯ ಅಂತಸ್ತಿನ ಗೋಡೆಯ ಮೇಲ ಚಿತ್ರದ ಮೇಲೆ ಮೂರ್ತಿಯ ಮುಂಭಾಗದಿಂದ ಹಿಡಿದು ಸುತ್ತಲೂ ಸುಮಾರು ಇಪ್ಪತ್ತೈದು ಭಿತ್ತಿಚಿತ್ರಣಗಳನ್ನು ರಚಿಸಿದ್ದಾರೆ. ಅವು ಪಾಲ್ಯುಲ್ ಸಂಪ್ರದಾಯ ಸಿಂಹಾಸನಾಧೀಶರನು ಮತ್ತು ಜ್ಞಂಗ್ಮ ಸಂಪ್ರದಾಯದ ಮಹಾಮಹಿಮೆ ವಿದ್ವಾಂಸರನ್ನು ಮತ್ತು ಶ್ರೇಷ್ಠ ಬೋಧನೆಯಲ್ಲಿ ಪ್ರತಿನಿಧಿಸುವಂತಹ ಚಿತ್ರಗಳಾಗಿದ್ದು ಇವರು ತಮ್ಮ ಜೀವಿತಾವಧಿಯಲ್ಲಿ ಮಾಡಿದ

ಧರ್ಮೋಪದೇಶ ಬಳಸುವಂತಹ ವಸ್ತುಗಳಾದ ಹಸ್ತಪ್ರತಿ ಘಂಟೆ , ಹರಳು , ತ್ರಾಮದ ಪಿಂಗಾಣಿ , ಶಂಕು ವಿವಿಧ ಲೋಹದ ವಸ್ತುಗಳನ್ನು ಹಿಡಿದುಕೊಂಡು ಕುಳಿತಿರುವ ದೃಶ್ಯಗಳು ಹಾಗೂ ಇವರು ಧರಿಸಿರುವ ವಸ್ತ್ರವಿನ್ಯಾಸ ಹಾಗೂ ಕೇಶಾಲಂಕಾರ ಕಿರೀಟಧಾರಣೆ, ವಿವಿಧ ಭಂಗಿಯಲ್ಲಿ ಆರ್ಶಿವಧಿಸುತ್ತಿರುವಂತಹ ಭಂಗಿಗಳು ವ್ಯಕ್ತಗತವಾಗಿ ಬದಲಾಗುವಂತಹ ಅಂಶಗಳನ್ನು ಆಧರಿಸಿ ವಿವಿಧ ರೀತಿಯಲ್ಲಿ ಬೋಧನೆ ಮಾಡುವಂತ ವರ್ಣಲೇಪನದಿಂದ ಚಿತ್ರಿಸಿದ್ದಾರೆ. ಇಂತಹ ವಿಶಿಷ್ಟ ಅಂಶಗಳನ್ನು ಹೆಸರಿಸಲು ಅನುಕೂಲವಾಗುವಂತೆ ಚಿತ್ರಿಸಿದ್ದಾರೆ, ಇಂತಹ ಭಿತ್ತಿಚಿತ್ರಣಗಳನ್ನು ಗಾಜಿನ ಕಿಟಕಿಯ ಮಧ್ಯಭಾಗದಲ್ಲಿ ಜೋಡಿಸಿದ್ದಾರೆ, ಇಂಥಹ ಚಿತ್ರಗಳನ್ನು ಮಧ್ಯಮ ವರ್ಗದ ಧಾರ್ಮಿಕ ಕ್ರಿಯಾವಿಧಿಗೆ ಪರಿಗಣಿಸಬಹುದು,

ಮೂರನೆಯ ಅಂತಸ್ತಿನಲ್ಲಿ ಬಲ, ಎಡ ಹಾಗೂ ಮೂರ್ತಿಗಳ ಮುಂಭಾಗದಲ್ಲಿ ಚಿತ್ರಿಸಿದ್ದುದು ಕಂಡುಬರುತ್ತದೆ. ಬೌದ್ಧ ಧರ್ಮದ ಅತ್ಯುನ್ನತ ಮಟ್ಟದ ಧಾರ್ಮಿಕ ಕ್ರಿಯಾವಿಧಿಯ ವಸ್ತು ವಿಷಯವಾಗಿದ್ದು, ಜೋಗ್ ಚಿನ್ ಅವರ ಹನ್ನೆರಡು ಮಹಾಮಹಿಮ ಗುರುಗಳನ್ನು ಮತ್ತು ಭಗವಾನ್ ಬುದ್ಧ ಜೀವನದ ಹನ್ನೆರಡು ಮಹತ್ಕಾರ್ಯಗಳನ್ನು ಪ್ರತಿನಿಸುತ್ತವೆ, ಮಹಾಮಹಿಮಗುರುಗಳು ಬುದ್ಧನ್ನು ಪ್ರಾರ್ಥಿಸಿ ಆತನಿಂದ ಬೋಧನೆಯನ್ನು ಕೇಳುತ್ತಿರುವ ಒಂದೊಂದು ಚಿತ್ರಕ್ಕೂ ಒಂದೊಂದು ಮಹತ್ಕಾರ್ಯವನ್ನು ಹೊಂದಿರುವಂತಹ ವಿಷಯ ಹಾಗೂ ಮಂಜುಶ್ರೀ ಅವಲೋಕಿತೇಶ್ವರ, ಬುದ್ಧನಬಳಿಕುಳಿತಿರುವುದು, ಬುದ್ಧನ ಕೆಳಭಾಗದಲ್ಲಿ ಸ್ತ್ರಿಯರು ನಗ್ನದಾರಿಯಾಗಿ ಪ್ರಾರ್ಥಿಸುತ್ತಿರುವುದು, ವಿವಿಧ ಭಂಗಿಯಲ್ಲಿ ಕಾಣಬಹುದು. ಇವರಿಗೆ ಬುದ್ಧನು ಉಪದೇಶವನ್ನು ನೀಡುತ್ತಿರುವಂತೆ ರಚಿಸಿಲಾಗಿದೆ, ಇಂತಹ ಮೂಲವತ್ತಕ್ಕೂ ಅಧಿಕ ಭಿತ್ತಿಚಿತ್ರಣಗಳನ್ನು ಹೊಂದಿದ್ದು. ಇದರಿಂದ ಬೌದ್ಧ ಧರ್ಮವನ್ನು ಚೆನ್ನಾಗಿ ತಿಳಿದುಕೊಳ್ಳುವುದು, ಅಲ್ಲಿನ ಧರ್ಮಗುರುಗಳ ಹಾಗೂ ಕಲಾವಿದರುಗಳ ಆಭಿಪ್ರಾಯವಾಗಿದೆ.

ದೇವಾಲಯದ ಮೂರೂ ಅಂತಸ್ತಿನ ಭಿತ್ತಿಚಿತ್ರಣಗಳನ್ನು ಗಮನಿಸದರೆ ಕೆಳಗಿನ ಅಂತಸ್ತಿನ ಚಿತ್ರಗಳು ಮನುಷ್ಯನ ದೇಹದ ಪಂಚೇಂದಿಯ ಕವಚಗಳಿಗೆ ಕೆಳಮಟ್ಟದ ಬುದ್ಧಿಯುಳ್ಳವರು ಧಾರ್ಮಿಕತೆಯನ್ನು ಅರಿತುಕೊಳ್ಳಲು ನಡೆಸುವ ಹೋರಾಟವನ್ನು ಮನುಷ್ಯ ಅರ್ಥೈಸಿಕೊಳ್ಳವಂಹ ವಸ್ತುವಿಷಯವೆಂದು ಸಾಮಾನ್ಯ ದೇವತೆಗಳನ್ನು ಅರಾಧಿಸುತ್ತಾರೆ. ಮೂರನೆ ಅಂತಸ್ತಿನ ಚಿತ್ರಗಳು ಮನುಷ್ಯನ ಹೃದಯ ಭಾಗಕ್ಕೆ ಸಂಬಂಸಿದಂತೆ ಶಾಂತಿ, ಕರುಣೆ ಧರ್ಮ ಇತ್ಯಾದಿ ವಿಷಯಕ್ಕೆ ಸಂಬಂದಿಸಿದಾಗಿದೆ. ಮಧ್ಯಮ ದೇವರುಗಳೆಂದು ಪರಿಭಾವಿಸುತ್ತಾರೆ. ನಂತರ ಮೂರನೆ ಅಂತಸ್ತಿನ ಚಿತ್ರಗಳು ಅತ್ಯುನ್ನತವಾದ ಅಧ್ಯಾತ್ಮಿಕೆತೆಗ ಸಾಕ್ಷಿಯಾಗಿವೆ ಇವು ಭಗವಾನ ಬುದ್ಧನ ಚರಿತ್ರೆಯಾಗಿದ್ದು, ಇದನ್ನು ಅರಿಯಲು ಮನುಷ್ಯನ ಶರೀರಕ್ಕೆ ಸಂಬಂಧಿಸಿದೆಂದು ಜ್ಞಾನ ಜ್ಯೋತಿಯ ಮೂಲ ಸ್ಥಾನವೆಂದು ಇಂತಹ ದೇವತೆಗಳನ್ನು ಉತ್ಕೃಷ್ಟ ಮಟ್ಟದ ದೇವತಗೆಳೆಂದು ಪರಿಗಣಿಸಿದ ಭಿತ್ತಿಚಿತ್ರಗಳಾಗಿವೆ,

೧.೨ ಧರ್ಮಕಾಯ ದೇವಾಲಯದ ಭಿತ್ತಿಚಿತ್ರಗಳು

ಧರ್ಮಕಾಯ ದೇವಾಲಯದಲ್ಲಿ ಸಿಂಹದ ಮೇಲೆ ನಿಂತಿದ ಧರ್ಮಕಾಯ ದೇವರ ಪಕ್ಕದಲ್ಲಿ ಸೂರ್ಯ ಚಂದ್ರರ ಮಧ್ಯದಲ್ಲಿ ಪ್ರಮುಖ ಚಿತ್ರಗಳನ್ನು ಕಲಾವಿದ ಎರಡು ವೃತ್ತಕಾರದಲ್ಲಿ ವಿನ್ಯಾಸ ಗೊಳಿಸಿದ್ದಾರೆ, ಮೊದಲ ವೃತ್ತಕಾರದ ಐದು ಜಯಶಾಲಿ ಮನೆತನವಿದ್ದರೆ ಅದರ ಸುತ್ತ ಎರಡನೆ ವೃತ್ತಕಾರದಲ್ಲಿ ಬುದ್ಧ ವೈರೋಪನು ಪ್ರಧಾನವಾದ ಚಿತ್ರವಾಗಿದ್ದು, ಬುದ್ಧ ವೈರೋಪನು ಕಮಲ

ಸಿಂಹಾಸನದ ಮೇಲೆ ಕುಳಿತಿದ್ದಾನೆ, ಇದು ಮನುಷ್ಯನನ್ನು ಪ್ರತಿನಿಧಿಸುತ್ತದೆ. ಬುದ್ಧನನ್ನು ಚಿನ್ನದ ನೀರಿನಿಂದ ಬರೆಸಿದ ತಾಮ್ರದಿಂದ ಮಾಡಿದ್ದಾರೆ, ಪ್ರಧಾನ ಮೂರ್ತಿ ಅರು ಅಡಿ ಇದ್ದು ಚಿಕ್ಕ ಮೂರ್ತಿಗಳು ಮೂರು ಅಡಿಗಳನ್ನು ಚಿತ್ರಗಳು ಪೂರ್ವ ಭಾಗದಲ್ಲಿನ ಬೌದ್ಧ ಜ್ಞಾನಿ ಪೂರ್ವದ ಬಾಗಿಲಿನ ಎಡಭಾಗದ ಗೋಡೆಯ ಮೇಲ ಬಿಳಿಯ ಬುದ್ಧನ ಅಕ್ಷೋಭ ಭಾವ ಚಿತ್ರವಿದೆ, ಅದೇ ಬಾಗಿಲ ಬಲಬಾಗದ ಗೋಡೆ ಮೇಲೆ ಹಳದಿ ಬಣ್ಣದ ಬುದ್ಧ ರತ್ನಸಂಭವ, ಬುದ್ಧಮ ಅಮಿತಾಭ, ಹಸಿರುಬುದ್ಧ, ಅಮೋಘಸಿದ್ಧಿಯ ಚಿತ್ರ ಹಾಗೂ ನೀಲಿ ಬುದ್ಧ ವೈರೋಸನ ಚಿತ್ರವಿದೆ. ಪಕ್ಕದಲ್ಲಿ ವಜ್ರಸತ್ತುವಿನ ವಸ್ತುವಿಷಯಕ್ಕೆ ಸಂಭಂದಿಸಿದ ಚಿತ್ರಗಳಲ್ಲಿ ವಜ್ರಧರ, ಇವುಗಳಲ್ಲದೆ ಹನ್ನೆರಡು ಮಹಾಗುರುಗಳ ಚಿತ್ರ, ಗುರು ಕ್ಯಾನಾ ಶಂಗುಲಾಡಂಘಾರು ಸಂಭೋಗಕಾಯ ಭಂಗಿಯಲ್ಲಿದ್ದು ಬುದ್ಧನ ಮೂರು ಅವತಾರಗಳ ಚಿತ್ರಗಳಿವೆ.

೧.೩ ನಿರ್ಮಾಣಕಾಯ ದೇವಾಲಯದ ಭಿತ್ತಿ ಚಿತ್ರಗಳು

ದೇವಾಲಯವನ್ನು ಪ್ರವೇಶಿಸುತ್ತಿದ್ದಂತೆ ಮಧ್ಯಭಾಗವಾದ ಗರ್ಭಗುಡಿಯಲ್ಲಿ ೧೨ ಅಡಿ ಎತ್ತರದ ಪದ್ಮ ಸಂಭವ ಅಥವಾ ಗುರು ರೀನ್ ಪೋಚೆಯ ವಿಗ್ರಹವಿದ್ದು, ತಾಮ್ರದಿಂದ ರಚಿಸಿ ಚಿನ್ನದ ಲೇಪನ ಮಾಡಲ್ಪಟ್ಟಿದೆ. ನಾಲ್ಕು ಸಿಂಹಗಳಿಂದ ಎತ್ತಿ ಹಿಡಿದ ಸಿಂಹಾಸನವಿದೆ. ಎಡಕ್ಕೆ ೬ ಅಡಿ ಎತ್ತರದ ಡಾಕಿನಿ ಮುಖಗಳು ಮೂರು ಅಡಿ ಎತ್ತರದ ಮಾಗರವನ ಮೂರ್ತಿ, ಬಲಕ್ಕೆ ಯಲಾಶೇಗಿಯವುಗಳಲ್ಲಿ ಮಕುಡ ಮೂರು ಅಡಿ ವಿಗ್ರಹಗಳಿದ್ದು ತಾಮ್ರದಿಂದ ಮಾಡಿ ಚಿನ್ನದ ಲೇಪನದ ವಿಗ್ರಹಳಾಗಿದ್ದು ಪ್ರಧಾನ ಮೂರ್ತಿಯ ಸುತ್ತಲೂ ವೃತ್ತಾಕಾರವಾಗಿ ಜೋಡಿಸಿದೆ. ಇಂತಹ ಎರಡು ಮೂರ್ತಿಗಳು ಗುರು ಪದ್ಮಸಂಭವ ಶಿಷ್ಯರುಗಳು. ನಂತರ ದೇವಾಲಯದ ಗೋಡೆಯ ಮೇಲೆ ಮಹಾಗುರು ಡ್ರೋಜೆ ಡೋಲ್ ಡಾನ್ ಚಿತ್ರ ಸುಜಡ್ರಾಗ್ ಡ್ರಾಗನ್ ಚಿತ್ರ, ಗುರು ಸಖ್ಯಾಸಾಂಜೇ ಚಿತ್ರ, ಗುರು ಡೋಡೆಯನ ತ್ಸಾಂಗ್ಸನ್ ಚಿತ್ರ, ಗುರು ಪೋಕೋಡ್ರೋಜಿಯ ಚಿತ್ರ, ಪದ್ಮಸಂಭವ ಚಿತ್ರ, ಗುರು ಪೇಮದಾಲ್ ಪೋನ್ ಚಿತ್ರ, ಗುರು ನಿಮಾ ಓಜೋರ ಚಿತ್ರ, ಮಧ್ಯೆ ಭಾರತದ ೨೫ ಪಂಡಿತರು, ೯ ಮಹಾಸಿದ್ಧಿಗಳು, ಪದ್ಮ ಸಂಭವನ ಇಪ್ಪತ್ತೈದು ಶಿಷ್ಯರು, ಐದು ಜನ ಟಿಬೆಟ್ ರಾಜರು, ೩ ಜ್ಞಾನೋದಯ ಪದ್ಮಸಂಭವ, ಅಮಿತಾಯಸ್ ಸಖ್ಯಾಪಾನ, ೮ ಲಿಂಗಾಪಾನ ಚಿತ್ರವಿದ್ದು ಒಟ್ಟು ೧೦೮ ಬೌದ್ಧ ಧರ್ಮ ಪ್ರಚಾರಕರ ಚಿತ್ರಗಳನ್ನು ಒಳಗೊಂಡಿದೆ. ನಿರ್ಮಾಣಕಾಯ ಮಂದಿರದ ಸುತ್ತ ಇರುವ ನರಭಕ್ಷಕರ ಚಿತ್ರಗಳು ಈ ಭೋಧನ ಮಧ್ಯಭಾಗದಲ್ಲಿ ನರಬಕ್ಷೇರ ಸಾಮಾರಟನ ವೇಷದಲ್ಲಿ ಗುರು ಪದ್ಮಸಂಭವ ಕುಳಿತಿದ್ದು ಅದನ್ನು ನವರಸಗಳನ್ನು ನೃತ್ಯರುಪದಲ್ಲಿ ಪ್ರತಿನಿಧಿಸಲಾಗಿದೆ. ಈತನ ತಲೆಯಲ್ಲಿ ಸೂರ್ಯ, ಚಂದ್ರ ಹಾವುಗಳು, ತಲೆ ಬುರುಡೆಗಳಿಂದ ಅಲಂಕರಿಸಲಾಗಿದೆ. ಈತನ ಸುತ್ತ ನರಮಾಂಸ ತಿನ್ನುತ್ತಿರುವ, ಕುಡಿಯುತ್ತಿರುವ ಡಾಕಿನಿಯರ ಚಿತ್ರವಿದೆ. ಅವನ ಪೀಠಿಕೆ ಕ್ರೂ ಮೃಗವಾದ ಆನೆಗಳು, ಚಿರತೆಗಳು, ಕರಡಿಗಳು, ಹುಲಿಗಳು, ಇತ್ಯಾದಿ ಪ್ರಾಣಿಗಳನ್ನು ಒಳಗೊಂಡಂತೆ ಚಿತ್ರದಲ್ಲಿ ರಚಿಸಿದ್ದಾರೆ. ಮೇಲಿನ ವಸ್ತು ವಿಷಯವನ್ನು ಆಧರಿಸಿಕೊಂಡು ದೇವಾಲಯದ ಸುತ್ತಲೂ ಭಿತ್ತಿಚಿತ್ರಗಳನ್ನು ರಚಿಸಿದ್ದಾರೆ. ಮೇಲಿನ ಎಲ್ಲಾ ದೇವಾಲಯಗಳನ್ನು ಗಮನಿಸಿದರೆ ಪ್ರಮುಖವಾಗಿ ಮಂಜುಶ್ರೀ ಬಿಳಿ ತಾರಾದೇವಿ, ಹಸಿರು ತಾರಾದೇವಿ, ಅವಲೋಕಿತೇಶ್ವರ, ಅರುಕ ಅಥವಾ ಯಮಂತಕ ವಜ್ರಪಾನಿ ಮೆಡಿಷನ್ ಬುದ್ಧ, ಬುದ್ಧನ ಅವತಾರದ ವಸ್ತು ವಿಷಯ, ಗುರು ಪದ್ಮಸಂಭವ ವಸ್ತು ವಿಷಯವು ಹೆಚ್ಚಾಗಿ ಕಂಡು ಬಂದಿದ್ದು ಇವುಗಳಲ್ಲಿ ೪ ದೇವತೆಗಳ ವಿವರಣೆಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

ತಾರಾ ದೇವಾಲಯಗಳ ದ್ವಾರಬಾಗಿಲಿನ ಎಡ ಭಾಗದಲ್ಲಿ ಸಿಮೆಂಟ್‌ನಿಂದ ಮಾಡಿದ ಉಬ್ಬುಶಿಲ್ಪವಾದ ತನು ಪಾಂಜೀಯ ಭಿತ್ತಿಚಿತ್ರವನ್ನು ಕಾಣಬಹುದು ಎಡ ಭಾಗದಲ್ಲಿಯು ಆನೆ ಕೋತಿ ಮತ್ತು ಪಕ್ಷಿ, ಹಣ್ಣು ಕೀಳುತ್ತಿರುವ ಅಂತದೇ ಭಿತ್ತಿಚಿತ್ರವನ್ನು ಕಾಣಬಹುದು, ಚೈತ್ಯಾಲಯವನ್ನು ಒಳ ಪ್ರವೇಶಿಸಿದಂತೆ ತಾರಾದೇವಿಯ ೪"ರಿಂದ ೬" ಅಡಿ ಎತ್ತರದ ಕಂಚಿನ ಪ್ರತಿಮೆ(ಚಿನ್ನದ ಲೇಪನ)ಯನ್ನು ಚಿತ್ರದಲ್ಲಿರುವಂತೆ ಕಾಣಬಹುದು. ಇದರ ಬಲ, ಎಡ ಮತ್ತು ಎದುರು ಗೋಡೆಯ ಮೇಲೆ ಬಿಳಿ ತಾರದೇವಿ ಹಾಗೂ ಹಸಿರು ತಾರದೇವಿಯಂತಹ ೧೨ಕ್ಕೂ ಅಧಿಕ ಭಿತ್ತಿಚಿತ್ರಗಳನ್ನು ಕಾಣಬಹುದು. ಇದರಲ್ಲಿ ಕೈ ಪಾದ ಮತ್ತು ಕಾಲಿನ ಪಾದದಲ್ಲಿ ಕಣ್ಣುಗಳುಳ್ಳ ಚಿತ್ರದ ತಾರದೇವಿಯನ್ನು ಕಾಣಬಹುದು. ಇದು ವಿಶೇಷವಾದ ಬಿಳಿ ಮತ್ತು ಹಸಿರು ಬಣ್ಣದಲ್ಲಿ ಕಾಣಬಹುದು. ಹೀಗೆ ಚಿಕ್ಕಶಿಲ್ಪಗಳಿಂದ ಹಿಡಿದು ದೊಡ್ಡ ಶಿಲ್ಪದ ತಾರೆದೇವಿಯ ಮೂರ್ತಿಯನ್ನು ಕಾಣಬಹುದು. ದೊಡ್ಡಶಿಲ್ಪದ ತಾರದೇವಿಯ ವಿಗ್ರಹವನ್ನೂ ಕಾಣಬಹುದು, ಚಿಕ್ಕದಾದ ೨೧ ರೀತಿಯಲ್ಲಿ ೨'ರಿಂದ ೩' ಅಡಿ ಎತ್ತರವಿರುವ ಶಿಲ್ಪಗಳನ್ನು ಗೋಡೆಗೆ ಅಳವಡಿಸಿರುವುದನ್ನು ಕಾಣಬಹುದು. ಅದರಂತೆ ಭಿತ್ತಿ ಚಿತ್ರಗಳನ್ನು ದೇವಾಲಯದ ಒಳಗೋಡೆಯ ಮೇಲೆ ದೊಡ್ಡ ದೊಡ್ಡ ಅಳತೆಯಗಳಿಂದ ಚಿತ್ರಿಸಿರುವುದನ್ನು ಕಾಣಬಹುದು. ಇವುಗಳಲ್ಲಿ ಬಿಳಿತಾರ, ಹಸಿರುತಾರ, ಕೆಂಪುತಾರ, ಹಳದಿತಾರ ದೇವಿಯ ನಾಲ್ಕು ಬಗ್ಗೆ ಚಿತ್ರಗಳಿವೆ. ಇವುಗಳ ಜೊತೆಗೆ ಕಂಬಗಳ ಮತ್ತು ದೇವಾಲಯದ ಭತ್ತಿನ ಪಟ್ಟಿಕೆ ಭಾಗದಲ್ಲಿ ಕೀರ್ತಿಮುಖ, ಮುತ್ತಿನಹಾರದಂತಹ ಅಲಂಕಾರಿಕ ನಕ್ಷಾಚಿತ್ರಗಳನ್ನೂ ಸಹ ಕಾಣಬಹುದು.

ಭಿತ್ತಿಚಿತ್ರಗಳನ್ನು ಹೊಂದಿರುವಂತಹ ದೇವಾಲಯಗಳಿರುವ ಎರಡನೇ ಸ್ಥಾನವನ್ನು ಮುಂಡಗೊಡ ದೇವಾಲಯದಲ್ಲಿ ಕಾಣಬಹುದು. ಎರಡನೇ ಕ್ಯಾಂಪಿನ ಪರಿಸರದಲ್ಲಿ ನಿರ್ಮಾಣಗೊಂಡಿರುವ ಲೋಸೋಲಾ ದೇವಾಲಯದಲ್ಲಿನ ೨ನೇ ಅಂತಸ್ತಿನಲ್ಲಿನ ಪ್ರವೇಶ ಬಾಗಿಲಿನ ಎಡ, ಬಲ ಹಾಗೂ ಮಧ್ಯಭಾಗದಲ್ಲಿ ಭಿತ್ತಿ ಚಿತ್ರಗಳಿಂದ ಶೃಂಗರಿಸಿದ್ದು. ಜೀವನದ ಕಾಲಚಕ್ರ ಮಂಡಲ, ಟಿಬಿಟಿಯನ್ನರ ಧಾರ್ಮಿಕ ಕ್ಯಾಲೆಂಡರ್ ಹಾಗೂ ಟಿಬೆಟಿನ ನಾಲ್ಕು ದಿಕ್ಕಾಪಾಲಕರಾದ ದ್ರತರಾಷ್ಟ್ರ, ವಿರುಪಾಕ್ಷ, ವಿರುದಕ ವೈಶ್ರವಣರನ್ನು ಹೊಂದಿರುವ ಭಿತ್ತಿಚಿತ್ರ. ಐರಾವತ ಆನೆಯನ್ನು ಪಳಗಿಸುತ್ತಿರುವ ರಾವುತನ ದೃಶ್ಯ ಒಟ್ಟಾರೆಯಾಗಿ ಹತ್ತಕ್ಕೂ ಅಧಿಕ ಭಿತ್ತಿಚಿತ್ರಗಳನ್ನು ೧೦"ರಿಂದ ೧೨" ಅಡಿಯವರೆಗೆ ನಿರ್ಮಿಸಿರುವುದನ್ನು ಕಾಣಬಹುದು.

ಒಳಭಾಗ ಪ್ರವೇಶಿಸಿದರೆ ಬೃಹತ್ ಆಕಾರದ ವಿಗ್ರಹಕ್ಕೆ ಹಿಂಭಾಗದ ಬಲ ಹಾಗೂ ಎಡ ಭಾಗದ ಗೋಡೆ ತುಂಬೆಲ್ಲ ೮"ರಿಂದ೮" ಸೆಂ,ಮೀ ಅಳತೆಯಲ್ಲಿನ ಗಂಜೀಫಾ ರೀತಿಯಲ್ಲಿ ರಚಿಸಿದ ಅಮಿತಾಸುಬುದ್ಧನ ಒಂದೆ ರೀತಿಯ ೪.೧೭.೩೧೬ ಚಿತ್ರಗಳನ್ನೂ ಕಾಣಬಹುದು. ಇಂಥಹ ಭಿತ್ತಿಚಿತ್ರವು ಈ ದೇವಾಲಯದಲ್ಲಿ ಮಾತ್ರ ಕಾಣಬಹುದು. ಇಂತಹ ಚಿತ್ರವನ್ನು ಹೊಂದಿರುವ ವಿಗ್ರಹಕ್ಕೆ ಹಿಂಭಾಗದ ಗೋಡೆಯ ಕೆಳ ಪಟ್ಟಿಕೆಯಲ್ಲಿ ೪ ಅಡಿ ಯಿಂದ-೫ ಅಡಿ ಅಳತೆಯಲ್ಲಿ ಎಂಟು ಪೂಜಾ ದೇವಿಗಳು ಹಾಗೂ ೮ ಶ್ರೇಷ್ಠ ವಸ್ತುವಿನ ದೇವತೆಗಳನ್ನು ಕ್ರಮವಾಗಿ ಚಿತ್ರಿಸಲಾಗಿದೆ. ಇವು ಬೌದ್ಧ ಧರ್ಮದ ಶ್ರೇಷ್ಠ ದೇವರಿಗೆ ಪೂಜಿಮಾಡಲು ಬಳಸಿದ ವಿಶಿಷ್ಟ ಪದಾರ್ಥಗಳನ್ನು ಕೈಯಲ್ಲಿದ್ದು ನೃತ್ಯಸೇವೆ ಭಂಗಿಯಲ್ಲಿ ಹಿಡಿದುಕೊಂಡಿರುವುದನ್ನು ಕಾಣಬಹುದು.

ನಂತರ ಒಂದನೇ ಕ್ಯಾಂಪಿನಲ್ಲಿನ ಗಾಂಧೀನ್ ಸಾಜೀ ದೇವಾಲಯದ ಪ್ರವೇಶ ಬಾಗಿಲಿನ ಎಡ ಮತ್ತು ಬಲ ಭಾಗದಲ್ಲಿ ಟಿಬೆಟಿಯನ್ನರ ಎರಡು ದಿಕ್ಪಾಲಕರುಗಳ ಚಿತ್ರ ಹಾಗೂ ಜನ್ಮ ಮತ್ತು

ಮುಕ್ತಿಮಂಡಲ ಹಾಗೂ ಕಾಲಚಕ್ರದ ಮಂಡಲಗಳ ವಿಷಯದ ಭಿತ್ತಿ ಚಿತ್ರಗಳನ್ನು ಚಿತ್ರಿಸಿರುವುದು ಕಂಡುಬರುತ್ತದೆ.

ಒಡೆಯರಪಾಳ್ಯದ ಡ್ರೋಚಿನ್ ದೇವಾಲಯದಲ್ಲಿ ೨ ದಿಕ್ಕಿನ ದಿಕ್ಪಾಲಕರ ಭಿತ್ತಿ ಚಿತ್ರಗಳನ್ನು ಚಿತ್ರಿಸಿದ್ದು ಹಾಗೂ ಗುರುಪುರದಲ್ಲಿ ಎಲ್ಲಾ ಪರಿಸರದ ಕ್ಯಾಂಪುಗಳ ದೇವಾಲಯದ ಕಂಬದ ಪಟ್ಟಿಕೆ ಹಾಗೂ ಬಾಗಿಲುಗಳ ಸುತ್ತಣ ಅಲಂಕಾರಿಕ ನಕ್ಷೆ ಇರುವುದು ಕಂಡುಬರುತ್ತದೆ.

ಮೇಲಿನ ವಿವರಗಳನ್ನೂ ಅವಲೋಕಿಸಿದರೆ ಬೈಲುಕುಪ್ಪೆಯ ಪರಿಸರ ದೇವಾಲಯದಲ್ಲಿ ಹೆಚ್ಚು ಭಿತ್ತಿಚಿತ್ರಗಳು ಹಾಗೂ ಕಡಿಮೆ ಭಿತ್ತಿಚಿತ್ರವನ್ನು ಹೊಂದಿರುವ ಪ್ರದೇಶವೆಂದರೆ ಗುರುಪುರವಾಗಿದೆ. ಕೆಲವೊಂದು ಪ್ರದೇಶದಲ್ಲಿ ಭಿತ್ತಿಚಿತ್ರ ರಚನೆಯ ಕಾರ್ಯ ನಡೆಯುತ್ತವೆ. ಮುಂದೆ ಎಲ್ಲಾ ದೇವಾಲಯಗಳೂ ಭಿತ್ತಿ ಚಿತ್ರಗಳನ್ನು ಕಾಣುವಂತಹ ಸಂಬವವಿದೆ. ಒಟ್ಟಾರೆಯಾಗಿ ೨೦೦೦ಕ್ಕೂ ಅಧಿಕ ಭಿತ್ತಿಚಿತ್ರಗಳು ಕಂಡುಬಂದಿದ್ದು. ಅವುಗಳೆಲ್ಲವನ್ನೂ ಒಂದೊಂದಾಗಿ ವಿವರವಾಗಿ ವಿಮರ್ಶಿಸುವುದು ಕಷ್ಟ ಸಾಧ್ಯವಾದು, ಎಕೆಂದರೆ ಒಂದೇ ವಿಷಯದಲ್ಲಿ ಅನೇಕ ಭಿತ್ತಿಗಳಿವೆ ಅದ್ದರಿಂದ ಅಧ್ಯಯನದ ವ್ಯಾಪ್ತಿಗೆ ವಿಶೇಷವಾದ ವಸ್ತು ವಿಷಯವನ್ನು ಆರಿಸಿಕೊಂಡು ಚಿತ್ರ ವಿವರಣೆಯಲ್ಲಿ ಬಳಸಿಕೊಳ್ಳಲಾಗಿದೆ.

ದೇವಾಲಯದ ಗೋಡೆಯ ಮೇಲಿನ ಭಿತ್ತಿಚಿತ್ರಗಳ ವಿವರಣೆ

೧.೧ ದಕ್ಷಿಣ ರಾಜ ವಿರುದಕ ಚಿತ್ರ

ಟಿಬೆಟಿನ ಭಿತ್ತಿ ಚಿತ್ರಗಳಲ್ಲಿ ಕಂಡುಬರುವ ನಾಲ್ಕು ದ್ವಾರಪಾಲಕರಲ್ಲಿ ಒಬ್ಬನು. ಈತನು ತನ್ನ ಕೈಯಲ್ಲಿ ಬಿಳಿಯ ಸ್ತೂಪವನ್ನು ಹಿಡಿದಿದ್ದು, ಎಡಗೈಯನು ತನ್ನ ನಡುವಿಗೆ ಇಟ್ಟುಕೊಂಡಿದ್ದಾನೆ. ಕಂದುಗೆಂಪು ವರ್ಣದವನಾಗಿದ್ದು ತಲೆಯ ಮೇಲೆ ಹಸಿರು, ಕೆಸರಿ,ನೀಲಿ ಮುತ್ತುಗಳನ್ನೂಳಗೊಂಡ ಚಿನ್ನದ ಕೀರಿಟ, ಕಿವಿಯಲ್ಲಿ ಕರ್ಣಕುಂಡಲ, ಕಾಮನ ಬಿಲ್ಲಿನಂತಹ ಕಣ್ಣಿನ ಉಬ್ಬು ದೂಡ್ಡದಾದ ಕಣ್ಣು, ತಿರಿವಿದ ಮೀಸೆ, ಚೈನ ಮಾದರಿಯ ಗಡ್ಡದ ಕೆಳಗೆ ಕುತ್ತಿಗೆ ಇದೆ. ಪಾದದವರೆಗೂ ಅನೇಕ ವರ್ಣಮಯ ವಲ್ಲಿಗಳನ್ನು ಸುತ್ತಿಕೊಂಡಿದ್ದು ನಡಕ್ಕೆ ಕೀರ್ತಿಮುಖದ ಮಾದರಿಯ ನಡುಪಟ್ಟಿ ಸುತ್ತಿಕೊಂಡಿದ್ದಾನೆ. ಕಾಲಿಗೆ ಕೆಂಪು ಪ್ರಧಾನವಾದ ಬೂಟು ಧರಿಸಿದ್ದಾನೆ. ಈತನು ಸಮುದ್ರದ ಬಂಡೆಯ ಮೇಲೆ ನಿಂತಿದ್ದು, ಹಿನ್ನಲೆಯನ್ನು ಕಾಕಿ ಬಣ್ಣದ ಬೆಂಕಿಯ ಜ್ವಾಲೆಗಳನ್ನು ಪ್ರಭಾವಳಿಗಳಾಗಿ ರೇಖಾ ಪ್ರಧಾನವಾಗಿ ಚಿತ್ರಿಸಿದ್ದಾರೆ. ತಲೆಯ ಹಿಂಭಾಗದಲ್ಲಿ ಹಸಿರು ಬಣ್ಣದ ಚಂದ್ರ ಅವನ ಸುತ್ತಲು ಕೆಂಪು ವರ್ಣ ಬೆಂಕಿಯ ಜ್ವಾಲೆಯ ಹುರಿಯುತ್ತಿರುವಂತೆ ಚಿತ್ರಿಸಿದ್ದಾನೆ. ಈ ಮೇಲಿನ ಲಕ್ಷಣಗಳನ್ನು ಒಳಗೊಂಡವನನ್ನು ದಕ್ಷಿಣ ರಾಜ ವಿರುದಕ ಎಂದು ಟಿಬೆಟಿಯನ್ನರು ಚಿತ್ರಿಸಿದ್ದಾರೆ. ಇಂತಹ ಚಿತ್ರಗಳು ದೇವಾಲಯದ ಎದುರು ಭಾಗದಲ್ಲಿನ ಬಲ ಮತ್ತು ಎಡ ಭಾಗದ ಗೊಡೆಯ ಮೇಲೆ ಚಿತ್ರಸಿರುತ್ತಾರೆ.

೧.೨ ಪೂರ್ವ ರಾಜ ವಿಶ್ರವಾನ

ಚಿತ್ರದಲ್ಲಿರುವ ಈತನು ಬಿಳಿ ವರ್ಣದವನಾಗಿದ್ದು, ಎಡಗೈಯಲ್ಲಿ ವೀಣೆಯನ್ನು ಹಿಡಿದಿದ್ದು ಬಲಗೈಯಿಂದ ಬಾರಿಸುತ್ತಿರುವಂತೆ ಚಿತ್ರಿಸಿ. ಟಿಬೆಟಿನಲ್ಲಿರುವ ಎರಡು ಕಿವಿ ಮುಚ್ಚಿಕೊಳ್ಳುವ ಕೆಂಪು ಟೋಪಿಯನ್ನು ಹಾಕಿದ್ದು ಅದರ ಮೇಲೆ ಅನೇಕ ನೀಲಿ, ಹಸಿರು, ಕೆಂಪು ವರ್ಣದ ಪ್ರಾಣಿಕೋಡುಗಳ ಮಾದರಿಯಲ್ಲಿ ಹಾರಾಡುವ ಬಟ್ಟೆಗಳನ್ನು ಅಳವಡಿಸಿದಂತೆ ಚಿತ್ರಸಿದ್ದಾರೆ. ಇತನ ಮೈಮೇಲೆ ಹಸಿರು

ಪ್ರಧಾನವಾದ ಅನೇಕ ಬಟ್ಟೆಗಳು. ಕಂದು ಕೆಂಪು ಮತ್ತು ಬಿಳಿ ಷರಾಯಿ ನಡುವಿಗೆ ಕೀರ ಪ್ರಾಣಿಯ ತಲೆ ಚರ್ಮದ ಇಳಿ ಬಿಟ್ಟಿರುವ ನಡುಪಟ್ಟಿ, ಇತ್ಯಾದಿ ಅನೇಕ ಹಳದಿ ಕೆಂಪು, ಬಿಳಿ, ಹಸಿರು ಇತ್ಯಾದಿ ಬಟ್ಟೆಗಳ ತುಂಡು ಮೈಗೆ ಸುತ್ತಿಕೊಂಡಂತೆ ಟಿಬೆಟಿನ ಶೈಲಿಯಲ್ಲಿ ವಸ್ತ್ರದಾರಿಯಾಗಿ ಮುಖವು ಚೌಕಾಕಾರದಲ್ಲಿದ್ದು. ಕಣ್ಣಿನ ಉಬ್ಬು ದೊಡ್ಡದಾದ ಕಣ್ಣು, ದಪ್ಪಮೂಗು, ಗಡುಸಾದ ಮೀಸೆ ಚೈನಿ ಶೈಲಿ ಗಡ್ಡ, ಈತನ ಸುತ್ತಲು ಹಾರಾಡುವ ಮೋಡಗಳು. ಪ್ರಧಾನವಾಗಿ ಸುತ್ತುವರೆದಿದ್ದು ಪ್ರಭಾವಳಿಯಂತೆ ನಕ್ಷೆಯ ಮಾದರಿಯಲ್ಲಿ ಚಿತ್ರಿಸಿದ್ದಾರೆ. ತಲೆಯ ಹಿಂಭಾಗದಲ್ಲಿ ಹಸಿರು ವರ್ಣದ ಚಂದ್ರ ಸುತ್ತಲು ಕೆಂಪು ಬಣ್ಣದ ಬೆಂಕಿಯ ಜ್ವಾಲೆ ಹುರಿಯುವಂತೆ ಸರಳಗೈ ರೇಖಾ ಪ್ರಧಾನ ಚಿತ್ರವನ್ನು ಕಾಣಬಹುದು.

೧.೩ ಉತ್ತರ ರಾಜ ದೃತರಾಷ್ಟ್ರ ಚಿತ್ರ

ಈತನು ಕಪ್ಪು ದಂಡದ ಶ್ರೇಷ್ಠ ಕೊಡೆ ರೂಪದ ಟಿಬೆಟಿಯನ್ನರ ದೈವದ ಧ್ವಜವನ್ನು ಹಿಡಿದಿದ್ದು, ಎಡಗೈಯಲ್ಲಿ ಕಪ್ಪು ಇಲಿಯನ್ನು ಹಿಡಿದಿದ್ದಾನೆ. ಕಡು ಹಳದಿ ವರ್ಣದವನಾಗಿದ್ದು ಪ್ರಶಾಂತ ನೋಟವನ್ನು ಬೀರುತ್ತಿದ್ದು, ಬಟ್ಟೆಯ ಕಿರೀಟ, ಭುಜದ ಸುತ್ತಲೂ ಪ್ರಾಣಿಯ ಛರ್ಮವನ್ನು ಸ್ವೆಟರ್ ರೀತಿ ಕಟ್ಟಿಕೊಂಡಿದ್ದಾನೆ. ಹಳದಿ, ಹಸಿರು, ಬಿಳಿ, ಕಡು ನೀಲಿ, ಕೆಂಪು ಇತ್ಯಾದಿ ಬಣ್ಣಗಳ ಬಟ್ಟೆಗಳನ್ನು ಸಂಪೂರ್ಣ ಮೈಗೆ ಸುತ್ತುವರೆದಂತೆ ಟಿಬೆಟಿನ ವಸ್ತ್ರವಿನ್ಯಾಸದ ಶೈಲಿಯಲ್ಲಿ ಧರಿಸಿದ್ದಾನೆ. ಈತನ ಹಿನ್ನೆಲೆಯ ಸುತ್ತಲೂ ಹಸಿರು, ನೀಲಿ, ಬಿಳಿ ಮಿಶ್ರಿತ ಬಣ್ಣಗಳ ಹಾರಾಡುವ ಸುತ್ತುವರಿದ ಮೋಡಗಳನ್ನು ಪ್ರಭಾವಳಿಯ ರೀತಿಯಲ್ಲಿ ಕಾಣಬಹುದು. ತಲೆಯ ಹಿಂಭಾಗದಲ್ಲಿ ಹಸಿರು ಚಂದ್ರ, ಚಂದ್ರನ ಸುತ್ತ ಕೆಂಪು ಪಟ್ಟಿಕೆ ಈತನ ಮುಖದಲ್ಲಿ ಬೇರೆ ದಿಕ್ಪಾಲಕರಿಗಿಂತ ಭಿನ್ನವಾದ ಚಿಕ್ಕ ಚಿಕ್ಕ ಕೂದಲುಗಳ ಮಣಿ ಜೋಡಿಸಿದಂತಹ ೧೨ ಗಡ್ಡದ ಕುಚ್ಚವನ್ನು ಚಿತ್ತಿಸಿದ್ದಾರೆ. ವರ್ಣಮಯವಾದ ಬೂಟು ಧರಿಸಿ ಹಸಿರು ನೆಲದ ಮೇಲೆ ನಿಂತಿದ್ದಾನೆ. ಚಿತ್ರದಲ್ಲಿ ಗಾಢವಾದ ವರ್ಣಲೇಪನ ಸೂಕ್ಷ್ಮ ಚಿತ್ರಗಳು ಎಲ್ಲವೂ ನಕ್ಷೆಯ ವಿನ್ಯಾಸದ ಮಾದರಿಯ ಥಾಂಕ ಶೈಲಿಯಲ್ಲಿವೆ.

೧.೪ ಪಶ್ಚಿಮ ರಾಜ ವಿರುಪಾಕ್ಷ ಚಿತ್ರ

ಆಕಾಶದ ಮೇಲಕ್ಕೆ ಮುಖಮಾಡಿಕೊಂಡು ಬಲ ಹಾಗೂ ಎಡಗೈಯಲ್ಲಿ ಖಡ್ಗವನ್ನು ಹಿಡಿದುಕೊಂಡು ಬಂಡೆಯ ಮೇಲೆ ನಿಂತಿರುವುದನ್ನು ಕಾಣಬಹುದು. ಈತನು ನೀಲಿ ಬಣ್ಣದವನಾಗಿದ್ದು ಮುಕ್ಕಾಲು ಭಾಗ ಮುಖವನ್ನು ಹೊಂದಿದ್ದು, ಉಗ್ರವಾದ ಕಣ್ಣುಗಳು, ಹಲ್ಲನ್ನು ಹೊರಚಾಚಿಕೊಂಡು ದೊಡ್ಡದಾದ ಸುತ್ತುವರಿದ ಗಡ್ಡ, ತಲೆಯ ಮೇಲಿನ ಕಿರೀಟ, ಆನೆ ಸೊಂಡಿಲಿನಂತೆ ಹೊಂದಿಕೊಳ್ಳುವಂತಿದೆ. ಗಾಢ ಹಳದಿ ಬಣ್ಣವನ್ನು ಪ್ರಧಾನ ವಸ್ತ್ರ ಹಾಗೂ ಅದರ ಮೇಲೆ ಅನೇಕ ನಕ್ಷಾಚಿತ್ರಗಳು ಹಾಗೂ ಹಸಿರು, ಹಳದಿ, ಬಿಳಿ, ತಿಳಿ ಹಸಿರು, ಪ್ರಧಾನವಾದ ಅನೇಕ ವಸ್ತ್ರದ ಉದ್ದ ಪಟ್ಟಿಯಂತಹ ಬಟ್ಟೆಗಳು ಹಾರಾಡುತ್ತಿರುವುವಂತೆ ನಡುವುಗೆ ಟಿಬೆಟಿನ ಪ್ರಾಣಿಯ ನಡುಪಟ್ಟಿ ಸುತ್ತಿಕೊಂಡಿದ್ದಾನೆ. ಈತನ ಕಾಲಿನ ಕೆಳಗೆ ಹುಲಿಯ ಚರ್ಮದಂತಹ ಧರ್ಮವಿರುವಂತೆ ಚಿತ್ರಿಸಿದ್ದಾರೆ. ಈತನ ಹಿನ್ನೆಲೆಯು ಕಾಕಿ ಬಣ್ಣದ ಅಲಂಕೃತ ಜ್ವಾಲೆಯ ಚಿತ್ರವನ್ನು ಪ್ರಭಾವಳಿಯಂತೆ ಚಿತ್ರಿಸಿದ್ದು ಹೆಚ್ಚಾಗಿ ಕಂಡುಬರುತ್ತದೆ. ಈತನ ತಲೆಯ ಹಿಂಭಾಗವು ಹಸಿರು ಚಂದ್ರ ಹಾಗೂ ಚಂದ್ರನ ಸುತ್ತಲು ಕೆಂಪು ಬಣ್ಣದ ಜ್ವಾಲೆಯ ಉರಿಯುವಂತೆ ಚಿತ್ರಿಸಲಾಗಿದೆ. ಮೇಲಿನ ನಾಲ್ಕು ದಿಕ್ಪಾಲಕರನ್ನು ವಿಶೇಷವಾಗಿ ಟಿಬೆಟಿಯನ್ನರ ನಿಸರ್ಗದ ದೃಶ್ಯವನ್ನು ಸಂಯೋಜಿಸಿರುತ್ತರೆ. ನಂತರ ದೇವಾಲಯದ ಬಾಗಿಲಿನ ಬಲ ಮತ್ತು ಎಡ ಭಾಗದಲ್ಲಿ ಆಯಾ ದಿಕ್ಕಿಗೆ ಸಂಬಂಧಿಸಿದವರ ಭಿತ್ತಿಚಿತ್ರವನ್ನು ರಚಿಸುತ್ತಾರೆ.

ಟಿಬೆಟಿನ ನಾಲ್ಕು ದಿಕ್ಕಿನ ದ್ವಾರಪಾಲಕರು



ದಕ್ಷಿಣ ರಾಜ ವಿರುದಕ



ಪೂರ್ವ ರಾಜ ವಿಶ್ರ ವಾನ



ಉತ್ತರ ರಾಜ ದೃತರಾಷ್ಟ್ರ



ಪಶ್ಚಿಮ ರಾಜ ವಿರುಪಾಕ್ಷ

೧.೫ ಮಂಜುಶ್ರೀ


ಮಂಜುಶ್ರೀ ಎರಡು ಟಿಬೆಟಿನ ವಜ್ರ ಸಂಕೇತಗಳನ್ನು ಎದೆಯ ಭಾಗಕ್ಕೆ ಅಪ್ಪಿಕೊಂಡಂತೆ ಹಿಡಿದು ಪದ್ಮಾಸನದಲ್ಲಿ ಪುಷ್ಪ ಪೀಠದ ಮೇಲೆ ಕುಳಿತಿರುವಂತೆ ಚಿತ್ರಿಸಿದ್ದಾರೆ. ಚಿತ್ರದಲ್ಲಿ ಬಳಸಿರುವ ವರ್ಣವು ಮೂಲ ರಾಸಾಯನಿಕ ವರ್ಣಗಳಾಗಿವೆ. ಇತನ ದೇಹವು ಬಿಳಿ ವರ್ಣದವನಾಗಿದ್ದು. ಮುತ್ತಿನ ಕಿರೀಟವನ್ನು ಧರಿಸಿ ಬುದ್ಧನಂತೆ ತನ್ನ ಕೂದಲನ್ನು ಕಟ್ಟಿಕೊಂಡಿರುವ ರೀತಿಯಲ್ಲಿ ಚಿತ್ರಿಸಿದ್ದಾರೆ. ಆಭರಣಗಳು ಚಿನ್ನದ ಬಣ್ಣಗಳಿಂದ ಕೂಡಿದ್ದು. ಕರ್ಣ ಕುಂಡಲ ದೊಡ್ಡದಾಗಿದೆ. ಎರಡು ಮುತ್ತಿನ ಹಾರ, ಹಸಿರು, ಕೆಂಪು, ನೀಲಿ ಬಣ್ಣದ ಬಟ್ಟೆಯನ್ನು ನಡದಿಂದ ಕೆಳಕ್ಕೆ ಧರಿಸಿದ್ದು, ನಡಪಟ್ಟಿಯು ಕೆಂಪು ಮತ್ತು ಹಳದಿ ಬಟ್ಟೆಯಿಂದ ಬಿಗಿದುಕೊಂಡಂತೆ ಚಿತ್ರಿಸಿದ್ದಾರೆ. ಮೈಮೇಲೆ ಕೇಸರಿ ಬಣ್ಣದ ವಸ್ತ್ರದ ಪಟ್ಟಿ ಹಾಗೂ ಹಾರಾಡುವಂತೆ ಹಸಿರು ವಲ್ಲಿಯನ್ನು ಧರಿಸಿದ್ದಾನೆ. ಪ್ರಸನ್ನವಾದ ಮುಖ. ಅರ್ಧಕ್ಕೆ ತೆರೆದುಕೊಂಡು ಶಾಂತರೀತಿಯಲ್ಲಿ ನೋಡುತಿರುವ ಕಣ್ಣುಗಳನ್ನು ಚಿತ್ರಿಸಿದ್ದಾರೆ. ತಲೆಯ ಹಿಂಭಾಗದಲ್ಲಿ ಹಸಿರು ಚಂದ್ರ, ಕೇಸರಿ, ನೀಲಿ ವರ್ಣದ ಪಟ್ಟಿಕೆಯ ಅರ್ಧ ಚಂದ್ರಾಕಾರದ ಪ್ರಭಾವಳಿಯನ್ನು ಹೊಂದಿದ್ದು, ಮಂಜುಶ್ರೀಯ ತಲೆಯ ಮೇಲಿನ ಪಚ್ಚೆ ನೀಲಿ ಬಣ್ಣದ ಬುದ್ಧ ಬಿಳಿ ವರ್ಣದ ಸ್ತ್ರೀಯೊಂದಿಗೆ ಪದ್ಮಾಸನದಲ್ಲಿ ಕುಳಿತು ಆಲಂಗಿಸುತ್ತಿರುವ ದೃಶ್ಯದ ಚಿತ್ರವನ್ನು ಚಿಕ್ಕದಾಗಿ ಸಂಯೋಜಿಸಲಾಗಿದೆ. ಹಿನ್ನಲೆಯಲ್ಲಿ ಕೇಸರಿ ವರ್ಣಧ ವೃತ್ತದ ಒಳಗೆ ಬಲ ಮತ್ತು ಎಡ ಭಾಗದಲ್ಲಿ ಕೇಸರಿ, ಹಸಿರು ವೃತ್ತದ ಸುತ್ತಲು ಹಸಿರು, ಕೆಂಪು ಬಣ್ಣಗಳ ಪಟ್ಟಿಕೆಯ ಬೆಸೆದುಕೊಂಡಿರುವಂತೆ ಚಿತ್ರಿಸಿದ್ದಾರೆ. ಇಲ್ಲಿನ ಭಿತ್ತಿ ಚಿತ್ರಗಳ ಮೇಲೆ ಕಲಾವಿದನ ಹೆಸರು ಇದ್ದರು ಅದು ಟಿಬೆಟಿಯನ್ನರ ಭಾಷೆಯಲ್ಲಿ ಬರೆಯಲಾಗಿದೆ. ಒಟ್ಟರೆ ಚಿತ್ರ ಸಂಯೋಜನೆ ಉತ್ತಮ ರೀತಿಯಲ್ಲಿ ಕಂಡುಬಂದಿದ್ದು ಥಾಂಕ ಶೈಲಿಯ ವಿಶಿಷ್ಟತೆಯನ್ನು ತೋರಿಸಿಕೊಡುತ್ತದೆ.

ಮಹಾಯಾನ ಪಂಥದ ದಿವ್ಯ ಬೋಧಿಸತ್ವರಲ್ಲಿ ಒಬ್ಬ. ಮಂಜು ಎಂದರೆ ರುಚಿಯಾದದ್ದು. ಶ್ರೀ ಎಂಬುದು ವೈಭವ ಸೂಚಿ ಪದ. ಈತನಿಗೆ ಮಂಜು ಘೋಷನೆಂಬ ಹೆಸರು ಇದೆ. ಲೋಕೇಶ್ವರ ಮೂರ್ತಿಯಾದ ಈತನನ್ನು ಕುಮಾರ ಭೂತನೆಂದು ಬಣ್ಣಿಸುತ್ತಾರೆ. ಪಟ್ಟಾಭಿಷಕ್ತನಾದ ಕುಮಾರನೆಂದು ಅರ್ಥ. ಎಂದರೆ ದೇವತೆಗಳ ನಡವಣದಲ್ಲಿ ಇವರಿಗೆ ಬುದ್ಧನಷ್ಟೇ ಗೌರವ. ಬೋಧಿಸತ್ವರ ಅಂತರಾಳದಲ್ಲಿರುವ ಬಾವಿ ಬುದ್ಧತ್ವವೇ ಮಂಜುಶ್ರೀ ಲೋಕ ಸಂಗ್ರಹದ ದೀಕ್ಷೆ ತಳೆದು ಬೋಧಿಸತ್ವನಾಗಿಯೇ ಉಳಿದಿದ್ದರೂ ಬುದ್ಧರ ಹೃದಯದಲ್ಲಿ ಜೀವಂತ ಬುದ್ಧನಂತೆ ನಿಂತಿರುವ ಮಂಜುಶ್ರೀಯ ಬಲಗೈಯಲ್ಲಿ ಕತ್ತಿಯನ್ನು (ಅಜ್ಞಾನವನ್ನು ಕತ್ತರಿಸುವ ಜ್ಞಾನದ ಸಂಕೇತ) ಎಡಗೈಯಲ್ಲಿ ಪುಸ್ತಕವನ್ನು(ಧರ್ಮ ಸಂಕೇತ) ಹಿಡಿದಿರುವಂತೆ ಚಿತ್ರಿಸಲಾಗಿದೆ. ಸಾಮಾನ್ಯವಾಗಿ ಮಂಜುಶ್ರೀ ಬೌದ್ಧಮತ ಪ್ರಚಾರಕ್ಕೆ ಶ್ರಮಿಸಿದ ಬೋಧಿಸತ್ವನೇ ಎನ್ನಲಾಗಿದೆ. ಈತನ ಸಲಹೆಯಂತೆಯೇ ಸುಧನ ಬೋಧಿಸತ್ವಕ್ಕೆ ಅಗತ್ಯವಾದ ಜ್ಞಾನ ಪಡೆಯುವ ಭಾರತ ಭೂಮಿಯನ್ನೆಲ್ಲ ಸುತ್ತಾಡಿದ ಸಾಧನ ಮೂರ್ತಿಯನ್ನು ವರ್ಗೀಕರಣ ವಿದ್ಯೆ ಹೇಳುವ ಒಂದು ಸಾಧನ ವಜ್ರನಂದನನ್ನು ಮಂಜುಶ್ರೀಯ ಅವತಾರವೆಂದು ನಿರೂಪಿಸುತ್ತವೆ. ಮಂಜುಶ್ರೀ ಪಂಥ ಭಾರತದಿಂದ ಚೀನಾಕ್ಕೆ ಹೋದಾಗ ಅಲ್ಲಿ ತಾವು ಪ್ರಚಲಿತವಾಯಿತು. ಅಲ್ಲಿಂದಲೇ ಅದು ನೇಪಾಳ ಮುಟ್ಟಿದ್ದು. ಈಗ ಟಿಬೆಟಿಯನ್ನರ ಥಾಂಕಾ ಚಿತ್ರಕ್ಕೆ ವಸ್ತು ವಿಷಯವಾಗಿ ಹಾಗೂ ದೇವತೆಯ ಸ್ಥಾನಕೊಟ್ಟು ಪೂಜಿಸುತ್ತಾರೆ.

ದೇವಾಲಯಗಳ ಭಿತ್ತಿಚಿತ್ರಗಳು



ಸಂಭೋಗಕಾಯ ದೇವತೆ



ಮೈತ್ರೇಯ



ಮಂಜುಶ್ರೀ ಹೆಣ್ಣು ದೇವತೆಯೊಂದಿಗೆ



ಮಂಜುಶ್ರೀ

೧.೬. ಪೋರ್‌ಲ್ಯಾಂಡ್ ಆಫ್ ಗುರು ಪದ್ಮ ಸಂಭವ ಚಿತ್ರ

ಗುರು ಪದ್ಮ ಸಂಭವ ಪುಷ್ಪ ಪೀಠದ ಮೇಲೆ ಕುಳಿತಿದ್ದು, ಬಲಗೈಲ್ಲಿ ಟಿಬೆಟಿನ ವಜ್ರವನ್ನು ಹಿಡಿದಿದ್ದು, ಎಡಗೈಯಲ್ಲಿ ಬಿಳಿಯ ಶಂಖು ಎಡಭುಜಕ್ಕೆ ಅಂಟಿಕೊಂಡಂತೆ ಕಂಕುಳಿನಿಂದ ಬಿಗಿಹಿಡಿದಂತೆ ಶಿವನ ತ್ರಿಶೂಲ ಹೊಂದಿದ್ದು, ಗಾಢ ಹಳದಿ ವರ್ಣದವನಾಗಿದ್ದು, ಕಡು ನೀಲಿ ಹಾಗು ಕೆಂಪು ಬಣ್ಣದ ಹೊದಿಕೆ ಬಿಳಿ ಬಣ್ಣದ ಒಳಂಗಿ ಕಂದು ಬಣ್ಣದ ಹಸಿರು ಬಣ್ಣದ ಮಿಶ್ರಣದ ಹಲವು ಬಟ್ಟೆಗಳನ್ನು ಮೈಮೇಲೆ ಹೊದ್ದಿಕೊಂಡಿರುವಂತೆ ಚಿತ್ರಿಸಲಾಗಿದೆ. ಪ್ರಶಾಂತವಾದ ಮುಖ ಟಿಬೆಟಿಯನ್ನರಂತೆ ಕಣ್ಣುಗಳು ಚಿಗುರು ಮೀಸೆ, ಕರ್ಣ ಕುಂಡಲ ದೊಡ್ಡದಾಗಿದ್ದು, ಬಟ್ಟೆಯ ಕಿರೀಟವನ್ನು ಹಾಕಿಕೊಂಡಿದ್ದಾನೆ. ಬಲ ಮತ್ತು ಎಡ ಭಾಗದಲ್ಲಿ ಸ್ವಲ್ಪ ಕೆಂಪು ಹಾಗೂ ಬಿಳಿ ಬಣ್ಣದ ಮಿಶ್ರಣದ ಹೂ ಹಾಗೂ ಕೆಂಪು ಹೂಗಳು ಹಸಿರಿನ ಅನೇಕ ಎಲೆಗಳನ್ನು ಚಿತ್ರಿಸಿದ್ದು, ಈತನ ಹಿನ್ನಲೆಯನ್ನು ವೃತ್ತಾಕಾರದ ಕೆಂಪು ಹಳದಿ ಹಸಿರು ಬಣ್ಣದ ಪಟ್ಟಿಗಳನ್ನೊಳಗೊಂಡ ಪ್ರಭಾವಳಿ ತಲೆಯ ಹಿಂಬದಿಯಲ್ಲಿ ಹಸಿರು ಚಂದ್ರ, ಚಂದ್ರನ ಸುತ್ತಲೂ ಕೆಂಪು ಪಟ್ಟಿಯ ವೃತ್ತವನ್ನು ಚಿತ್ರಿಸಿದ್ದಾರೆ. ಈತನನ್ನು ಚಪ್ಪಟೆಯ ಸಿಂಹಾಸನದಲ್ಲಿ (ಟಿಬೆಟಿನ ಶೈಲಿಯಲ್ಲಿದೆ) ಕುಳಿತಿದ್ದಾನೆ. ಪ್ರಭಾವಳಿಯ ಸುತ್ತಲೂ ಕೆಂಪು ಕೇಸರಿ ಬಣ್ಣದ ಅನೇಕ ಹೂ ಬಳ್ಳಿಗಳು ಸುತ್ತುವರಿದಂತೆ ಚಿತ್ರಿಸಿದ್ದಾರೆ. ಮೇಲು ಭಾಗದಲ್ಲಿ ಅವಲೋಕಿತೇಶ್ವರ ಕುಳಿತಿರುವುದು. ಅದರ ಮೇಲು ಭಾಗದಲ್ಲಿ ಬುದ್ಧ ಶ್ರೀಯೊಂದಿದೆ ಅಲಂಗಿಸುತ್ತಿರುವ ಚಿಕ್ಕ ಚಿತ್ರವಾಗಿ ಚಿತ್ರಿಸಿದ್ದಾರೆ. ಒಟ್ಟಾರೆ ಪದ್ಮ ಸಂಭವನನ್ನು ಪ್ರಧಾನವಾಗಿ ಸಂಯೋಜಿಸಿದ್ದು, ಆತನ ಬಲ ಮತ್ತು ಎಡ ಭಾಗದಲ್ಲಿ ಯಮಂತಕ, ಸಂಭೋಗಕಾಯ ದೇವರು, ಟಿಬೆಟಿನ ಮುನಿಗಳು, ಮಂಜುಶ್ರೀ ೧೬ ವಿವಿಧ ದೇವರುಗಳನ್ನು ಪ್ರತ್ಯೇಕವಾಗಿ ತಾವರೆಯನ್ನು ಹೂವಿನ ಮೇಲೆ ಚಿತ್ರಿಸಿದ್ದಾರೆ. ಹಿನ್ನಲೆಯ ದೃಶ್ಯವನ್ನು ಕಡು ನೀಲಿ ಆಕಾಶದಿಂದ ರಮಣೀಯ ಹಸಿರು ಬಣ್ಣದ ಪ್ರದೇಶವನ್ನು ಹೊಂದುವ ನಿಸರ್ಗ ಚಿತ್ರಣವನ್ನು ಚಿತ್ರಿಸಿರುವುದನ್ನು ಕಾಣಬಹುದು.

೧.೭ ಬುದ್ಧನ ಜೀವನದ ಹನ್ನೆರಡು ಮಹತ್ಕಾರ್ಯಗಳಿಗೆ ಸಂಬಂಧಿಸಿದ ಚಿತ್ರಗಳು

ಬುದ್ಧನು ಪದ್ಮಾಸನದಲ್ಲಿ ಕುಳಿತು ಬಲಗೈಯನ್ನು ಮಂಡಿಯ ಮೇಲೆ ಇಳಿಬಿಟ್ಟ ಎಡಗೈಯಲ್ಲಿ ಕಮಂಡಲ ಹಿಡಿದಿದ್ದು, ಕಣ್ಣು ತೆರೆದು ಕುಳಿತಿರುವುದನ್ನು ಚಿತ್ರಿಸಿದ್ದಾರೆ. ಬುದ್ಧನನ್ನು ಸಂಪೂರ್ಣ ಗಾಢ ಹಳದಿ ಪುಷ್ಪ ಪೀಠದ ಮೇಲೆ ವರ್ಣದಿಂದ ಕೂಡಿದ್ದು, ಆತನ ತಲೆಯ ಕೂದಲು ಕಪ್ಪು ಬಣ್ಣ ಹಾಗೂ ತಲೆಯ ಮೇಲೆ ಕೂದಲಿನ ಮೇಲೆ ಹಳದಿಯ ಮುತ್ತು ಇಟ್ಟಿರುವಂತೆ ಚಿತ್ರಿಸಿರುವುದು ವಿಶೇಷವಾಗಿದೆ. ಉದ್ದವಾದ ಕರ್ಣ ಕುಂಡಲ ಕೆಂಪು, ಹಳದಿ ಮಿಶ್ರಿತವಾದ ಅನೇಕ ನಕ್ಷಾ ಪಟ್ಟಿಗಳುಳ್ಳ ಹೊದಿಕೆಯನ್ನು ವಸ್ತ್ರವಾಗಿ ಚಿತ್ರಿಸಿದ್ದಾರೆ. ಇವು ಟಿಬೆಟಿಯನ್ನರ ವಸ್ತ್ರ ವಿನ್ಯಾಸದ ರೀತಿಯಲ್ಲಿ ಕಂಡುಬರುತ್ತದೆ. ಬುದ್ಧ ಶಿರದ ಹಿಂಭಾಗದಲ್ಲಿ ಹಸಿರು ಚಂದ್ರ, ಸುತ್ತಲೂ ಕೆಂಪು ಮತ್ತು ಬಿಳಿ ಮಿಶ್ರಿತ ಪಟ್ಟಿಯನ್ನು ಚಂದ್ರನ ಸುತ್ತಲೂ ಚಿತ್ರಿಸಿದ್ದಾರೆ. ಬುದ್ಧನ ಹಿಂಭಾಗವನ್ನು ಕೇಸರಿ, ನೀಲಿ, ಹಸಿರು, ಕೆಂಪು ಪಟ್ಟಿಯನ್ನು ಕ್ರಮವಾಗಿ ಒಳಗೊಂಡ ವೃತ್ತಾಕಾರದ ಪ್ರಭಾವಳಿಯನ್ನು ಚಿತ್ರಿಸಿದ್ದಾರೆ. ವೃತ್ತದ ಬಲ ಮತ್ತು ಎಡ ಭಾಗದಲ್ಲಿ ಹಳದಿ, ಬಿಳಿ, ಕೇಸರಿಗಳಂತಹ ಹೂ ಹಸಿರು ಬಣ್ಣದ ಬಳ್ಳಿಗಳು ಹಬ್ಬಿಕೊಂಡಂತೆ ಚಿತ್ರಿಸಿದ್ದಾರೆ. ಬುದ್ಧನ ಪೀಠದ ಮುಂಭಾಗದಲ್ಲಿ ನೀಲಿ, ಬಿಳಿ ಹಾಗೂ ಗಾಢ ಹಳದಿ ಪ್ರಧಾನ ಅವಲೋಕಿತೇಶ್ವರ ಪದ್ಮಾಸನದಲ್ಲಿ ಕುಂತಿರುವಂತೆ ಬುದ್ಧನಿಗಿಂತ ಚಿಕ್ಕ ಆಕಾರದಲ್ಲಿ ಸಂಯೋಜಿಸಿದ್ದಾರೆ. ಸಂಪೂರ್ಣ ಹಿನ್ನೆಲೆಯನ್ನು ನೀಲಿ ಮತ್ತು ಬಿಳಿ ಪ್ರಧಾನವಾದ ವರ್ಣಗಳಿಂದ ಪೂರ್ಣಗೊಳಿಸಿದ್ದಾರೆ. ಇದೇ ರೀತಿ



ಪೂರ್ ಲ್ಯಾಂಡ್ ಆಫ್ ಗುರು ಪದ್ಮ ಸಂಭವ





ಅರುಕ ಹಾಗು ಅನೇಕ ಅವತಾರಗಳು


ದೇವಾಲಯಗಳ ಭಿತ್ತಿಚಿತ್ರಗಳು

ಬುದ್ಧನ ಜೀವನದ ಹನ್ನೆರಡು ಮಹತ್ಕಾರ್ಯಗಳಿಗೆ ಸಂಬಂಧಿಸಿದ ಚಿತ್ರಗಳು









೧೨ ಮಹಾನ್ ಬುದ್ಧರನ್ನು ಮಹತ್ಕಾರ್ಯಗಳಿಗೆ ಸಂಬಂಧಿಸಿದಂತೆ ಬೇರೆ ಬೇರೆ ರೀತಿಯಾದ ವರ್ಣಗಳಿಂದ ರೇಖಾ ಪ್ರಧಾನವಾಗಿ ಬೇರೆ ಬೇರೆ ವಸ್ತು ವಿಷಯಗಳಲ್ಲಿ ಚಿತ್ರಿಸಿದ್ದಾರೆ. ಇಂಥಹ ಚಿತ್ರಗಳು ಸ್ವರ್ಣ ದೇವಾಲಯದ (ಬೈಲುಕುಪ್ಪ) ಮೂರನೇ ಅಂತಸ್ತಿನಲ್ಲಿ ಗೋಡೆಗಳ ಮೇಲೆ ಕ್ರಮವಾಗಿ ಚಿತ್ರಿಸಿರುವುದು ಕಂಡುಬರುತ್ತದೆ.

೧.೮ ತಾರಾದೇವಿಯ ಚಿತ್ರ ವಿವರಣೆ

ತಾರಾದೇವತೆಯು ವಿಜಯದ ದೇವತೆ, ಅಮೋಘ ಸಿದ್ಧಿಯನ್ನು ಪಡೆದಿರುತ್ತಾಳೆ. ಟಿಬೆಟಿಯನ್ನರು ಡಾಲರು ಎಂದು ಕರೆಯುತ್ತಾರೆ. ಸಂಸಾರ ಎಂಬ ಸಂಕಷ್ಟದಿಂದ ಟಿಬೆಟಿಯನ್ನರನ್ನು ದೂರ ಮಾಡುತ್ತಾಳೆ ಎಂದು ನಂಬಿದ್ದಾರೆ. ತಾರಾ ದೇವತಯು ಈ ಅವತಾರವನ್ನು ಎತ್ತಿ ತನ್ನದೇಯಾದ ವಿವಿಧ ಬಗೆಯಲ್ಲಿ ಕಾಣಿಸಿಕೊಳ್ಳುತ್ತಾಳೆ. ಇವುಗಳಲ್ಲಿ ಮುಖ್ಯವಾಗಿ ನಾಲ್ಕು ವರ್ಣದವಳೆಂದು ಗುರುತಿಸಲಾಗಿದೆ. ಹಸಿರು ತಾರ, ಬಿಳಿ ತಾರ. ಹಳದಿ ತಾರಾದೇವೆ ಎಲ್ಲರಿಗೂ ನೀಲಿ ತಾರಾದೇವಿ ಸಮೃದ್ಧಿಯನ್ನು ನೀಡಿ ಸಂತೈಸುತ್ತಾಳೆ ಎಂತಲೂ ಸುಖದ ಸಂಕೇತವೆಂದು ಹೇಳುತ್ತಾರೆ. ಬಿಳಿದಾದ ದೇವಿಯು ಶಾಂತತೆಯ ಮಮತೆಯನ್ನು ತುಂಬಿಕೊಂಡಿರುತ್ತಾಳೆ. ದುಃಖತಪ್ತರಿಗೆ ಸಮಾಧಾನಿಸಿ ಸಂಕಷ್ಟಗಳನ್ನು ದೂರ ಮಾಡುತ್ತಾಳೆ. ಎಂಬುವುದು ಟಿಬೆಟಿಯನ್ನರ ನಂಬಿಕೆಯಾಗಿದೆ. ಕೆಂಪು ತಾರವು ರೌದ್ರ ಅವತಾರವೆತ್ತು ದುಷ್ಟರ ಸಂಹಾರಕ್ಕೆ ಮುಂದಾಗಿ ಎಲ್ಲರನ್ನು ದುಷ್ಟ ಜನರಿಂದ ರಕ್ಷಿಸುತ್ತಾಳೆ. ರಕ್ತದ ಓಕುಳಿ ಹಾಡುತ್ತಾಳೆ ಎಂಬುವುದು ಇವರ ನಂಬಿಕೆ. ಹಳದಿ ತಾರ ದೇವತೆಯು ಮಕ್ಕಳ ದೇವತೆಯಾಗಿದ್ದು ಕುಟುಂಬದಲ್ಲಿ ಬರುವ ಮಕ್ಕಳನ್ನು ಸಂತೈಸಿ ಆಶೀರ್ವಾದ ನೀಡುತ್ತಾಳೆ ಎಂಬುವುದು ಇವರ ನಂಬಿಕೆಯಾಗಿದೆ. ಒಟ್ಟಿನಲ್ಲಿ ಮೇಲಿನ ಎಲ್ಲಾ ತಾರದೇವತೆಯು ಕುಳಿತುಕೊಂಡು ಒಂದು ಕೈಯಲ್ಲಿ ಹೂವನ್ನು ಹಿಡಿದು ಕೊಂಡಿದ್ದು ಮತ್ತೊಂದು ಕೈಯಲ್ಲಿ ಪುಸ್ತಕವನ್ನು ಹಿಡಿದುಕೊಂಡಿರುತ್ತಾಳೆ. ಈ ತಾರಾ ದೇವತೆಗಳು ಹೆದರಿಕೆಯಿಂದ ಬಿಡುಗಡೆ ಮಾಡುತ್ತದೆ ಎಂಟು ಹೆದರಿಕೆಗಳು– ಸಿಂಹ, ಆನೆಗಳು, ಬೆಂಕಿ, ಹಾವುಗಳು, ನದಿಗಳು, ಸರಗಳ್ಳರು, ಮಾಂಸ ತಿನ್ನುವವರು ಮತ್ತು ರಾಕ್ಷಸರು. ಮನುಷ್ಯನನ್ನು ಮೇಲಿನ ಹೆದರಿಕೆಗಳನ್ನು ಹೋಗಲಾಡಿಸಲು ೨೧ ಅವತಾರಗಳನ್ನು ತಾರ ದೇವತೆ ಅವತರಿಸುತ್ತಾಳೆ. ಎಂಬುದು ಟಿಬೆಟಿಯನ್ನರ ನಂಬಿಕೆ ತಾರಾದೇವತೆಯನ್ನು ದೇವಿಯ ರೂಪದಲ್ಲಿ ಪೂಜಿಸುತ್ತಾರೆ.

ತಾರಾದೇವಿಯನ್ನು ಹಸಿರು ವರ್ಣದವಾಗಿ ಅರ್ಧಪರ್ಯೆಸನದಲ್ಲೆ ಪುಷ್ಪ ಪಾತ್ರೆಯ ಮೇಲೆ ಕುಳಿತಿದ್ದು ಬಲಗೈ ಅಭಯ ಹಸ್ತವಾಗಿ ಮತ್ತು ಎಡ ಗೈಯಲ್ಲಿ ನೀಲಿ ಥಾವರೆಯ ಹೂ ಬಳ್ಳಿಯನ್ನು ಹಿಡಿದುಕೊಂಡು ಸಾಧಾರಣ ಅಭರಣಗಳನೊಳಗೊಂಡು ಸುಂದರವಾದ ನಕ್ಷ ವಿನ್ಯಾಸದ ಬಿಳಿ ರವಿಕೆ ರವಿಕೆಯ ಚಿಕ್ಕದಾಗಿ ಅರ್ಧಸ್ತನವು ಮುಚಿದಂತೆ ಹಾಗೂ ಕಂದು ನೀಲಿ ಲಂಗವನ್ನು ತೋಟ್ಟಿದ್ದಾಳೆ. ಟಿಬೆಟಿನ ಶೈಲಿಯ ವಸ್ತ್ರವಿನ್ಯಾಶಕ್ಕೆ ತಕ್ಕಂತೆ ಹಳವು ವಿವಿಧ ಬಟ್ಟೆಯ ತುಂಡು ಹಾರಾಡುವಂತೆ ಕಂಡುಬರುತ್ತವೆ. ಅಭರಣಗಳಲ್ಲಿ ವಿಶೇಷವಾಗಿ ಕರ್ಣಕುಂಡಲ ದೊಡ್ಡದಾಗಿ ತಲೆಯ ಮೇಲೆ ಕೂದಲಿನ ತುರಿಬಿಗೆ ಅಂಟಿಕೂಂಡತೆ ಕೀರಿಟ ಹಾಗೂ ಕೆಳಭಾಗಕ್ಕೆ ಇಳಿಬಿಟ್ಟ ಕೇಶವಿನ್ಯಾಶದಿಂದ ಪ್ರಶಾಂತ ನೋಟ ಬೀರುವ ಮನಮೋಹಕ ದೃಶ್ಯವಾಗಿದ್ದು. ತಾರೆಯ ಶಿರದ ಹಿಂಭಾಗವು ದೂಡ್ಡದಾದ ಕೆಂಪು ಚಂದ್ರನನ್ನು ಹಾಗೂ ಕೆಸರಿ ವರ್ಣದ ದೂಡ್ಡ ವೃತ್ತವನ್ನು ಪ್ರಭಾವಳಿಯಂತೆ ವೃತ್ತದಲ್ಲಿ ಚಿತ್ರಿಸಿದ್ದಾರೆ. ಕೆಂಪು ಚಂದ್ರದ ಮೇಲು ಭಾಗದಲ್ಲಿ ತಾವರೆಯ ಹೂ ಬಳ್ಳಿ ಅರಳಿನಿಂತಿರುವುದನ್ನು ಚಿತ್ರಿಸಿದ್ದು



ನೇತ್ರವನ್ನೊಳಗೊಂಡ ತಾರ



ಹಸಿರುತಾರ



ಬಿಳಿ ತಾರ

ಜ್ಞಾಂಗ ಮಾ ಸಂಪ್ರದಾಯದ ೧೨ ಮಹಾ ಮಹಿಮ ವಿದ್ವಾಂಸರು









ಭಿತ್ತಿಚಿತ್ರದ ನಕ್ಷೆ ವಿನ್ಯಾಸಗಳು





ದೇವಾಲಯದ ಪಟ್ಟಿಕೆ ಮೇಲಿನ ನಕ್ಷಾ ಚಿತ್ರಣ



ಬೋದಿಗೆ ವಿನ್ಯಾಸ



ದ್ವಾರದ ವಿನ್ಯಾಸ



ನಗಾರಿ ವಿನ್ಯಾಸ



ಟಿಬೆಟಿನ ಎಂಟು ಶ್ರೇಷ್ಠ ಚಿಹ್ನೆಗಳಲ್ಲಿ ಮೇಲಿನ ಆರು ಚಿಹ್ನೆಗಳಿವೆ



ಪಳಗಿಸಿದ ಆನೆಯನ್ನು ಬುದ್ಧನ ಬಳಿಗೆ ಕರೆದೊಯ್ಯುತ್ತಿರುವುದು



ಮದ ಆನೆಯನ್ನು ಪಳಗಿಸುತ್ತಿರುವ ಬೌದ್ಧ ಸನ್ಯಾಸಿ



ಎಂಟು ಶ್ರೇಷ್ಠ ಚಿಹ್ನೆಗಳ ಗುಂಪು



ಸರಸ್ವತಿ



ಮುತ್ತುಗಳನ್ನು ಹೊತ್ತಿರುವ ಅಶ್ವ




ಬಿಳಿ ಆನೆ

ವಿಶಿಷ್ಟ ಪೂಜಾ ವಸ್ತುಗಳೊಂದಿಗೆ ಮದನಿಕಯರು









ದೇವಾಲಯಗಳ ಭಿತ್ತಿ ಚಿತ್ರಗಳು





ಏಕಜಾಟಿ ಧಮ್ಮ



ಯ್ಯೋಸಿ ತೋಗಿಲ್



ಬೌದ್ಧ ಸನ್ಯಾಸಿಗಳ ಜೀವನವಿಧಾನ





■ ಧಾರ್ಮಿಕ ಕ್ಯಾಲೆಂಡರ್



■ ಸಂಗೀತ ಅರಮನೆ



■ ಎಂಟು ಚೌಕದ ಮಂಡಲ



■ ಜನ್ಮ ಮತ್ತು ಮುಕ್ತಿ ಮಂಡಲ


ಅದೇ ರೀತಿಯಲ್ಲಿಯೂ ಟಿಬೆಟಿಯನ್ನರು ತಮ್ಮ ಕ್ಯಾಂಪುಗಳಲ್ಲಿ ಒಂದೇ ರೀತಿಯಲ್ಲಿ ನಿರ್ಮಿಸಿರುವುದನ್ನು ಕಾಣಬಹುದು. ಇವುಗಳನ್ನು ಊರಿಗೆ ಒಳ್ಳೆಯದಾಗಲೆಂದು ಹಾಗೂ ದುಷ್ಟಶಕ್ತಿಗಳು ಊರಿಗೆ ಪ್ರವೇಶಿಸಬಾರದು, ಕೆಲವು ಶುಭದಿನಗಳ, ಮಧುವೆ, ಹಬ್ಬಗಳು ಇತ್ಯಾದಿ ವಿಶೇಷ ಸಂದರ್ಭದಲ್ಲಿ ಹೆಬ್ಬಾಗಿಲಿನಿಂದ ಹಾದು ಹೊಗುವುದರಿಂದ ಒಳ್ಳೆಯದಾಗುತ್ತದೆ. ಆ ಊರಿನಲ್ಲಿ ಪ್ರತಿಷ್ಠಿತ ದೇವಾಲಯವು ಇದೆ ಎಂದು ಗುರುತಿಸಲು ಊರಿನ ಪ್ರಮೂಖ (ಧಾರ್ಮಿಕ ವಿಷಯವನ್ನು ತೋರಿಸಲು) ದೇವತೆಯ ಉತ್ಸಹವನ್ನು ಹೆಬ್ಬಾಗಿಲಿನಿಂದಲೆ ಹಾದು ಹೋಗ ಬೇಕೆಂಬ ಧಾರ್ಮಿಕ ಕಲ್ಪನೆಯನ್ನು ಇಟ್ಟುಕೊಂಡಿರುವುದನ್ನು ಇಂದಿಗೂ ಕಾಣಬಹುದು. ಅದೇ ರೀತಿಯ ಅಧ್ಯಾತ್ಮಿಕ ಕಲ್ಪನೆಯನ್ನು ಇಟ್ಟುಕೊಂಡು ಟಿಬೆಟಿಯನ್ನರು ತಮ್ಮ ಕ್ಯಾಂಪುಗಳನ್ನು ದೇವಾಲಯದ ಎದುರು ಭಾಗ, ಕ್ಯಾಂಪಿನ ಹೊರವಲಯದಲ್ಲಿ ದ್ವಾರ ಬಾಗಿಲುಗಳನ್ನು ನಿರ್ಮಿಸಿಕೊಂಡಿದ್ದಾರೆ. ಬೈಲುಕುಪ್ಪೆಯಲ್ಲಿ ೧೫ಕ್ಕೂ ಅಧಿಕ, ಮುಂಡಗೋಡ ಡಲ್ಲಿ ೭, ಗುರುಪುರದಲ್ಲಿ ೩ ಒಡೆಯಪಾಳ್ಯದಲ್ಲಿ ೩, ಬೆಂಗಳೂರಿನಲ್ಲಿ ೨, ಒಟ್ಟಾರೆ ೩೦ ದ್ವಾರ ಬಾಗಿಲುಗಳನ್ನು ನಿರ್ಮಿಸಿದ್ದಾರೆ. ಅವುಗಳಲ್ಲಿ ೧೨ ಸಿಮೆಂಟ್ ಮಾಧ್ಯಮಗಳಿಂದರೆ ೮ ಕಬ್ಬಿಣ ಮಾಧ್ಯಮದಿಂದ ನಿರ್ಮಿಸಿದ ದ್ವಾರಬಾಗಿಲುಗಳಿವೆ. ಎಲ್ಲಾ ಬಾಗಿಲುಗಳಲ್ಲಿ ಎಡ ಮತ್ತು ಬಲ ಕಂಬಗಳಲ್ಲಿ (ಪಚ್ಚಿಕೆ) ಟಿಬೆಟಿಯನ್ನರ ಶ್ರೇಷ್ಠ ಚಿನ್ನೆಗಳಾದ ಶಂಕು, ಮಂಡಲ, ಚಿನ್ನದ ಮೀನು, ಧ್ವಜಚಿತ್ರ, ವಜ್ರ, ಆನೆಯ ದಂತಗಳು, ವಸ್ತುವಿಷಯಗಳನ್ನು ಅಧರಿಸಿದ ಭಿತ್ತಿಗಳನ್ನು ಚಿತ್ರಿಸಿದ್ದಾರೆ. ಮೇಲಿನ ಗೋಪುರ ಮಧ್ಯೆ ಪಟ್ಟಿಕೆಯಲ್ಲಿ ಟಿಬೆಟಿನ ದೇವಾಲಯದ ಹೆಸರನ್ನು ಇಂಗ್ಲೀಷ್‌ನಲ್ಲಿ ಹಾಗೂ ಟಿಬೆಟಿಯನ್ನರ ಭಾಷೆಯ ಅಕ್ಷರಗಳನ್ನು ಬರೆದಿದ್ದಾರೆ. ಗೋಪುರದ ನಾಲ್ಕು ಮೂಲೆಯಲ್ಲಿ ಸಿಂಹ, ಡ್ರಯಾಗನ್, ಗಂಟುಹಾಕಿದ ಪುಗಗಳಿಂದ ರಚಿಸಿದ ಸಿಮೆಂಟ್ ಉಬ್ಬು ಶಿಲ್ಪಗಳಿಗೆ ವರ್ಣವನ್ನು ಲೇಪಿಸಲಾಗಿದೆ. ಬಾಹ್ಯ ಅಕಾರವು ಕನ್ನಡ ೧ ಅಕ್ಷರದ ಅಕಾರದಲ್ಲಿದ್ದು ಗೋಪುರದ ಮೇಲು ಭಾಗದಲ್ಲಿ ಟಿಬೆಟಿಯನ್ನರ ರಾಷ್ಟ್ರಿಯ ಚಿನ್ನೆಯಾದ ನ್ಯಾಯಚಕ್ರ, ಅದರ ಎದುರು ಬದುರು ಜಿಂಕೆಯು ಮುಖಮಾಡಿ ಕುಳಿತಿರುವಂತಹ ಶಿಲ್ಪಗಳನ್ನು ನಿರ್ಮಿಸಿದ್ದು, ದ್ವಾರಬಾಗಿಲನ್ನು ಅನೇಕ ಜಾಮಿತಿಕ, ನೈಸರ್ಗಿಕ ಹಾಗೂ ಅಲಂಕಾರಿಕ ನಕ್ಷೆಗಳಿಂದ ಭಿತ್ತಿಯನ್ನು ಚಿತ್ರಿಸಲಾಗಿದೆ, ವಿಶೇಷವಾಗಿ ಭಿತ್ತಿ ಚಿತ್ರಗಳಲ್ಲಿ ಚಿನ್ನದ ಬಣ್ಣದ ಪ್ರಧಾನತೆಯನ್ನು ಹೊಂದಿದ್ದು, ಹೆಬ್ಬಾಗಿಲಿನ ಭಿತ್ತಿ ಚಿತ್ರಗಳ ವಿಮರ್ಶೆಯಲ್ಲಿ ಹೆಚ್ಚಿನ ವಿವರಣೆಯನ್ನು ಕ್ರಮವಾಗಿ ವಿವರಿಸಲಾಗುತ್ತದೆ. ಮೇಲಿನಂತೆ ಹೆಚ್ಚಾಗಿ ಬೈಲುಕುಪ್ಪೆಯ ಪರಿಸರದಲ್ಲಿ ಸೌಂದಯಾತ್ಮಕವಾದ ದ್ವಾರಬಾಗಿಲುಗಳನ್ನು ಹೆಚ್ಚಾಗಿ ನಿರ್ಮಿಸಿದ್ದಾರೆ.

ಹೆಬ್ಬಾಗಿಲ ಮೇಲಿನ ಭಿತ್ತಿಚಿತ್ರಗಳ ವಿವರಣೆ

ಟಿಬೆಟಿಯನ್ನರ ಪರಿಸರದ ಹೆಬ್ಬಾಗಿಲಗಳ ಮೇಲಿನ ಭಿತ್ತಿ ಚಿತ್ರಗಳನ್ನು ಎಂಟು ಶ್ರೇಷ್ಠ ಚಿನ್ನೆಗಳು. ಡ್ರಯಾಗಾನ್ ಹಾಗೂ ಹೂ ಬಳ್ಳಿಯ ನಕ್ಷ ಚಿತ್ರಗಳು. ಜಾಮಿತಿಕ ನಕ್ಷ ವಿನ್ಯಾಸಗಳಂತಹ ವಸ್ತು ವಿಷಯಗಳನ್ನು ಅಧರಿಸಿದ ಭಿತ್ತಿ ಚಿತ್ರಗಳನ್ನು ಕಾಣಬಹುದು. ಈ ಚಿತ್ರದಲ್ಲಿ ಗಮನಿಸಿದರೆ ಹೆಬ್ಬಾಗಿಲಿನ ಕಂಬಗಳ ಪಟ್ಟಿಯ ಮೇಲೆ ಹಳದಿ ಬಣ್ಣದ ನ್ಯಾಯಚಕ್ರ, ನೀಲಿ ವರ್ಣದ ಎಂಟು ಚೌಕದ ಮಂಡಲ, ನೀಲಿ ಬಣ್ಣದ ತಾವರೆ, ಕಡುಗೆಂಪು ವರ್ಣದ ಕೊಡೆ, ಗಾಢ ಹಳದಿ ಬಣ್ಣದ ಕಳಸ. ಬಿಳಿವರ್ಣದ ಶಂಖ, ಕೆಂಪು ವರ್ಣದ ದ್ವಜ ಸ್ತಂಭ ಚಿತ್ರಗಳನ್ನು ಅನೇಕ ಬಣ್ಣವಾದ ಕೆಂಪು, ಕೇಸರಿ ತಾವರೆಗಳ ಮೇಲೆ ಇಟ್ಟಿರುವಂತೆ ಚಿತ್ರವನ್ನು ರಚಿಸಿದ್ದು. ಅದರ ಸುತ್ತಲು ಹೂ, ಬಳ್ಳಿಯ ಸರಳಗೈ ನಕ್ಷೆಗಳನ್ನು ನೀಲಿ ಮತ್ತು ಬಿಳಿ ಮಿಶ್ರಿತ ವರ್ಣಗಳಿಂದ ಹಾಗೂ ಹಸಿರು ಬಣ್ಣದ ಎಲೆಗಳಿಂದ ಸಂಯೋಜಿಸಿದ ಚಿತ್ರಗಳನ್ನು ಕಾಣಬಹುದು, ಇವುಗಳ ಹಿನ್ನೆಲೆಯನ್ನು ಗಾಢ ಕೆಂಪು ವರ್ಣದಿಂದ ಲೇಪಿಸಲಾಗಿದೆ.

ಹೆಬ್ಬಾಗಿಲ ಮೇಲಿನ ಭಿತ್ತಿಚಿತ್ರಗಳು





- ದ್ವಾರದ ಹೆಬ್ಬಾಗಿಲು
- ಹೆಬ್ಬಾಗಿಲಿನ ಮೇಲಿನ ಭಿತ್ತಿ ಚಿತ್ರಗಳು

ನಂತರ ಮೇಲಿನ ಅಡ್ಡ ಪಟ್ಟಿಕೆಯಲ್ಲಿ ಟಿಬೆಟಿನ ದೇವಾಲಯದ ಹೆಸರನ್ನು ಟಿಬೆಟಿನ ಅಕ್ಷರಗಳಲ್ಲಿ ಬರೆದು ಅದರ ಸುತ್ತ ನಕ್ಷೆಗಳನ್ನು ಚಿನ್ನಾದ ವರ್ಣಗಳಂದ ಚಿತ್ರಿಸಿದ್ದು ನಂತರ ಇನ್ನಾಂದು ಪಟ್ಟಿಕೆಯ ನೀಲಿ ಪ್ರಧಾನ ಹಿನ್ನಲೆಯಲ್ಲಿ ಐದು ವಿವಿಧ ವರ್ಣದ ಮುತ್ತಾನ ಗುಚ್ಚ ಬಲ ಮತ್ತು ಎಡ ಭಾಗದಲ್ಲಿ ತಿಳಿನೀಲಿ ಹಾಗೂ ಹಳದಿ ಪ್ರಧಾನ ಡ್ರಯಾಗನ್ ಚಿತ್ರಗಳನ್ನು ಚಿತ್ರಿಸಿರುವುದನ್ನು ಚಿತ್ರದಲ್ಲಿ ಕಾಣಬಹುದು. ನಂತರ ಗೋಪುರವನ್ನು ದೋಣಿಯಾಕಾರದ ಟಿಬೆಟಿಯನಾರ ವಾಸ್ತು ಶೈಲಿಯ ಪಟ್ಟಿಕೆಯ ಮೇಲೆ ಚಿನ್ನಾದ ವರ್ಣಗಳ ನಕ್ಷಾ ಚಿತ್ರ ಗೋಪುರದ ಮೇಲಿನ ಭಾಗದಲ್ಲಿ ನ್ಯಾಯ ಚಕ್ರದ ಎದುರು ಬದುರು ಕುಳಿತ ಜಿಂಕೆಗಳನ್ನು ಚಿನ್ನದ ಬಣ್ಣದಿಂದ ಲೇಪಿಸಿದ್ದಾರೆ. ಮೇಲಿನ ಎಲ್ಲಾ ಚಿತ್ರಗಳನ್ನು ಚೌಕ ಪಟ್ಟಿಕೆಗಳಿಂದ ಸಂಯೋಜಿಸಿದ್ದು, ಅವುಗಳಲ್ಲಿ ಹೆಚ್ಚಾಗಿ ಜಾಮಿತಿಕ ನಕ್ಷಾ ಚಿತ್ರಗಳಾಗಿದ್ದು ಇವುಗಳನ್ನು ಚಿನ್ನದ ವರ್ಣಗಳಿಂದ ಶೃಂಗಾರಮಯವಾದ ರೀತಿಯಲ್ಲಿ ಚಿತ್ರಿಸಿರುವುದು ಹಿಂಬದಿ ಮತ್ತು ಹಿಂಬದಿಯಲ್ಲಿ ಯಥಾವತ್ತಾಗಿ ಚಿತ್ರಿಸಿರುವುದನ್ನು ವಿಶಿಷ್ಠವಾಗಿ ಗಮನಿಸಬಹುದು. ಇವುಗಳಲ್ಲಿ ಸಂಪೂರ್ಣ ಟಿಬೆಟಿಯನ್ನರ ಥಾಂಕ ಶೈಲಿಗೆ ತಕ್ಕಂತೆ ಚಿತ್ರಿಸಿದ್ದು ರಾಸಾಯನಿಕ ಬಣ್ಣದ ಉದ್ಯಮಗಳಾಗಿವೆ. ಎಂದು ಸ್ಥೂಲವಾಗಿ ವಿವರಿಸಬಹುದು.

೩. ರಸ್ತೆ ಮೇಲಿನ ಭಿತ್ತಿಚಿತ್ರಕಲೆ

ಟಿಬೆಟಿಯನ್ನರ ರಸ್ತೆ ಮೇಲಿನ ಚಿತ್ರಕಲೆ ಕರ್ನಾಟಕದಲ್ಲಿನ ಜನಪದ ಚಿತ್ರಕಲೆಯಾದ ರಂಗವಲ್ಲಿ ಚಿತ್ರಕಲೆಯ ಮಾದರಿ ಬೆಳೆದುಬಂದ ಕಲ್ಪನೆಯನ್ನು ಕಟ್ಟಿಕೊಡುತ್ತದೆ ಜನಪದದಲ್ಲಿ ಹಬ್ಬ ಹರಿದಿನಗಳು, ಜಾತ್ರೆ, ಮಧುವೆ, ಉತ್ಸಾಹಗಳ ಸಂದರ್ಭಗಳಿಗೆ ತಕ್ಕಂತಹ ವಿಷಯದಲ್ಲಿ ಮನೆ, ದೇವಾಲಯಗಳ ಎದುರು, ರಸ್ತೆಗಳಮೇಲೆ, ರಂಗವಲಿ ಚಿತ್ರವನ್ನು ಚಿತ್ರಿಸುತಿರುವ ಜನಪದ ಸಂಪ್ರದಾಯವನ್ನು ಇಂದಿಗೂ ನಾವು ನೋಡಬಹುದು ಇಂಥಹ ಕಲ್ಪನೆಯನ್ನು ಆಧರಿಸಿಕೊಂಡಿರುವ ಬೌದ್ಧ ಧರ್ಮದ ಲಾಮಗಳು ಬೌದ್ಧ ಧರ್ಮಕ್ಕೆ ಸಂಭಂಧಿಸಿದ ವಿಶಿಷ್ಠ ೮ ಶ್ರೇಷ್ಠ ಚಿನ್ನೆಗಳನ್ನು ಆಧಾರಿಸಿ ಹಾಗೂ ಅಲಂಕಾರಿಕ ನಕ್ಷಾ ಚಿತ್ರಗಳನ್ನು ತಮ್ಮ ಕ್ಯಾಂಪಿನ ಪ್ರಮುಖ ಪರಿಸರದ ೪ ರಸ್ತೆಗಳು, ದೇವಾಲಯಗಳ ಎದುರು ರಸ್ತೆಯ ಮೇಲೆ ಹಾಗೂ ಮನೆಯ ಬಾಗಿಲುಗಳ ಮುಂದೆ ಬಾಹ್ಯ ರೇಖೆಗಳಿಂದ ರಂಗವಲಿಯ ರೀತಿ ಚಿಕ್ಕ ಅಳತೆಯಿಂದ ಹಿಡಿದು ದೊಡ್ಡ ಅಳತೆಯವರೆಗೂ ಹಾಕುತ್ತಾರೆ. ಆದರೆ ಹೆಚ್ಚು ದಿನಗಳವರೆಗೆ ಉಳಿಯುವುದಿಲ್ಲ ಎಂಬ ಕಾರಣಕ್ಕೆ ಸೀಮೆಸುಣ್ಣದಿಂದ ರೇಖೆ ಬರೆದು, ರಾಸಾಯಿನಿಕ ಬಣ್ಣಗಳಾದ ತೈಲವರ್ಣ ಹಾಗೂ ಡಿಸ್ಟೆಂಪರ್ ಬಳಸಿ ಕುಂಚಗಳಿಂದ ಬಾಹ್ಯ ರೇಖಾಪ್ರಧಾನ ಭಿತ್ತಿಚಿತ್ರಗಳು ಹಾಗೂ ವರ್ಣಲೇಪಿತ ಭಿತ್ತಿಚಿತ್ರಗಳನ್ನು ಟಿಬೆಟಿಯನ್ನರ ಶುಭದಿನಗಳಂದು, ಬುದ್ಧ ಪೂರ್ಣಿಮೆ, ಪರಿನಿರ್ಮಾಣದ ಸ್ಮರಣೋತ್ಸವದ ದಿನ, ಟಿಬೆಟಿಯನ್ನರ ಹೊಸ ವರ್ಷದ ಆಚರಣೆ, ದಲ್ಮೆಲಾಮದವರು ಬರುವ ದಿನಗಳಂತಹ ಶುಭದಿನ, ಹಬ್ಬಗಳ ಸಂದರ್ಭದಲ್ಲಿ ಲಾಮಗಳು, ಕಲಾವಿದರು ಹಾಗೂ ಅಲ್ಲಿನ ಸಾಮಾನ್ಯ ಚಿತ್ರಕಲೆ ಕಲಿತವರು ಭಾಗವಯಿಸಿ ಭಿತ್ತಿಚಿತ್ರವನ್ನು ರಚಿಸಿರುತ್ತಾರೆ.

ಬೈಲುಕುಪ್ಪೆ ಪರಿಸರದಲ್ಲಿ ಹೆಚ್ಚಾಗಿ ಇರುವದನ್ನು ಕಾಣಬಹುದು. ಗುರುಪುರ, ಒಡೆಯರ ಪಾಳ್ಯ, ಮುಂಡಗೋಡ ಕೊರಮಂಡಲ ಪ್ರದೇಶಗಳಲ್ಲಿ ರಸ್ತೆಯ ಮೇಲಿನ ಭಿತ್ತಿಚಿತ್ರಕಲೆಯನ್ನು ಚಿತ್ರಿಸಿರುತ್ತಾರೆ. ಲಾಮಗಳು ನಡೆಯುವ ರಸ್ತೆಗಳು ಶೃಂಗರವಾಗಿರಲೆಂದು ಭಿತ್ತಿಚಿತ್ರವನ್ನು ಸಾವಿರಾರು ಸಂಖ್ಯೆಯಲ್ಲಿ

ಚಿತ್ರಿಸಿರುತ್ತಾರೆ. ಅಂತಹ ವಿಷಯಗಳೆಂದರೆ ಕಮಲದ ಹೂವಿನ ಮೇಲೆ ಧ್ವಜಸ್ಥಂಭ ನಿಲ್ಲಿಸಿರುವುದು, ಆನೆಯ ಎರಡು ದಂತಗಳು, ಟಿಬೆಟಿನ ರಾಷ್ಟ್ರಚಿನ್ನ, ವಜ್ರ ಸಂಕೇತಚಿತ್ರ, ತಾಂತ್ರಿಕ ಬುದ್ಧನತಲೆ, ತಾವರೆಮೇಲೆ ಸ್ತೂಪ ಇರುವುದು, ಅಕಾರ ಮೋಡಗಳು ಚಲಿಸುವಂತೆ, ಉರಿಯುವ ಜ್ವಾಲೆ, ಟಿಬೆಟಿನ ಮೂರು ಮುತ್ತು ರತ್ನ ತುಂಬಿದ ಬಟ್ಟಲು, ಇತ್ಯಾದಿ ವಿವಿಧ ಪ್ರಾಣಿ ಪಕ್ಷಿಗಳಿಂದ ಅಲಂಕರಿಸಿದ ವಿವಿಧ ನಮೂನೆಯ ನಕ್ಷಾಚಿತ್ರಣ ಹಾಗೂ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಅನೇಕ ಲಿಪಿಗಳಂತಹ ಅಕ್ಷರಗಳನ್ನು ವಸ್ತುವಿಷಯವಾಗಿ ಆಧರಿಸಿದ ಭಿತ್ತಿಚಿತ್ರಗಳನ್ನು ರಚಿಸಿದ್ದಾರೆ. ಈ ರೀತಿಯ ಚಿತ್ರಗಳಲ್ಲಿ ಶಾಸ್ತ್ರಿಯ ತಾಳಮಾನಕ್ಕೆ ದಕ್ಕೆತರದ ರೀತಿಯಲ್ಲಿ ಭಿತ್ತಿಚಿತ್ರವನ್ನು ಟೈಲ್ಸ್ ರಸ್ತೆಯ ಮೇಲೆ, ಡಾಂಬರ್ ರಸ್ತೆಯ ಮೇಲೆ ಅವರ ಪರಿಸರದ ತುಂಬೆಲ್ಲ ಮೇಲಿನ ರೀತಿಯಲ್ಲಿ ಚಿತ್ರಿಸಿದ್ದಾರೆ.

ರಸ್ತೆ ಮೇಲಿನ ಭಿತ್ತಿ ಚಿತ್ರಗಳ ವಿವರಣೆ

೩.೧ ಶ್ರೇಷ್ಠ ಕೊಡೆಯ ಚಿತ್ರ

ಟಿಬೆಟಿನ ಸಂಪ್ರದಾಯದಲ್ಲಿ ವಿಶಿಷ್ಠವಾದ ಸ್ಥಾನ ಪಡೆದಿರುವ ಈ ಶ್ರೇಷ್ಠ ಕೊಡೆಯನ್ನು ಸ್ಪೈನರ್ ಮಾಧ್ಯಮದ ಬಣ್ಣದಿಂದ ಚಿತ್ರಿಸಲಾಗಿದೆ. ಮಸಕು ಹಳದಿ ತಾವರೆಯ ಮೇಲೆ ಹಳದಿ ದಂಡವನ್ನು ಹೊಂದಿರುವ ಕೆಂಪು ಪ್ರಧಾನ ಕೊಡೆಯನ್ನು ಬಿಳಿಭಾಗದ ಟೋಪಿಗೆಯಿಂದ ಬಂದಿಸಿ, ನಂತರ ಅದರ ಸುತ್ತ ಹಸಿರು, ನೀಲಿ ವರ್ಣದ ತೋರಣ ಮಾದರಿಯ ಬಟ್ಟೆಯನ್ನು ಸುತ್ತುವರಿದಿರುವಂತೆ ನಿಲ್ಲಿಸಿದ್ದು, ಗಾಢ ಹಸಿರು ಹಾಗೂ ತಿಳಿ ಹಸಿರು ಬಣ್ಣವನ್ನು ಹೊಂದಿರುವ ಹಾರಾಡುವ ರೇಷ್ಮೆಯ ವಲ್ಲಿಯನ್ನು ಚಿತ್ರಿಸಿದ್ದಾರೆ. ಕೊಡೆಯ ಮೇಲು ಭಾಗವನ್ನು ಹಳದಿ ಕಳಸದಿಂದ ಬಿಗಿದಂತೆ ಬಿಳಿಯ ಬಣ್ಣದ ಸುತ್ತ ಪಟ್ಟಿಕೆ ಹೊಂದಿದ್ದು, ರಸ್ತೆಯನ್ನು ಚನ್ನಾಗಿ ತೊಳೆದು ರೇಖಾ ಪ್ರಧಾನವಾದ ಚಿತ್ರ ರಚಿಸಿ ಮೇಲೆ ತಿಳಿಸಿದ ಬಣ್ಣಗಳಿಂದ ಪೂರ್ಣಗೊಳಿಸಿ, ಕಮಲದ ಮೇಲೆ ಕಂದು ಬಣ್ಣದಿಂದ ದಪ್ಪವಾಗಿ ಬಾಹ್ಯ ರೇಖೆಯನ್ನು ನಯವಾಗಿ ಚಿತ್ರಿಸಿದ್ದಾರೆ. ಅದರ ಮೇಲಿನ ಪರಾಗದ ಚುಕ್ಕಿ ರೂಪಕ್ಕೆ ಕ್ರಮವಾಗಿ ೩ ಆಕಾರದಲ್ಲಿ ಬಿಡಿಸಿದ್ದಾರೆ. ಇಂಥಹ ಚಿತ್ರಗಳನ್ನು ದೊಡ್ಡದಾಗಿ ರಂಗೋಲಿ ರೀತಿ ರಚಿಸಿರುವುದನ್ನು ಚಿತ್ರದಲ್ಲಿ ಕಾಣಬಹುದು.

೩.೨ ಶ್ರೇಷ್ಠ ಶಂಖು ಚಿತ್ರ

ಗಾರೆ ನೆಲದ ಮೇಲೆ ಸ್ಪೈನರ್ ಮಾಧ್ಯಮದ ಬಣ್ಣದಿಂದ ದೊಡ್ಡ ಶಂಖವನ್ನು ಕೆಂಪು ತಾವರೆಯ ಹೂವಿನ ಮೇಲೆ ಇಟ್ಟಿರುವಂತೆ ಚಿತ್ರಿಸಿರುವುದನ್ನು ಕಾಣಬಹುದು. ಬಿಳಿ ಶಂಖವನ್ನು ಪ್ರಧಾನವಾಗಿ ಚಿತ್ರಿಸಿದ್ದು, ಬಾಹ್ಯ ರೇಖೆಯನ್ನು ಕಪ್ಪು ಬಣ್ಣದಿಂದ ಎಳೆಯಲಾಗಿದೆ. ತಳಭಾಗದಲ್ಲಿ ಕೆಂಪು ತಾವರೆ ಹೂವಿನ ಮಧ್ಯಭಾಗದ ಪರಾಗವನ್ನು ಕಪ್ಪು ಬಣ್ಣದ ಚುಕ್ಕಿಗಳಿಂದ ಪೂರ್ಣಗೊಳಿಸಲಾಗಿದೆ. ಬಾಹ್ಯ ರೇಖೆಯನ್ನು ಕಪ್ಪು ಬಣ್ಣದಿಂದ ಪೂರ್ಣಗೊಳಿಸಿರುವ ಭಿತ್ತಿಚಿತ್ರವಾಗಿದೆ. ಇದು ಟಿಬೆಟಿಯನ್ನರ ವಿಶಿಷ್ಟ ಸಂಪ್ರದಾಯಗಳಲ್ಲಿ ಒಂದು.

೩.೩ ಶ್ರೇಷ್ಠ ದಂತಗಳ ಚಿತ್ರ:

ಎರಡು ಉದ್ದವಾದ ಬಿಳಿಯ ದಂತಗಳನ್ನು ಕಂದು ವರ್ಣ, ಒಂದು ಕಡೆ ಮತ್ತೊಂದು ಕಡೆ ತಿಳಿ ಕಂದು ಬಣ್ಣದ ಬಟ್ಟೆಯು ಸುತ್ತಿಕೊಂಡು ಹಾರಾಡುವಂತಹ ವಲ್ಲಿಯ ಚಿತ್ರವನ್ನು ರೇಖಾ

ರಸ್ತೆ ಮೇಲಿನ ಭಿತ್ತಿಚಿತ್ರಗಳು





■ ಶ್ರೇಷ್ಠ ಕೊಡೆ



■ ಶ್ರೇಷ್ಠ ಶಂಖ



■ ಶ್ರೇಷ್ಠ ದಂತಗಳು

ರಸ್ತೆ ಮೇಲಿನ ಭಿತ್ತಿಚಿತ್ರಗಳು



■ ನ್ಯಾಯ ಚಕ್ರ



■ ಬಟ್ಟೆಯ ಕಳಸ



■ ತಾವರೆ ಹೂ

ಪ್ರಧಾನವಾಗಿ ಚಿತ್ರಿಸಿದ್ದಾರೆ. ಇದು ಟಿಬೆಟಿನ ಶ್ರೇಷ್ಠ ವಸ್ತುಗಳಲ್ಲಿ ಒಂದು. ರಸ್ತೆಯ ಮೇಲೆ ಬಾಹ್ಯ ರೇಖೆಯಿಂದ ಚಿತ್ರಿಸಿದ ಭಿತ್ತಿ ಚಿತ್ರವಾಗಿದೆ. ಇವುಗಳ ಮೇಲೆ ಲಾಮಗಳು ನಡೆದಾಡುವುದರಿಂದ ಅವರ ಪಾದ ಸ್ಪರ್ಶವಾಗಿ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಉಳ್ಳವರು.

೩.೪ ನ್ಯಾಯ ಚಕ್ರದ ಚಿತ್ರ

ಟಿಬೆಟಿಯನ್ನರ ನ್ಯಾಯ ಚಕ್ರದ ಚಿತ್ರವನ್ನು ಬಿಳಿಯ ರೇಖೆಗಳಿಂದ ಚಿತ್ರಿಸಿದ್ದು, ಚಕ್ರವನ್ನು ಹಳದಿ ವರ್ಣದಿಂದ ತುಂಬಿದ್ದು, ಮಧ್ಯಭಾಗದ ಕೇಂದ್ರಿಯ ವೃತ್ತವನ್ನು ಕಂದು ಗೆಂಪು, ತಿಳಿ ಹಸಿರು ಬಣ್ಣದಲ್ಲಿ ಧನಾತ್ಮಕ ಹಾಗೂ ಋಣಾತ್ಮಕವಾದ ವೃತ್ತ ವಿಭಜನೆಯ ಚಿಹ್ನೆಯನ್ನು ರಚಿಸಿದ್ದಾರೆ. ಅದೇ ಎರಡು ವರ್ಣಗಳಿಂದ ಚಕ್ರದ ಕಂಬಗಳ ಮಧ್ಯದಲ್ಲಿ ಮುತ್ತಿನ ಅರಳನ್ನು ಬಳಸಿದ್ದು, ಇದನ್ನು ಸುತ್ತುವರಿದ ವಲ್ಲಿಯ ಬಟ್ಟೆಯನ್ನು ಕಾವಿ ಹಾಗೂ ತಿಳಿ ಕಾವಿ ವರ್ಣದಿಂದ ತುಂಬಿರುವುದು ಜೋತೆಗೆ ಬಟ್ಟೆ ಹಾರಾಡುತಿರುವಂತೆ ಚಿತ್ರಿಸಿದ್ದು ಹಾಗೂ ಚಕ್ರವನ್ನು ಬಿಳಿಯ ತಾವರೆಯ ಮೊಗ್ಗಿನ ಮೇಲೆ ಇಟ್ಟಿರುವಂತೆ ಚಿತ್ರಿಸಿದ್ದಾರೆ.

೩.೫ ತಾವರೆ ಹೂ ಚಿತ್ರ:

ಸುಂದರವಾದ ಟಿಬೆಟಿನ ತಾವರೆ ಹೂ, ಮೊಗ್ಗು, ಎಲೆಗಳು ಹರಡಿಕೊಂಡಂತೆ ಚಿತ್ರಿಸಿದ ಚಿತ್ರವಾಗಿದೆ. ತಾವರೆಯ ತೊಟ್ಟನ್ನು ತಿಳಿ ಹಸಿರು, ಎಲೆಗಳನ್ನು ದಟ್ಟ ಹಸಿರು ಹಾಗೂ ಹೂವನ್ನು ಬಿಳಿ ಹಾಗೂ ಹಳದಿ ಮಿಶ್ರಿತ ವರ್ಣದಿಂದ ಲೇಪಿಸಿದ್ದು, ಬಾಹ್ಯ ರೇಖೆಗಳನ್ನು ಕಪ್ಪು ಬಣ್ಣದಿಂದ ಎಳೆದಿರುವುದು ಕಂಡು ಬರುತ್ತದೆ. ತಾವರೆಯ ಮಧ್ಯಭಾಗಕ್ಕೆ ತಿಳಿ ನೀಲಿಯನ್ನು ಮಿಶ್ರಣ ಮಾಡಿದ್ದು, ಮಧ್ಯಭಾಗದ ದುಂಡು ಪರಾಗವನ್ನು ಗೆರೆಯಿಂದ ಮಿಶ್ರಿತ ತಿಳಿ ಹಸಿರಿಗೆ ಹೊಂದಿಕೊಂಡಂತೆ ಚಿತ್ರಿಸಿದ್ದಾರೆ.

೩.೬ ಬಟ್ಟೆಯ ಕಳಸ ಚಿತ್ರ

ಬಟ್ಟೆಯ ವಲ್ಲಿಯಿಂದ ಸುತ್ತಿರುವ ಕಳಸದಾಕಾರದ ಚಿತ್ರವನ್ನು ರಚಿಸಿದ್ದು, ಬಟ್ಟೆಯ ತಿಳಿ ನೀಲಿ ಹಾಗೂ ದಟ್ಟ ನೀಲಿಯ ಎರಡು ಮುಖದಲ್ಲಿ ಲೇಪಿಸಿದ್ದು, ಕಪ್ಪು ರೇಖೆಗಳಿಂದ ಬಾಹ್ಯ ರೇಖೆಯ ಪ್ರಧಾನ ಚಿತ್ರವನ್ನು ಚಿತ್ರಿಸಿರುವುದನ್ನು ಚಿತ್ರದಲ್ಲಿ ನೋಡಬಹುದು. ಇದು ಒಂದು ವಿಶಿಷ್ಟ ಚಿತ್ರವಾಗಿದೆ.

೪. ಸ್ತೂಪಗಳ ಮೇಲಿನ ಭಿತ್ತಿಚಿತ್ರಕಲೆ

ಕರ್ನಾಟಕದ ಟಿಬೆಟಿಯನ ವಾಸ್ತುಶೈಲಿಯ ಜೊತೆಗೆ ಕಾಣಸಿಗುವುದರಲ್ಲಿ ಸ್ತೂಪ ನಿರ್ಮಾಣವು ಒಂದು. ಇವು ಸಮಾಧಿ ಸ್ಮಾರಕಗಳಾಗಿದ್ದು ಟಿಬೆಟಿಯನ್ನರ ಬೌದ್ಧ ಧರ್ಮದ ಪವಿತ್ರ ಸ್ಮಾರಕಗಳಾಗಿ ತಿಳಿಯುತ್ತಿದ್ದುದರಿಂದ ಪೂಜೆ, ಪ್ರದಕ್ಷಿಣೆ ಮಾಡುವ ಸಂಪ್ರದಾಯವನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದಾರೆ. ಕ್ರಿ.ಪೂ. ೩ ಮತ್ತು ಕ್ರಿ.ಶ. ೧ನೇ ಶತಮಾನಗಳಲ್ಲಿ ಮೊದಲು ನಿರ್ಮಣಗೊಂಡವು ಎಲ್ಲಾ ಜೀವಿಗಳು ಜೀವನದಲ್ಲಿ ಅತ್ಯುತ್ತಮ ಅರ್ಹತೆ ಸಾಧಿಸಲೆಂದು ಭಗವನ್ ಬುದ್ದರ ಕಾಲದಿಂದಲೇ ಅವರ ಭಕ್ತರು ಬುದ್ದರ ಎಂಟು ಪ್ರಧಾನ ಸಾಧನೆ ಮಾಡಿದ ಪ್ರದೇಶವಾದ ಲುಂಬಿ, ಬುದ್ಧಗಯ, ವಾರಣಾಸಿ, ಶ್ರಾವಸ್ಥಿ, ವೈಶಾಲಿ, ರಾಜಗೃಹ, ವೈಶಾಲಿ. ಕುಶನಗರಗಳಲ್ಲಿ ಸ್ತೂಪಗಳನ್ನು ನಿರ್ಮಾಣ ಮಾಡುವ ಉತ್ತಮ ಸಂಪ್ರದಾಯವನ್ನು ಆಚರಣೆಗೆ ತರಲು ಅರಂಭಿಸಿದರು, ಅಂತೆಯೇ ಇತ್ತೀಚಿನ ಪರಮಪೂಜ್ಯ ಪೆನೋರ್‍ರಿನ್ ಪೂಚೆಯವರು ೧೯೯೩ರಲ್ಲಿ ಸ್ತೂಪಗಳನ್ನು ಮತ್ತು ೨೦೦೦ರಲ್ಲಿ ಮತ್ತೆ

ಸ್ತೂಪದ ಮೇಲಿನ ಭಿತ್ತಿ ಚಿತ್ರಗಳು









ಉದ್ದೇಶ ವ್ಯವಹಾರಿಕ ಬದುಕಿಗಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಂಚರಿಸುವ ಕ್ರಿಯೆಯಲ್ಲಿ ಬೆಳವಣಿಗೆ ಹೊಂದುತ್ತದೆ. ಇದರ ಜೊತೆಗೆ ಬೌದ್ಧ ಧಾರ್ಮಿಕ ಪ್ರಚಾರ, ಪೂಜೆ ಧಾರ್ಮಿಕ ಸಂಕೇತಗಳ ಗುರುರಿಸುವಿಕೆಗೆ ಹೆಚ್ಚಾದ ಅಂಶಗಳನ್ನು ಟಿಬೆಟಿಯನ್ನರು ಬಳಸಿಕೊಂಡು ಬರುತ್ತಿರುವುದಾಗಿದ್ದು ಇದರ ಜೊತೆಗೆ ಅಧ್ಯಾತ್ಮಿಕ ನಂಬಿಕೆಗಳಡಿಯಲ್ಲಿ ಚಿತ್ರತ ಗೊಳ್ಳುತ್ತಿರುವುದು ಕಾಣಬಹುದು. ಹಾಗೂ ತಮ್ಮ ಪರಿಸರವನ್ನು ಸೌಂದಯಾತ್ಮಕವಾಗಿ ಶೃಂಗರಿಸಿಕೊಳ್ಳುಲು ಸಹ ಇದರ ಬಳಕೆ ಬೆಳವಣಿಗೆ ಹೆಚ್ಚಾಗುತ್ತಿದೆ. ಇಂತಹ ಭಿತ್ತಿಯೋತರ ಚಿತ್ರಕಲೆಗಳು ತನ್ನದೆಯಾದ ಅನೇಕ ಮಾಧ್ಯಮಗಳ ಮೂಲಕ ಟಿಬೆಟನ ಸಾಂಸ್ಕೃತಿಕ ಪರಿಸರದ ಹಾಗೂ ಇನ್ನಿತರ ಹೊರಗಿನ ಕರಕುಶಲ ಕೇಂದ್ರಗಳಂತಹ ಪರಿಸರದಲ್ಲಿ ಕಾಣುತ್ತಿರುವುದನ್ನು ಗಮನಿಸಿದರೆ ಟಿಬೆಟಿಯನ್ನರ ಆರ್ಥಿಕ ಪರಿಸ್ಥಿತಿಯಲ್ಲಿ ತನ್ನದೆಯಾದ ಪ್ರಧಾನ ಪಾತ್ರವು ವಹಿಸುತ್ತಿರುವುದನ್ನು ಭಿತ್ತಿಯೇತರ ಚಿತ್ರಕಲೆಯಿಂದ ತಿಳಿದುಕೊಳ್ಳುಬಹುದು.

ಧಾರ್ಮಿಕ ಪರಿಕಲ್ಪನೆಯಲ್ಲಿಯೇ ಹುಟ್ಟಿಕೊಂಡಿದ್ದ, ಇಂದು ಪ್ರಬುದ್ಧಮಾನಕ್ಕೆ ಬೆಳೆದುಕೊಂಡು ಬರುತ್ತಿರುವುದನ್ನು ಕಾಣಬಹುದು, ಮೇಲೆ ತಿಳಿಸಿದ ವಸ್ತುವಿಷಯಗಳನ್ನು ಆಧರಿಸಿ ಚಿತ್ರಗಳು ಬೆಳಕು ಕಂಡುಕೊಳ್ಳವುದನ್ನು ಕಾಣಬಹುದು. ಇಂಥಹ ಚಿತ್ರಕಲೆಯನ್ನು ಅಭ್ಯಾಸಿಸಲು ಪ್ರತೇಕವಾಗಿ ವರ್ಗೀಕರಿಸಿಕೊಂಡು ಅಭ್ಯಸಿಸಿ ವಿವರಣಾತ್ಮಕವಾಗಿ ವಿಮರ್ಶಿಸಲಾಗಿದೆ. ಅವುಗಳೆಂದರೆ,

೧. ಪಟ ಚಿತ್ರಕಲೆ

೨. ಬಾವುಟಗಳ ಮೇಲಿನ ಚಿತ್ರಕಲೆ

೩. ಕರಕುಶಲ ವಸ್ತುಗಳ ಮೇಲಿನ ಚಿತ್ರಕಲೆ

೪. ಸುರಳಿ ಚಿತ್ರಕಲೆ

೧. ಪಟ ಚಿತ್ರಕಲೆ

ಪುರಾತನ ಕಾಲದಿಂದ ಟಿಬೆಟಿಯನ್ನರ ರಾಜ ಮಹಾರಾಜರುಗಳು, ಧಾರ್ಮಿಕ ಗುರುಗಳು ಹಾಗೂ ಶ್ರೀಮಂತ ವ್ಯಕ್ತಿಗಳು ತಮ್ಮ ಸಂದೇಶ ಸೂಚನೆಯನ್ನು ಪಟ ಚಿತ್ರಗಳ. ಲಿಪಿಗಳ ಕೆಲವು ಭಾವಚಿತ್ರಗಳ ಸಾಂಕೇತಿಕ ಚಿತ್ರಗಳನ್ನು ರಚಿಸಿ ಸ್ನೇಹಿತರಿಗೆ, ನೆರೆಯ ರಾಜಮೆತನಗಳಿಗೆ ಉಡುಗೊರೆಯಾಗಿ ಕೊಡುತ್ತಿದ್ದರು. ರಾಜರು ಹೆಚ್ಚಾಗಿ ತಮ್ಮ ಅದೇಶಗಳನ್ನು ಕಲಾವಿದರ ಅಥವಾ ಅಸ್ಥಾನದ ಪುರೋಹಿತರ ಕೈಯಲ್ಲಿ ಲಿಪಿ ಮತ್ತು ಚಿತ್ರಗಳ ಮಿಶ್ರಿತ ವಿನ್ಯಾಸದ ಪಟಗಳನ್ನು ಬಿಡಿಸಿ ಕೊಡುವ ಮತ್ತು ತೆಗೆದುಕೊಳ್ಳುವ ಸಂಪ್ರದಾಯ ಪುರಾತನ ಕಾಲದಿಂದಲು ಭಾರತದಲ್ಲಿಯು ಬೆಳೆದುಬಂದಿದೆ. ಇಂತಹ ಸಂಪ್ರದಾಯಿಕ ಪದ್ಧತಿಯನ್ನು ಟಿಬೆಟಿಯನ್ನರು ಇಂದಿಗೂ ಉಳಿಸಿಕೊಂಡು ಬಂದಿರುವುದು ಒಂದು ಶ್ಲಾಘನೀಯ ವಿಷಯವೆಂದೇ ಹೇಳಬಹುದು. ಧರ್ಮ ಪ್ರಚಾರಕ್ಕಾಗಿ ಹೆಚ್ಚಾಗಿ ಇಂತಹ ಚಿತ್ರಪಟಗಳನ್ನು ಬಳಕೆಯಲ್ಲಿ ತಂದರೂ ಸಹ ಸಾಮಾನ್ಯ ಟಿಬೆಟಿಯನ್ನರ ಜನರು ಇವುಗಳನ್ನು ತಮ್ಮ ಮನೆಯಲ್ಲಿ ತೀರಿಕೊಂಡ ವ್ಯಕ್ತಿಯ ಹೆಸರು ಬಲವನ್ನು ಬೌದ್ಧ ಪುರೋಹಿತರಲ್ಲಿ ಶಾಸ್ತ್ರಕೇಳಿ ಅವರು ಸೂಚಿಸಿದ ಅಳತೆಯ ಚಿತ್ರ ಅಥವಾ ಶಿಲ್ಪಗಳನ್ನು ದೇವಾಲಯದಲ್ಲಿ ೧ ಮನೆಯಲ್ಲಿ ತೂಗುಹಾಕಿದರೆ ಯಾವುದೇ ತೊಂದರೆ ಇರುವುದಿಲ್ಲ ಹಾಗೂ ಧ್ಯಾನಮಾಡುವುದು, ಇತರರಿಗೆ ಧಾನ ಮಾಡುವುದು ಇವರ ಮೂಲ ಸಂಪ್ರದಾಯವಾಗಿದೆ. ಅದ್ದರಿಂದ ಇಂಥಹ ಚಿತ್ರಗಳನ್ನು ಅಥವಾ ಶಿಲ್ಪಗಳನ್ನು ಕಲಾವಿದರ ಕೈಯಲ್ಲಿ ಹಣ ಕೊಟ್ಟು ಪಟಚಿತ್ರಗಳನ್ನು ಸಿದ್ದಪಡಿಸುತ್ತಾರೆ.

ನಂತರ ಇವುಗಳನ್ನು ಬೌದ್ಧ ದೇವಾಲಯದಲ್ಲಿ ಪುರೋಹಿತರಿಗೆ ಕೊಟ್ಟು ಪೂಜಿಸಲ್ಲಿಸಿದ ನಂತರ ಪ್ರದರ್ಶಿಸಲು ಮನೆ ಅಥವಾ ದೇವಾಲಯಗಳಲ್ಲಿ ತೂಗು ಹಾಕುತ್ತಾರೆ. ಇವುಗಳೆಲ್ಲವು ಸಹ ಥಾಂಕ ಶೈಲಿಯ ಸಾಂಪ್ರದಾಯಿಕ ಅಳತೆಯನ್ನು ತಪ್ಪುವುದಿಲ್ಲ, ತಪ್ಪಿದರೆ ಅವರು ದೇವರಿಂದ ಪಾಪಕ್ಕೆ ಗುರಿಯಾಗುತ್ತಾರೆ ಎಂಬ ನಂಬಿಕೆ ಇದೆ. ಪಟಚಿತ್ರಗಳು ಹೆಚ್ಚಾಗಿ ಭಗವಾನ್ ಬುದ್ಧ ಬೋಧಿವೃಕ್ಷದ ಕೆಳಗೆ ತಪಸ್ಸಿಗೆ ಕುಳಿತಿರುವುದು, ಮಂಜುಶ್ರೀ, ಯಮಂತಕ, ಅವಲೋಕಿತೇಶ್ವರ, ಕೀರ್ತಿಗರ್ಭ, ವಜ್ರಪಾಣಿ, ತಾರದೇವತೆ, ಗುರುಪದ್ಮಸಂಭವ ಇತ್ಯಾದಿ ದೇವತೆಗಳು ಹಾಗೂ ಡ್ರಯಾಗಾನ್ ಚಿತ್ರ, ಕುದರೆ ರೆಕ್ಕೆ ಹೊಂದು ಹಾರುತ್ತಿರುವ ಇತ್ಯಾದಿ ಟಿಬೆಟಿಯನ್ನರ ಅಭಿರುಚಿಗೆ ತಕ್ಕಂತಹ ವಿಷಯವನ್ನು ಕಾಣಬಹುದು, ನಂತರ ಇಲ್ಲಿನ ಕಲಾವಿದರು ವ್ಯಾಪಾರದ ದೃಷ್ಟಿಯಿಂದ ಅನ್ಯೆ ಧರ್ಮಕ್ಕೆ ಸಂಭಂದಿಸಿದ ಚಿತ್ರಗಳನ್ನು ದೇವಾಲಯಕ್ಕೆ ಧಾನಮಾಡಲು ಅನ್ಯೆ ಧರ್ಮಯರು ಬಳಸುತ್ತಿದ್ದರಿಂದ, ಟಿಬೆಟಿಯನ್ನರಲ್ಲಿ ಅನ್ಯೆ ಧರ್ಮದ ಬಗ್ಗೆ ಗೌರವ ಹೆಚ್ಚು ಇರುವುದರ ಜೊತೆಗೆ, ಟಿಬೆಟಿಯನ್ನರ ದೇವತೆಗಳಿಗೂ ಕರ್ನಾಟಕದ ದೇವತೆಗಳಿಗೂ ಸಂಬಂಧವನ್ನು ಅರಿತ ಕಲಾವಿದರು ಭಾರತೀಯ ಚಿತ್ರ ಶೈಲಿಗೆ ತಕ್ಕಂತೆ, ಥಾಂಕ್ ಶೈಲಿಗೂ ದಕ್ಕೆಬಾರದ ರೀತಿಯಲ್ಲಿ ಚಿತ್ರ ಪಟಗಳನ್ನು ವಿನೂತನವಾಗಿ ರಚಿಸುತ್ತಿದಾರೆ. ಅವುಗಳೆಂದರೆ ಶ್ರೀಕೃಷ್ಣ ಕೊಳಲು ನುಡಿಸುವುದು. ಕಾಳಿದೇವತೆ ಶಿವನನ್ನು ತುಳಿಯುತ್ತಿರುವುದು, ಹನುಮಂತ ಕುಳಿತಿರುವ ದೃಶ್ಯ, ಸರಸ್ವತಿ, ಗಣೇಶ, ಲಕ್ಷ್ಮಿ, ಶ್ರೀರಾಮ ಇತ್ಯಾದಿ ಧಾರ್ಮಿಕ ಪುರಾಣಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ರೇಷ್ಮೆ ಬಟ್ಟೆಯ ಮೇಲೆ ನೈಸರ್ಗಿಕ ವಿನ್ಯಾಸಗಳು ಹಾಗೂ ಟಿಬೆಟಿನ ಥಾಂಕ ಮಂಡಲದ ಶೃಂಗರಿಸಿದ ಅತ್ಯಂತ ನಯನ ಮಾನೋಹಾರವಾಗಿ ಚಿತ್ರಿಸಿದ ಚಿತ್ರಪಟವನ್ನು ಎರಡು ಕೊಳವೆಯಲ್ಲಿ ಸೇರಿಸಿ ತೂಗು ಹಾಕಿರುತ್ತಾರೆ. ಅದರ ಸೂಕ್ತ ಕೆಲವು ರೇಷ್ಮೆ ಬಟ್ಟೆಯ ತುಂಡುಗಳಿಂದ ಶೃಂಗರಿಸಿ ಚಿತ್ರಿಸುವ ನೈಪುಣ್ಯೆತೆಗೆ ಮಾನ್ಯತೆ ನೀಡಿರುತ್ತಾರೆ.

ಭಿತ್ತಿ ಚಿತ್ರ ರಚಿಸುವ ಮಾದರಿಯಲ್ಲಿ ರಚಿಸುವುದಾಗಿದ್ದು, ಸ್ವಲ್ಪ ಸ್ವಲ್ಪ ಬದಲಾವಣೆಗಳನ್ನು ಕಾಣಬಹುದಾಗಿದೆ. ಅಳತೆಗಲು ಚಿಕ್ಕದಾಗಿ ೨ ಅಡಿಯಿಂದ ೬ ಅಡಿ, ೧.೫ ಅಡಿಯಿಂದ ೩ ಅಡಿಗಳವರೆಗೆ ಇತ್ಯಾದಿ ಅಳತೆಯ ಮಾದರಿಗಳಿದ್ದು, ಭಿತ್ತಿಚಿತ್ರಕ್ಕೆ ತಯಾರಿಸಿದಂತೆ ವಿವಿಧ ಬಣ್ಣದ ರೇಷ್ಮೆ ಬಟ್ಟೆಗಳನ್ನು ಚೌಕಾಕಾರವಾದ ಬಿದಿರು ಬಂಬೂ ಮತ್ತು ಕಟ್ಟಿಗೆ ಬಟ್ಟೆಯನ್ನು ಬಿಗಿದುಕೊಂಡು, ನೇರವಾಗಿ ಬಟ್ಟೆಯ ಮೇಲೆ ಸಿದ್ದ ಪಡಿಸಿಕೊಂಡ ಟ್ರೇಸಿಂಗ್ ಪೇಪರಿನ ಚಿತ್ರವನ್ನು ಇರಿಸಿ ರೇಖಾಚಿತ್ರವನ್ನು ರಚಿಸಿಕೊಂಡು ಲಂಬ ಮತ್ತು ಭೂ ರೇಖೆಗೆ ಹೊಂದುವಂತೆ ರೇಖಾಚಿತ್ರವನ್ನು ನಿರ್ಮಿಸುವುದು ಹಾಗೂ ಭಾರತೀಯ ವಸ್ತು ವಿಷಯಗಳಾದ ಹನುಮಂತ. ಕಾಳಿದೇವತೆ, ಭಗವಾನ್ ಬುದ್ಧ, ಶ್ರೀ ಕೃಷ್ಣ, ರಾಮ, ಸರಸ್ವತಿ, ಗಣೇಶ ಇಂತಹ ಚಿತ್ರಗಳನ್ನು ಪುಸ್ತಕದಲ್ಲಿ ನೋಡಿ ನೇರವಾಗಿ ಬಟ್ಟೆಯ ಮೇಲೆ ಚಿತ್ರಿಸುತ್ತಾರೆ. ರೇಖೆಯನ್ನು ರಚಿಸಿ, ಪೂರ್ಣಗೊಂಡ ನಂತರ ನಿಸರ್ಗಮೂಲ, ಖನಿಜಮೂಲ ಮತ್ತು ರಸಾಯನಿಕ ಮೂಲ ಬಣ್ಣಗಳನ್ನು ಬಳಸಿಕೊಂಡು ರಚಿಸಿದ ಸೂಕ್ಷ್ಮ ರೇಖಾ ಚಿತ್ರಗಳ ಕೆಂಪು ಬಣ್ಣದ ಬಟ್ಟೆಯ ಮೇಲೆ ಹಳದಿ ಸೀಸದ ಕಡ್ಡಿಯಿಂದ ರೇಖಾ ಚಿತ್ರಿಸುವುದು. ದಟ್ಟ ನೀಲಿ ಬಟ್ಟೆಯ ಮೇಲೆ ಬಿಳಿ ಬಣ್ಣದ ಸೀಸದ ಕಡ್ಡಿಯಿಂದ ಚಿತ್ರ ರಚಿಸುವುದರಿಮದ ಬಣ್ಣವನ್ನು ಹಚ್ಚಲು ಸಹಾಯವಾಗುತ್ತದೆ.

ಹೀಗೆ ಬಣ್ಣಗಳಿಂದ ಚಿತ್ರದಲ್ಲಿ ಪೂರ್ಣಗೊಳಿಸಿದ ನಂತರ ಕೆಲವು ಚಿತ್ರಗಳ ಬಾಹ್ಯ ರೇಖೆಗಳ ಮೇಲೆ ಚಿನ್ನದ ಪುಡಿಯ ಬಣ್ಣದಿಂದ ಚಿನ್ನದ ರೇಖೆಗಳನ್ನು ನಿರ್ಮಿಸುವುದು. ನಂತರ ಚಿತ್ರದ ಸುತ್ತ ಅಲಂಕಾರದ ಬಾರ್ಡರ್ ತುಂಬ ಹೂಬಳ್ಳಿ, ಎಲೆ ಇತ್ಯಾದಿ ಡ್ರಯಾಗನ್ ಚಿತ್ರಗಳು ಹಾಗೂ ಜ್ಯಾಮಿತಿಯ

ಆಕಾರಗಳಂತಹ ರೇಖಾ ಚಿತ್ರಗಳನ್ನು ರಚಿಸಿ. ಅದರ ಮೇಲೆ ಅವಶ್ಯಕ ಇರುವ ಕಡೆ ಚಿನ್ನದ ಪೌಡರ್‌ಗಳಿಂದ ನಕ್ಷೆಗಳನ್ನು ಪೂರ್ಣಗೊಳಿಸಲಾಗುತ್ತದೆ. ಇಂತಹ ಚಿತ್ರಪಟಗಳನ್ನು ಪೂರ್ಣಗೊಳಿಸಿ ಬಾರ್ಡರ್‌ಗಳನ್ನು ಬಿಗಿಯಾಗಿ ಹೊಲಿಗೆ ಹಾಕಿಸಿ ಮೇಲೆ ಮತ್ತು ಕೆಳಗೆ ಅಳತೆಗೆ ತಕ್ಕ ಪ್ಲಾಸ್ಟಿಕ್‌ನ ಪೈಪುಗಳನ್ನು ಸೇರಿಸಿ ನೇತು ಹಾಕುತ್ತಾರೆ. ಅದರ ಕೆಳಗೆ ಕೆಲವು ಕುಚ್ಚಗಳ ರೀತಿ ವಿವಿಧ ಬಟ್ಟೆಯನ್ನು ಗೋಡೆಗಳಿಗೆ ನೇತು ಹಾಕಿ ತೆಳುವಾದ ಬಟ್ಟೆಗಳಿಂದ ಮುಚ್ಚಿಸುತ್ತಾರೆ. ಕಾರಣ ಚಿತ್ರಪಟದ ದೇವರುಗಳ ಹೃದಯ ಭಾಗದಲ್ಲಿ ಬರೆಸಿದ ಓಂ, ಅಹಂ, ಶ್ರೀ ಇತ್ಯಾದಿ ಅಕ್ಷರ ಬರೆಸಿ ದೇವರ ಬಳಿ ಪೂಜೆ ಮಾಡಿಸುತ್ತಾರೆ. ಪ್ರಾರ್ಥಿಸಿದಾಗ ದೇವರು ಚಿತ್ರಪಟದಲ್ಲಿ ಬಂದು ಸೇರುತ್ತಾನೆ. ಹಾಗೂ ಚಿತ್ರ ರಚಿಸಿದ ಕಲಾವಿದರಿಗೆ ಒಳ್ಳೆಯದು ಮಾಡುತ್ತಾನೆ ಎಂಬ ನಂಬಿಕೆಯನ್ನು ಹೊಂದಿದ್ದಾರೆ. ಧರ್ಮ ಗುರುಗಳು ಚಿತ್ರಪಟವನ್ನು ದೇವರ ಹಿಂಬದಿ ಇರಿಸಿ ಟಿಬೆಟಿಯನ್ ಭಾಷೆಯಲ್ಲಿ ಪ್ರಾರ್ಥನೆ ಸಲ್ಲಿಸುತ್ತಾರೆ. ನಂತರ ವ್ಯಾಪಾರ ಮಳಿಗೆಗೆ ಮಾರಿವುದಕ್ಕೆ ಇಡುತ್ತಾರೆ. ಕೆಲವೊಮ್ಮೆ ಸುರುಳಿ ಸುತ್ತಿ ದೇವಾಲಯಗಳಲ್ಲಿ ಇಟ್ಟಿರುತ್ತಾರೆ. ಫೆಬ್ರವರಿ / ಮಾರ್ಚ್‌ನ ಮೊದಲ ಮತ್ತು ಎರಡನೆಯ ವಾರದ ಸಂದರ್ಭದಲ್ಲಿ ಟಿಬೆಟಿಯ ದಿನದಂದು ದೇಶ ವಿದೇಶದಿಂದ ಹಲವು ವಿಶೇಷ ಚಿತ್ರಪಟಗಳನ್ನು ರಚಿಸಿಕೊಂಡು ಬಂದಿರುತ್ತಾರೆ. ಬೈಲುಕುಪ್ಪೆ ಟಿಬೆಟಿಯನ್ನರು ೧೮೦ ಅಡಿ ಉದ್ದದ ಸುರುಳಿ ಸುತ್ತಿದ್ದ ಚಿತ್ರಪಟವು ಆ ದಿನದಂದು ಪ್ರದರ್ಶನಕ್ಕೆ ನಮಗೆ ದೊರಕುತ್ತದೆ. ಇಂತಹ ಚಿತ್ರಪಟಗಳನ್ನು ಹಲವು ಚಿತ್ರಕಲಾವಿದರೂ ಸೇರಿಕೊಂಡು ಉದ್ದನೆಯ ಕಟ್ಟಿಗೆಗೆ ಬಿಗಿದು ಮೇಲಿನಂತೆ ಪೂರ್ಣಗೊಳಿಸಿ ಉದ್ದವಾಗಿ ಜೋಡಿಸಿ ಹೊಲೆದು ದೊಡ್ಡ ಕಂಚಿನ ಹಿಡಿಕೆಗೆ ಸುತ್ತಿ ದೇವಾಲಯದ ದೇವರ ಸಾನಿಧ್ಯದಲ್ಲಿ ಇಟ್ಟಿರುತ್ತಾರೆ. ಇದಕ್ಕೆ ವಿವಿಧ ಬಣ್ಣದ ಗೊಂಡೆಗಳನ್ನು ವಿವಿಧ ವಿನ್ಯಾಸದಲ್ಲಿ ರಚನೆ ಮಾಡಿ ಎಡ ಮತ್ತು ಬಲಭಾಗಕ್ಕೆ ತೂಗು ಹಾಕಿರುತ್ತಾರೆ. ಚಿತ್ರಪಟಗಳು ಟಿಬೆಟಿಯನ್ನರ ಎಲ್ಲರ ಮನೆಯ ಗೋಡೆಗಳ ಮೇಲೆ ಶೃಂಗಾರಗೊಂಡಿವೆ. ಕೆಲವು ಚಿತ್ರಪಟಗಳ ಮೇಲೆ ರೇಖಾಚಿತ್ರಗಳನ್ನು ರಚಿಸಿ ವಿವಿಧ ನಮೂನೆಯ ನೂಲಿನಿಂದ ಚಿತ್ರದ ಮೇಲೆ ಸ್ಟಿಚ್ ಮಾಡಿ ಕಸೂತಿ ಕೆಲಸಕ್ಕೆ ಬಳಸಿಕೊಂಡ ವಿವಿಧ ಬಗೆಯ ಚಿತ್ರಪಟಗಳನ್ನೂ ಸಹ ಕಲಾವಿದರು ರಚಿಸುತ್ತಾರೆ.

೧.೧ ಅವಲೋಕಿತೇಶ್ವರ ಪಟಚಿತ್ರ ವಿವರಣೆ

ಅಮಿತಾಭನೆಂಬ ಧ್ಯಾನಿ ಬುದ್ಧನ ಸತ್ವದಿಂದ ಹುಟ್ಟಿ ಬಂದ ಬೋಧಿಸತ್ವನಿಗೆ ಈ ಹೆಸರಿದೆ. ಮಹಾಯಾನ ಬೌದ್ಧರ ನಂಬಿಕೆಯಂತೆ ಧ್ಯಾನಿ ಬುದ್ಧರು ತಮ್ಮ ಸತ್ವಗಳಿಂದ ಇಂತಹ ಜಿನ ಪುತ್ರನ್ನು ಅಥವಾ ಬೋಧಿಸತ್ವರನ್ನು ಉತ್ಪಾದಿಸುತ್ತಾರೆ. ಜಗತ್ತನ್ನು ಕರುಣೆಯಿಂದ ಕಾಣುವವನು ಎಂಬುವುದು ಅವಲೋಕಿತೇಶ್ವರ ಎಂಬ ಪದದ ಅರ್ಥ. ಇದು ಅಮಿತಾಭನ ಸಂಭೋಗಕಾಯ. ಇದರ ವರ್ತನೆಯಿಂದಲೇ ಜಗತ್ತಿನಲ್ಲಿ ಗೌತಮ ಬುದ್ಧ ಶಾಕ್ಯಮುನಿಯಾಗಿ ಅವರಿಸುವನೆಂದೂ ಕಲ್ಪನೆ. ಅವಲೋಕಿತೇಶ್ವರನ ಶಕ್ತಿಯಾಗಿ ಶ್ವೇತ ತಾರಾ ಎಂಬ ಸ್ತ್ರೀ ಬುದ್ಧ ರೂಪ ಉಂಟು. ಚೀನಾದಲ್ಲಿ ಮತ್ತು ಜಪಾನಿನಲ್ಲಿ ಕಲ-ಅನ್-ಮಿನ್ ಅಥವಾ ಕ್ವನ್ನೋನ್ ಎಂಬ ಅಭಿದಾನದಿಂದ ಪ್ರಚಲಿತವಾಗಿರುವ ಕರುಣಾದಿ ದೇವತೆ ಈ ಶ್ವೇತ ತಾರೆಯೇ. ಸದ್ಧರ್ಮ ಪುಂಡರೀಕನೆಂಬ ಗ್ರಂಥದ ಒಂದು ಪರಿಚ್ಛೇದವಾದ ಕಾಂಡ ವ್ಯೂಹದಲ್ಲಿ ಅವಲೋಕಿತೇಶ್ವರನ ವರ್ಣನೆ ನಿರೂಪಣೆಗಳಿವೆ. ನಾಲ್ಕನೆಯ ಶತಮಾನದಿಂದ ಈ ದೇವತೆಯ ಕಲ್ಪನೆಯು ಶಿಲ್ಪ ಚಿತ್ರಣವೂ ಬಂದಿದೆ.ಅವಲೋಕಿತೇಶ್ವರನ ಮುಖ್ಯ ರಸವೇ. ಅವನ ಬೆರಳುಗಳಿಂದ ಹರಿದ ನದಿಗಳು, ನರಕದ ಬೆಂಕಿಯನ್ನೆಲ್ಲ ಆರಿಸಿ ಶೀತಲಗೊಳಿಸುತ್ತವೆಂದೂ, ಅವನ ಪ್ರತಾಪದಿಂದ ನರಕದ ನಿಯಮಕರರಾದ ಕ್ರೂರಗಣಗಳೆಲ್ಲ ಬೆದರಿ ಓಡುತ್ತವೆಂದೂ ನಂಬಿಕೆಯಿದೆ.

ಪಟ ಚಿತ್ರಗಳು






ಅವಲೋಕಿತೇಶ್ವರ




ಯಮಂತಕ



ಮಂಜುಶ್ರೀ



ಶ್ರೀಕೃಷ್ಣ



ಆಂಜನೇಯ

ಪಾಪಿ ಜನರನ್ನು ಉದ್ಧಾರ ಮಾಡುವ ಸಲುವಾಗಿಯೇ ಅವತರಿಸಿದ ಬೋಧಿಸತ್ವ ಇವನೆಂದೂ ಇದಕ್ಕಾಗಿಯೇ ಓಂ ಮಸೆಪದ್ಮೇಹಂ ಎಂಬ ಮಂತ್ರವನ್ನು ಧರೆಗೆ ಇಳಿಸಿದನೆಂದೂ ಟಿಬೆಟ್ ಜನರು ನಂಬುತ್ತಾರೆ. ಜಗತ್ತಿನ ಎಲ್ಲ ಪ್ರಾಣಿಗಳನ್ನು ಉದ್ಧರಿಸುತ್ತೇನೆ. ಈ ಪ್ರತಿಜ್ಞೆ ಸುಳ್ಳಾದರೆ ನನ್ನ ತಲೆ ಸೀಳಿ ಹೋಗಲಿ ಎಂಬುದು ಅವಲೋಕಿತೇಶ್ವರನ ಶಪಥವಂತೆ. ಕನ್ನಡ ನಾಡಿನಲ್ಲಿ ಕೂಡ ಲೋಕೇಶ್ವರನೆಂಬ ಹೆಸರಿನಿಂದ ಈ ದೇವತೆ ಪೂಜೆಗೊಳ್ಳುತ್ತಿದ್ದಾನೆ. ಮಂಗಳೂರಿನ ಕರಾವಳಿಯಲ್ಲಿರುವ ದೇವಸ್ಥಾನ ಈ ದೇವತೆಯು ಅಜೆಂತಾದ ಭಿತ್ತಿಚಿತ್ರಗಳಲ್ಲಿ ವಸ್ತು ವಿಷಯವಾಗಿ ಚಿತ್ರಿಸಿರುವುದು ಕಂಡುಬರುತ್ತದೆ. ಹಾಗೂ ಟಿಬೆಟಿನ ನೆಲೆಗಳಲ್ಲಿ ಹೆಚ್ಚಾಗಿ ಚಿತ್ರಿಸುವ ಮತ್ತು ಪೂಜಿಸುವ ದೇವತೆ ಆಗಿದೆ.

ಚಿತ್ರದಲ್ಲಿ ಬಿಳಿ ವರ್ಣದ ಅವಲೋಕಿತೇಶ್ವರನು ಪದ್ಮಾಸನ ಮೇಲೆ ಕುಳಿತು ಕೈಯನ್ನು ಮಂಡಿಗೆ ಇಳಿಬಿಟ್ಟು ಹಾಗೂ ಎಡಗೈಯಲ್ಲಿ ನೀಲಿ ಹೂವಿನ ಬಳ್ಳಿಯನ್ನು ಹಿಡಿದುಕೊಂಡು ಕುಳಿತಿರುವ ಚಿತ್ರವನ್ನು ಚಿತ್ರಿಸಿದ್ದಾರೆ. ಅವಲೋಕಿತೇಶ್ವರ ಕಿರೀಟವು ಪುಷ್ಪ ಗುಚ್ಚದಂತೆ, ಕರ್ಣ ಕುಂಡಲವು ದೂಡ್ಡದಾಗಿ ಚಿನ್ನವರ್ಣವನ್ನು ಲೇಪಸಿದ್ದು, ಕತ್ತಿನಲ್ಲಿ ನಕ್ಲೇಸ್ ಧರಿಸಿದ್ದು, ಕೂದಲನ್ನು ಇಳಿಯಾಗಿ ಬಿಟ್ಟಿರುವ ಪ್ರಸನ್ನ ಮುಖವನ್ನು ಬಲಕ್ಕೆ ಓರೆಮಾಡಿದಂತೆ ನೋಡುತ್ತಿದ್ದು, ಹಸಿರು ಹಾಗೂ ಕೆಂಪು ಬಣ್ಣದ ಬಟ್ಟೆಯ ಪಟ್ಟಿಯನ್ನು ಸುತ್ತಿಕೊಂಡಂತೆ ಚಿತ್ರಿಸಿದ್ದು, ಆಭರಣಗಳಲ್ಲಿ ದೊಡ್ಡದಾದ ಚಿನ್ನದ ಹಾರ, ಕೈಗಡದ, ತೋಳ ಬಂದಗಳನ್ನು ಚಿತ್ರಿಸಿದ್ದು, ಕೈ ಪಾದ ಮತ್ತು ಕಾಲು ಪಾದದಲ್ಲಿ ಕಣ್ಣಿನ ಚಿತ್ರವನ್ನು ರಚಿಸಿದ್ದಾರೆ. ಕೆಂಪು ವಲ್ಲಿಯನ್ನು ಧರಿಸಿದ್ದು, ಅದರ ಮೇಲೆ ನೀಲಿ, ಹಳದಿ ವರ್ಣದ ಬಟ್ಟೆಯ ತುಂಡುಗಳು ಇರುವಂತೆ ಚಿತ್ರಿಸಿದ್ದು, ಇದರಲ್ಲಿ ಪ್ರಧಾನವಾದ ನಕ್ಷೆಗಳು ಚಿನ್ನದ ಲೇಪನದಿಂದ ಕೂಡಿದೆ. ಈತನು ಕುಳಿತ ಪುಷ್ಪ ಪೀಠದ ಕೆಳಗೆ ಅನೇಕ ವರ್ಣದ ಮುತ್ತುಗಳನ್ನು ದೊಡ್ಡ ಗಾತ್ರದಲ್ಲಿ ಚಿತ್ರಿಸಿದ್ದಾರೆ. ಈತನ ತಲೆಯ ಭಾಗವು ಹಸಿರು ಹಾಗೂ ಕಪ್ಪು ನಕ್ಷೆಗಳ ಚಂದ್ರ, ಚಂದ್ರನ ಸುತ್ತಲೂ, ಕೆಂಪು ಹಾಗೂ ಪಿಂಕ್ ಬಣ್ಣದ ಪಟ್ಟಿಕೆಯನ್ನು ಸುತ್ತುವರಿದಂತೆ ವರ್ಣವನ್ನು ತುಂಬಲಾಗಿದೆ. ನಂತರ ಪ್ರಭಾವಳಿಯಂತೆ ಒಂದು ದೊಡ್ಡ ವೃತ್ತದಲ್ಲಿ ಅನೇಕ ಬಣ್ಣದ ನಕ್ಷೆಗಳನ್ನು ಹೊಂದಿದ ನೀಲಿ, ಪ್ರಧಾನ ವೃತ್ತವನ್ನು ಕಾಣಬಹುದು. ಈ ಹಿನ್ನಲೆಯಲ್ಲಿ ನೀಲಿ ಬಣ್ಣ ಅರ್ಧಕ್ಕೆ ಮತ್ತರ್ಧಕ್ಕೆ ಹಸಿರು ಬಣ್ಣದ ವಿವಿಧ ಆಯಾಮಗಳನ್ನು ಬಣ್ಣಗಳಲ್ಲಿ ತೋರಿಸಿದರ ಜೊತೆ ಕೆಂಪು ಮತ್ತು ಬಿಳಿ ಮಿಶ್ರಿತ ಬಣ್ಣದ ಎರಡು ಹೂವು ಹಾಗೂ ಅನೇಕ ಹಸಿರು ಎಲೆಗಳನ್ನು ಚಿತ್ರದಲ್ಲಿ ಸಂಯೋಜಿಸಿರುವುದನ್ನು ಕಾಣಬಹುದು.

ನಂತರ ಈ ಪಟಚಿತ್ರಕ್ಕೆ ಕೆಂಪು ಪ್ರಧಾನ ಹಾಗೂ ಹಳದಿ ಪ್ರಧಾನ ರೇಷ್ಮೆಯ ಬಟ್ಟೆಯನ್ನು ಜೋಡಿಸಿ ಹೊಲೆದಿದೆ. ಇದರಲ್ಲಿನ ನಕ್ಷೆಗಳ ಚಿನ್ನದ ಬಣ್ಣಗಳಿಂದ ಕೂಡಿದ ಅಲಂಕಾರಿಕ ನಕ್ಷೆಗಳನ್ನು ಕಾಣಬಹುದು. ನಂತರ ಇದರ ಸುತ್ತಲೂ ಹಳದಿ ಪಟ್ಟಿಯ ಬಟ್ಟೆಗಳನ್ನು ಹಾರಾಡುವಂತೆ ಹಾಗೂ ಅನೇಕ ರೇಷ್ಮೆಯ ಬಟ್ಟೆಯ ಕುಚ್ಚುಗಳನ್ನು ಇಳಿ ಬಿಟ್ಟಿರುವುದನ್ನು ಚಿತ್ರದಲ್ಲಿ ಕಾಣಬಹುದು.

೧.೨ ಶ್ರೀ ಕೃಷ್ಣ ಚಿತ್ರ

ಭಾರತೀಯ ಸಂಪ್ರದಾಯದ ಚಿತ್ರ ಶೈಲಿಯಂತೆ ಗೋಪಿ ಬಣ್ಣದ ಪ್ರಧಾನ ಶ್ರೀ ಕೃಷ್ಣನನ್ನು ಚಿತ್ರಿಸಿದ್ದು, ಒಂದೇ ಕಾಲಿನಲ್ಲಿ ಬಾರ ಹೊತ್ತು ನಿಂತ ಇನ್ನೊಂದು ಕಾಲನ್ನು ಪಕ್ಕಕ್ಕೆ ಸರಿಸಿ ಕೈಯಲ್ಲಿ ಕೊಳಲನ್ನು ಹಿಡಿದುಕೊಂಡು ಕೊಳಲು ನುಡಿಸುತಿರುವಂತೆ ಚಿತ್ರವನ್ನು ಚಿತ್ರಿಸಲಾಗಿದೆ. ಕಪ್ಪು ಬಣ್ಣದ ಗುಂಗುರು ಕೂದಲಿನ ಕೃಷ್ಣನ ತಲೆಯ ಮೇಲೆ ಚಿನ್ನ ಲೇಪಿತ ಚಿಕ್ಕ ಕಿರೀಟ, ನವಿಲು ಗರಿ, ತಿಳಿಗೆಂಪು ಮುಖ, ಕೆಂಪು ತುಟಿ, ಮಣಿಯಂತಹ ಕರ್ಣ ಕುಂಡಲ, ಮಂಡಿಯವರೆಗಿನ ತಿಳಿ ನೀಲಿ ಬಣ್ಣದ

ಹೂವಿನ ಹಾರ, ಚಿನ್ನದ ಕೊಳಲು, ಮೈಮೇಲೆ ತಿಳಿ ಕೆಂಪು ಬಣ್ಣದ ದೊಡ್ಡದಾದ ಹಸಿರು ವಲ್ಲಿಯನ್ನು ನಡಕ್ಕೆ ಸುತ್ತಿಕೊಂಡಿದ್ದು, ಹಳದಿ ಬಣ್ಣದ ಕಚ್ಚೆಯನ್ನು ಧರಿಸಿದ್ದು, ಕಮಲದ ಹೂವಿನ ಮೇಲೆ ನಿಂತುಕೊಂಡಂತೆ ಚಿತ್ರಿಸಿದ್ದಾರೆ. ಇದರ ಎಡ ಮತ್ತು ಬಲ ಭಾಗಕ್ಕೆ ಚಿಕ್ಕದಾದ ಕಮಲದ ಹೂ ಚಿತ್ರಿಸಿದ್ದು, ಕೃಷ್ಣನ ಹಿನ್ನಲೆಯಲ್ಲಿ ಹಳದಿ ಸೂರ್ಯನನ್ನು ವೃತ್ತಾಕಾರದಲ್ಲಿ ಚಿತ್ರಿಸಿ, ಚಿನ್ನದ ಲೇಪನದ ಕಿರಣಗಳನ್ನು ರೇಖಾ ಪ್ರಧಾನವಾಗಿ ಚಿತ್ರಿಸಿದ್ದಾರೆ. ಈತನ ಹಿನ್ನಲೆಯನ್ನು ಸಂಪೂರ್ಣವಾಗಿ ಕೆಂಪು ಬಣ್ಣದಿಂದ ತುಂಬಿದ್ದು, ಈ ಚಿತ್ರದ ಸುತ್ತಲೂ ಟಿಬೆಟಿಯನ್ನರು ಧರ್ಮಶಾಲೆಯಿಂದ ತರುವ ಅಲಂಕೃತ ಚಿನ್ನ ಲೇಪಿತ ನಕ್ಷಾ ಬಟ್ಟೆಯನ್ನು ಎರಡು ಬದಿಗೆ ದಂಡನ್ನು ಕೊಟ್ಟು ಹೊಲೆದು ನೇತು ಹಾಕಲು ಅನುಕೂಲವಾಗುವಂತೆ ರಚಿಸಿರುತ್ತಾರೆ.

೧.೩ ನೀಲಿ ಬುದ್ಧ ಚಿತ್ರ ಪಟದ ಚಿತ್ರ:

ನೀಲಿ ಪ್ರಧಾನವಾದ ಬುದ್ಧನು ಎಡ ಕೈಯಲ್ಲಿ ಕಪ್ಪು ಕಮಂಡಲವನ್ನು ಹಿಡಿದುಕೊಂಡು, ಬಲಗೈಯನ್ನು ತೊಡೆಯ ಮೇಲೆ ಇಳಿಬಿಟ್ಟಂತೆ ಇಟ್ಟುಕೊಂಡು ಪುಷ್ಪ ಹಿಡಿದುಕೊಂಡು ಪದ್ಮಾಸನದಲ್ಲಿ ಪುಷ್ಪ ಪೀಠದ ಮೇಲೆ ಕುಳಿತಿರುವ ಚಿತ್ರವಾಗಿದೆ. ಕೇಸರಿ ವರ್ಣದ ಹಾಗೂ ಚಿನ್ನ ವರ್ಣದ ಪಟ್ಟಿಕೆಗಳನ್ನು ಹೊಂದಿರುವ ಬಟ್ಟೆಯನ್ನು ಸುತ್ತಿಕೊಂಡಿರುವಂತೆ ಚಿತ್ರಿಸಲಾಗಿದೆ. ಕಪ್ಪು ಕಮಂಡಲದ ಒಳಗೆ ವಿವಿಧ ಬಗೆಯ ಗಿಡ ಮೂಲಿಕೆ ಇಟ್ಟುಕೊಂಡಿರುವುದು ಕಪ್ಪು ಕಲಶ ಮುಡಿ, ದುಂಡಾದ ಮುಖ, ಅರ್ಧ ತೆರೆದ ಕಣ್ಣುಗಳನ್ನು ಚಿಕ್ಕದಾಗಿ ಚಿತ್ರಿಸಿದ್ದು, ಕಿವಿಯು ನೀಳವಾಗಿರುವಂತೆ ಉದ್ದವಾಗಿ ಚಿತ್ರಿಸಿರುತ್ತಾರೆ. ಬುದ್ಧನ ತಲೆ ಹಿಂದೆ ಹಲವು ಬಣ್ಣಗಳ ಪಾತಳಿಯ ಪಟ್ಟಿಕೆಯನ್ನು ಹೊಂದಿದೆ. ಚಂದ್ರನ ಸುತ್ತಲೂ ಪಟ್ಟಿಕೆಯನ್ನು ಕೆಂಪು ಬಣ್ಣದಿಂದ ಪೂರ್ಣಗೊಳಿಸಿದ್ದು, ಇದರಂತೆ ಹಿಂದಿನ ಪ್ರಭಾವಳಿಯ ಭಾಗವನ್ನು ಚಿತ್ರಿಸಿದ್ದು, ಸುತ್ತಲೂ ಚಿನ್ನದ ವರ್ಣದಿಂದ ಬಾಹ್ಯ ರೇಖೆಯಾಗಿ ಚಿತ್ರಿಸಿದ್ದು, ಇದರ ಹಿನ್ನಲೆಯಲ್ಲಿ ಬಿಳಿ ಮತ್ತು ಕೆಂಪು ಬಣ್ಣಗಳನ್ನು ಹೊಂದಿರುವ ತಾವರೆ ಹೂವು ಹಾಗೂ ದೊಡ್ಡದಾದ ಎಲೆಗಳನ್ನು ಚಿತ್ರಿಸಿದ್ದಾರೆ. ಅದರ ಹಿಂಬದಿಯನ್ನು ನೀಲಿ ಬಣ್ಣದ ಆಕಾಶವಾಗಿ ಚಪ್ಪಟೆಯಾಗಿ ಲೇಪಿಸಿದ್ದಾರೆ. ನಂತರ ಬಿಳಿಯ ಬಣ್ಣದಿಂದ ಹಿಮ ಪರ್ವತ ನಂತರ ಕೆಳಭಾಗದಲ್ಲಿ ಹಸಿರು ಬಣ್ಣದ ನಿಸರ್ಗದ ದೃಶ್ಯ ಹಸಿರು ಬಣ್ಣದ ನಿಸರ್ಗದ ಮೇಲೆ ಅನೇಕ ವರ್ಣಗಳಿಂದ ಕೂಡಿದ ಮುತ್ತುಗಳು ಹಾಗೂ ದಂತಗಳನ್ನು ಇಟ್ಟಿರುವಂತೆ ಚಿತ್ರಿಸಿ, ಗಾಢವಾದ ವರ್ಣಗಳಿಂದ ಪುಷ್ಪ ಪೀಠವನ್ನು ಚಿತ್ರಿಸಿರುವುದು ಕಂಡು ಬರುತ್ತದೆ. ಈ ಚಿತ್ರಪಟದ ಸುತ್ತಲೂ ವಿವಿಧ ನಕ್ಷೆಗಳ ರೇಷ್ಮೆ ಬಟ್ಟೆಯ ಕೆಂಪು, ಹಳದಿ, ನೀಲಿ ಬಣ್ಣದ ಚೌಕಟ್ಟನ್ನು ಹೊಲೆದಿರುವುದನ್ನು ಕಾಣಬಹುದು. ಇದರ ಮೇಲೆ ಹಳದಿ ರೇಷ್ಮೆಯ ಬಟ್ಟೆಯನ್ನು ಮುಚ್ಚಲು ಬಳಸುತ್ತಾರೆ. ಹಾಗೂ ಇದರ ಸುತ್ತಲೂ ವಿವಿಧ ವರ್ಣದ ಬಟ್ಟೆಯ ತುಂಡು ಕುಚ್ಚಿನ ರೀತಿಯಲ್ಲಿ ನೇತು ಹಾಕುವುದನ್ನು ಚಿತ್ರದಲ್ಲಿ ನೋಡಬಹುದು.

೧.೪ ಕಾಳಿ ದೇವತೆಯ ಪಟಚಿತ್ರ:

ಭಾರತೀಯ ಸಂಪ್ರದಾಯದ ಕಾಳಿ ದೇವತೆಯ ಚಿತ್ರವು, ಭಾರತೀಯ ಶೈಲಿಯಂತೆ ರಚಿಸಿದ್ದಾರೆ. ಬಿಳಿ ವರ್ಣದ ಕಾಳಿ ದೇವತೆಯು ನಾಲ್ಕು ಬಾಹುಗಳುಳ್ಳವಾಗಿದ್ದು, ಶಿವನನ್ನು ಕಾಲಿನಿಂದ ತುಳಿಯುತ್ತಿರುವ ದೃಶ್ಯವನ್ನು ಚಿತ್ರಿಸಿದ್ದಾರೆ. ಕಾಳಿ ದೇವತೆಯ ಬಲ ಬಾಹುವಿನ ಮೊದಲನೇ ಕೈಯಲ್ಲಿ ರಕ್ತ ಸಿಕ್ತ ಖಡ್ಗ ಮತ್ತೊಂದು ಕೈಯಲ್ಲಿ ಶಿವನ ತ್ರಿಶೂಲ ಹಳದಿ ಬಣ್ಣದ್ದು, ಎಡ ಬಾಹುವಿನ ಮೊದಲೇ ಕೈಯಲ್ಲಿ



ಪಟ ಚಿತ್ರಗಳು

ರೇಷ್ಮೆ ಬಟ್ಟೆ ಪಟಚಿತ್ರ



ನೀಲಿ ಬುದ್ಧ



ಹಳದಿ ಬುದ್ಧ



ಮಂಜುಶ್ರೀ



ಅಕಾಲ ಕುದುರೆ



ಕಾಳಿ ದೇವತೆ

ರಾಕ್ಷಸನ ತಲೆ ರಕ್ತ ಸೋರುತ್ತಿರುವಂತೆ ಮತ್ತೊಂದು ಕೈಯಲ್ಲಿ ಬೆಂಕಿಯ ಕೆನ್ನಾಲಿಗೆಯ ಬಟ್ಟಲು ಹಿಡಿದಿರುವುದನ್ನು ಕಾಣುವಂತೆ ಚಿತ್ರಿಸಿದ್ದಾರೆ. ಈಕೆಯ ಮುಖವನ್ನು ಉಗ್ರ ಸ್ವರೂಪದಲ್ಲಿ ಚಿತ್ರಿಸಿದ್ದು ದೊಡ್ಡದಾಗಿ ಕಣ್ಣು ಅರಳಿಸಿರುವಂತೆ ನಾಲಿಗೆ ತೆರೆದುಕೊಂಡಂತೆ ಕತ್ತಿನಲ್ಲಿ ಹಲವು ರಾಕ್ಷಸರ ತಲೆಯನ್ನು ಹಾರವಾಗಿ ಹಾಕಿ ಕೊಂಡಿರುವಂತೆ ಚಿತ್ರಿಸಿದ್ದು, ಅರೆ ಬೆತ್ತಲಾಗಿ ನಿಂತಿದ್ದಾಳೆ. ಆಕೆಯ ಲಂಗವನ್ನು ಅನೇಕ ರಾಕ್ಷಸರ ಕೈಗಳಿಂದ ನೇತು ಹಾಕಿಕೊಂಡಂತೆ ಕಟ್ಟಿಕೊಂಡು ಬಲಗಾಲನ್ನು ಶಿವನ ಎದೆಯ ಮೇಲೆ ಇಟ್ಟು ಮತ್ತೊಂದು ಕಾಲನ್ನು ನೆಲಕ್ಕೆ ಇಟ್ಟಿರುವಂತೆ ಕಪ್ಪು ವರ್ಣದಿಂದ ಲೇಪಿಸಿದ್ದು ಇದು ಕಾಳಿ ದೇವತೆಯನ್ನು ಎದ್ದು ಕಾಣುವಂತೆ ವರ್ಣ ಲೇಪಿಸಿದ್ದಾರೆ.

ತಳಭಾಗದಲ್ಲಿ ತಿಳಿ ನೀಲಿ ಬಣ್ಣದ ಶಿವ ಸತ್ತಂತೆ ಬಿದ್ದುಕೊಂಡಿದ್ದು, ಸರ್ಪವು ತಲೆ ಎತ್ತಿ ನಿಂತಿದೆ. ಶಿವನು ಹುಲಿಯ ಚರ್ಮವನ್ನು ನಡಕ್ಕೆ ಸುತ್ತಿಕೊಂಡು ಕೈಯಲ್ಲಿ ಡಮರುಗ ಹಿಡಿದುಕೊಂಡು ಹಸಿರು ನೆಲದ ಮೇಲೆ ಬಿದ್ದಿರುವಂತೆ ಚಿತ್ರಿಸಿದ್ದಾರೆ. ಕಾಳಿಯ ತಲೆಯ ಹಿಂಭಾಗ ಸೂರ್ಯನಿರುವಂತೆ ಹಳದಿ ಪ್ರಧಾನವಾಗಿ ವರ್ಣ ಲೇಪಿಸಿದ್ದಾರೆ. ಇನ್ನೇ ಒಂದು ಭಾಗವು ಕೆಂಪು ವರ್ಣದಿಂದ ಹಿನ್ನಲೆಯಲ್ಲಿ ವರ್ಣ ಲೇಪಿಸಿರುವುದು ಕಂಡು ಬರುತ್ತದೆ. ಪಟದ ಮೇಲು ಭಾಗ ಮತ್ತು ತಳ ಭಾಗವು ರೇಷ್ಮೆ ನಕ್ಷೆ ಬಟ್ಟೆಯಿಂದ ಹೊಲೆದಿರುವುದು ಕಂಡು ಬರುತ್ತದೆ. ಅದರ ಕೊನೆಯ ಭಾಗಕ್ಕೆ ಕೊಳವಿಯನ್ನು ಇಟ್ಟು ಹೊಲೆದಿರುವುದನ್ನು ಚಿತ್ರದಲ್ಲಿ ಗಮನಿಸಬಹುದು.

೨. ಬಾವುಟಗಳ ಮೇಲಿನ ಚಿತ್ರಕಲೆ

ಟಿಬೆಟಿಯನ್ನರು ಕಟ್ಟ ಸಂಪ್ರಾದಾಯಿಕವಾದಿಗಳಾಗಿದ್ದು, ಬೌದ್ಧ ಧರ್ಮವನ್ನು ತನ್ನ ಜೀವನದ ಒಂದು ಭಾಗವಾಗಿ ಆಚರಿಸಿಕೊಂಡು, ಪರಿಸರದ ಪೂಜಾ ಅರಾಧಕರಾಗಿದ್ದು ತನ್ನದೇಯಾದ ಪೂಜಾವಿಧಿ-ವಿಧಾನವನ್ನು ನಿರಂತರವಾಗಿ ಬುದ್ಧನ ಪ್ರೇರಣೆಯಾದ ಅಧ್ಯಾತ್ಮಕತೆಯಿಂದ ಇದ್ದು ತಾವು ವಾಸಿಸುವ ನಿಸರ್ಗವನ್ನು ಪಂಚಭೂತಗಳ ಅವಳಿಯಿಂದ ರಕ್ಷಿಸಿಕೊಳ್ಳಲು, ತಾವು ತಪ್ಪು ಮಾಡಿದರೆ ಮುಕ್ತಿ ಪಡೆಯಲು, ಸನ್ಯಾಸಿಯಾಗಿರುವರು ಮಧುವೆ ಮಾಡಿಕೊಳ್ಳುವ ಇತ್ಯಾದಿ ಸಂದರ್ಭದಲ್ಲಿ ಪರಿಸರದಲ್ಲಿನ ಮರಗಳಿಗೆ, ದೇವಾಲಯಗಳಲ್ಲಿರುವ ಸ್ತೂಪಗಳಿಗೆ ತಮ್ಮ ಮನೆಯ ಮೇಲೆ ಪಂಚವರ್ಣದ ಬಾವುಟಗಳನ್ನು ನೇತುಹಾಕಿರುತ್ತಾರೆ. ಇಂತಹ ಬಾವುಟಗಳಿಂದಲೇ ಟಿಬೆಟಿನ ಪರಿಸರವಿದೆ ಎಂದು ತಿಳಿಯಬಹುದು, ಈ ಐದು ವರ್ಣಗಳು ತಮ್ಮದೇಯಾದ ಒಳ್ಳಾರ್ಥಗಳನ್ನು ಹೊಂದಿವೆ, ಅವುಗಳೆಂದರೆ ನೀಲಿ ಬಣ್ಣವು-ಅಕಾಶವೆಂದು, ಬಿಳಿ ವರ್ಣವು-ಮೋಡಗಳೆಂದು, ಕೆಂಪು ವರ್ಣವು-ಬೆಂಕಿಎಂದು, ಹಸಿರು ವರ್ಣವು-ನೀರು ಎಂದು ಹಾಗೂ ಹಳದಿ ಬಣ್ಣವು-ಭೂಮಿ ಎಂದು ಗುರುತಿಸಿ, ಮೇಲಿನ ಅಕಾಶ, ಮೋಡ, ಬೆಂಕಿ, ನೀರು ಮತ್ತು ಭೂಮಿಯಿಂದ ನಮಗೆ ರಕ್ಷಣೆ ಇರಲಿ ಇವುಗಳ ವಿಕೋಪಕ್ಕೆ ನಾವು ಬಲಿಯಾಗದಂತೆ ಪೂಜಿಸುವುದು, ಇವರ ಸಾಂಪ್ರದಾಯ ಐದು ವಿಶಿಷ್ಟ ವರ್ಣಗಳನ್ನು ಕೂಡ ತಾರದೇವಿಯ ಪ್ರಮುಖ ಮೈಬಣ್ಣವಾಗಿ ಗುರುತಿಸುತ್ತಾರೆ. ಕಾರಣ ಮೇಲಿನ ಪ್ರಕೃತಿಗಳಿಂತಹ ವಿಕೋಪದಿಂದ ತಾರದೇವಿಯು ನಮ್ಮನ್ನು ರಕ್ಷಿಸುತ್ತಾಳೆ ಎಂಬ ನಂಬಿಕೆ ಇದೆ.

ಈ ಬಾವುಟಗಳ ಮೇಲೆ ಟಿಬೆಟಿಯನ್ನರ ಅಕ್ಷರಗಳಿಂದ ಶಾಸ್ತ್ರೀಯ ವಿವರಗಳನ್ನು ಹಾಗೂ ಮಂಜುಶ್ರೀ, ಅಕಾಲ ಕುದುರೆ, ಅವಲೋಕಿತ್ತೇಶ್ವರ, ತಾರದೇವಿ, ಬುದ್ಧ ಇತ್ಯಾದಿ ವಸ್ತುವಿಷಯವನ್ನು ಟಿಬೆಟಿಯನ್ನರು ವುಡ್ ಕಟ್ಟಿನ ಮುದ್ರಣದ ರೀತಿಯಾಗಿ ಮುದ್ರಿಸುವುದು ಇದಕ್ಕೆ ಕಷ್ಟ, ಮಸಿ ಬಣ್ಣವನ್ನು

ಬಾವುಟಗಳ ಮೇಲಿನ ಭಿತ್ತಿಚಿತ್ರಗಳು





ಪ್ಲಾಸ್ಟಿಕ್ ಮಾಧ್ಯಮದ ಭಿತ್ತಿಚಿತ್ರಗಳು



ಪಟ್ಟೆ ಮಾಧ್ಯಮದ ಭಿತ್ತಿಚಿತ್ರಗಳು

ರೋಲರ್ ಬಳಸಿ ಮುದ್ರಿಸುತ್ತಾರೆ (ಕಟ್ಟಿಗೆಯ ಮುದ್ರಣ (ಉದಾ-ಲಿನೋಕಟ್) ಕೆಲವರು ಆಧುನಿಕ ಮಾದರಿಯ ಸ್ಕ್ರೀನ್ ಪ್ರಿಂಟಿಂಗ್ ಮಾಧ್ಯಮದಲ್ಲಿ ಚಿತ್ರಸುತ್ತಾರೆ. ಇದರಲ್ಲಿ ಟಿಬೆಟಿಯನ್ನರ ತಾಂತ್ರಿಕ ಪದ್ಧತಿಯ ಬರವಣಿಗೆ ಇರುತ್ತದೆ.

ಪ್ರತಿಯೊಂದು ಬಾವುಟವನ್ನು ಅಲ್ಲಿನ ದೇವಾಲಯದ ಧಾರ್ಮಿಕ ಗುರುಗಳಿಂದ ಪೂಜೆ ಮಾಡಿಸಿ, ನಂತರ ತಮ್ಮ ಸಂಪ್ರದಾಯಿಕ ಪೂಜೆ ವಿಧಿ-ವಿಧಾನಗಳಲ್ಲಿ ಪರಿಸರದಲ್ಲಿ ಎಲ್ಲರಿಗೂ ಕಾಣುವಂತೆ ಉದ್ದವಾಗಿ ತೂಗು ಹಾಕಿರುತ್ತಾರೆ. ಇವೆಲ್ಲವುಗಳು ಪಂಚ ವರ್ಣಗಳಿಂದ ಇಡೀ ಟಿಬೆಟಿನ ಪರಿಸರ ರಂಗು ಗೊಳಿಸುವಂತೆ ಸಹಸ್ರಾರು ಸಂಖ್ಯೆಯಲ್ಲಿ ಹಾರಾಡುತ್ತಿದ್ದು ಪ್ರವಾಸಿಗರನ್ನು ಕೈಬಿಸಿ " ಬುದ್ಧನಿದ್ದಾನೆ ಎದ್ದು ಬನ್ನಿ " ಎಂಬ ಪಟ ಪಟ ಮಂತ್ರವನ್ನು ಹೇಳುವ ಸದ್ದು ಮಾಡುತ್ತಿರುತ್ತವೆ. ಇದರ ಜೊತೆಯಲ್ಲಿ ಟಿಬೆಟಿಯನ್ನರ ರಾಷ್ಟ್ರೀಯ ಧ್ವಜವನ್ನು ಹಾಕಿರುತ್ತಾರೆ.

ಬಾವುಟಗಳ ಮೇಲಿನ ಭಿತ್ತಿಚಿತ್ರಗಳ ವಿವರಣೆ

೨.೧ ಪ್ಲಾಸ್ಟಿಕ್ ಮಾಧ್ಯಮದ ಭಿತ್ತಿಚಿತ್ರಗಳು

ಪ್ಲಾಸ್ಟಿಕ್ ಮಾಧ್ಯಮದ ವರ್ಣ ಚಿತ್ರಗಳಲ್ಲಿ ಪಂಚ ವರ್ಣಕ್ಕೆ ಸಂಬಂಧಿಸಿದ ಚಿತ್ರಗಳಾದ ಮಂಜುಶ್ರೀ, ಅವಲೋಕಿತೇಶ್ವರ, ತಾರ ಭಗವತಿ, ಟಿಬೆಟಿನ ಅಕ್ಷರಗಳು ಹಾಗೂ ಶ್ರೇಷ್ಠ ಚಿನ್ನಗಳನ್ನು ಮುದ್ರಿಸಿರುವುದು ಕಂಡು ಬರುತ್ತದೆ. ಇವುಗಳಲ್ಲಿನ ಚಿತ್ರಗಳು ಆಧುನಿಕ ಯಂತ್ರಗಳಿಂದ ದೇವಾಲಯದ ಭಿತ್ತಿ ಚಿತ್ರಗಳ ಮಾದರಿಯಲ್ಲಿ ಕಂಡು ಬರುವಂತೆ ಮುದ್ರಿಸಿರುವುದನ್ನು ಹಾಗೂ ಅವುಗಳನ್ನು ನೇತು ಹಾಕಿರುವ ಗುಂಪನ್ನು ಚಿತ್ರದಲ್ಲಿ ಕಾಣಬಹುದು.

೨.೨ ಬಟ್ಟೆ ಮಾಧ್ಯಮದ ಭಿತ್ತಿ ಚಿತ್ರಗಳು

ಬಟ್ಟೆ ಮಾಧ್ಯಮದ ಭಿತ್ತಿ ಚಿತ್ರಗಳಲ್ಲಿ ಕೆಂಪು, ಬಿಳಿ, ನೀಲಿ, ಹಳದಿ, ಹಸಿರು ಪಂಚ ವರ್ಣಗಳಿಂದ ಕೂಡಿದವುಗಳ ಮೇಲೆ ಟಿಬೆಟಿನ ದೇವತೆಗಳಾದ ಮಂಜುಶ್ರೀ ಅವಲೋಕಿತೇಶ್ವರ, ತಾರಭಾಗವತಿಯಂತಹ, ಟಿಬೆಟಿನ ಅಕಾಲ ಕುದುರೆ, ಲಿಪಿ, ಚಿನ್ಹೆಗಳು ಹಾಗೂ ಅಕ್ಷರಗಳನ್ನು ಚಿತ್ರಿಸುವ ಮತ್ತು ಮುದ್ರಿಸುವ ವಿಧಾನದಲ್ಲಿ ಕಪ್ಪು ಬಣ್ಣ, ಬಿಳಿ ಬಣ್ಣ ಹಾಗೂ ಕಂದು ಬಣ್ಣದಲ್ಲಿ ಚಿತ್ರಿಸಿರುವುದು ಅಥವಾ ಮುದ್ರಿಸಿರುವುದನ್ನು ಕಾಣಬಹುದು. ಇವುಗಳನ್ನು ಪೂಜೆಗಾಗಿ ಬಳಸಿಕೊಂಡು ನಂತರ ಪರಿಸರದಲ್ಲಿರುವ ಮರಗಳಿಗೆ ನೇತು ಹಾಕಿರುವುದನ್ನು ಚಿತ್ರದಲ್ಲಿ ಕಾಣಬಹುದು.

೩. ಕರಕುಶಲ ವಸ್ತುಗಳ ಮೇಲಿನ ಚಿತ್ರಕಲೆ

ಟಿಬೆಟಿಯನ್ನರ ಕರಕುಶಲ ಕಲೆಗಳು ಅಗ್ರಸ್ಥಾನ ಪಡೆದಿದ್ದು. ಸೂಕ್ಷ್ಮಲಕ್ಷಣ ಹಾಗೂ ಸೌಂದರ್ಯತ್ಮಕತೆಯಲ್ಲಿ ವಿಶೇಷವಾಗಿದ್ದೂ ಟಿಬೆಟಿಯನ್ನರು ಹಾಗೂ ಇತರ ಸಹೃದಯರಿಗೆ ವೈಯಕ್ತಿಕ ಉಪಯೋಗಕ್ಕೆ ಹೆಚ್ಚು ಮಹತ್ವನೀಡಿದ್ದು, ಧಾರ್ಮಿಕ ವಿಧಿ-ವಿಧಾನಗಳ ಪ್ರಭಾವ ಕಡಿಮೆ ಇದ್ದಂತೆ ಕಾಣುತ್ತದೆ. ಇಂಥಹ ವಸ್ತುಗಳು ಮನೆಗಳನ್ನು ಕಲಾತ್ಮಕವಾಗಿ ಶೃಂಗರಿಸಲು ಬಳಸುವಂತಹ ಹಾಗೂ ಮಾನವನ ದಿನನಿತ್ಯ ಬಳಸುವ ಉಪಯೋಗಯುಕ್ತ ವಸ್ತುಗಳು ಕಲಾತ್ಮಕವಾಗಿ ತಯಾರಿಸಿ ಕೊಂಡಿರುವ ವಸ್ತುಗಳನ್ನು ಕರಕುಶಲ ವಸ್ತುಗಳ ಮೇಲಿನ ಚಿತ್ರಕಲೆಯಾಗಿ ಗುರುತಿಸಿಕೊಂಡಿವೆ ಇವುಗಳು ಟಿಬೆಟಿನ ಎಲ್ಲಾ ಪರಿಸರದ ಮಳಿಗೆಗಳಲ್ಲಿ ಹಾಗೂ ಮನೆಗಳಲ್ಲಿ ನೋಡಲು ಹಾಗೂ ಕೊಂಡುಕೊಳ್ಳಲು ಸಿಗುತ್ತವೆ.

ಬೆಂಗಳೂರು, ಮೈಸೂರು, ಹುಬ್ಬಳಿ, ಇತ್ಯಾದಿ ನಗರಗಳಲ್ಲಿ ಕರಕುಶಲ ವಸ್ತುಗಳ ಪ್ರದರ್ಶನಗಳಲ್ಲಿ ಸಿಗುತ್ತವೆ. ಇಂತಹ ಬಜಾರಿನಲ್ಲಿ ಇವತ್ತಿಗೂ ನೋಡಲು ಭಿತ್ತಿಪಟಗಳು ಸಿಗುತ್ತವೆ. ಇಂತಹ ವಸ್ತುಗಳನ್ನು ಟಿಬೆಟಿಯನ್ನರ ಕರಕುಶಲ ಕೇಂದ್ರ ಮನೆಗಳಲ್ಲಿ ಹೆಚ್ಚಾಗಿ ತಯಾರಿಸಿ ತಮ್ಮ ಜೀವನ ನಡೆಸುತ್ತಾರೆ. ಬೈಲುಕುಪ್ಪೆ, ಮುಂಡಗೊಡ, ಗುರುಪುರ ಹಾಗೂ ಬೆಂಗಳೂರಿನಲ್ಲಿ ತನ್ನದೆಯಾದ ಕರಕುಶಲ ಕೇಂದ್ರವನ್ನು ಹೊಂದಿದ್ದಾರೆ.

ಕರಕುಶಲವಸ್ತುಗಳ 'ಮೇಲಿನ ಚಿತ್ರಕಲೆಯನ್ನು ಪ್ರಮುಖವಾಗಿ ಜನರುತೊಡುವ ಬಟ್ಟೆಗಳ ಮೇಲೆ ಪಾಟಿಚೀಲಗಳ ಮೇಲೆ ಬಿಸಣಿಗೆಗಳ ಮೇಲೆ, ಬಾಗಿಲಿನ ತೋರಣ ಹಾಗೂ ಬಟ್ಟೆಯ ಪರದೆಗಳ ಮೇಲೆ ಶ್ರೇಷ್ಠ ೮ ಚಿನ್ನೆಗಳು, ಡ್ರಯಗಾನ್, ಕೀರ್ತಿಮುಖ, ಯಾಕ್ ಪ್ರಾಣಿಯ ಚಿತ್ರ, ಟಿಬೆಟಿನ ರಾಣಿಯ ಚಿತ್ರ, ಪಾರಿವಾಳ ಅರಾಡುತ್ತಿರುವ ಇತ್ಯಾದಿ ವಿಷಯಗಳನ್ನು ಅಧರಿಸಿದ ಚಿತ್ರಕಲೆಯನ್ನು ಹೊಂದಿರುವುದನ್ನು ಕಾಣಬಹುದು. ಇವುಗಳೆಲ್ಲವು ವ್ಯಾಪಾರದ ಉದ್ದೇಶದಡಿಯಲ್ಲಿ ರಚನೆಯಾದ ಚಿತ್ರಕಲೆ ಎಂದು ಹೇಳುವುದು. ಇವುಗಳ ಮೇಲೆ ರೇಖಾ ಚಿತ್ರ ರಚಿಸಿದ ನಂತರ ವರ್ಣಲೇಪನ ಹಾಗೂ ಇತ್ಯಾದಿ ರೇಖಾಚಿತ್ರಣದ ಕರಕುಶಲ ಕೆಲಸಗಳನ್ನೂ ಮಾಡುತ್ತಾರೆ. ಅಂಥಹ ವಸ್ತುಗಳೆಂದರೆ ಪಾಟಿಚೀಲ, ಬಾಗಿಲಿನ ಪರದೆ, ಬಿಸಣಿಗೆ ಇತ್ಯಾದಿಯಾಗಿವೆ.

ರಾಷ್ಟ್ರ ಬಾವುಟಗಳಿಂದ ಹಿಡಿದು ಸಾಮಾನ್ಯ ಬಾವುಟ, ಪಾಟಿಚೀಲ, ಬಾಗಿಲಿಗೆ ನೇತು ಹಾಕುವ ಪರೆದೆ, ದೇವಸ್ಥಾನದಲ್ಲಿ ಉದ್ದವಾದ ಪುಂಗ, ಕಂಬಕ್ಕೆ ನೇತು ಹಾಕುವ ಪಟ್ಟಿಯ ಪಟ್ಟಿಕೆ, ಟಿಷರ್ಟ್,ಬಟ್ಟೆ ಬೀಸಣಿಗೆ ಇತ್ಯಾದಿಗಳಲ್ಲಿ ಚಿತ್ರ ಬರೆದಿದ್ದಾರೆ

ರೇಷ್ಮೆ, ಹತ್ತಿ, ಮಂಜರಪಾಟ್ ಇತ್ಯಾದಿ ಸಾಮಾನ್ಯ ಬಟ್ಟೆಗಳನ್ನು ಬಳಸಿಕೊಂಡು ಟಿಬೆಟಿಯನ್ರ ರಾಷ್ಟ್ರ ಚಿನ್ಹೆ , ನ್ಯಾಯ ಚಕ್ರ, ಶಂಖ, ಯಾಕ್ ಎಂಬ ಗೂಳಿ(ಟಿಬೆಟ್), ಮೂರು ಮುತ್ತಿನ ತವರೆ ಹೂ, ಎಲೆ ಬಳ್ಳಿ, ಜ್ಯಾಮಿತಿಕ ನಕ್ಷೆಗಳು ಹಾಗೂ ಅನೇಕ ಟಿಬೆಟಿಯನ್ನರ ಲಿಪಿ, ಭಿತ್ತಿಚಿತ್ರಗಳಲ್ಲಿ ಕಂಡು ಬರುವ ದೇವತೆಗಳ ಚಿತ್ರ ಇತ್ಯಾದಿ ವಸ್ತು ವಿಷಯಗಳನ್ನು ತೆಗೆದುಕೊಂಡು ಚಿತ್ರ ರಚಿಸಿದ್ದಾರೆ. ಬಟ್ಟೆಯ ಮೇಲೆ ನೇರವಾಗಿ ಬಣ್ಣಕ್ಕೆ ವಿರೋಧವಾಗಿ ಕಾಣುವ ಬಣ್ಣದ ಪೆನ್ಸಿಲ್‌ಗಳಿಂದ ರೇಖಾಚಿತ್ರಗಳನ್ನು ರಚಿಸಿ ನಂತರ ಬಣ್ಣವನ್ನು ಹಚ್ಚುತ್ತಾರೆ. ನಂತರ ಚಿನ್ನದ ಬಣ್ಣಗಳಿಂದ ಬಾಹ್ಯ ರೇಖೆ ಹಾಗೂ ನಕ್ಷೆಗಳನ್ನು ಪೂರ್ಣಗೊಳಿಸುವುದು. ಕೆಲವೂಮ್ಮೆ ರೇಖಾಚಿತ್ರವನ್ನು ರಚಿಸಿ ಚಿತ್ರಗಳ ಮೇಲೆ ವಿವಿಧ ಬಣ್ಣದ ದಾರದಿಂದ ಸ್ಟಿಚಿಂಗ್, ಜಿಗ್‌ಜಾಗ್ ಪದ್ಧತಿಯಲ್ಲಿ ಕಲಾಕೃತಿಗಳನ್ನು ಪೂರ್ಣಗೊಳಿಸುವುದು. ಇವುಗಳನ್ನು ತನ್ನ ವ್ಯಾಪಾರದ ಉದ್ದೇಶದಿಂದ ನೋಡುಗರಿಗೆ ಬಟ್ಟೆಯ ಮೇಲೆ ಚೆನ್ನಾಗಿ ಕಾಣುವಂತಹ ರೀತಿಯಲ್ಲಿ ವರ್ಣಲೇಪನ ಬಾಹ್ಯ ರೇಖೆಗಳನ್ನು ಎಳೆದಿರುತ್ತಾರೆ.

ಇತಂಹ ಕೆಲಸವು ಅತಿ ಸೂಕ್ಷ್ಮ ಪ್ರಮಾಣದಲ್ಲಿ ಕಂಡು ಬಂದಿರುತ್ತದೆ. ಬೀಸಣಿಗೆಯ ಮಧ್ಯಭಾಗದಲ್ಲಿ ಚಿತ್ರಗಳನ್ನು ಬರೆಯುವ ಮೊದಲು ಬಟ್ಟೆಯನ್ನು ರಿಂಗ್ ಆಕಾರದ ಕಟ್ಟಿಗೆಗೆ ಬಿಗಿದುಕೊಂಡು ಅತಿ ಸೂಕ್ಷ್ಮವದ ಬ್ರಷ್‌ಗಳಿಂದ ರೇಖಾಚಿತ್ರವನ್ನು ರಚಿಸಿ ನಂತರ ಎರಡೂ ಕಡೆ ಕಾಣುವಂತೆ ಪಾರದರ್ಶಕ ರೀತಿಯಲ್ಲಿ ಬಣ್ಣವನ್ನು ಲೇಪಿಸಲಾಗುತ್ತದೆ. ಕೆಲವು ಸಾಮಾನ್ಯ ಬಾವುಟಗಳನ್ನು ದೇವಸ್ಥಾನದಲ್ಲಿ ಧರ್ಮ ಪ್ರಚಾರದ ಪತ್ರಿಕೆಗಳನ್ನು ಪ್ರಿಂಟಿಂಗ್ ಹಾಕಲು ಇರುವ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಪ್ರಿಂಟ್ ಹಾಕುವುದು ಸಾಮಾನ್ಯ. ಆದರೆ ಅಂತಹ ಆಕಾರಗಳನ್ನು ಕಲಾವಿದರು ಬಟ್ಟೆಗಳ ಮೇಲೆ ಕೈಯಿಂದ ಚಿತ್ರ ರಚಿಸುವುದು ವಿಶೇಷವಾಗಿದೆ. ಇಂತಹ ರೇಖಾಚಿತ್ರ ಮತ್ತು ಬಣ್ಣಗಲನ್ನು ಹಚ್ಚುವ

ಕಾರ್ಯಗಳನ್ನು ಬಿಡುವಿನ ವೇಳೆಯಲ್ಲಿ ಮಹಿಳೆಯರೇ ಹೆಚ್ಚಾಗಿ ವಹಿಸುತ್ತಾರೆ ಹಾಗೂ ಪ್ರಥಮವಾಗಿ ಕಲಿಯುವಂತಹ ಕಿರಿಯ ಕಲಾವಿದರ ಕೈಯಲ್ಲಿ ಕೆಲಸ ಮಾಡಿಸುತ್ತಾರೆ.

ಕರಕುಶಲ ವಸ್ತುಗಳ ಮೇಲಿನ ಚಿತ್ರಗಳ ವಿವರಣೆ

೩.೧ ಬಾಗಿಲಿನ ಪರದೆಯ ಕುಶರಿ ಚಿತ್ರ:

ಹಳದಿ ಪರದೆಯ ಮೇಲೆ ಆಯತಾಕಾರದ ಕೆಂಪು ಬಟ್ಟೆಯ ಮಧ್ಯ ಭಾಗದಲ್ಲಿ ಟಿಬೆಟಿನ ೮ ಶ್ರೇಷ್ಠ ಚಿನ್ಹೆಗಳನ್ನು ರೇಖಾ ಪ್ರಧಾನವಾಗಿ ಚಿತ್ರಿಸಿ ಚಿತ್ರಗಳ ಮೇಲೆ ವಿವಿಧ ವರ್ಣ ಕಪ್ಪು ನೂಲಿನಿಂದ ಚಿತ್ರಕ್ಕೆ ತಕ್ಕಂತೆ ಜಿಗ್‌ಜಾಗ್ ರೂಪದಲ್ಲಿ ಸೂಚಿಯಿಂದ ಕುಶರಿ ಕೆಲಸವಾದ ಹೊಲಿಗೆಯನ್ನು ಮಾಡಿರುವುದನ್ನು ಕಾಣಬಹುದು. ಚಿತ್ರದಲ್ಲಿ ತೋರಿಸಿದಂತೆ ಟಿಬೆಟಿಯನ್ನರ ಮನೆಯ ಬಾಗಿಲಿನಲ್ಲಿ ನೇತು ಹಾಕಿರುತ್ತಾರೆ. ಇವುಗಳನ್ನು ಟಿಬೆಟಿಯನ್ನರ ಕರಕುಶಲ ಕೇಂದ್ರದಲ್ಲಿ ತಯಾರಿಸಿರುತ್ತಾರೆ.

೩.೨ ಟೀ ಶರ್ಟ್ ಮೇಲಿನ ಚಿತ್ರ:

ಹಸಿರು ಟೀ ಶರ್ಟ್ ಮೇಲೆ ಹಳದಿ ವರ್ಣದಿಂದ ಡ್ರಯಾಗನ್ ಚಿತ್ರವನ್ನು ಕುಂಚಗಳಿಂದ ಚಿತ್ರಿಸಿರುವುದನ್ನು ಕಾಣಬಹುದು. ಪ್ಯಾಬ್ರಿಕ್ ಮಾಧ್ಯಮದ ವರ್ಣವನ್ನು ಬಳಸಿ ಅದರ ಕಾಲುಗಳನ್ನು ಬಿಳಿ ಬಣ್ಣದಿಂದ, ನಾಲಿಗೆಯನ್ನು ಕೆಂಪು ವರ್ಣದಿಂದ ಹಾಗೂ ಅದರ ಬಾಲಗಳನ್ನು ಹಸಿರು ಕೆಂಪು, ಟಿಬೆಟಿಯನ್ನರ ದೇವತೆಯ ರಕ್ಷಕನೆಂದು ಧಾರ್ಮಿಕವಾಗಿ ನಂಬಿರುವುದರಿಂದ ಈ ರೀತಿ ಟೀ ಶರ್ಟ್ ಮೇಲೆ ಬರೆಸಿಕೊಂಡಂತೆ ನನ್ನನ್ನು ರಕ್ಷಿಸುತ್ತದೆ ಎಂದು ನಂಬಿದ್ದಾರೆ.

೩.೩ ಬಾಗಿಲಿನ ಪರದೆಯ ಚಿತ್ರ:

ಬಿಳಿ ಬಟ್ಟೆಯ ಪರದೆಯ ಮೇಲೆ ಹಸಿರು ಪ್ರಧಾನವಾದ ಕೊಡೆ, ಹಳದಿ ಚಕ್ರ, ಹಳದಿ ಮೀನುಗಳು, ತಿಳಿಗಂಪು ಕಮಲ, ಶಂಖ, ಎಂಟು ಚೌಕದ ಹಳದಿ ಮಂಡಲ ಹಲವು ಬಣ್ಣಗಳ ಮಿಶ್ರಿತ ಟಿಬೆಟಿಯನ್ನರ ಧಾರ್ಮಿಕ ಚಿನ್ಹೆ ಇತ್ಯಾದಿ. ಚಿತ್ರಗಳನ್ನು ಪ್ಯಾಬ್ರಿಕ್ ಮಾಧ್ಯಮದಲ್ಲಿ ಚಿತ್ರಿಸಿದ್ದು, ಮೇಲು ಭಾಗದಲ್ಲಿ ಅನೇಕ ವರ್ಣ ಮಿಶ್ರಿತ ತೋರಣಗಳನ್ನು ಪ್ರಧಾನವಾಗಿ ಕೆಂಪು ಬಣ್ಣವನ್ನು ಕಾಣಬಹುದು. ಒಟ್ಟಾರೆ ಪರದೆಯ ಸುತ್ತಲೂ ಹಸಿರು ಎಲೆಯಂತಹ ಹಾರದಿಂದ ಸುತ್ತುವರಿದಂತಹ ಚಿತ್ರವನ್ನು ಚಿತ್ರಿಸಿದ್ದಾರೆ.

೩.೪ ಬಾಗಿಲಿನ ತೋರಣದ ಮೇಲಿನ ಚಿತ್ರಗಳು:

ಬಾಗಿಲಿನ ತೋರಣಗಳನ್ನು ಬಾಗಿಲಿನ ಎಡ ಮತ್ತು ಬಲ ಭಾಗಕ್ಕೆ ನೇತು ಹಾಕಿ ಸಿಂಗರಿಸಿಕೊಳ್ಳಲು ಬಳಸುತ್ತಾರೆ. ಇವುಗಳ ಮೇಲೆ ಟಿಬೆಟಿಯನ್ನರ ಶ್ರೇಷ್ಠ ೮ ಚಿನ್ಹೆಗಳು ಹಾಗೂ ಟಿಬೆಟಿನ Yok ಪ್ರಾಣಿ, ಪಾರಿವಾಳ ಮತ್ತು ಮೊಲ ಟಿಬೆಟಿಯನ್ನರ ಸಾಂಕೇತಿಕ ಚಿನ್ಹೆಗಳು, ಲೋಗೋ ಇತ್ಯಾದಿ ಆನೆ, ಕೋತಿ ಚಿತ್ರಗಳನ್ನು ಚಿತ್ರಿಸಿ ಚಿತ್ರಿಸಿದ ವರ್ಣಕ್ಕೆ ವಿರುದ್ಧವಾದ ಬಟ್ಟೆಗಳನ್ನು ಬಳಸಿ ಬಟ್ಟೆಯ ಮೇಲೆ ವಿವಿಧ ಬಣ್ಣದ ದಪ್ಪದಾರದಿಂದ ಎಂಬ್ರಾಯಿಡಿಂಗ್ ಮಾಡುತ್ತಾರೆ. ನಂತರ ಅನೇಕ ನಕ್ಷಾ ವಿನ್ಯಾಸದ ರೇಷ್ಮೆ ಬಟ್ಟೆಯ ಮೇಲೆ ಸೇರಿಸಿ ತೋರಣವಾಗಿ ಮಾಡಿಕೊಂಡು ತೋರಣದ ಕೆಳ ಭಾಗದಲ್ಲಿ ವಿವಿಧ ವರ್ಣದ ನೂಲಿನಿಂದ ಎಳೆಯ ಗುಚ್ಛವನ್ನು ನೇತು ಹಾಕುತ್ತಾರೆ. ಎಂಬುದನ್ನು ಚಿತ್ರಪಟದಲ್ಲಿ ನೋಡಿಕೊಂಡು ತಿಳಿಯಬಹುದು.

ಕರಕುಶಲ ವಸ್ತುಗಳ ಮೇಲಿನ ಚಿತ್ರಗಳು



ಬಾಗಿಲಿನ ಪರದೆಯ ಕುಶರಿ ಚಿತ್ರ



ಟೀಶರ್ಟ್ ಮೇಲಿನ ಚಿತ್ರ



ಬಾಗಿಲಿನ ಪರದೆಯ ಚಿತ್ರ



ಬಾಗಿಲಿನ ತೋರಣದ ಮೇಲಿನ ಚಿತ್ರ

ಕರಕುಶಲ ವಸ್ತುಗಳ ಮೇಲಿನ ಚಿತ್ರಗಳು



ಬ್ಯಾಗಿನ ಮೇಲಿನ ಕುಶಲ ಕಲೆ

೩.೫ ಬ್ಯಾಗಿನ ಮೇಲಿನ ಕುಶಲ ಕಲೆ

ಹಲವು ವಿವಿಧ ವರ್ಣದ ಬ್ಯಾಗಿನ ಬಟ್ಟೆಯ ಮೇಲೆ ಬಟ್ಟೆಯ ಬಣ್ಣಕ್ಕೆ ವಿರುದ್ಧವಾದ ಸೀಸದ ಕಡ್ಡಿಯಿಂದ ರೇಖಾ ಪ್ರಧಾನ ಚಿತ್ರವನ್ನು ರಚಿಸಿ ನಂತರ ಅನೇಕ ವರ್ಣಗಳಿಂದ ಕೂಡಿದ ದಪ್ಪ ದಾರವನ್ನು ತೆಗೆದುಕೊಂಡು ಸೂಜಿಯಿಂದ ಹೊಲೆದು ವರ್ಣಗಾರಿಕೆಯ ರೀತಿಯಲ್ಲಿ ಕ್ರಮವಾಗಿ ಜೋಡಿಸುತ್ತಾ ಹೋಗುತ್ತಾರೆ. ಚಿತ್ರದಲ್ಲಿ ತೋರಿಸಿದಂತೆ ಭೂಮಿಯ ಗ್ಲೋಬ್ ಮುಂದೆ ಪಾರಿವಾಳ ಶಾಂತಿ ಸಂಕೇತವಾಗಿ ಹಾರುತ್ತಿರುವ ಚಿತ್ರ, ಟಿಬೆಟಿಯನ್ನರ ಚಕ್ರ, ಟಿಬೆಟಿಯನ್ನರ ಧಾರ್ಮಿಕ ಅಕ್ಷರ. ಚಿನ್ನದ ಮೀನಿನೊಂದಿಗೆ ಧರ್ಮ ಚಕ್ರ ಇತ್ಯಾದಿ ವಿಷಯದಲ್ಲಿ ಹಾಗೂ ಇಂಗ್ಲಿಷಿನ ಅಕ್ಷರದ ಸೂಚನೆಗಳನ್ನು ವಿವಿಧ ಬಣ್ಣಗಳಿಂದ ರಚಿಸಿರುವುದನ್ನು ಕರಕುಶಲ ವಸ್ತುಗಳ ಮೇಲಿನ ಚಿತ್ರಗಳಲ್ಲಿನ ಚಿತ್ರಪಟಗಳಲ್ಲಿ ಕಾಣಬಹುದು.

೪. ಸುರುಳಿ ಚಿತ್ರಕಲೆ

ಟಿಬೆಟಿಯನ್ನರಲ್ಲಿ ಸುರುಳಿ ಚಿತ್ರಕಲೆ ಅತ್ಯಂತ ಮಹತ್ವವುಳ್ಳದಾಗಿದೆ. ಇದು ಭಾರತೀಯರಲ್ಲಿ ಹೇಗೆ ಹಸ್ತಪ್ರತಿ ಮತ್ತು ದೇವರ ವಸ್ತುಗಳಿಗೆ ಹೆಚ್ಚು ಮೌಲ್ಯವಿದೆಯೇ ಅದೇ ರೀತಿ ಜೈನರಲ್ಲಿ ಧವಳ, ಜಯಧವಳ, ಮಹಾದವಳ ಹಸ್ತಪ್ರತಿಗಿದಷ್ಟು ಮಾನ್ಯತೆ ಸುರುಳಿ ಚಿತ್ರಕ್ಕೆ ಇದೆ. ಇದನ್ನು ಉನ್ನತ ಮಟ್ಟದ ಅನುಭವವುಳ್ಳ ಬೌದ್ಧಸನ್ಯಾಸಿ, ಕಲಾವಿದರು ತಯಾರಿಸುತ್ತಾರೆ. ಹಾಗೂ ಚಿತ್ರವನ್ನು ಬಿಡಿಸುತ್ತಾರೆ. ಇದನ್ನು ದೇವಾಲಯದ ಪ್ರಧಾನ ಮೂರ್ತಿಯ ವಿಗ್ರಹದ ಒಲಭಾಗದಲ್ಲಿ ಇರಿಸಿ ಪೂಜೆಯ ಸಂದರ್ಭದಲ್ಲಿ ಬೌದ್ಧಗುರುವು ತೆಗೆದು ಪೂಜಿಸುತಾರೆ. ಬೇರೆಯವರಿಗೆ ತೋರಿಸುವುದಿಲ್ಲ ಹಾಗೆ ಮಾಡಿದರೆ ಪಾಪ ಉಂಟಾಗುತ್ತದೆ ಎಂಬ ನಂಬಿಕೆ. ಬೈಲುಕುಪ್ಪೆಯ ಟಿಬೆಟಿಯನ್ನರು ಟಿಬೆಟಿನ ದಿನಾಚರಣೆ ಸಂದರ್ಭದಲ್ಲಿ ಹಾಗೂ ಫೆಬ್ರುವರಿ/ಮಾರ್ಚನ ಮೊದಲನೆಯ ತಿಂಗಳು ೧೦ನೇಯ ದಿನದಂದು ಗುರುಪದ್ಮಸಂಭವ ಅವರ ೧೮೦ ಅಡಿಯ ಬೃಹತ್ ಥಾಂಕ್ ಚಿತ್ರದ ಪ್ರದರ್ಶನದ. ಇಂತಹ ಸಂದರ್ಭದಲ್ಲಿ ಮೊದಲನೆಯ ತಿಂಗಳು ೧೫ನೇಯ ದಿನದಂದು ಬುದ್ಧ ಅಮಿತಾಯೊಸುರವರ ಬೃಹತ್ ೧೮೦ ಅಡಿಯ ಥಾಂಕಾ ಚಿತ್ರ ಪ್ರದರ್ಶನವನ್ನು ವರ್ಷಕ್ಕೊಮ್ಮೆ ಏರ್ಪಡಿಸುವ ಸಂದರ್ಭದಲ್ಲಿ ಈ ಸುರುಳಿ ಚಿತ್ರಕ್ಕೂ ಪೂಜೆ ತಲುಪಿಸುತ್ತಾರೆ. ಒಬ್ಬ ಗುರುವು ಪೂಜಿಸಲು ತೆರೆದರೆ ಕ್ರಮವಾಗಿ ಮತ್ತೊಬ್ಬ ಗುರುವು ಸುತ್ತಿಕೊಳ್ಳುತ್ತಿರುತ್ತಾನೆ, ಬೇರೆ ಲಾಮಗಳು ಕುಳಿತು ಪ್ರಾರ್ಥಿಸುತ್ತಾರೆ. ಆದರೆ ಅವರು ಪೂಜಿಸುವುದು ಹಾಗೂ ಸುತ್ತುವುದು ಯಾರ ಕಣ್ಣಿಗು ಬಿಳದಂತೆ ನೋಡಿಕೊಳ್ಳುತ್ತಾರೆ. ಇದೊಂದು ರೀತಿಯ ವಿಶಿಷ್ಟ ಪೊಜೆಯಾಗಿರುತ್ತದೆ. ತೋರಿದರೆ ಪೂಜೆಯು ಫಲಕಾರಿಯಾಗುವುದಿಲ್ಲ ಬುದ್ಧ ದೈವತ್ವವು ನಮ್ಮನ್ನು ಒಪ್ಪುವುದಿಲ್ಲವೆಂದು ಗುರುಗಳು ಹೇಳುತ್ತಾರೆ. ಈ ಸಮಯಕ್ಕೆ ದೇಶದ ಅನೇಕ ಮೂಲೆ ಮೂಲೆಯಿಂದ ಟಿಬೆಟಿಯನ್ನರು ಬಂದು ಹೋಗುತ್ತಾರೆ.

ಚಿತ್ರಪಟದಲ್ಲಿ ಗುರುಗಳು ಹೇಳಿಕೆ ನೀಡಿದಂತೆ ಒಂದು ಮತ್ತೊಂದು ವಿವಿಧ ಬಣ್ಣದ ಬಟ್ಟೆಯಿಂದ ಕೊಲಾಜ್(ಕೌದಿಕಲೆ) ಮೂಲಕ ಹೊಲೆದಿರುವ. ಚಿತ್ರವನ್ನು ಸಂಪೂರ್ಣಗೊಳಿಸಿದ್ದಾರೆ. ಇದನ್ನು ೧೦೮ ಅಡಿಯಲ್ಲಿ ಸಿದ್ದಪಡಿಸಲಾಗಿದೆ. ಇದರಲ್ಲಿ ಹೆಚ್ಚಾಗಿ ಬುದ್ಧಧರ್ಮದ ಶ್ರೇಷ್ಠ ಮಟ್ಟದ ವಿಚಾರ,

ಜಾತಕ ಕಥಗಳನ್ನು ಕ್ರಮವಾಗಿ ಚಿತ್ರಿಸಲಾಗಿದೆ. ಇವುಗಳನ್ನು ಹೊಸ ದೇವಾಲಯಗಳನ್ನು ಪ್ರಾರಂಭಿಸುವ ಸಂದರ್ಭದಲ್ಲಿ ಪೂಜೆಮಾಡಲು ಕೊಂಡ್ಯೊಯುತ್ತಾರೆ. ಇದರಲ್ಲಿ ಬುದ್ದನ ಜೀವವಿದೆ ಎಂದು ಅವರು ನಂಬಿರುವರು.

ಮೇಲಿನ ಭಿತ್ತಿಚಿತ್ರ ಹಾಗೂ ಭಿತ್ತಿಯೇತರ ಚಿತ್ರಕಲೆಯಲ್ಲಿ ಬರುವ ಚಿತ್ರಕಲೆಗಳು ಸಂಪೂರ್ಣವಾಗಿ ಐದು ನೆಲೆಯಲ್ಲಿ ಕಂಡುಬಂದಿರುವುದಾಗಿದ್ದು, ಒಟ್ಟಾರೆ ಇವುಗಳ ವಿವರಣೆಯನ್ನು ಮೇಲಿನಂತೆ ಗಮನಿಸಿದರೆ ಟಿಬೆಟಿನ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ವಿಷಯಗಳಾದ ದೇವಾಲಯ, ಸ್ತೂಪ, ಹೆಬ್ಬಾಗಿಲು, ಪ್ರಾರ್ಥನಾ ಮಂದಿರ, ಪ್ರಾರ್ಥನಾ ಚಕ್ರಗಳಲ್ಲಿನ ಹಾಗೂ ಇತ್ಯಾದಿ ಪರಿಸರಗಳಲ್ಲಿ ಕಂಡುಬರುವ ಭಿತ್ತಿಚಿತ್ರಗಳು ಉತ್ತಮ ಮೌಲ್ಯಯುತವಾಗಿವೆ ಎಂದು ಹೇಳಬಹುದು. ಹಾಗೂ ಟಿಬೆಟಿಯನ್ನರು ನಮ್ಮ ಕಲಾಕ್ಷೇತ್ರಕ್ಕೆ ಮುಂದಿನ ಕುರುಹುಗಳಾಗಿ ಕಲಾ ಇತಿಹಾಸವನ್ನು ಕಟ್ಟಿಕೊಡುವಂತಹ ಮಹತ್ವಪೂರ್ಣ ಪ್ರದೇಶಗಳಾಗಿವೆ ಎಂದು ಹೇಳಬಹುದು.

***



ಅಧ್ಯಾಯ–ಐದು

ಟಿಬೆಟಿಯನ್ನರ ಸಂಕೀರ್ಣ ಮಾಧ್ಯಮದ ಚಿತ್ರಕಲೆ

ಕರ್ನಾಟಕದ ನೆಲೆಯಲ್ಲಿರುವ ಟಿಬೆಟಿಯನ್ನರ ಚಿತ್ರಕಲೆಯು ಬೌದ್ಧ ಧಾರ್ಮಿಕ ಪರಿಸರಗಳನ್ನು ನಿರ್ಮಿಸುವುದಕ್ಕೆ ಪ್ರಮುಖ ಪಾತ್ರವಹಿಸುತ್ತಾರೆ. ಸಹಸ್ರಾರು ವರ್ಷಗಳ ಹಿಂದಿನಿಂದಲೂ ಈ ರೀತಿಯ ಅನೇಕ ಕಲಾ ಮಧ್ಯಮಗಳನ್ನು ಇಟ್ಟುಕೊಂಡು ಟಿಬೆಟಿನ ಸಂಸ್ಕೃತಿಕ ಪರಿಸರವನ್ನು ಧಾರ್ಮಿಕ ನೆಲೆ ಗಟ್ಟಿನಲ್ಲಿ ಧರ್ಮಾರಾಧಕರು, ರಾಜವಂಶಸ್ಥರು ಶ್ರೀಮಂತರು ಹಾಗೂ ಸಾಮಾನ್ಯ ಜನರಿಂದ ಮಾನ್ಯತೆಯನ್ನು ದೊರಕಿಸಿ ಕೊಂಡಿದ್ದು. ಇಂಥಹ ಮಾಧ್ಯಮಗಳಲ್ಲಿ ಅನೇಕ ರೀತಿಯ ವೈವಿಧ್ಯಮಯವಾದ ಚಿತ್ರಕಲೆಯನ್ನು ಧಾರ್ಮಿಕ ವಿಷಯಕ್ಕೆ ತಕ್ಕಂತೆ ಬಳಸಿಕೊಂಡು ಬಂದಿರುವುದನ್ನು, ಟಿಬೆಟಿಯನ್ನರ ಕಲಾ ಇತಿಹಾಸವನ್ನು ಅವಲೋಕಿಸಿದರೆ ತಿಳಿಯುತ್ತದೆ. ಅಲ್ಲಿಯ ಚಿತ್ರಕಲೆ ಮತ್ತು ಶಿಲ್ಪಕಲೆ ಹಾಗೂ ವಸ್ತು ನಿರ್ಮಾಣ ಕಲೆಯನ್ನು ನಿರ್ಮಿಸಿಕೊಂಡು ತನ್ನದೆಯಾದ ಥಾಂಕ ಶೈಲಿಯಲ್ಲಿ ಗುರುತಿಸಿ ಕೊಂಡಿದ್ದು ಇವುಗಳು ಇತರ ಶೈಲಿಗಳಿಂದ ಭಿನ್ನಪ್ರಕಾರದಲ್ಲಿ ತನ್ನ ಇತಿಹಾಸವನ್ನು ಸೃಷ್ಠಿಸಿಕೊಂಡು ವರ್ಣಮಯವಾದ ಕಲಾತ್ಮಕ, ಸೌಂದರ್ಯನುಭವ ಕೊಂಡುವಂತಹ ದೃಶ್ಯಕಲಾ ಮಾಧ್ಯಮವನ್ನು ಬಳಸಿ ಕೊಂಡು ಬಂದಿರುವುದು ವಿಶೇಷವಾಗಿದೆ.

ಇಂಥಹ ಒಂದು ವೈಶಿಷ್ಠ ಪೂರ್ಣವಾದ ಕಲೆಗಳ ಮಾಧ್ಯಮವನ್ನು ಅಧ್ಯೆಸಿಕೊಳ್ಳಲು ಕರ್ನಾಟಕದ ಟಿಬೆಟಿಯನ್ನರ ನೆಲೆಗಳನ್ನು ಸಂಶೋಧನಾತ್ಮಕವಾಗಿ ಅಭ್ಯಾಸಿಸಿ. ಸಂಕೀರ್ಣ ಮಾಧ್ಯಮದ ಚಿತ್ರಕಲೆಯನ್ನು ಒಂದು ಭಾಗವಾಗಿ ಗುರುತಿಸಿಕೊಂಡು, ಇದನ್ನು ಪ್ರತ್ಯೇಕವಾಗಿ ಈ ಕೆಳಕಂಡಂತೆ ವರ್ಗಿಕರಿಸಿ ಪ್ರತ್ಯೇಕವಾಗಿ ಅಭ್ಯಾಸ ನಡೆಸಲಾಗಿದೆ. ಅವುಗಳೆಂದರೆ,

ಲೋಹ ಮಾಧ್ಯಮದ ಚಿತ್ರಕಲೆ

ಸಿಮೆಂಟ್ ಮಾಧ್ಯಮದ ಚಿತ್ರಕಲೆ

ಮರ (ಕಟ್ಟಿಗೆ) ಮಾಧ್ಯಮದ ಚಿತ್ರಕಲೆ

ಗೋಧಿ ಹಿಟ್ಟಿನಿಂದ ಮತ್ತು ಬೆಣ್ಣೆ ಮಾಧ್ಯಮದ ಚಿತ್ರಕಲೆ

ಮೇಲಿನ ರೂಪದ ಚಿತ್ರಕಲೆಯನ್ನು ಪ್ರತೀಕವಾಗಿ ಈ ಕೆಳಗಿನಂತೆ ಚರ್ಚಿಸಲಾಗಿದೆ.

೧. ಲೋಹದ ಮಾಧ್ಯಮದ ಚಿತ್ರಕಲೆ

ಟಿಬೆಟಿನ ಕಲಾಸಂಸ್ಕೃತಿಯನ್ನು ಅವಲೋಕಿಸಿದರೆ ಲೋಹ ಮೂರ್ತಿಗಳು ಸಾಮಾನ್ಯವಾಗಿ ವಿಶ್ರಲೋಹದಿಂದ ಮಾಡಿರುವ ಟೊಳ್ಳು ಮೂರ್ತಿಗಳು ಕಂಡುಬರುತ್ತವೆ. ಹಾಗೂ ಅಷ್ಟಧಾತುಗಳಿಂದ ಮಾಡಿದ ಬೆಲೆ ಬಾಳುವ ಮೂರ್ತಿಗಳು ಉಂಟು ಲೋಹ ಮೂರ್ತಿಗಳಿಗೆ ಗಿಲೀಟು ಮಾಡುವ ಪದ್ಧತಿ ಹೆಚ್ಚು ವಾಪಕವಾಗಿತು. ಗಚ್ಚಿನ ಮೂರ್ತಿಗಳನ್ನು ಮರದ ಅಥವಾ ಗಾರೆಯ ಭೂಮಿಕೇಯ ಮೇಲೆ ಮಣ್ಣು ಕಲ್ಲು ಬೆರೆತ ಜೇಡಿಯಿಂದ ತೈಯಾರಿಸಿ, ಅವುಗಳಿಗೆ ಅಕಾರ ಕೊಟ್ಟು ಗಚ್ಚಿನ ತೆಳುಲೇಪನದ ಮೇಲೆ ಬಣ್ಣ ಬಳಿದ ಮೂರ್ತಿಗಳು ವಿಶೇಷವಾಗಿ ಗುರುತಿಸಬಹುದು. ಕಾಶ್ಮೀರದಿಂದ ಹಲವು ಶಿಲ್ಪಿಗಳು ಟಿಬೆಟಿಗೆ ಹೋಗಿರುವುದು ಭಾರತದಿಂದ ಸುಲಭವಾಗಿ ಸಾಗಿಸಬಹುದಾದ ಲೋಹ ಮೂರ್ತಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಇಲ್ಲಿಗೆ ತಂದುದ್ದು ಮತ್ತು ಅವುಗಳನ್ನು ಮಾದರಿಯಾಗಿದ್ದು ಕೊಂಡು ಲೋಹ ಶಿಲ್ಪಗಳನ್ನು ಬೆಳೆಸಿದುದ್ದು. ಟಿಬೆಟಿಯನ್ನರ ಕಲಾ ಇತಿಹಾಸದಲ್ಲಿ ತಿಳಿಸಿರುವುದು ಗಮನಿಸಬಹುದು, ಮೂಲಭಾರತ ಶಿಲ್ಪಗಳ ಮಾದರಿಯ ನಕಲುಗೊಂಡ ಶಿಲ್ಪಗಳೆಂದೆ ಹೇಳಬಹುದು.

ಮಹಾಯನ, ವಜ್ರಯಾನಗಳಿಗೆ ಸಂಬಂಧಿಸಿದ ಅವಲೋಕಿತೇಶ್ವರ, ತಾರ, ಮಂಜುಶ್ರೀ, ಬುದ್ಧ, ಬೌದ್ಧ ಮತಿಯ ಗುರುಗಳ ಅಸಂಖ್ಯಾತ ಮೂರ್ತಿ ಶಿಲ್ಪಿಗಳು ಭಾರತದ ಶಿಲ್ಪ ಮಾದರಿಗಳಿಗೆ ಹತ್ತಿರವಾಗಿವೆ ಅದರೆ ಕರ್ನಾಟಕಕ್ಕೆ ಒಂದು ಐದು ನೆಲೆಯಲ್ಲಿ ವಾಸಿಸಿರುವ ಟಿಬೆಟಿಯನ್ನರು ತಮ್ಮ ದೇವಾಲಯಗಳಲ್ಲಿ ಹಾಗೂ ಮನೆಗಳಲ್ಲಿ ಪ್ರತಿಷ್ಠಾಪಿಸಿರುವ ಮೇಲಿನ ವಸ್ತು ವಿಷಯಗಳ ಶಿಲ್ಪಗಳು ಮೂಲ ಭಾರತದ ದೆಹಲಿ ಶಿಲ್ಪಗಳ ಕೇಂದ್ರ ಕಛೇರಿಯಿಂದ ತರಿಸಿಕೊಳ್ಳುತ್ತಾರೆ. ಇಲ್ಲಿ ನೇಪಾಳಿ ಮತ್ತು ಹಿಮಾಜಲ ಪ್ರದೇಶದ ಧರ್ಮಶಾಲೆಯಲ್ಲಿ ಕಲಿತ ನಿಪುಣ ಶಿಲ್ಪಕಲಾವಿದರ ಕೈಯಿಂದ ತ್ಯಾಯಾರಿಸಲ್ಪಟ್ಟು ಕಂಚಿನ ಲೋಹದ. ತಗಡಿನ ಬಿಡಿ ಭಾಗದ ಶಿಲ್ಪಗಳನ್ನು ತಂದು ಪ್ರಭಾವಳಿಯ ರೀತಿಯಾಗಿ ಜೋಡಿಸಿ ಚೊಳ್ಳ ಮಾದರಿಯಲ್ಲಿ ಬೃಹತ್‌ದ ಬೈಲುಕುಪ್ಪಯ ೬೦" ಅಡಿ ಪ್ರಧಾನ ಶಿಲ್ಪವನ್ನು ನಿರ್ಮಿಸಿದರು. ಇಲ್ಲಿನ ಎಲ್ಲಾ ದೊಡ್ಡ ಹಾಗೂ ಚಿಕ್ಕ ಶಿಲ್ಪಗಳು ಟೊಳ್ಳಾಗಿದ್ದು. ಇವುಗಳೆಲ್ಲವನ್ನು ಯಾವ ರೀತಿ ಜೋಡಿಸುತ್ತಾರೆ ಎಂಬುದನ್ನು ಸಂಶೋಧನ ಕ್ಷೇತ್ರ ಕಾರ್ಯದಲ್ಲಿ ದೊರೆತ ಛಾಯ ಚಿತ್ರ ನೋಡುವುದರಿಂದ ತಿಳಿದು ಬರುತ್ರದೆ. ಈ ರೀತಿಯಾಗಿ ಸಿದ್ದಗೊಂಡ ಮೂರ್ತಿಗಳಿಗೆ ಮೊದಲು ಪ್ರೈಮರ್ ಒಡೆದು ಅವುಗಳ ಮೇಲೆ ಟಿಬೆಟಿನಿಂದ ತರಿಸಿದ ಚಿನ್ನದ ಬಣ್ಣವನ್ನು ಲೋಪಿಸಲಾಗುತ್ತದೆ.

ನಂತರ ಅವುಗಳ ಮೇಲೆ ಕುದಲು ಭಾಗಕ್ಕೆ ಕಪ್ಪು, ವಸ್ತ್ರಗಳಿಗೆ ಸಂಬಂಧಿಸಿದ ಬಣ್ಣಗಳು ಹಾಗೂ ಮೀಸೆ. ಕಣ್ಣುಗಳ ಭಾಗಕ್ಕೆ ಕಪ್ಪು, ತುಟಿಗೆ ಕೆಂಪು, ಬುದ್ದನ ಕಮಾಂಡಲಕ್ಕೆ ಕಪ್ಪು ಅನೇಕ ಬಗ್ಗೆಯ ಬಣ್ಣಗಳ ಮುತ್ತಿನ ಹರಳಿನ ಭಾಗಕ್ಕೆ. ಬಣ್ಣಗಳ ಲೇಪನ ಈಗೆ ಶಿಲ್ಪವು ಪ್ರಧಾನವಾಗಿ ಚಿನ್ನ ಲೇಪಿತ ಬಣ್ಣದಲ್ಲಿದ್ದು ಅವಶ್ಯಕತೆಗೆ ತಕ್ಕಂತೆ ಬೇರೆ ಬಣ್ಣಗಳನ್ನು ಬಳಸುತ್ತಾರೆ. ಇಂಥಹ ಕಾರ್ಯವನ್ನು ಕ್ಯಾಂಪಿನಲ್ಲಿ ನೆಲೆಸಿರುವ ಚಿತ್ರ ಕಲಾವಿದರು ಹಾಗೂ ಲಾಮ ಕಲಾವಿದರು ಮಾಡುತ್ತಾರೆ. ಇಂಥಹ ಶಿಲ್ಪಗಳು ಬೈಲುಕುಪ್ಪೆಯ ಸ್ವರ್ಣ ದೇವಾಲಯದಲ್ಲಿ ೬೦ ಅಡಿಯ ಭಗವಾನ್ ಸಾಕ್ಯಮುನಿ ಬುದ್ಧ, ೫೮ ಅಡಿಯ ಅಮಿತಾಬ, ಮತ್ತು ಗುರುಪದ್ಮಸಂಭವರ ಶಿಲ್ಪವನ್ನು ನೋಡಬಹುದು ಅದರ ಎದುರಿಗೆ ಚಿನ್ನದಲ್ಲಿ ನಿರ್ಮಿಸಿದ ೩ ಅಡಿಯ ೨ ಸ್ತೂಪ. ಹಾಗೂ ಪ್ರಧಾನ ಮೂರ್ತಿಗಳ ಹಿಂದೆ ಮೇಲಿನ ವಸ್ತು ವಿಷಯಕ್ಕೆ ಸಂಭಂದಿಸಿದ ಎಲ್ಲಾ ಶಿಲ್ಪಗಳು ೩ ರಿಂದ ೪ ಅಡಿಯವರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಇವೆ.

ನಂತರ ತಾರಾದೇವಿ ದೇವಾಲಯದಲ್ಲಿ ೭ ಅಡಿ ಪ್ರಧಾನ ತಾರದೇವಿಯ ಶಿಲ್ಪ ಅದರ ಹಿಂದಿನ ಗೋಡೆಗೆ ಅಳವಡಿಸಿದಂತೆ ೨೧ ತಾರದೇವಿಯ ಶಿಲ್ಪ, ಇವುಗಳು ೪ ಅಡಿ ವಿಗ್ರಹಗಳಾಗಿ ಕಾಣಬಹುದು. ಗುರುಪದ್ಮಸಂಭವ ದೇವಾಲಯದಲ್ಲಿ ಬುದ್ಧನ ಎಂಟು ಅಡಿ, ಮಂಜುಶ್ರೀ, ಪದ್ಮಸಂಭವ, ತಾರದೇವಿ ಅವಲೋಕಿತೇಶ್ವರ ಟಿಬೆಟಿನ ಗುರು ಅಮಿತಾಬ್‌ರವರ ೬ ಅಡಿ ಶಿಲ್ಪಗಳನ್ನು ಕಾಣಬಹುದು. ಈಗೆ ಪ್ರತಿಯೊಂದು ದೇವಾಲಯದಲ್ಲಿ ಶಿಲ್ಪಗಳನ್ನು ಕಾಣಬಹುದು. ಇದರಂತೆ ಮುಂಡಗೋಡದ ಎಲ್ಲಾ ದೇವಾಲಯದಲ್ಲಿ ಇದ್ದು ವಿಶೇಷವಾಗಿ ಒಂದು ಪ್ರಾರ್ಥನ ಮಂದಿರವಾದ ಸಕ್ ಗಾಂಧೀ ನಂಬರ್ ಗೇ ವೆಲ್ಲಿಂಗ್ ನಲ್ಲಿ ೧೭೬೦ ೧x೧ ಅಡಿಯ ಸಣ್ಣ ಮೂರ್ತಿಗಳನ್ನು ನೋಡಬಹುದು.

ಒಡೆಯರ ಪಾಳ್ಯೆ ಹಾಗೂ ಗುರುಪುರ, ಕೊರಮಂಗಲ ದೇವಾಲಯಗಳಲ್ಲಿ ಮೂರ್ತಿ ಶಿಲ್ಪಗಳು ಇಲ್ಲದಿದ್ದು ಇವುಗಳನ್ನು ಈಗ ನಿರ್ಮಿಸಲು ಕೆಲಸಕ್ಕಾಗಿ ಶಿಲ್ಪಗಳ ಬಿಡಿಭಾಗಗಳನ್ನು ತಂದುಕೊಂಡು ಕಲಾವಿದರು ಜೊಡಿಸಿ ಸಿದ್ದಗೊಳಿಸಿದ ನಂತರ ಪ್ರತಿಷ್ಠಾಪಿಸುತ್ತಾರೆ. ಬರಿ ಅಧುನಿಕ ಪ್ಲೋಕ್ಸ್ ಭಿತ್ತಿಚಿತ್ರ ಅಥವಾ ಛಾಯಚಿತ್ರ, ಪಟಚಿತ್ರಕ್ಕೆ ಪೊಜೆಯನ್ನು ನಡೆಸುತ್ತಿದ್ದಾರೆ. ಅವರು ಚಿಕ್ಕ ಶಿಲ್ಪಗಳನ್ನು ರೇಡಿಮೆಡ್ ಹಾಗಿತಂದು ತಮ್ಮ ಮನೆಯಲ್ಲಿ ಪೊಜೆಸುತ್ತಿರುವುದನ್ನು ಕಾಣಬಹುದು.

ಟಿಬೆಟಿಯನ್ನರು ಬಳಸುತ್ತಿದ್ದ ದೊಡ್ಡ ಘಂಟೆಯಿಂದ ಹಿಡಿದು ಚಿಕ್ಕ ಗಾತ್ರದ ಘಂಟೆಗಳ ಮೇಲೆ ವಜ್ರ ಅಕಾರದ ತಾಂತ್ರಿಕ ಬುದ್ದನ ತಲೆ, ತಪಸ್ಸಿಗೆ ಕುಳಿತ ಬುದ್ದ, ಡ್ರಯಾಗಾನ ಚಿತ್ರಗಳೂ ಹೊಂದಿರುವ ಉಬ್ಬು ಲೋಹದ ಮೂರ್ತಿಗಳು ವಿವಿಧ ರೀತಿಯ ನಕ್ಷ ಚಿತ್ರಣಗಳಲ್ಲಿ ಟಿಬೆಟಿಯನ್ನರ ಧರ್ಮ ಪ್ರಚಾರದ ಲಿಪಿಯನ್ನು ಚಿತ್ರಿಸಿರುತ್ತಾರೆ. ಮಂಡಲ ರೂಪದ ತುತುಕಾಸುಗಳನ್ನು ಹಾಗೂ ಸಣ್ಣ ಪ್ರಮಾಣದ ವೀಣೆ ಹಾಗೂ ವಿವಿಧ ರೀತಿಯ ಲೋಹದ ಕರಕುಶಲ ವಸ್ತುಗಳ ಮೇಲೆ ಚಿತ್ರಕಲೆಯನ್ನು ಕಾಣಬಹುದು. ಇವುಗಳೆಲ್ಲವು ಟಿಬೆಟಿಯನ್ನರ ಕರಕುಶಲ ಮಳಿಗೆಯಲ್ಲಿ ದೊರೆಯುತ್ತದೆ. ಮೇಲಿನ ಎಲ್ಲಾ ವಸ್ತುಗಳ ಮೇಲೆ ವರ್ಣ ಲೇಪನವನ್ನು ರಚಿಸಿ ಅವುಗಳ ಮೇಲೆ ಪ್ರಧಾನ ಅರ್ಥಯುತ್ತ ರೇಖೆಗಳಿಂದ ಪೂರ್ಣಗೊಳಿಸುವಂತಹ ಉತ್ತಮ ಕೌಶಲ್ಯವನ್ನು ಇಲ್ಲಿನ ಕಲಾವಿದರು ಹೊಂದಿದ್ದಾರೆ. ಪೂರ್ಣಭಿತ್ತಿಯಾಗುವಂತೆ ಅಲ್ಲದಿದ್ದಂತೆ ಹಾಗೂ ಪೂರ್ಣಲೋಹ ಶಿಲ್ಪದಂತೆಯೇ ಕಾಣದ ಮಧ್ಯಸ್ಥಿಕೆಯಲ್ಲಿ ತಮ್ಮ ಕಲಾಕೃತಿ ಸೌಂದರ್ಯವನ್ನು ಉಳಿಸುವಂತೆ ರಚಿಸಿರುವುದನ್ನು ವಿಶೇಷವಾಗಿ ಕಾಣಬಹುದು.

ಟಿಬೆಟಿಯನ್ ಜನಾಂಗದವರು ಪೂಜೆಯ ಸಂದರ್ಭದಲ್ಲಿ ಬಳಸುವಂತಹ ವಿವಿಧ ಗಾತ್ರದ ಘಂಟೆಗಳ ಮೇಲೆ, ಹಿಡಿಕೆಯ ಕತ್ತಿ, ಗುರಾಣಿಗಳು, ಸಾಮ್ರಾಣಿ ಹೊಗೆ ಹಾಕುವ ಪಾತ್ರೆ, ವಜ್ರ ಆಕಾರದ ತಾಂತ್ರಿಕ ಬುದ್ಧನ ತಲೆ ಇತ್ಯಾದಿ, ಕಬ್ಬಿಣದ ಪೀಠ, ಕಬ್ಬಿಣದ ಗುಂಡುಗಳ ವಿನ್ಯಾಸಕ್ಕೆ ಮೇಲಿನ ವಸ್ತು ವಿಷಯಕ್ಕೆ ಸಂಬಂಧಿಸಿದಂತೆ ಮಿಶ್ರಲೋಹ ಮಾಧ್ಯಮ, ಕಂಚು, ಪಂಚಲೋಹ ಇತ್ಯಾದಿ ಪ್ರಕಾರದ ಎರಕ ಹೊಯ್ದ ಪಾತ್ರೆಗಳು ಮುಂತಾದ ವಸ್ತುಗಳ ಮೇಲೆ ಕೆತ್ತುವ ವಿಧಾನದಿಂದ ರೇಖಾಚಿತ್ರಗಳನ್ನು ರಚಿಸಿಕೊಂಡಿರುತ್ತಾರೆ. ವಿವಿಧ ಮಾದರಿಯ ಖಡ್ಗದ ಹಿಡಿಕೆಗಳನ್ನು ಮತ್ತು ಮುಚ್ಚಳಿಕೆಗಳನ್ನು ಹಾಗೂ ನಾಯಿ, ಸಿಂಹ, ಕಿರಬಾ, ಡ್ರಯಾಗನ್, ಟಗರು, ಮೇಕೆಯಂತಹ ವಿವಿಧ ಚಿತ್ರಗಳನ್ನು ರಚಿಸಿ ಅವುಗಳ ಮೇಲೆ ಕೊರೆದು ಕೆತ್ತಿದ ವಾಸ್ತು ಶಿಲ್ಪಗಳನ್ನು ಕಾಣಬಹುದು. ಇದೇ ರೀತಿ ಗೌತಮ ಬುದ್ಧನ ಹಿಂದಿನ ಪ್ರಭಾವಳಿಯನ್ನು ಕೆತ್ತಲಾಗಿದೆ. ಇದನ್ನು ಕೆತ್ತಲು ಸೂಕ್ಷ್ಮ ಪ್ರಮಾಣದ ಕಡು ಕಬ್ಬಿಣದ ಉಳಿಗಳನ್ನು ಬಳಸಿ ರೇಖೆಯ ಮೇಲೆ ಕುಟ್ಟಿ ಅದಕ್ಕೆ ರಾಳದಂತಹ ಕಪ್ಪು ಬಾರ್‌ನ್ನು

ಬಡಿಸಿರುತ್ತಾರೆ. ಇದರಿಂದ ಕೆತ್ತಿದ ರೇಖೆಗಳು ಪಾತ್ರೆಯ ಮೇಲೆ ಹೊಳೆಯುವಂತೆ ಮಾಡಿರುತ್ತಾರೆ. ಇಂತಹ ಕರಕುಶಲ ಕೆಲಸಗಳು ಹೆಚ್ಚಾಗಿ ಟಿಬೆಟಿಯನ್ ಪ್ರದೇಶದಲ್ಲಿ ಇಂದಿಗೂ ಉಳಿಸಿಕೊಂಡು ಹೋಗುತ್ತಿದ್ದಾರೆ ಎಂದು ಹೇಳುತ್ತಾರೆ. ಇಲ್ಲಿನ ಕಲಾವಿದರು ಇವುಗಳನ್ನು ಮಾರಾಟ ಮಾಡಿ ತಮಗೆ ಬಂದ ಹಣದಿಂದ ವಿವಿಧ ಪರಿಕರಗಳನ್ನು ತಂದು ಮತ್ತೆ ತಯಾರಿಸುವ ಕೆಲಸ ಮತ್ತು ಜೀವನೋಪಾಯ ಎರಡನ್ನು ಕಂಡುಕೊಂಡಿದ್ದಾರೆ.

ಲೋಹದ ಮೇಲಿನ ಚಿತ್ರಗಳು:

೧.೧ ಅವಲೋಕಿತೇಶ್ವರ ಚಿತ್ರ:

ಅಮಿತಾಭನೆಂಬ ಧ್ಯಾನಿ ಬುದ್ಧನ ಸತ್ವದಿಂದ ಹುಟ್ಟಿ ಬಂದ ಬೋಧಿಸತ್ವನಿಗೆ ಈ ಹೆಸರಿದೆ. ಮಹಾಯಾನ ಬೌದ್ಧರ ನಂಬಿಕೆಯಂತೆ ಧ್ಯಾನಿ ಬುದ್ಧರು ತಮ್ಮ ಸತ್ವಗಳಿಂದ ಇಂತಹ ಜಿನ ಪುತ್ರನ್ನು ಅಥವಾ ಬೋಧಿಸತ್ವರನ್ನು ಉತ್ಪಾದಿಸುತ್ತಾರೆ. ಜಗತ್ತನ್ನು ಕರುಣೆಯಿಂದ ಕಾಣುವವನು ಎಂಬುವುದು ಅವಲೋಕಿತೇಶ್ವರ ಎಂಬ ಪದದ ಅರ್ಥ. ಇದು ಅಮಿತಾಭನ ಸಂಭೋಗಕಾಯ. ಇದರ ವರ್ತನೆಯಿಂದಲೇ ಜಗತ್ತಿನಲ್ಲಿ ಗೌತಮ ಬುದ್ಧ ಶಾಕ್ಯಮುನಿಯಾಗಿ ಅವರಿಸುವನೆಂದೂ ಕಲ್ಪನೆ. ಅವಲೋಕಿತೇಶ್ವರನ ಶಕ್ತಿಯಾಗಿ ಶ್ವೇತ ತಾರಾ ಎಂಬ ಸ್ತ್ರೀ ಬುದ್ಧ ರೂಪ ಉಂಟು. ಚೀನಾದಲ್ಲಿ ಮತ್ತು ಜಪಾನಿನಲ್ಲಿ ಕಲ–ಅನ್–ಮಿನ್ ಅಥವಾ ಕ್ವನ್ನೋನ್ ಎಂಬ ಅಭಿದಾನದಿಂದ ಪ್ರಚಲಿತವಾಗಿರುವ ಕರುಣಾದಿ ದೇವತೆ ಈ ಶ್ವೇತ ತಾರೆಯೇ. ಸದ್ಧರ್ಮ ಪುಂಡರೀಕನೆಂಬ ಗ್ರಂಥದ ಒಂದು ಪರಿಚ್ಛೇದವಾದ ಕಾಂಡ ವ್ಯೂಹದಲ್ಲಿ ಅವಲೋಕಿತೇಶ್ವರನ ವರ್ಣನೆ ನಿರೂಪಣೆಗಳಿವೆ. ನಾಲ್ಕನೆಯ ಶತಮಾನದಿಂದ ಈ ದೇವತೆಯ ಕಲ್ಪನೆಯ ಶಿಲ್ಪ ಚಿತ್ರಣವೂ ಬಂದಿದೆ.

ಅವಲೋಕಿತೇಶ್ವರನ ಮುಖ್ಯ ರಸವೇ. ಅವನ ಬೆರಳುಗಳಿಂದ ಹರಿದ ನದಿಗಳು, ನರಕದ ಬೆಂಕಿಯನ್ನೆಲ್ಲ ಆರಿಸಿ ಶೀತಲಗೊಳಿಸುತ್ತವೆಂದೂ, ಅವನ ಪ್ರತಾಪದಿಂದ ನರಕದ ನಿಯಮಕರರಾದ ಕ್ರೂರಗಣಗಳೆಲ್ಲ ಬೆದರಿ ಓಡುತ್ತವೆಂದೂ ನಂಬಿಕೆಯಿದೆ. ಪಾಪಿ ಜನರನ್ನು ಉದ್ಧಾರ ಮಾಡುವ ಸಲುವಾಗಿಯೇ ಅವತರಿಸಿದ ಬೋಧಿಸತ್ವ ಇವನೆಂದೂ ಇದಕ್ಕಾಗಿಯೇ ಓ ಮಸೆಪದ್ಮೇಹಂ ಎಂಬ ಮಂತ್ರವನ್ನು ಧರೆಗೆ ಇಳಿಸಿದನೆಂದೂ ಟಿಬೆಟ್ ಜನರು ನಂಬುತ್ತಾರೆ. ಜಗತ್ತಿನ ಎಲ್ಲ ಪ್ರಾಣಿಗಳನ್ನು ಉದ್ಧರಿಸುತ್ತೇನೆ. ಈ ಪ್ರತಿಜ್ಞೆ ಸುಳ್ಳಾದರೆ ನನ್ನ ತಲೆ ಸೀಳಿ ಹೋಗಲಿ ಎಂಬುದು ಅವಲೋಕಿತೇಶ್ವರನ ಶಪಥವಂತೆ. ಕನ್ನಡ ನಾಡಿನಲ್ಲಿ ಕೂಡ ಲೋಕೇಶ್ವರನೆಂಬ ಹೆಸರಿನಿಂದ ಈ ದೇವತೆ ಪೂಜೆಗೊಳ್ಳುತ್ತಿದ್ದಾನೆ. ಮಂಗಳೂರಿನ ಕರಾವಳಿಯಲ್ಲಿರುವ ದೇವಸ್ಥಾನ ಈ ದೇವತೆಯು ಅಜೆಂತಾದ ಭಿತ್ತಿಚಿತ್ರಗಳಲ್ಲಿ ವಸ್ತು ವಿಷಯವಾಗಿ ಚಿತ್ರಿಸಿರುವುದು ಕಂಡುಬರುತ್ತದೆ. ಹಾಗೂ ಟಿಬೆಟಿನ ನೆಲೆಗಳಲ್ಲಿ ಹೆಚ್ಚಾಗಿ ಚಿತ್ರಿಸುವ ಮತ್ತು ಪೂಜಿಸುವ ದೇವತೆ ಆಗಿದೆ.

ಈ ಚಿತ್ರದಲ್ಲಿ ಬಂದ ಅಡಿಯ ಅವಲೋಕಿತೇಶ್ವರ ಕಂಚಿನ ವಿಗ್ರಹದ ಮೇಲೆ ಬಿಳಿ ವರ್ಣವನ್ನು ಲೇಪಿಸಿ ನಂತರ ಟಿಬೆಟಿನ ವಿಶಿಷ್ಟ ಮಾದರಿಯ ಚಿನ್ನದ ವರ್ಣವನ್ನು ಲೇಪಿಸಿದ್ದು ಹಿಂದಿನ ಪ್ರಭಾವಳಿಯನ್ನು ಬಿಳಿ ಬಣ್ಣದಲ್ಲಿಯೇ ಇರುವುದನ್ನು ಕಾಣಬಹುದು. ಅವಲೋಕಿತೇಶ್ವರನನ್ನು ಲಂಭವಾಗಿ ನಿಂತಿದ್ದು, ಎರಡು ಕೈಯಲ್ಲಿ ವಜ್ರವನ್ನು ಇಡಿದಿದ್ದು, ತಲೆಯ ಮೇಲೆ ಟಿಬೆಟಿನ ಮಾದರಿಯ ಕಿರೀಟ ಅವಲೋಕಿತೇಶ್ವರನ ಬಲ ಮತ್ತು ಎಡ ಭಾಗದಲ್ಲಿ ತಾವರೆಯ ಹೂವಿನ ಬಳ್ಳಿಯ ಮೇಲೆ ಟಿಬೆಟಿನ

ಲೋಹದ ಮೇಲಿನ ಚಿತ್ರಗಳು





ಅವಲೋಕಿತೇಶ್ವರ



ದ್ವಾರ ಬಾಗಿಲಿನ ಚಿಲುಕ



ಬೌದ್ಧ ಮುನಿ



ಸಿದ್ಧಗೊಳ್ಳುತ್ತಿರುವ ಮೈತ್ರೇಯ ಶಿಲ್ಪ

ಲೋಹದ ಮೇಲಿನ ಚಿತ್ರಕಲೆ





■ ಯಮಂತಕ



■ ಬುದ್ಧ ಶಿಲ್ಪ



■ ಮಂಜು ಶ್ರೀ

ಮಿಶ್ರ ಹಾಗೂ ಸ್ತೂಪವನ್ನು ಇಟ್ಟಿರುವಂತೆ, ಪೀಠದ ಮುಂದಿನ ಪಾದಿಕೆಯ ಮೇಲೆ ನಿಂತಿರುವಂತಹ ವಿಗ್ರಹಕ್ಕೆ ಚಿನ್ನದ ವರ್ಣದಿಂದ ಲೇಪಿಸಿರುವುದನ್ನು ಗಮನಿಸಬಹುದು.

೧.೨ ದ್ವಾರ ಬಾಗಿಲಿನ ಚಿಲುಕ ಚಿತ್ರ:

ದೇವಾಲಯದ ಬಾಗಿಲನ್ನು ತೆರೆಯಲು ದೊಡ್ಡದಾದ ಚಿಲುಕವನ್ನು ಚಿತ್ರದಲ್ಲಿ ತೋರಿಸಿದಂತೆ ಚಿನ್ನದ ವರ್ಣ ಲೇಪನದಿಂದ ಪೂರ್ಣಗೊಳಿಸಿರುವುದನ್ನು ಕಾಣಬಹುದು. ಚಿಲುಕದ ಹಿಡಿಕೆಯನ್ನು ವೃತ್ತಾಕಾರದಲ್ಲಿ ಎರಡು ಟಿಬೆಟಿನ ಕಿರಬಗಳು ನುಂಗುತ್ತಿರುವಂತೆ ಬಾಹ್ಯಾಕಾರವು ಮೀನಿನ ರಚನೆಯಂತಿದ್ದು ತಯಾರಿಸಿದ್ದು, ಹಿನ್ನೆಲೆಯು ದೊಡ್ಡದಾದ ವೃತ್ತವು ಅನೇಕ ಟಿಬೆಟಿನ ೮ ಶ್ರೇಷ್ಠ ಚಿನ್ಹೆಗಳನ್ನು ವೃತ್ತದ ಸುತ್ತಲು ಇದ್ದೂ ಅದರ ಬಲ ಮತ್ತು ಎಡ ಭಾಗದಲ್ಲಿ ಅನೇಕ ಹೂ ಬಳ್ಳಿಯ ಸರಳ ನಕ್ಷ ಚಿತ್ರಗಳನ್ನು ಉಬ್ಬು ಶಿಲ್ಪ ಮಾದರಿಯಲ್ಲಿ ಕಾಣಬಹುದು. ಇವುಗಳ ಮೇಲೆ ಸಂಪೂರ್ಣವಾಗಿ ಚಿನ್ನದ ವರ್ಣವನ್ನು ಲೇಪಿಸಿರುವುದನ್ನು ಚಿತ್ರದಲ್ಲಿ ಕಾಣಬಹುದು. ಇಂತಹ ಅನೇಕ ಬಾಗಿಲುಗಳನ್ನು ಹೆಚ್ಚಾಗಿ ಟಿಬೆಟಿಯನ್ನರ ನೆಲೆಗಳಲ್ಲಿ ಕಾಣಬಹುದು.

೧.೩ ಸಿದ್ಧಗೊಳ್ಳುತ್ತಿರುವ ಮೈತ್ರೇಯ ಶಿಲ್ಪದ ಚಿತ್ರ:

ಮೈತ್ರೇಯ ಶಿಲ್ಪವನ್ನು ಲೋಹದ ತಗಡಿನಿಂದ ಟೊಳ್ಳಾಗಿ ಹೀಗೆ ನಿರ್ಮಿಸುತ್ತಾರೆ. ಎಂಬುದನ್ನು ಸಂಶೋಧಕರು ಹಿಡಿದು ತೋರಿಸುವಂತಹ ಚಿತ್ರವನ್ನು ನೋಡಿ ಗಮನಿಸಬಹುದು. ಕಂಚಿನ ಲೋಹದ ತಗಡಿನಿಂದ ಬಿಡಿ ಬಿಡಿ ಭಾಗವನ್ನು ಹೇಗೆ ಬೆಸೆದು ಬೃಹತ್ ಮೂರ್ತಿಯನ್ನು ನಿರ್ಮಿಸಿದ್ದಾರೆ. ನಂತರ ಅದಕ್ಕೆ ಬಿಳಿಯ ಪ್ರೇಮರ್ ಒಡೆದು ನಂತರ ಟಿಬೆಟಿಯನ್ನರದೇಯಾದ ವಿಶಿಷ್ಠ ಚಿನ್ನದ ಬಣ್ಣವನ್ನು ಬಳಸುತ್ತಾ ಹಾಗೂ ಅಗತ್ಯಕ್ಕೆ ತಕ್ಕಂತೆ ಇತರ ವರ್ಣಗಳನ್ನು ಪಕ್ಕದ ಬುದ್ಧ ಮುನಿ ಶಿಲ್ಪದಂತೆ ಶೃಂಗರಿಸುವುದನ್ನು ಚಿತ್ರದಲ್ಲಿ ಕಾಣಬಹುದು. ನಂತರ ಹಿಂದಿನ ಪ್ರಭಾವಳಿಯನ್ನು ಚಂದ್ರನ ಸುತ್ತಣ ಸರಳ ನಕ್ಷಾ ಚಿತ್ರವನ್ನು ಚಿನ್ನದ ವರ್ಣದಿಂದ ಲೇಪಿಸಿದ್ದು, ಒಳಭಾಗವನ್ನು ಹಾಗೆ ಕಾಲಿ ಬಿಟ್ಟಿರುವುದನ್ನು ಚಿತ್ರದಲ್ಲಿ ನೋಡಬಹುದು. ಇದರಿಂದ ಯಾವ ರೀತಿ ವರ್ಣಗಾರಿಕೆಯನ್ನು ಮಾಡುತ್ತಾರೆ ಎಂಬುದನ್ನು ಇಲ್ಲಿನ ಚಿತ್ರಗಳಿಂದ ತಿಳಿಯಬಹುದು. ಇವುಗಳಲ್ಲಿ ಬಳಸುವ ಬಣ್ಣಗಳು ರಾಸಾಯನಿಕ ಬಣ್ಣಗಳಾಗಿವೆ.

೨. ಸಿಮೆಂಟ್ ಮಾಧ್ಯಮದ ಚಿತ್ರಕಲೆ

ಟಿಬೆಟಿಯನ್ನರು ತಮ್ಮ ಸಾಂಸ್ಕೃತಿಕ ಪರಿಸರದಲ್ಲಿ ನಿರ್ಮಿಸಿಕೊಂಡ ದೇವಾಲಯ ಸ್ತೂಪ, ಬೌದ್ಧವಿಹಾರಗಳಲ್ಲಿ ಸಿಮೆಂಟ್ ಮಾಧ್ಯಮದಲ್ಲಿ ಶಿಲ್ಪ ಹಾಗೂ ಉಬ್ಬು ಶಿಲ್ಪಗಳ ಮೇಲಿನ ಚಿತ್ರಕಲೆಯನ್ನು ಅಭ್ಯಾಸಿದರ ದೇವಾಲಯದ ಲೋಹ ಮೂರ್ತಿಯ ಹಿಂಬದಿಯ ಪ್ರಭಾವಳಿಯಲ್ಲಿನ ಮೇಲೆ ದೇವಾಲಯದ ಹೊರ ಗೋಡೆಯ ದ್ವಾರಬಾಗಿಲುಗಳ ಮೇಲೆ ಕಂಬದ ಮೇಲೆ ಭಾಗದ ಪಟ್ಟಿಕೆಯ ಮೇಲೆ, ದೇವಾಲಯದ ಗೋಪುರದ ಮೇಲಿನ ಎಲ್ಲಾ ಭಾಗಗಳಲ್ಲಿ ಶಿಲ್ಪ ಹಾಗೂ ಉಬ್ಬು ಶಿಲ್ಪದ ಮೇಲೆ ಇದೆ ರೀತಿ ದ್ವಾರಬಾಗಿಲಿನ ಮೇಲೆಲ್ಲ ಸಿಮೆಂಟ್ ಮಾಧ್ಯಮದಿಂದ ರಚಿಸಿದ ಉಬ್ಬು ಶಿಲ್ಪದ ಮೇಲೆ ಅನೇಕ ವರ್ಣಮಯವಾದ ಚಿತ್ರಕಲೆ ಹಾಗೂ ಬಣ್ಣಗಳ ಬಳಕೆಯನ್ನು ಕಾಣಬಹುದು.

ಮೇಲಿನವುಗಳ ಮೇಲೆ ಜ್ಯಾಮಿತಿಯ ಅಕಾರದ ನೈಸರ್ಗಿಕ ಹಾಗೂ ಸರಳಗ್ಯೆ ಇತ್ಯಾದಿ ಅಕಾರದಲ್ಲಿ ನಕ್ಷಾ ಚಿತ್ರಗಳನ್ನು ಎಲೆಗಳು ಹೂ, ಬಳ್ಳಿ, ಹಣ್ಣುಗಳು, ಮೋಡಗಳು, ಬೆಂಕೆಯ ಜ್ವಾಲೆ, ಬೆಟ್ಟ, ನೀರು, ಸೂರ್ಯ, ಚಂದ್ರ, ಟಿಬೆಟಿಯನ್ನರ ಶ್ರೇಷ್ಠ ೮ ಚಿನ್ನೆಗಳನ್ನು ಅಧಾರಿಸಿದ ನಕ್ಷ ಚಿತ್ರಗಳನ್ನು ಚಿತ್ರಕಲೆಯಿಂದ ಶೃಂಗರಿಸಿ ಇವುಗಳ ಜೊತೆಗೆ ಟಿಬೆಟಿಯನ್ ಡ್ರಯಾಗನ್ ಚಿತ್ರ, ಮೀನಿನಾಕಾರದ ಚಿತ್ರಗಳು, ಗರುಡ ಮುಖದ ರಾಕ್ಷಸ, ಕೀರ್ತಿಮುಖ, ತುನು ಪಾಂಜೀ, ಎಂಬ ಉಬ್ಬು ಶಿಲ್ಪದ ಭಿತ್ತಿಚಿತ್ರಗಳನ್ನೂ ಹೊಂದಿದ ದೃಶ್ಯದ ಶಿಲ್ಪ, ಚಿತ್ರಕಲೆ, ಪ್ರಭಾವಳಿಯ ಮೇಲೆ ಗರುಡ ಅವತಾರದ ದುತಕ, ಎಡೆ ಮತ್ತು ಬಲ ಭಾಗದಲ್ಲಿ ರೆಕ್ಕೆ ಬಿಚ್ಚಿ ಹಾರಾಡುವ ಸೇವಕಿಯರು, ಬುದ್ಧ, ಮಂಜುಶ್ರೀ, ತಾರಾದೇವಿಯಂತಹ ವಸ್ತುವಿಷಯಗಳನ್ನು ಆಧರಸಿದ ಚಿತ್ರಗಳನ್ನು ಪ್ರಮುಖವಾಗಿ ಕಾಣಬಹುದು ಹಾಗೂ ಇವುಗಳ ಜೊತೆಗೆ ಈ ಟಿಬೆಟಿಯನ್ನರ ಭಾಷೆಯ ಅಕ್ಷರ ಲಿಪಿಗಳನ್ನು ಕಾಣಬಹುದು.

ಇಂಥಹ ಚಿತ್ರಕಲೆ ಬೈಲುಕುಪ್ಪೆಯ ಪರಿಸರದಲ್ಲಿ ಹೆಚ್ಚಾಗಿ ಕಂಡುಬಂದಿದ್ದು. ಸ್ವರ್ಣದೇವಾಲಯದ ಪ್ರಧಾನ ಮೂರ್ತಿಗಳ ಹಿಂಭಾಗದಲ್ಲಿನ ಪ್ರಭಾವಳಿ, ಪದ್ಮಸಂಭವ ಅರಮನೆಯ ಗೋಪುರದಲ್ಲಿ ವಿವಿಧ ದೇವತೆಗಳು ಹಾಗೂ ಯಕ್ಷ-ಯಕ್ಷಿಯರ ತಾಂತ್ರಿಕ ಶಿಲ್ಪ ಹಾಗೂ ಉಬ್ಬು ಶಿಲ್ಪಗಳನ್ನು ಚಿತ್ರದಲ್ಲಿ ಇರವಂತೆ ಕಂಡುಬರುತ್ತವೆ. ತಾರಾದೇವಿಯ ದ್ವಾರಬಾಗಿಲಿನ ಎಡ ಮತ್ತು ಬಲಭಾಗದಲ್ಲಿ ಭಿತ್ತಿಚಿತ್ರದ ಅಳತೆಯಲ್ಲಿನ ಸಿಮೆಂಟ್ ಉಬ್ಬು ಶಿಲ್ಪ, ಮಂಜುಶ್ರೀಯ ದೇವಾಲಯದ ೭ ಪ್ರಧಾನ ಮೂರ್ತಿಯನ್ನು ಸಿಮೆಂಟ್ ಉಬ್ಬು ಚಿತ್ರಕಲೆಯನ್ನು ಹಾಗೂ ಟಿಬೆಟಿನ ಪರಿಸರದ ದೇವಾಲಯದ ದ್ವಾರಬಾಗಿಲುಗಳ ಮೇಲೆ ಕಂಡುಬರುತ್ತದೆ.

ಮುಂಡಗೋಡ ಪರಿಸರದಲ್ಲಿ ೨ನೇ ಕ್ಯಾಂಪಿನಲ್ಲಿರುವ ಲೋಸೋಲಾ ದೇವಾಲಯದ ದ್ವಾರಬಾಗಿಲಿನ ಕಂಬಗಳ ಮೇಲಿನ ಪಟ್ಟಿಕೆಗಳಲ್ಲಿ ನಕ್ಷಚಿತ್ರಣದ ಉಬ್ಬು ಶಿಲ್ಪಗಳ ಮೇಲೆ ಹಾಗೂ ದ್ವಾರಬಾಗಿಲುಗಳ ಮೇಲೆ ನಂತರ ಈ ಪರಿಸರದ ದೇವಾಲಯಗಳ ದ್ವಾರಬಾಗಿಲಿನ ಅಲಂಕೃತವಾದ ಉಬ್ಬು ಶಿಲ್ಪಗಳಲ್ಲಿ ಇಂಥಹ ಚಿತ್ರಕಲೆಯನ್ನು ಕಾಣಬಹುದು.

ಉಳಿದ ಪರಿಸರಗಳಾದ ಗುರುಪುರ, ಒಡೆಯರಪಾಳ್ಯೆ, ಕೊರಮಂಗಲದಲ್ಲಿ ಬರುವ ದೇವಾಲಯ ದ್ವಾರಬಾಗಿಲು ಹಾಗೂ ಕಂಬಗಳ ಪಟ್ಟಿಕೆಯಲ್ಲಿ ಅಲಂಕೃತ ನಕ್ಷಾಚಿತ್ರಗಳಲ್ಲಿ ಸಿಮೆಂಟ್ ಮಾಧ್ಯಮದ ಚಿತ್ರಕಲೆಗಳನ್ನು ಕಾಣಬಹುದು. ಹೆಚ್ಚಿನ ವಿವರಗಳನ್ನು ಛಾಯ ಚಿತ್ರವನ್ನು ವಿವರಿಸುವ ಸಂದರ್ಭದಲ್ಲಿ ದೊರೆಯುತ್ತದೆ.

ಟಿಬೆಟಿನ ಐದು ನೆಲೆಗಳಲ್ಲಿನ ಒಟ್ಟು ೩೭ ಸ್ತೂಪಗಳು ವರ್ಣ ಲೇಪಿಸಿದ್ದು. ಅವುಗಳ ದುಂಡಾದ ಗೂಡಿನ ಸುತ್ತಲಿನಲ್ಲಿ ಬರುವ ನಕ್ಷಚಿತ್ರಗಳ ಉಬ್ಬು ಶಿಲ್ಪಗಳ ಮೇಲಿನ ಚಿತ್ರಕಲೆಯನ್ನು ವಿಶೇಷವಾಗಿ ಮೇಲಿನ ವಸ್ತುವಿಷಯಗಳಡಿಯಲ್ಲಿ ರೇಖಾ ಪ್ರಧಾನ ಹಾಗೂ ವರ್ಣ ಪ್ರಧಾನ ಕಲಾಕೃತಿಯ ೨ಡಿ ಚಿತ್ರಕಲೆಯನ್ನು ಕಾಣಬಹುದು. ಇಲ್ಲಿನ ವೈವಿಧ್ಯೆತೆಯ ವರ್ಣ ವಿನ್ಯಾಸವು ಸ್ಪಷ್ಟವಾಗಿ ಕಂಡುಬರುತ್ತದೆ. ಇವುಗಳೆಲ್ಲವು ಬೌದ್ಧ ಧರ್ಮದ ತತ್ವಗಳ ಮಾದರಿಯಾಗಿ ಅಧ್ಯಾಯನಕ್ಕೆ ಒಳಪಡಿಸಲಾಗಿದೆ.

ಟಿಬೆಟಿಯನ್ ದ್ವಾರಬಾಗಿಲನ್ನು ಸಿಮೆಂಟ್ ಮಾಧ್ಯಮದಲ್ಲಿ ಟಿಬೆಟ್ ವಸ್ತು ಶಾಸ್ತ್ರಕ್ಕೆ ಸಂಬಂಧಿಸಿದಂತೆ ರಚನೆ ಮಾಡಲಾಗಿದೆ. ಇದರಲ್ಲಿ ವಿವಿಧ ವಿನ್ಯಾಸ ನಕ್ಷೆಗಳಿವೆ. ಪಟ್ಟಿಕೆ, ಗೋಪುರ, ಕಂಬಗಳ ಮೇಲೆ ಜ್ಯಾಮಿತಿಕ, ನೈಸರ್ಗಿಕ ಹಾಗೂ ಪ್ರಾಕೃತಿಕ ನಕ್ಷೆಗಳನ್ನು ಉಬ್ಬುಶಿಲ್ಪಗಳನ್ನು ರಚಿಸಿದ್ದಾರೆ. ಇವುಗಳ

ಮೇಲೆ ಕಲಾವಿದರು ಬಾಹ್ಯ ರೇಖೆಗಳನ್ನು ಎಳೆದುಕೋಡು ರಾಸಾಯನಿಕ ಬಣ್ಣಗಳಿಂದ ಡಿಸ್ಟೆಂಪರ್, ಪ್ಲಾಸ್ಟಿಕ್ ಎಮಲ್ಸನ್, ಸೈನರ್ ಅನೇಕ ದ್ರಾವಕ ಬಣ್ಣಗಳು ಮತ್ತು ಚಿನ್ನದ ಎಣ್ಣೆ ಬಣ್ಣಗಳನ್ನು ಬಳಸಿ ಎತ್ತರವಾದ ಗೋಪುರದಿಂದ ಒಂದು ಕಡೆಯಿಂದ ವಸ್ತು ವಿಷಯಕ್ಕೆ ಸಂಬಂಧಿಸಿದಂತೆ ಹಚ್ಚಿಕೊಂಡು ಬರಲಾಗಿದೆ. ಬಣ್ಣವನ್ನು ಹಚ್ಚಲು ಸಾಮಾನ್ಯವಾಗಿ ದೂರೆಂಬ ಕುಂಚಗಳನ್ನೇ ಬಳಸಿಕೊಂಡು ನಕ್ಷೆ ಬಣ್ಣಕ್ಕೆ ಒಬ್ಬ ಕಲಾವಿದ, ಮೂರ್ತಿ ಶಿಲ್ಪಕ್ಕೆ ಒಬ್ಬ ಹಾಗೂ ಸಾಮಾನ್ಯ ಪ್ರದೇಶಗಳಿಗೆ ಒಬ್ಬ ಬಣ್ಣ ಹಚ್ಚುವಂತಹ ಕಾರ್ಯವನ್ನು ಮಾಡುತ್ತಾರೆ. ಇದರಲ್ಲಿ ಒಬ್ಬ ಹಿರಿಯ ಕಲಾವಿದರ ಮಾರ್ಗದರ್ಶನದಲ್ಲಿ ನೆರವೇರುತ್ತದೆ.

ಸಿಮೆಂಟ್ ಮಾಧ್ಯಮದ ಚಿತ್ರಗಳು

೨.೧ ಬೌದ್ಧಿಕ ಬೆಳವಣಿಗೆ ದೃಶ್ಯ

ಬೌದ್ಧಿಕ ಬೆಳವಣಿಗೆಯ ದೃಶ್ಯವನ್ನು ಸಿಮೆಂಟಿನ ಉಬ್ಬು ಶಿಲ್ಪವಾಗಿ ರಚಿಸಿ ಚಿತ್ರದಲ್ಲಿ ತಿಳಿ ಕಪ್ಪು ಅನೆಯ ಮೇಲೆ ಕಂದು ವರ್ಣದ ಮಂಗ ಕುಳಿತಿದ್ದು. ಮಂಗನ ಮೇಲೆ ಬಿಳಿವರ್ಣದ ಮೊಲ, ಮೊಲದ ಮೇಲೆ ಹಳದಿ, ಕೆಂಪು, ಹಸಿರು, ನೀಲಿ ವರ್ಣ ಮಿಶ್ರಣದಿಂದ ಹಣ್ಣನ್ನು ತಿನ್ನಲು ಪ್ರಯತ್ತಿಸುತ್ತಿರುವುವಂತ ಪಕ್ಷಿಯ ಚಿತ್ರ ಹಾಗೂ ಪಕ್ಕದಲ್ಲಿ ಮರ, ಬೆಟ್ಟ, ಇಳಿಜಾರು ಕಾಲುವೆ ಹಿಂದಿನ ನಿಸರ್ಗದ ದೃಶ್ಯವಾಗಿದ್ದು, ಆಕಾಶದಲ್ಲಿ ಹಾರಾಡುತ್ತಿರುವ ಬಿಳಿ ಮೋಡ ತಿಳಿ ನೀಲಿ ಆಕಾಶ ಇರುವಂತಹ ಚಿತ್ರವನ್ನು ರಚಿಸಿ ನಂತರ ಚಿತ್ರದಲ್ಲಿ ನಿಸರ್ಗದ ಎಲ್ಲಾ ಚಿತ್ರಗಳನ್ನು ಸರಳ ಗೈ ನಕ್ಷಾಚಿತ್ರಣಕ್ಕೆ ಹೊಲುವಂತೆ ಅಕಾರವನ್ನು ರಚಿಸಿದ್ದಾರೆ. ಒಟ್ಟರೆ ಚಿತ್ರದ ವರ್ಣ ಸಂಯೋಜನೆಯಲ್ಲಿ ಹಸಿರು ಹಾಗೂ ನೀಲಿ ಬಣ್ಣವು ಪ್ರಧಾನವಾಗಿದೆ. ಉತ್ತಮ ಸಂಯೋಜನೆಯ ಸಿಮೆಂಟ್ ಉಬ್ಬು ಶಿಲ್ಪ ಹಾಗೂ ಭಿತ್ತಿಯ ವರ್ಣಗಾರಿಕೆಯು ಗಾಢವರ್ಣದಿಂದ ಲೇಪಿಸಿರುವಂತೆ ಕಂಡುಬರುತ್ತದೆ.

೨.೨ ತನು ಪಂಜೀ ಚಿತ್ರ

ಚಿತ್ರದಲ್ಲಿನ ಉಬ್ಬು ಶಿಲ್ಪವು ಪ್ರಧಾನವಾಗಿ ತನು ಪಂಜೀ ಮುನಿಯು ನಿಸರ್ಗದಲ್ಲಿ ಕುಳಿತು ಚಿಂಕೆಗೆ ಹಣ್ಣು ತಿನ್ನಿಸುತಿರುವ ಚಿತ್ರವನ್ನು ಸಂಯೋಜಿಸಲಾಗಿದೆ. ತನು ಪಂಜೀಯನ್ನು ಕಂದು ಗೆಂಪು ಬಣ್ಣದವರಾಗಿದ್ದು. ಮುಕ್ಕಾಲುಭಾಗ ಮೂಖ ಕಾಣುವಂತೆ ಸೂಕಿನ ಮುಖ ಉದ್ದವಾದ ಬಿಳಿಯ ಗಡ್ಡವನ್ನು ಹೊಂದಿದ್ದು ಕೆಂಪು ಪ್ರಧಾನ ವರ್ಣದ ನಿಲುವಂಗಿ ಅದರ ಮೇಲೆ ನೀಲಿ ಪ್ರಧಾನ ಒದುಕೆಯನ್ನು ಒದ್ದಿಕೊಂಡು ಕುಳಿತಿದ್ದು. ಬಟ್ಟೆಯ ಮೇಲೆ ಅನೇಕ ರೇಷ್ಮೆ ಮತ್ತು ಚಿನ್ನದ ಬಣ್ಣದ ನಕ್ಷಾಚಿತ್ರ ಬಳಗೊಂಡಿದ್ದು. ಕಾಲಿಗೆ ಹಸಿರು ಬೂಟು ಧರಿಸಿದ್ದಾರೆ. ಪಕ್ಕದಲ್ಲಿ ದಟ್ಟ ಹಳದಿ ಬಣ್ಣದ ಜಿಂಕೆಯ ಮೇಲೆ ಬಲಕೈಯಿಂದ ಜಿಂಕೆಯ ಕತ್ತನ್ನು ಸವರುತ್ತಿದ್ದು. ಚಿಂಕೆಗೆ ಎಡಗೈಯಲ್ಲಿ ಹಣ್ಣು ನೀಡುತ್ತಿದ್ದಾರೆ, ಹಸಿರು ದಿಬ್ಬದ ಮೇಲೆ ಕುಳಿತಿದ್ದು ಹರಬದಿಯಲ್ಲಿ ದಟ್ಟ ಕಾವಿ ಬಣ್ಣದ ಗಿಡವು ಅನೇಕ ಹಸಿರು ಎಲೆಗಳ ಗುಚ್ಚವನ್ನು ಹೊಂದಿದ್ದು ತಿಳಿ ಹಸಿರು ಕೆಂಪು, ಕೆಸರಿ ಬಣ್ಣದ ನಾಲ್ಕು ಹಣ್ಣುಗಳು ಹೊಂದಿರುವಂತೆ ೮ ಗುಚ್ಚವನ್ನು ಉಬ್ಬುಶಿಲ್ಪಿ ಚಿತ್ರಗಳಿಂದ ನಿರ್ಮಿಸಿದ್ದಾರೆ. ತನು ಪಂಜಿ 'ಕೆಳಭಾಗದಲ್ಲಿ ತಿಳಿ ಹಳದಿ ಪ್ರಧಾನ ಎರಡು ಕೊಕ್ಕರೆ ಇದ್ದು ಒಂದು ನೀರು ಕುಡಿಯುವಂತೇ ಮತ್ತೊಂದು ನೀರಿನಲ್ಲಿ ಮೀನನ್ನು ವಿಕ್ಷಿಸುವಂತೆ ಚಿತ್ರಸಿದ್ದಾರೆ.

ಹಿನ್ನೆಲೆಯ ಬೆಟ್ಟದಲ್ಲಿ ನೀರಿನ ಎರಡು ಝರಿಗಳು ಹರಿದು ಬರುತ್ತಿರುವುದನ್ನು ನೀಲಿ ವರ್ಣದಿಂದ, ಬೆಟ್ಟಗಳನ್ನು ತಿಳಿ ಹಸಿರು ವರ್ಣದಿಂದ ಹಾಗೂ ಅಕಾಶವನ್ನು ದಟ್ಟ ನೀಲಿ ಯಿಂದ ತಿಳಿ ನೀಲಿಯ ಮಿಶ್ರಣದಲ್ಲಿ ಪುರ್ಣಗೊಳಿಸಿದ್ದು, ಕೆಂಪು, ಬಿಳಿ, ಕಂದು ಮಿಶ್ರಿತ ಹಾರಾಡುವ ಆಕಾಶವನ್ನು ಚಿತ್ರಸಿರುವುದನ್ನು ಚಿತ್ರದಲ್ಲಿ ಕಾಣಬಹುದು ಕೆಲವಂದು ಚಿಕ್ಕ ಚಿಕ್ಕ ಗಿಡಗಳನ್ನು ಹೊಂದಿದ್ದು ಉತ್ತಮವಾದ ಸಂಯೋಜನೆಯನ್ನು ಹೊಂದಿದೆ. ಗಾಢವರ್ಣಗಳ ಬಳಕೆಯನ್ನು ವಿಶಿಷ್ಟಾವಾಗಿ ಗಮನಿಸಬಹುದು.

೨.೩ ಪ್ರಭಾವಳಿಯ ಮೇಲಿನ ಚಿತ್ರಗಳು


ಈ ಚಿತ್ರದಲ್ಲಿ ಪ್ರಧಾನ ಚಿನ್ನ ಲೇಪನದ ಬುದ್ಧನ ಮೂರ್ತಿಯ ಹಿಂಭಾಗದಲ್ಲಿ ಕನ್ನಡದ “೧” ಸಂಖ್ಯೆಯ ಅಕಾರದಲ್ಲಿ ಇರುವ ಪ್ರಭಾವಳಿಯ ಮೇಲಿನ ಸಿಮೆಂಟ್ ಮಾಧ್ಯಮದ ಉಬ್ಬು ಶಿಲ್ಪದ ಮೇಲಿನ ಭಾಗದಲ್ಲಿ ಗರುಡ ಮುತಿಯನ್ನು, ರೆಕ್ಕೆಯನ್ನು, ಕಾಲನ್ನು ಹೊಂದಿದ್ದ ದೇಹ ಮಾತ್ರ ಹೆಣ್ಣಿನ ಅಕಾರದಲ್ಲಿ ಇದ್ದು, ಕಂದು ಬಣ್ಣದ ದೇಹ, ಹಸಿರು ಪ್ರಧಾನ ರೆಕ್ಕೆ ನಡಕ್ಕಿ ಹಸಿರು ಪ್ರಧಾನ ಬಟ್ಟೆಯನ್ನು ತೊಟಿದ್ದು ಬಲ ಗೈಯಲ್ಲಿ ನೀಲಿ ವರ್ಣ ಹಣ್ಣು ,ಎಡ ಗೈಯಲ್ಲಿ ಅಭಯ ಹಸ್ತ ತೂರುತ್ತಿದು, ತೆಲೆಯ ಹಿಂಬದಿಯಲ್ಲಿ ಕೆಂಪು ವೃತ್ತದ ಪ್ರಭಾವಳಿಯ ಇದೆ. ಇದರ ತಳಕೆ ಹೊದಂತೆ ನೀಲಿ ಮುತ್ತನ ಸೊಂಡಳಿನಲ್ಲಿ ಇಡಿದುಕೊಂಡತ್ತಹ ಟಿಬೆಟಿನ ಶೈಲಿಯ ವ್ಯಾಳಿಯ ಯಂತಿರುವ ಪ್ರಾಣಿಯನ್ನು ಕಾಕಿ ವರ್ಣ ಪ್ರಧಾನ ದೇಹ ಅದರ ಮೇಲೆ ಸಣ್ಣ ಸಣ್ಣ ಕಂದು ಕಪ್ಪು ಚುಕ್ಕಿಗಳನ್ನು ಅಲಂಕೃತವಾಗಿ ಜೊಡಿಸಿದಂತೇ ಬಾಲವನ್ನು ಬಿಳಿ ಭಾಗಕ್ಕೆ ಬರುವಂತ ವರ್ಣ ಲೇಪನ ಮಾಡಿರುವುದನ್ನು ಕಾಣಬಹುದು. ಎಡ ಮತ್ತು ಬಲ ಬದಿಯಲ್ಲಿ ಇವು ವಿಶೇಷವಾಗಿದ್ದು ನಂತರ ಹಸಿರು ಪಟ್ಟಿಕೆ ಅದರ ಸುತ್ತಲು ಚಿನ್ನದ ವರ್ಣದ ಪಟ್ಟಿಕೆ ಹಿಂಬದಿಯನ್ನು ಅನೇಕ ಅಲಂಕೃತ ಹೂ ಬಳ್ಳಿಯ ನಕ್ಷ ಚಿತ್ತಗಳು ಹಾಗೂ ಸಂಪೂರ್ಣ ಹಿನ್ನೆಲೆಯನ್ನು ಕೆಲವು ವರ್ಣದಿಂದ ಪೂರ್ಣಗಳಿಸಿದಂತಹ ವರ್ಣ ಸಂಯೋಜನೆಯನ್ನು ಕಾಣಬಹುದು.

ವಿಶೇಷವಾಗಿ ರಾಕ್ಷಸಿಯ ಬಲ ಮತ್ತು ಎಡ ಭಾಗದಲ್ಲಿ ಚಿನ್ನದ ವರ್ಣದ ಅಲಂಕಾರಿಕ ಸುರುಳಿಯ ನಕ್ಷಾ ಚಿತ್ರವು ವಿಶೇಷವಾಗಿ ಬಲ ಮತ್ತು ಎಡಭಾಗದಲ್ಲಿ ಸಂಪೂರ್ಣವಾದ ಬುದ್ಧನ ತಲೆಯ ಭಾಗದ ಹಿನ್ನೆಲೆಯನ್ನು ದಟ್ಟ ಹಸಿರು ಅದರ ಸುತ್ತ ಚಿನ್ನದ ಬಣ್ಣದ ಪಟ್ಟಿಕೆಯ ನಕ್ಷೆ ಅದರ ಬಳಭಾಗದಲ್ಲಿ ವಿವಿಧ ಬಣ್ಣದ ಮುತ್ತುಗಳನ್ನು ಕಾಣಬಹುದು, ಅದರಂತೆ ಪ್ರಭಾವಳಿಯ ಒಳಭಾಗವು ದಟ್ಟ ನೀಲಿ ವರ್ಣವನ್ನು ಲೇಪಿಸಿದು ಸುತ್ತಲಿನ ವೃತ್ತಕ್ಕೆ ಚಿನ್ನದ ನಕ್ಷೆಗಳಿಂದ ಪೂರ್ಣಗೊಳಿಸಿ ಉತ್ತಮವಾದ ವರ್ಣ ಸಂಯೋಜನೆಯನ್ನು ಒಳಗೊಂಡಿದೆ ಎಂದು ಚಿತ್ರದಲ್ಲಿ ನೋಡಿ ವಿವರಿಸಬಹುದು.

೨.೪ ಕಂಬದ ಪಟ್ಟಿಕೆಯ ನಕ್ಷಾ ಚಿತ್ರಗಳು

ಕಂಬದ ಪಟ್ಟಿಕೆಯನ್ನು ಸಿಮೆಂಟ್ ಮಾಧ್ಯಮದಲ್ಲಿ ಸರಳ ಗೈ ಜಾಮಿತಿಕ ವಿನ್ಯಾಸಗಳಿಂದ ರಚಿಸಿ ನಂತರ ಕೆಲವು ಮಧ್ಯಭಾಗದಲ್ಲಿ ಡ್ರಯಾಗಾನ್ ಪ್ರಾಣಿಯನ್ನು ಪ್ರಧಾನವಾಗಿ ಸಂಯೋಜಿಸಿದ ಹಳದಿ ಪ್ರಧಾನ ಡ್ರಯಾಗಾನ್ ಉಗ್ರರೂಪದ ಕಣ್ಣುಗಳನ್ನು ಹೊಂದಿದ್ದು ಬಾಯಿಯನ್ನು ತೆರೆದುಕೊಂಡಂತೆ ಬಿಳಿಯ ಹಲ್ಲುಗಳು ಕೆಂಪಾದ ನಾಲಿಗೆ ಹೊಂದಿದ್ದು, ಉದ್ದವಾದ ಬಿಳಿ ಕೋರೆ, ಹಸಿರುಯುಕ್ತ ಕೇಸರಿ, ಕೈಯಲ್ಲಿ ಹಣ್ಣು ಹಿಡಿದು ನೃತ್ಯ ಮಾಡುವಂತೆ ಚಿತ್ರಿಸಿದ್ದಾರೆ. ಇವರು ಬಾಲವನ್ನು ಬಿಳಿಯ

ಸಿಮೆಂಟ್ ಮಾಧ್ಯಮದ ಚಿತ್ರಗಳು




ಬೌದ್ಧಿಕ ಬೆಳವಣಿಗೆ ದೃಶ್ಯ



ತನು ಪಂಜಿ



ಪ್ರಭಾವಳಿಯ ಮೇಲಿನ ಚಿತ್ರಗಳು



ಕಂಬದ ಪಟ್ಟಿಕೆಯ ನಕ್ಷಾ ಚಿತ್ರಗಳು

ರೆಕ್ಕೆಗಳಿಂದ ಪೂರ್ಣಗೊಳಿಸಿದ್ದು ಇವರ ಎಡ ಮತ್ತು ಬಲ ಭಾಗದಲ್ಲಿ ಟಿಬೆಟಿನ ನ್ಯಾಯ ಚಕ್ರವನ್ನು ಹಳದಿ ಬಣ್ಣದಿಂದ (ಚಿನ್ನದ ಬಣ್ಣ) ಚಿತ್ರಿಸಿದ್ದು ಒಳವೃತ್ತವು ಜಿನ್ ಧರ್ಮದ ಸಂಕೇತವಾದ ಕೆಂಪು, ನೀಲಿ ವರ್ಣದ ಅನೇಕ ಪಟ್ಟಿಕೆಗಳಿಂದ ಪೂರ್ಣಗೊಳಿಸಿದ್ದಾರೆ. ನಂತರ ಮೂರು ಮುತ್ತುಗಳು ನೀಲಿ, ಕೆಂಪು, ಹಸಿರು ಬಣ್ಣದಿಂದ ಕೂಡಿದ್ದು ಹಿನ್ನೆಲೆಯನ್ನು ಅನೇಕ ವರ್ಣದ ಹೂ ಬಳ್ಳಿ ಗಳಿಂದ ಸಂಯೋಜನೆ ಗೊಳಿಸಿರುವುದು ಕಂಡುಬರುತ್ತದೆ. ಕಂಬದ ಕೊನೆಯ ಭಾಗದಲ್ಲಿ ಟಿಬೆಟಿನ ವ್ಯಾಳಿ ಮುಖದಿಂದ ಕೊನೆಗೊಳಿಸಿದ್ದಾರೆ, ಇದು ಹಳದಿ ಪ್ರಧಾನ ಮುಖ, ಬಿಳಿಯ ಕೇನಾ ಬಣ್ಣವನ್ನು ಹೊಂದಿದೆ ಸಂಪೂರ್ಣ ಕಂಬದ ಪಟ್ಟಿಕಿಯ ಹಿನ್ನೆಲೆಯನ್ನು ಕೇವುವರ್ಣದಿಂದ ಪೂರ್ಣಗೂಳಿಸಿದಾರೇ

ಕಂಬರ ತಳಭಾಗದಲ್ಲಿ ಟಿಬೆಟಿನ ಹಳದಿ ಪ್ರಧಾನ ಅಕ್ಷರಗಳು ವಿವಿಧ ನಕ್ಷಾಚಿತ್ರಗಳು ಅಲಂಕಾರಿಕವಾಗಿ ಚಿತ್ರಿಸಿರುವುದು ಎಲ್ಲಾ ಕಂಬಗಳಲ್ಲಿ ಕಂಡು ಬರುತ್ತದೆ. ನೇರವಾದ ಬಣ್ಣಗಳನ್ನು ಹೆಚ್ಚಾಗಿ ಚಿತ್ರ ಸಂಯೋಜನೆಯಲ್ಲಿ ಕಾಣಬಹುದು.

೩. ಮರ (ಕಟ್ಟಿಗೆ) ಮಾಧ್ಯಮದ ಚಿತ್ರಕಲೆ

ಟಿಬೆಟಿಯನ್ನರು ಪುರಾತನ ಕಾಲದಲ್ಲಿ ತಮ್ಮ ದೇವಾಲಯಗಳು ಹಾಗೂ ಅರಮನೆಗಳನ್ನು ಟಿಬೆಟಿನಲ್ಲಿ ಕಟ್ಟಿಗೆ ಮಾಧ್ಯಮದಿಂದ ಅತ್ಯಂತ ಕಲಾತ್ಮಕವಾಗಿ ನಿರ್ಮಿಸಿರುವಂತ ಅನೇಕ ಉದಾಹಾರಣೆಗಳು ಇತಿಹಾಸದಲ್ಲಿ ದೊರೆಯುತ್ತದೆ. ಇಂಥಹ ದೇವಾಲಯಗಳನ್ನು ನಿರ್ಮಿಸಲು ಸಿದ್ಧಹಸ್ತರು. ಅದರೆ ಕರ್ನಾಟಕಕ್ಕೆ ಬಂದಂತ ಟಿಬೆಟಿಯನ್ನರು ತಮ್ಮ ದೇವಾಲಯ ನಿರ್ಮಾಣದಲ್ಲಿ ಹೆಚ್ಚಾಗಿ ಒಳಸದೆ, ದೇವಾಲಯಾದಲ್ಲಿನ ದಲೈಲಾಮರವರ ಸಿಂಹಾಸನ, ಯಮಂತಕನ ಕಟ್ಟಿಗೆಯ ಮುಖವಾಡ, ದೇವಾಲಯದ ದ್ವಾರಬಾಗಿಲುಗಳು. ದೇವಾಲಯದಲ್ಲಿ ಬಳಸುವ ದೊಡ್ಡ ಡಮರುಗದ ಸುತ್ತಣ ಪಟ್ಟಿಕೆಯ ಹಾಗೂ ಅದನ್ನು ನೇತು ಹಾಕಲು ಬಳಸುವ ಮರದ ಸ್ಟಾಂಡ್, ಕೆಲವು ಉತ್ತಮ ಸಾಮಗ್ರಿಗಳು, ಪಂಚಭೂತ ಬಾವುಟಗಳನ್ನು ತ್ಯಾಯಾರಿಸುವ ಕಟ್ಟಿಗೆಯ ಮುದ್ರಣ ಮಾಡುವ ಲಿಪಿ ಹಾಗೂ ಚಿತ್ರಿತ ಮಣಿ, ಬಿದಿರಿನ ಹಾಗೂ ತಾಳೆಗರಿಯ ಬಿಸಣಿಗೆ ಇತ್ಯಾದಿ ಕರಕುಶುಲಗಳಂತಹ ವಸ್ತುಗಳ ಮೇಲೆ ಚಿತ್ರಕಲೆಯನ್ನು ಕಾಣಬಹುದು.

ಪ್ರಾರ್ಥನ ಚಕ್ರಗಳನ್ನು ಹೆಚ್ಚಾಗಿ ಕಟ್ಟಿಗೆಯಲ್ಲಿ ನಿರ್ಮಿಸಿದ್ದಾರೆ. ಮುಖವಾಡಗಳಿಗೆ ಬಣ್ಣವನ್ನು ತುಂಬುವುದು. ಹಾಗೂ ಅನೇಕ ನಗಾರಿಗಳ ಮಧ್ಯಭಾಗದಲ್ಲಿ ವೃತ್ತಾಕಾರದ ನಕ್ಷಾಚಿತ್ರಣ ಮೇಲಿನ ಎಲ್ಲಾ ಚಿತ್ರಗಳ ಬೈಲುಕುಪ್ಪೆಯ ಸ್ವರ್ಣಮಂದಿರ ಹಾಗೂ ಗುರುಪುರದ ದೇವಾಲಯಗಳಲ್ಲಿ ಕಾಣಬಹುದು. ವಿಶೇಷವಾಗಿ ಕಟ್ಟಿಗೆಯ ಸಿಂಹಾಸನಗಳು ಒಡೆಯರಪಾಳ್ಯೆ ಗುರುಪುರಗಳಲ್ಲಿ ವಿಶೇಷವಾದ ಪ್ರಾರ್ಥನ ಮಂದಿರದಲ್ಲಿ ದೊಡ್ಡದಾದ ಪ್ರಾರ್ಥನ ಚಕ್ರವನ್ನು ಕಟ್ಟಿಗೆ ಮಾಧ್ಯಮದಲ್ಲಿ ತ್ಯಯಾರಿಸಿದ್ದಾರೆ. ಅವುಗಳ ಮೇಲೆ ವರ್ಣಗಳ ಸಾದಾಲೇಪನ ಮಾಡಿಸಿ. ಅವುಗಳ ಮೇಲೆ ಟಿಬೆಟಿಯನ್ನು ಅಕ್ಷರ ಹಾಗೂ ನಕ್ಷಾ ಚಿತ್ರಣಗಳನ್ನು ಕಾಣಬಹುದು. ಇತ್ಯಾದಿ ರೀತಿಯ ಕಟ್ಟಿಗೆಯ ಮಾಧ್ಯಮದ ಮೇಲೆ ಚಿತ್ರಕಲೆಯನ್ನು ಹೂ ಬಳ್ಳಿಗಳ ನಕ್ಷಾಚಿತ್ರ, ಕೀರ್ತಿಮುಖ, ಡ್ರಯಾಗನ್, ಮಂಡಲಗಳು, ಟಿಬೆಟಿನ ವಿಶೇಷ ಎಂಟು ಶ್ರೇಷ್ಠ ಚಿನ್ಹೆಗಳು ಬಿಸಣಿಗೆಯ ಮೇಲೆ ಟಿಬೆಟಿಯನ್ನರ ರಾಜಕುಮಾರಿಯ ಚಿತ್ರ ಇತ್ಯಾದಿ ಬೌದ್ಧ ಧರ್ಮಕ್ಕೆ ಸಂಭಂಧಿಸಿದಂತ ವಸ್ತುವಿಷಯವನ್ನು ಬಳಸಿಕೊಂಡಿದ್ದಾರೆ.

ದೇವಸ್ಥಾನದಲ್ಲಿ ಹಾಗೂ ಬೌದ್ಧ ವಿಹಾರಗಳಲ್ಲಿ ಕಟ್ಟಿಗೆ, ಪ್ಲೈವುಡ್‌ಗಳಿಂದ ಸಿದ್ಧಪಡಿಸಿದ ಸಿಂಹಾಸನ, ಧರ್ಮ ಪೀಠಗಳಂತಹ ಆಕಾರದ ಮೇಲೆ ಬಿಳಿ ಫ್ರೇಮರ್‌ನಿಂದ ಹೊಡೆದು ನಂತರ ಅದರ ಮೇಲೆ ಹಿನ್ನಲೆಯಾಗಿ ತೈಲವರ್ಣವನ್ನು ಲೇಪಿಸಿ ನಂತರ ನಕ್ಷಾ ಚಿತ್ರಳು, ಕೀರ್ತಿ ಮುಖ, ಡ್ರಯಾಗನ್, ಮಂಡಲಗಳು ಹಾಗೂ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಚಿನ್ಹೆಗಳು ವಸ್ತು ವಿಷಯವಾಗಿ ತೆಗೆದುಕೊಂಡು ರೇಖಾಚಿತ್ರಗಳಾಗಿ ರಚಿಸಿ ಕಲಾವಿದರ ಸ್ವಾತಂತ್ರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಿ ಬಣ್ಣಗಳನ್ನು ತುಂಬುತ್ತಾರೆ. ನಂತರ ವಾರ್ನಿಷ್‌ನಿಂದ ಹೊಳಪು ಬರಲೆಂದು ಲೇಪಿಸುತ್ತಾರೆ. ಚಿನ್ನ ಮಿಶ್ರಿತ ಬಣ್ಣವನ್ನು ವಿಶೇಷವಾಗಿ ಸಿಂಹಾಸನದ ಮೇಲೆ ಬರುವಂತಹ ನಕ್ಷಾ ಚಿತ್ರಣಗಳಿಗೆ ಲೇಪಿಸುತ್ತಾರೆ. ನಕ್ಷೆಯ ಮಧ್ಯಭಾಗದಲ್ಲಿ ಕೆಂಪು, ಹಸಿರು, ನೀಲಿ ಮಣಿಗಳನ್ನು ಅಳವಡಿಸುತ್ತಾರೆ. ಕಟ್ಟಿಗೆ ಬೀಸಣಿಗೆ ಹಾಗೂ ತಾಳೆ ಎಲೆಗಳಂತಹ ಪರಿಕರಗಳನ್ನು ಬಳಸಿಕೊಂಡು ಅದರ ಮೇಲೆ ರೇಷ್ಮೆ ಪಟ್ಟಿಯನ್ನು ಬಳಸಿಕೊಂಡು ಬೀಸಣಿಗೆಯ ಆಕಾರವನ್ನು ಅಳವಡಿಸಿಕೊಂಡು ಬಟ್ಟೆಯ ಮಧ್ಯಭಾಗದಲ್ಲಿ ಟಿಬೆಟಿಯನ್ ರಾಣಿಯರು ಬೃಂದಾವನದಲ್ಲಿ ಇರುವಂತಹ ದೃಶ್ಯಗಳನ್ನು ಹೆಚ್ಚಾಗಿ ಚಿತ್ರಿಸಿದ್ದಾರೆ. ತಾಳೆ ಗರಿಯ ಬೀಸಣಿಗೆ ದೊಡ್ಡ ಗಾತ್ರದಲ್ಲಿ ಇದ್ದು ಮನೆಗಳಲ್ಲಿ ಶೃಂಗರಿಸಿಕೊಳ್ಳಲು ಬಳಸುತ್ತಾರೆ ಹಾಗೂ ಕಾರು, ಬಸ್ಸು ಇತ್ಯಾದಿ ವಾಹನಗಳ ಹಿಂಬದಿಯಲ್ಲಿ ಅಲಂಕರಿಸಿಕೊಳ್ಳಲು ಬಳಸಿಕೊಳ್ಳುತ್ತಾರೆ. ಇದರ ಮೇಲೆ ನಿಸರ್ಗದ ಚಿತ್ರಗಳು ವಿಶೇಷವಾಗಿ ಕಂಡು ಬಂದಿದ್ದು ಕಲಾವಿದರು ಇಂತಹ ಕಲಾಕೃತಿಗಳನ್ನು ಮೊದಲು ತಾಳೆಗರಿ ಎಲೆಯ ಮೇಲೆ ರೇಖಾಚಿತ್ರ ರಚಿಸಿ ನಂತರ ನಿಸರ್ಗ, ಖನಿಜ ಹಾಗೂ ರಾಸಾಯನಿಕ ಮೂಲದ ಬಣ್ಣಗಳ ಮಿಶ್ರಣದಿಂದ ಕಲಾಕೃತಿಯನ್ನು ಪೂರ್ಣಗೊಳಿಸುತ್ತಾರೆ.

ಕಟ್ಟಿಗೆ ಮಾಧ್ಯಮದ ಚಿತ್ರಗಳ ವಿವರಣೆ

೩.೧ ದಲೈಲಾಮ ಕೂರುವ ಪೀಠದ ಚಿತ್ರ

ಕಟ್ಟಿಗೆ ಮಾಧ್ಯಮದಿಂದ ನಾಟಕಗಳಲ್ಲಿ ಮಾಡುವ ಸಿಂಹಾಸನಗಳಂತೆ ಚೌಕಾಕಾರವಾಗಿ ಚಿತ್ರಕಲ್ಲಿ ತೋರಿಸುವ ಅಕಾರದಂತೆ ಮಾಡಿ ಅವುಗಳ ಮೇಲೆ ಬಿಳಿ ಪ್ರೇಮರ್ ಲೇಪಿಸಿ ನಂತರ ತಿಳಿಕೆಂಪು ಹಾಗೂ ಕೆಂಪು ಮತ್ತು ಕಂದುಬಣ್ಣ ಮಿಶ್ರಿತ ಬಣ್ಣವನ್ನು ಲೇಪಿಸಿ ಅದರ ಮೇಲಿನಂತೆ ಹೇಳುವುದಾದರೆ ಟಿಬೆಟಿನ ಐದು ವರ್ಣದ ಮತ್ತು ಅದರ ಸುತ್ತ ಬೆಂಕೆಯ ಜ್ವಾಲೆಯು ಹಳದಿ ಪ್ರಧಾನವಾಗಿದ್ದು. ನಂತರ ಕೀರ್ತಿ ಮುಖವನ್ನು ಹಳದಿಪ್ರಧಾನವಾಗಿ ಅದರ ಸುತ್ತ ಅನೇಕ ನಕ್ಷಗಳನ್ನು ಚಿತ್ರಿದ್ದಾರೆ, ನಂತರ ಕೆಳ ಚೌಕದ ಪಟ್ಟಿಕೆಯಲ್ಲಿ ನೀಲಿ ಪ್ರಧಾನವಾದ ಪಟ್ಟಿಕೆ ಅದರಲ್ಲಿ ಅನೇಕ ವರ್ಣ ಹೂ ಬಳ್ಳಿ ನಕ್ಷ ಚಿತ್ರಗಳು ನಂತರ ಕೆಳ ಪೀಠದಲ್ಲಿ ಮಧ್ಯಭಾಗದಲ್ಲಿ ನಾಲ್ಕು ವಜ್ರವನ್ನು ಜೊಡಿಸಿದ ಗೊಂಚಲನ್ನು ಚಿನ್ನಾದ ವರ್ಣದಿಂದ ಚಿತ್ತಿಸಿದ್ದು. ಪಟ್ಟಿಕೆಯ ನಾಲ್ಕು ದಿಕ್ಕನ್ನು ಹಳದಿ ಪ್ರಧಾನ ನಕ್ಷೆಯನ್ನು ಚಿತ್ತಿಸಿದ್ದಾರೆ. ಪಕ್ಕದಲ್ಲಿರುವ ಅಂತಸ್ಥಿನ ಪಟ್ಟಿಕೆಯಲ್ಲಿ ಹಳದಿ ಪ್ರಧಾನ ಡ್ರಯಾಗಾನ್ ಬಿಳಿಯ ಹಲ್ಲು ಕೆಂಪು ನಾಲಿಗೆ ತೆರೆದುಕೊಂಡು ಉಗ್ರವಾಗಿ ನೃತ್ಯವಾಡುವಂತೆ ಚಿತ್ರಿಸಿದ್ದಾರೆ? ಇನ್ನೊಂದು ಬಟ್ಟಲಿನ ಬದಿಯಲ್ಲಿ ಬಿಳಿಯ ಹೂಜಿಯಲ್ಲಿ ಅನೇಕ ಹೂ ಗುಚ್ಚ ಇಟ್ಟಿರುವ ಚಿತ್ರವನ್ನು ಚಿತ್ರಿಸಿದು. ಇವುಗಳ ಹಿನ್ನಲೆಯು ಪ್ರಧಾನವಾಗಿ ದಟ್ಟ ಕೆಂಪು ಹಾಗೂ ಹಳದಿ ವರ್ಣಗಳನ್ನು ಕಾಣಬಹುದು.

೩.೨ ಯವಂತಕ ಮುಖವಾಡ ಚಿತ್ರ

ಮಹಾನ್ ಬೌದ್ಧ ಧರ್ಮದ ಯಕ್ಷ. ಯಮಹಂತಕನು ಬುದ್ಧನಾಗುವ ಮಾರ್ಗದಲ್ಲಿ ಸಾಗುವ ಪಯಣ ನಾವು ಜ್ಞಾನವನ್ನು ಪಡೆಯಬೇಕಾದಲ್ಲಿ ಅಜ್ಞಾನವೆಂಬ ಸಾವನ್ನು ಸಾಯಿಸಬೇಕು, ದೂರ ತಳ್ಳಬೇಕು. ಇವನನ್ನು ವಜ್ರ ಭೈರವ ಎಂದು ಕರೆಯುತ್ತಾರೆ. ಇವನಿಗೆ ೩೪ ಕೈಗಳು, ೧೬ ಕಾಲುಗಳು, ತಲೆ ಕೋಣದ್ದು, ಮೈಬಣ್ಣ ದಟ್ಟ ನೀಲಿ, ಕುತ್ತಿಗೆಗೆ ತಲೆ ಬುರುಡೆಯ ಹಾರ ಹಾಕಿಕೊಂಡಿರುತ್ತಾನೆ. ಅವನ ಮುಖ್ಯ ಕಾರ್ಯ ಕಾನೂನು ರಕ್ಷಣೆ ಅಥವಾ ಧರ್ಮ ರಕ್ಷಣೆ. ಅವನ ಬಾಯಿ ತೆರೆದಿದೆ. ನಾಲಿಗೆ ಹೊರಚಾಚಿದೆ. ತುಟಿಗಳು ಕೆಂಪಾಗಿವೆ. ಪುರಾಣದಲ್ಲಿ ಕಂಡಂತೆ ಯಮಧರ್ಮರಾಜ ನಾರಿಗಳಿಗೆ ಕಾರಣನಾದ ಅವನ ತಂಗಿ ಯಮಿ, ಯಮುನ ಎಂಬ ಹೆಸರಿನ ನದಿಯಾಗಿ ಹರಿಯುತ್ತಾಳೆ. ಅವನ ವಾಹನವು ಕೋಣವಾಗಿದೆ. ಅವನ ವಾಸಸ್ಥಾನವಾದ ದಕ್ಷಿಣ ಭಾರತದ ಕಾಡು ಜನರಾದ ಗೊಲ್ಲರು, ಅವನನ್ನು ಆರಾಧಿಸುತ್ತಾರೆ. ಅವನ ಕೈಯಲ್ಲಿ ಪಾಶವಿದೆ. ದಂಡವಿದೆ. ರಾಮನು ಭೈರವ, ಶಂಕರ, ಶಿವನ ಒಂದು ರೂಪವಾದ ಭೈರವನಿಗೆ ಸಂಬಂಧಪಟ್ಟ ಶಿವ ಬ್ರಹ್ಮನ ತಲೆಯನ್ನು ಕಾಪಾಲ ಮಾಡಿಕೊಂಡು ಮಹಾಕಪಾಲ, ಮಹಾಚಾಲನಾಗಿ ವಾರಾಣಾಶಿಯಲ್ಲಿ ನೆಲೆಸಿದ್ದು, ತಾಂತ್ರಿಕರಿಗೆ ಕಾಲ ಭೈರವನಾಗಿದ್ದಾನೆ. ಯಮನೆಂಬ ತನ್ನ ಪಕ್ಕದಲ್ಲಿ ಸಪ್ತನದಿಯ ಮೂಲಕ ಚಾಮುಂಡಿ ದುರ್ಗಾಳನ್ನು ಕೂಡುತ್ತಾಳೆ. ಗಂಗೆಯನ್ನು ಸೇರುತ್ತಾಳೆ. ಶಿವನ ಹಾಗೂ ಭೈರವ ರೂಪಗಳಾದ ಕ್ರೋದ, ಕಫಾಲಿ, ಕಂಬಾ ರುದ್ರ, ಸಮಾಚಾರಿ, ಅಸಿತಾಂಗ, ಬೀಷನಾ ಮತ್ತು ಯಮಂತ್ ರೂಪದಲ್ಲಿ ಅವನು ಪಾರ್ವತಿ ರೂಪದ ಅಮಾತೃ ದೇವತೆಗಳನ್ನು ವಿವರಿಸಿದ್ದಾನೆ. ಅವನು ಮೈಗೆ ಹಳದಿ ಬೂದಿಯನ್ನು ಸೊಂಟಕ್ಕೆ ಚರ್ಮಾ ಆಭರಣಧಾರಿಯಾಗಿ ಕಾಣುತ್ತಾನೆ.

ಯಮನನ್ನು ಬುದ್ಧನು ಯಮಂತ ಎನ್ನುತ್ತಾನೆ. ಟಿಬೆಟಿನಲ್ಲಿ ವಜ್ರ ಭೈರವ ಯಮ ಎನ್ನುತ್ತಾರೆ. ಅದರಲ್ಲಿ ಮೂರು ಮುಖ್ಯವಾದ ಭಾಗಗಳಿವೆ ಅವುಗಳೆಂದರೆ ವಜ್ರಭೈರವ ಯಮಹಂತಕ, ರಕ್ತಯಮರು (ಕೆಂಪು ಬಣ್ಣ) ಮತ್ತು ಕೃಷ್ಣ ಯಮರು (ಕಪ್ಪು ಬಣ್ಣ). ಟಿಬೆಟಿನಲ್ಲಿ ಯಮನನ್ನು ಚಾಮುಂಡಾ ಎನ್ನುತ್ತಾರೆ. ಯಮಂತ ಬುದ್ಧರು ವಜ್ರಯಾನ ಹಿಂದೂಗಳು ಸಂಸ್ಕೃತದಲ್ಲಿ ಇದ್ದನು. ಟಿಬೆಟ್ ಭಾಷೆಗೆ ಬರೆಯಿಸಿದನು. ಪದ್ಮಸಂಭವ ವರೋಚಿತ ರಕ್ಷಿತಾ ಇವನೊಟ್ಟಿಗೆ ರಕ್ತ ಕಾರಲು (ವಜ್ರ ಭೈರವ ಯಮಾದಿ ಪ್ರಕಾರ) ವಜ್ರ ಭೈರವ ಗರಾಚಕ್ರ, ಕೃಷ್ಣ ಯಮ ಸಂಧಾನ ಅವರಲ್ಲಿದೆ. ಅಭಯಂಕರ ಗುಪ್ತ ಶ್ರೀಧರ, ಶ್ರೀ ಕೃಷ್ಣರಾಜ ಮತ್ತು ಕೃಷ್ಣ ಪಾದ ಮುಖ್ಯಸ್ಥರು.

ಉಗ್ರ ಸ್ವರೂಪಿ ಯಮಂತಕನ ಮುಖವಾಡವನ್ನು ಕಟ್ಟಿಗೆಯಿಂದ ಮಾಡಿ ಅದರ ಮುಖಕ್ಕೆ ಕೆಂಪು ವರ್ಣವನ್ನು ಪ್ರಧಾನವಾಗಿ ಲೇಪಿಸಿದ್ದು. ನಂತರ ಕಣ್ಣು, ಹಲ್ಲು ಹಾಗೂ ತಲೆಯ ಮೇಲಿನ ಚಿಕ್ಕ ಚಿಕ್ಕ ಮನುಷ್ಯನ ಬುರುಡೆಯ ಮೇಲೆ ಬಿಳಿ ಮತ್ತು ಕಪ್ಪು ಬಣ್ಣವನ್ನು ಲೇಪಿಸಿದ್ದು. ಬಾಯಿಯ ತಳ ಭಾಗಕ್ಕೆ ಅಂಟಿಕೊಂಡತೆ ಕೊರಚಲು ಗಡ್ಡವನ್ನು ಕಪ್ಪು ವರ್ಣದಿಂದ ಲೇಪಿಸಿದ್ದು. ಹಳದಿ ಕರ್ಣಕುಂಡಲವನ್ನು ವೃತ್ತಾಕಾರದಲ್ಲಿ ಚಿತ್ರಿಸಿದ್ದಾರೆ. ಈ ಮುಖವಾಡವನ್ನು ಹಾಕಿಕೊಂಡು ಜನಪದರಂತೆ ನೃತ್ಯ ಮಾಡುವ ಪದ್ಧತಿಗೆ ಸಿದ್ಧಗೊಳಿಸಿ ಕೊಂಡಿರುವುದನ್ನು ಗಮನಿಸಬಹುದು. ಕೆಂಪು ವರ್ಣ ಲೇಪನವನ್ನು ಗಾಢವಾಗಿ ಲೇಪಿಸಿರುವುದನ್ನು ಕಾಣಬಹುದು.

ಕಟ್ಟಿಗೆ ಮಾಧ್ಯಮದ ಚಿತ್ರಗಳು



ದಲೈಲಾಮ ಕೂರುವ ಪೀಠ



ಯಮಂತಕ ಮುಖವಾಡ



ಬೀಸಣಿಗೆ



ಜಾಗಟೆಯನ್ನು ತೂಗು ಹಾಕುವ ಸ್ಟ್ಯಾಂಡ್

೩.೩ ಬೀಸಣಿಗೆ ಚಿತ್ರ

ತಾಳೆಗರಿಯನ್ನು ಅರ್ಧ ವೃತ್ತಾಕಾರಕ್ಕೆ ತಕ್ಕಂತೆ ಮಡಚಿ ಕತ್ತರಿಸಿದ ಎಲೆಗಳನ್ನು ಜೊಡಿಸಿ ಬಿದಿರಿನ ಕಡ್ಡಿಗೆ ಅಳವಡಿಸಿಕೊಂಡು, ತಾಳೆಗರಿಯ ಮೇಲೆ ಟಿಬೆಟಿಯನ್ನರ ರಾಣಿಯರ ಹಾಗೂ ಪ್ರಕೃತಿಯ ಅನೇಕ ಚಿತ್ರಗಳನ್ನು ಚಿತ್ರಿಸುತ್ತಾರೆ. ಅದರಂತೆ ಈ ಚಿತ್ರದಲ್ಲಿ ಹಸಿರು ಪ್ರಧಾನ ಕೇಸರಿ ಮಿಶ್ರಿತ ಎರಡು ನವಿಲುಗಳು ಬಂಡೆಯ ಮೇಲೆ ಕುಳಿತು ನಿಸರ್ಗ ನೋಡುವಂತೆ ಚಿತ್ರಿಸಿದ್ದಾರೆ. ಪ್ಯಾಬ್ರಿಕ್ ಆಧುನಿಕ ವರ್ಣಗಳನ್ನು ಬಳಸಿಕೊಂಡು ಕೆಂಪು ಬಿಳಿ ಮತ್ತು ಹಸಿರು ಪ್ರಧಾನವಾಗಿ ಹೂ ಗಿಡದ ಚಿತ್ರಗಳನ್ನು ಚಿತ್ರಿಸಿರುವುದನ್ನು ಆಧುನಿಕ ಶೈಲಿಯ ಚಿತ್ರದಂತೆ ಕಾಣಬಹುದು. ಬಿದಿರಿನ ಕಡ್ಡಿಗೆ ಕೆಂಪು ವರ್ಣವನ್ನು ಲೇಪಿಸಿರುವುದು ಚಿತ್ರದಲ್ಲಿ ಕಾಣಬಹುದು.

೪. ಗೋಧಿ ಹಿಟ್ಟಿನಿಂದ ಹಾಗೂ ಬೆಣ್ಣೆ ಮಾಧ್ಯಮದ ಚಿತ್ರಕಲೆ

ಟಿಬೆಟಿಯನ್ನ ಕ್ಯಾಂಪುಗಳಲ್ಲಿ ಎಲ್ಲಾ ದೇವಾಲಯಗಳ ಮುಂದೆ ಲಾಮಗಳು ಸ್ವತಃ ತಮ್ಮ ಕೈಯಿಂದ ಗೋಧಿ, ಹಿಟ್ಟು ಹಾಗೂ ಬೆಣ್ಣೆಯಿಂದ ಅಲಂಕೃತವಾದ ರೀತಿಯಲ್ಲಿ ತ್ರಿಕೋಣಾಕಾರದಲ್ಲಿ ಮೂರ್ತಿಗಳು ಹಾಗೂ ವಿವಿಧ ರೀತಿಯ ಮಡಿಕೆ, ಕುಡುಕೆಗಳ ಮಾದರಿಯಲ್ಲಿ ರಚಿಸಿ ಅವುಗಳ ಮೇಲೆ ರೇಖಾ ಚಿತ್ರಗಳನ್ನು ರಚಿಸಲು ಸಿದ್ದ ಹಸ್ತರಾಗಿದ್ದಾರೆ. ಇವು ಭಾರತೀಯ ಸಮಾಜದಲ್ಲಿ ದೇವರನ್ನು ಪೂಜಿಸಲು ಮಾಡುವ ಶೃಂಗಾರಯುಕ್ತ ಕಳಸ ಹಾಗೂ ತಂಬಿಟಿನ ಹಿಟ್ಟಿನಿಂದ ಪೂಜಿಸುವಂತಹ ಪರಿಕಲ್ಪನೆಯನ್ನು ಕಾಣಬಹುದು. ಹಾಗೂ ಇದೇ ರೀತಿ ಸ್ತೂಪದ ವಿಗ್ರಹವನ್ನು ಸಹ ಈ ಮಾಧ್ಯಮದಲ್ಲಿ ಮಾಡುತ್ತಾರೆ ಮೇಲಿನ ತ್ರಿಕೋನ, ವೃತ್ತ, ಅಯತ ಹಾಗೂ ಚಾಕಕಾರದ ಅಕೃತಿಗಳೆಲ್ಲವು ಶಾಸ್ತ್ರಿಯ ತಾಳಮಾನಕ್ಕೆ ತಕ್ಕಂತೆ ತ್ಯಯಾರಿಸುತ್ತಾರೆ. ಇವುಗಳ ಮೇಲೆ ವಿವಿಧ ಬಗ್ಗೆಯ ಎಲೆ, ಹೊ, ಬಳ್ಳಿ, ಹಣ್ಣು, ಚಂದ್ರ ಸೂರ್ಯ, ನಕ್ಷಾಚಿತ್ರಗಳು ಹಾಗೂ ಮಂಜುಶ್ರೀ, ಬುದ್ಧ, ಅವಲೋಕಿತೇಶ್ವರ, ಯಮಂತರ ಇತ್ಯಾದಿ ದೇವತಗಳ ಉಬ್ಬು ಮೂರ್ತಿಯನ್ನು ತ್ಯಯಾರಿಸಿ ಅವುಗಳಿಗೆ ಸೂಕ್ಷ್ಮ ಅತಿಸೂಕ್ಷ್ಮವಾದ ರೇಖಾಚಿತ್ರ ಹಾಗೂ ವರ್ಣಲೇಪನವನ್ನು ರಚಿಸುತ್ತಾರೆ. ೪ ಅಡಿಯಿಂದ ಒಂದು ಅಡಿಯವರೆಗೆ ಕಳಶದ ರೀತಿಯಲ್ಲಿ ಶೃಂಗರಿಸುತ್ತಾರೆ ಕೆಲವೊಂದು ಹಬ್ಬ-ಹರಿದಿನಗಳು, ವಿಶೇಷ ಪೂಜೆಗಳ ಸಂದರ್ಭದಲ್ಲಿ ಪರಿಸರದಲ್ಲಿರುವ ಕಲಾವಿದರು ಯಾವುದೇ ಅರ್ಥಿಕ ಸಹಾಯವನ್ನು ನೀರಿಕ್ಷಿಸದೆ ಗೋಧಿ ಹಿಟ್ಟಿನಿಂದ ಹಾಗೂ ಬೆಣ್ಣೆ, ಮಾಧ್ಯಮದ ಗೊಂಬೆಗಳ ಮೇಲೆ ವರ್ಣಗಾರಿಕೆ ಮಾಡಿಕೊಡುತ್ತಾರೆ, ಬೌದ್ಧ ಪ್ರಚಾರ ಹಾಗೂ ಅಲ್ಲಿನ ದೇವರಿಗೆ ಸಲ್ಲಿಸುವ ಸಣ್ಣ ಪ್ರಮಾಣದ ಸೇವೆ ಹಾಗೂ ಹರಕೆ ಎಂದು ಸಮರ್ಥಿಸಿಕೊಳ್ಳಬಹುದು.

ದೇವಸ್ಥಾನಗಳಲ್ಲಿ ಹಾಗೂ ಟಿಬೆಟಿಯನ್ನರ-ಬೌದ್ಧ ವಿಹಾರಗಳಲ್ಲಿ ವಿಶೇಷ ದಿನಗಳಂದು ಗೋಧಿ ಹಿಟ್ಟಿನ ಹಾಗೂ ಮೇಣದ ತ್ರಿಕೋನಾಕಾರದ ವಿವಿಧ ಮಾದರಿಯ ಗೊಂಬೆಗಳನ್ನು ವಿವಿಧ ರೀತಿಯಲ್ಲಿ ಶೃಂಗರಿಸುತ್ತಾರೆ. ಇವುಗಳನ್ನು ರಚಿಸಲು ಮೊದಲು ಗೋಧಿ ಹಿಟ್ಟನ್ನು ಬೆಂಕಿಯಲ್ಲಿ ಹದವಾಗಿ ಹುರಿದುಕೊಂಡು ನಂತರ ಪುಡಿ ಮಾಡಿದ ಬೆಲ್ಲದ ಪಾಕದಲ್ಲಿ ಚನ್ನಾಗಿ ಕಲಸಿದರೆ ಒಂದು ರೀತಿಯ ತಂಬಿಟ್ಟಿನ ಹಾಗೆ ಆಗುತ್ತದೆ. ನಂತರ ತನಗೆ ಬೇಕಾದ ಆಕಾರವಾಗಿ ಪರಿವರ್ತಿಸಿಕೊಂಡು ವಿವಿಧ ಬಗೆಯ ನೈಸರ್ಗಿಕ ಬಣ್ಣಗಳಿಂದ ಹಾಗೂ ಖನಿಜ ಮೂಲ ಬಣ್ಣಗಳಿಂದ ಗೊಂಬೆಗಳ ಮೇಲೆ ರೇಖಾಚಿತ್ರವನ್ನು ರಚಿಸಿ ಸಾಮಾನ್ಯ ಚಿತ್ರ ಬರೆಯುವ ದೃಶ್ಯಗಳಿಂದ ವಿವಿಧ ನಕ್ಷಾ ಚಿತ್ರಗಳಂತಹ

ಚಿತ್ರಗಳ ಮೇಲೆ ಸೂರ್ಯ, ಚಂದ್ರ ಹಾಗೂ ವಿವಿಧ ಬೌದ್ಧ ಧರ್ಮದ ಚಿನ್ಹೆಗಳನ್ನು ಚಿತ್ರಿಸುತ್ತಾರೆ. ಇದು ನೋಡುವುದಕ್ಕೆ ಒಂದು ರೀತಿ ಮಹಾರಾಜರ ತಲೆಯ ಮೇಲಿನ ಕರೀಟದಂತೆ ಕಂಡು ಬರುತ್ತದೆ. ಅವುಗಳ ಮೇಲೆ ವಿವಿಧ ಬಗೆಯ ಬಟ್ಟೆಯ ಬಾವುಟಗಳನ್ನು ಚುಚ್ಚಿರುತ್ತಾರೆ.

ಮೇಣದಲ್ಲಿ ರಚಿಸಿರುವ ಗೊಂಬೆಗಳ ಮೇಲೆ, ಮೇಲೆ ಹೇಳಿದಂತಹ ರೇಖೆಯಲ್ಲಿ ರೇಖಾಚಿತ್ರಗಳನ್ನು ಎಳೆದುಕೊಂಡು ಬಿಸಿಯಾದ ಮೇಣದಿಂದ ಕೇಕ್‌ನ ಮೇಲೆ ಕ್ರೀಮ್‌ನ್ನು ಲೇಪಿಸುವಂತೆ ಬಣ್ಣ ಬಣ್ಣದ ಕಾಯಿಸಿ ಹದಗೊಳಿಸಿದ ಮೇಣವನ್ನು ಹೂವು, ಎಲೆ, ಬಳ್ಳಿ, ಹಣ್ಣುಗಳು, ಸೂರ್ಯ ಚಂದ್ರರ ಆಕಾರಗಳು ಮತ್ತು ಟಿಬೆಟ್ ಬೌದ್ಧ ಚಿನ್ಹೆಗಳನ್ನು ಚಿತ್ರಿಸುತ್ತಾರೆ. ಇಂತಹ ಆಕಾರಗಳನ್ನು ಬಿಸಿಲಿನಲ್ಲಿ ಇಡದೆ ತಂಪಾದ ವಾತಾವರಣ ಇರುವ ಪ್ರದೇಶಗಳಲ್ಲಿ ಅತಿ ಜಾಗರೂಕತೆಯಿಂದ ಸಂಗ್ರಹಿಸಿಡುತ್ತಾರೆ.

ಗೋಧಿಹಿಟ್ಟು ಹಾಗೂ ಬೆಣ್ಣೆಮಾಧ್ಯಮದ ಚಿತ್ರಕಲೆಗಳ ವಿವರಣೆ

೪.೧ ಕಥದ ಆಕ್ರತಿ ಚಿತ್ರ

ಗೋಧಿ ಹಿಟ್ಟನ್ನು ಅದಗೋಳಿಸಿ ಅದಕೆ ಸ್ವಲ್ಪ ಬೆಣ್ಣೆ ಬೆರೆಸಿ ಅದಗೊಂಡ ಹಿಟ್ಟನ್ನು ಚಿತ್ರದಲ್ಲಿ ತೋರಿಸಿದ ಕಳಸದ ಮೇಲೆ ರಚಿಸುತ್ತಾರೆ, ಇದರ ಅಧಾರವಾಗಿ ಎತ್ತರಗಳು ನಿರ್ಧಾರವಾಗುತ್ತವೆ. ನಂತರ ಪ್ರಮುಖವಾದ ಹಳದಿ ಬಣ್ಣದ ಗಡಿಗೆಯನ್ನು ಕೆಳ ಭಾಗದ ಕೆಂಪು ವರ್ಣದ ಪೀಠವನ್ನು ಮೇಲಿನ ಕೆಂಪು ವರ್ಣ ಕಳಸವನ್ನು, ಹಿಟ್ಟಿನ ಜೊತೆಯಲ್ಲಿ ವರ್ಣವನ್ನು ಮಿಶ್ರಣ ಮಾಡಿಕೊಳ್ಳುತ್ತಾರೆ, ನಂತರ ಮೇಲಿನ ನಕ್ಷೆಗಳನ್ನು ಬೆಣ್ಣೆಯ ಜೊತೆ ಬಣ್ಣ ಸೇರಿಸಿ ಮದರಂಗಿ ಕೋನಿಂದ ಕೈಗೆ ಹಚ್ಚುವಂತೆ ಇವುಗಳ ಮೇಲೆ ಚಿತ್ರರಚಿಸಲು ಬಳಿಸುತ್ತಾರೆ. (ಉದಾಹರಣೆಗೆ ಕೇಕ್ ಮೇಲಿನ ನಕ್ಷೆ) ನಂತರ ಮೇಲು ಭಾಗದ ಯು ಆಕಾರದ ರಟ್ಟನು ಕತ್ತರಿಸಿ ಅದಕ್ಕೆ ಹಸಿರು ವರ್ಣವನ್ನು ಹಿನ್ನಲೆಯಾಗಿ ಲೇಪಿಸಿ ನಂತರ ಅದರ ಮೇಲಿನ ಹೂ ಬಳ್ಳಿ ನಕ್ಷೆಗಳನ್ನು. ಬೆಣ್ಣೆಯಲ್ಲಿ ಬಣ್ಣ ಬೆರೆಸಿ ತಯಾರಿಸಿಕೊಂಡು ಮದರಂಗಿ ಲೇಪಿಸುವಂತೆ ಲೇಪಿಸುತ್ತಾರೆ, ನಂತರ ಸರಿಯಾಗಿ ವರ್ಣಲೇಪನ ಅಗದಂತಹ ಜಾಗಕ್ಕೆ ಕುಂಚದಿಂದ ವರ್ಣವನ್ನು ಸೂಕ್ಷ್ಮ ಅತಿಸೂಕ್ಷ್ಮ ಬಾಹಾರೇಖೆಗಳನ್ನು ಒಳಗೊಂಡ ಚಿತ್ರಕಲೆಯನ್ನು ಇಲ್ಲಿ ಕಾಣಬಹುದು, ಇಂತಹ ಮೇಲಿನ ಕೆಲಸವನ್ನು ಒಂದು ರೀತಿಯ ಮೇಣದಂತೆ ರಚಿಸುತ್ತಾರೆ. ಅದರೆ ಇರು ಹೆಚ್ಚಿನ ದಿನ ಬಾಳಿಕೆ ಬರುವುದಿಲ್ಲ.

೪.೨ ಕಳಸದ ಆಕೃತಿ ಚಿತ್ರ

ಮೇಲಿನ ಚಿತ್ರದ ವಿವರಣೆಯಂತೆ ಸಿದ್ಧಗೋಳಿಸಿ ಕಳಸದ ಸುತ್ತ ಬೆಣ್ಣೆಯನ್ನು ಮೆತ್ತಿ ಕಳಸವನ್ನು ಹಕ್ಕಿತುಂಬಿರುವ ಬಟ್ಟಲಿನ ಮೇಲೆ ಇರಿಸುತ್ತಾರೆ, ನಂತರ ಬೆಣ್ಣೆಯ ಮೇಲೆ ತನಗೆ ಬೇಕಾದ ಅಕೃತಿಯಲ್ಲಿ ಶೃಂಗರಿಸಿ ಅವುಗಳ ಮೇಲೆ ಚಿತ್ರಕಲೆಯನ್ನು ರೇಖಾಪ್ರಧಾನವಾಗಿ ತೊರಿಸಿದಂತೆ ಕೆಂಪು ಪ್ರಧಾನ ಬಣ್ಣವನ್ನು ಲೇಪಿಸಿದ್ದು, ಬಿಳಿಯ ಬಣ್ಣವು ಮೂಲ ಬೆಣ್ಣೆಯ ಬಣ್ಣವಾಗಿರುವುದನ್ನು ಗಮನಿಸಬಹುದು. ಇವುಗಳು ಅಂಗಡಿಯಲ್ಲಿ ಕೇಕ್ ತಯಾರಿಸುವ ಮಾದರಿಯ ರೀತಿಯಾಗಿದೆ. ಮೂಲ ರಾಸಾಯಾನಿಕ ಸೈನರ್ ಬಣ್ಣಗಳನ್ನು ಬಳಸುತ್ತಾರೆ.

ಮೇಲಿನ ಸಂಕೀರ್ಣ ಮಾಧ್ಯಮದ ಚಿತ್ರಕಲೆಗಳು, ದ್ವಾರಬಾಗಿಲು, ದೇವಾಲಯದ ಗೋಡೆ, ಕಂಬದ ಪಟ್ಟಿಕೆ, ಸ್ತೂಪ, ದೇವಾಲಯದ ಮೂರ್ತಿ ಹಿಂದಿನ ಪ್ರಭಾವಳಿ ಹಾಗೂ ಇತ್ಯಾದಿ ಟಿಬೆಟಿಯನ್ನರ ಪರಿಸರಗಳಲ್ಲಿ ಲೋಹ ಮಾಧ್ಯಮ, ಸಿಮೆಂಟ್ ಮಾಧ್ಯಮ, ಕಟ್ಟಿಗೆ ಮಾಧ್ಯಮ, ಗೋಡಿ ಹಿಟ್ಟು ಮತ್ತು

ಬೆಣ್ಣೆ ಮಾಧ್ಯಮದಲ್ಲಿ ಕಂಡುಬರುವುದಾಗಿದ್ದು, ಮೇಲಿನ ವಿವರಣೆಗಳಡಿಯಲ್ಲಿ ಹೇಳುವುದಾದರೆ ಇವುಗಳೆಲ್ಲವೂ ಟಿಬೆಟಿನ ಬೌದ್ಧ ಧರ್ಮದ ಪ್ರಭಾವಕ್ಕೆ ಒಳಗಾಗಿದ್ದು, ನಿಪುಣ ಟಿಬೆಟಿಯನ್ ಕಲಾವಿದರ ಕಲಾ ಕೌಶಲ್ಯವನ್ನು ತೋರಿಸಿಕೊಡುವುದು. ಹಾಗೂ ಅಲ್ಲಿನ ಟಿಬೆಟಿಯನ್ನರ ಚಿತ್ರಕಲೆಯ ಮಾಧ್ಯಮಕ್ಕೆ ನೀಡಿರುವ ಪ್ರೋತ್ಸಾಹದಾಯಕ ಭಾವನೆಗಳು ಉತ್ತಮವಾಗಿರುವುದು ಕಂಡುಬರುತ್ತದೆ. ಇವು ಕಲಾಕ್ಷೇತ್ರಕ್ಕೆ ಮುಂದಿನ ಕುರುಹುಗಳಾಗಿ ಕಲಾ ಇತಿಹಾಸವನ್ನು ಕಟ್ಟಿಕೊಡುವಂತಹ ಮಹತ್ವಪೂರ್ಣ ಪ್ರದೇಶವಾಗಿದೆ ಎಂದು ಹೇಳಬಹುದು.

***

ಗೋಧಿಹಿಟ್ಟು ಹಾಗು ಬೆಣ್ಣೆಮಾಧ್ಯಮದ ಚಿತ್ರಕಲೆ



ರಥದ ಆಕೃತಿ



ಕಳಸದ ಆಕೃತಿ



ಗೋಧಿ ಹಿಟ್ಟು ಹಾಗು ಬೆಣ್ಣೆ ಮಾಧ್ಯಮದ ಚಿತ್ರಕಲೆ











ಅಧ್ಯಾಯ–ಆರು

ಟಿಬೆಟಿಯನ್ನರ ಚಿತ್ರಕಲೆಯ ಮೇಲಾದ ಪ್ರಭಾವ–ಪ್ರೇರಣೆಗಳು, ತಂತ್ರಗಾರಿಕೆ ಮತ್ತು ಶೈಲಿ

ಪ್ರಭಾವ-ಪ್ರೇರಣೆಗಳು

ಟಿಬೆಟಿಯನ್ನರ ಚಿತ್ರಕಲೆಯ ಮೇಲಾದ ಪ್ರಭಾವವನ್ನು ಐತಿಹಾಸಿಕವಾಗಿ ಅವಲೋಕನ ಮಾಡಲು ಹೊರಟರೆ ಬೌದ್ಧಧರ್ಮದ ಪ್ರಭಾವವು ಎದ್ದುಕಾಣುತ್ತದೆ. ಭಾರತದಲ್ಲಿನ ಬ್ರಹ್ಮಣ ಕುಚ ಪ್ರಾಂತ್ಯದ "ಕುಮಾರ ಜೀವ"ನೆಂಬ ಭಿಕ್ಷು ಮಹಾಯಾನ ಪಂಥದವನಾಗಿದ್ದು ನಾಲ್ಕನೇ ಶತಮಾನದ ಅಂತ್ಯ ಭಾಗದಲ್ಲಿ ಈತನನ್ನು ಬಂಧಿಸಿ ಚೀನಾಕ್ಕೆ ಕೊಂಡೊಯ್ಯಲಾಯಿತು. ಅಲ್ಲಿ ಈತ ಮತ್ತು ಈತನ ಸಹಚರರು ತಮಗೆ ಪರಿಚಯವಿದ್ದ ಸಂಸ್ಕೃತ ಬೌದ್ಧ ವಾಙ್ಮಯವನ್ನು ಚೀನಿ ಮತ್ತಿತರ ಮಧ್ಯ ಏಷ್ಯಾ ಭಾಷೆಗಳಿಗೆ ಪರಿವರ್ತನೆ ಮಾಡಿದರು. ೧ನೇ ಶತಮಾನದಿಂದ ೨ನೇ ಶತಮಾನದಲ್ಲಿ ಕುಮಾರಜೀವ ಮುಂತಾದವರು ಶ್ರಮದಿಂದ ಚೀನಿ ತ್ರಿಪಿಟಕ ಸಿದ್ಧವಾಯಿತು. ನಂತರದಲ್ಲಿ ಇದರ ಪ್ರಭಾವವು ಟಿಬೆಟಿಗೂ ಪಸರಿಸಿತು ಎಂದು ಹೇಳಬಹುದು.

ಕ್ರಿ.ಶ.೭೪೭ರಲ್ಲಿ ಭಾರತೀಯ ಭಿಕ್ಷು ಪದ್ಮಸಂಭವನೆಂಬುವನು ಬಂಗಾಳದಿಂದ ವಜ್ರಯಾನ ಬೌದ್ಧ ಪಂಥವನ್ನು ಟಿಬೆಟ್ ದೇಶಕ್ಕೆ ಕೊಂಡೊಯ್ದು ಅಲ್ಲಿ ಮೊದಲೇ ಇದ್ದ ಬೋನ್ ಮತದ ಪ್ರಕ್ರಿಯೆಗಳು ಸರ್ವಾಸ್ತಿವಾದದ ವಿನಯ, ಮಾಧ್ಯಮಿಕ-ಯೋಗಾಚಾರ ದರ್ಶನ, ವಜ್ರಯಾನ ದೀಕ್ಷೆ ಇವೆಲ್ಲವೂ ಒಂದಾಗಿ ಲಾಮ ಬೌದ್ಧಮತ ಅಲ್ಲಿ ಬೆಳೆಯಿತು.[೧]

ಇದರ ಪ್ರಭಾವದಿಂದ ಬೌದ್ಧ ಆಗಮ ಸಾಹಿತ್ಯವಾದ ತ್ರಿಪಿಟಕವು ವಿನಯ ಪಿಟಕ, ಸುತ್ತ ಪಿಟಕ ಮತ್ತು ಅಭಿದಮ್ಮ ಪಿಟಕ ಎಂಬ ಮೂರು ಪ್ರವಚನಗಳು ಬುದ್ಧಉಪದೇಶ ಮಾಡಲು ಉಳಿಸಿದ ನಾಲ್ಕು ಆರ್ಯ ಸತ್ಯಗಳು, ಎಂಟು ಆದರ್ಶ ಮಾರ್ಗಗಳು ಧರ್ಮೋಪದೇಶದ ಮುಖ್ಯಾಂಶಗಳಾಗಿದ್ದವು. ಈತನೇ ಹೇಳಿದನೆನ್ನುವ ಮಾತುಗಳು ಧರ್ಮಪದ. ಉದಾ, ಇತಿಪುಸ್ತಕ, ನೇಪಾಳದ ಸಂಸ್ಕೃತ ಗ್ರಂಥಗಳು, ಟಿಬೆಟ್ ಮತ್ತು ಚೀನೀ ಭಾಷೆಗಳಲ್ಲಿ ಅನುವಾದಿತ ಗ್ರಂಥಗಳಲ್ಲಿ ಕಾಣಿಸಿಕೊಳ್ಳುತ್ತವೆ. ಇಂತಹ ಮೂಲ ಸಾಹಿತ್ಯಗಳಿಗೆ ಪ್ರೇರಣೆಗೊಂಡು, ಪ್ರಭಾವಿತರಾಗಿ ಟಿಬೆಟಿಯನ್ನರು ಬೌದ್ಧ ಧರ್ಮಾಚರಣೆಯ ಪ್ರಭಾವಕ್ಕೆ ಒಳಗಾಗಿ ಇವುಗಳನ್ನು ಅನಕ್ಷರಸ್ಥರಿಗೆ ತಿಳಿಸಲು ಅನೇಕ ಚಿತ್ರ ಶಿಲ್ಪಗಳನ್ನು ಮಾಧ್ಯಮವಾಗಿ

೧. ಎಸ್.ಕೆ.ರಾಮಚಂದ್ರರಾವ್: ವಿಶ್ವಧರ್ಮ ದರ್ಶನ: ಸಂ. ೨: ಪು.ಸಂ. ೨೭೦

ಬಳಸಿಕೊಂಡರು. ಈ ಪ್ರಭಾವ-ಪ್ರೇರಣೆಗಳಿಂದಲೇ ಇಂದಿನವರೆಗೂ ಭಿತ್ತಿಚಿತ್ರ, ಭಿತ್ತಿಯೇತರ ಚಿತ್ರಗಳು ಉಳಿದುಕೊಂಡು ಬಂದಿವೆ.

೭೫೫-೭೯೭ರಲ್ಲಿ ಆಳಿದವನು ಖ್ರಿಸೋಂಗ್ ಟೆ-ತ್ಸೆನ್, ಈತ ಭಾರತದಿಂದ ಪದ್ಮಸಂಭವನೆಂಬ ಬೌದ್ಧ ಭಿಕ್ಷುವನ್ನು ಬರಮಾಡಿಕೊಂಡು ಮುಂದಿನ ಶತಮಾನದಲ್ಲಿ ರಾಲ್-ಪಾ-ಚಾನ್ ಬೌದ್ಧ ಸಂಘಗಳನ್ನು ವ್ಯವಸ್ಥೆಗೊಳಿಸಿದ ಭಿಕ್ಷುಗಳ ಪ್ರಭಾವ ಹೆಚ್ಚಿತು. ಅನೇಕ ಬೌದ್ಧಾಲಯಗಳು ನಿರ್ಮಿತವಾದವು. ಭಾರತದಿಂದ ಅನೇಕ ಬೌದ್ಧ ಪಂಡಿತರು ಟಿಬೆಟ್ಟಿಗೆ ಬಂದು ಧಾರ್ಮಿಕ ಗ್ರಂಥಗಳನ್ನು ಭಾಷಾಂತರಿಸಿದರು. ಧರ್ಮ ಪ್ರಚಾರ ಮಾಡಿದರು. ಇಂತಹ ಸಂದರ್ಭದಲ್ಲಿ ಭಾರತೀಯ ಬೌದ್ಧಭಿಕ್ಷುಗಳು ಧರ್ಮ ಗ್ರಂಥದ ಒಳಗೆ ಕೆಲವು ಚಿತ್ರಕಲೆಗಳನ್ನು ಟಿಬೆಟಿನ ಭಿಕ್ಷುಗಳಿಗೆ ತಿಳಿಸಿರಬಹುದೆಂದು ಹಾಗೂ ಬೌದ್ಧಾಲಯಗಳಲ್ಲಿ ಚಿತ್ರ ನಿರ್ಮಿಸಲು ಸಹಾಯ ಮಾಡಿರಬಹುದೆಂದು ಅರ್ಥೈಸಿಕೊಳ್ಳಬಹುದು. ಹೀಗೆ ಭಾರತೀಯ ಕಲೆಗಳು ಟಿಬೆಟಿಯನ್ನರ ಕಲೆಗಳ ಮೇಲೆ ಪ್ರಭಾವ ಬೀರಿರಬಹುದೆಂದು ಮೇಲಿನ ಆಧಾರಗಳಿಂದ ಹೇಳಬಹುದು. ಇದಕ್ಕೆ ಮೂಲ ಬೌದ್ಧ ಧರ್ಮದ ಪ್ರಭಾವ-ಪ್ರೇರಣೆಗಳೆಂದು ತಿಳಿದು ಬರುತ್ತದೆ.

೧೫ನೇ ಶತಮಾನ (೧೫೬೮ರಲ್ಲಿ) ರಿಂಪುಂಗ್ ಮತ್ತು ಟ್ಸಾಂಗ್ ಕುಲಗಳವರೂ ಟಿಬೆಟಿನ ಅರಸರಾಗಿದ್ದ ಸಂದರ್ಭದಲ್ಲಿ ಬೆಳೆದಿದ್ದ ಭಾರತೀಯ ಬೌದ್ಧ ಧರ್ಮದ ತಾಂತ್ರಿಕ ಪದ್ಧತಿ ಪ್ರಭಾವಶಾಲಿಯಾಗಿತ್ತು. ಅದು ನೆರೆಯ ಪ್ರದೇಶಗಳಿಗೂ ಹಬ್ಬಿತ್ತು. ಹಾಗೆಯೇ ಪ್ರಕೃತಿ ಪೂಜಕರಾದ ಟಿಬೆಟ್ ಜನರು ತಾಂತ್ರಿಕ ಪದ್ಧತಿಗಳನ್ನು ತಮ್ಮ ಸಂಪ್ರದಾಯದೊಂದಿಗೆ ಹೊಂದಿಸಿಕೊಂಡು ವಿಶಿಷ್ಟವಾದ ಒಂದು ಧರ್ಮವನ್ನು ಬೆಳೆಸಿಕೊಂಡು ಈ ಧರ್ಮ ಪ್ರಭಾವ ಆಳವಾಗಿ ಬೇರೂರಿ ಧಾರ್ಮಿಕ ಗುರುಗಳೇ ಆಳರಸರಾದರು. ಚೀನಾದ ಸಾಮ್ರಾಟ ತನ್ನ ಕುಮಾರಿಯನ್ನು ಸಾಂಗ್ ತ್ಸೆನ್ ಗ್ಯಾಂಪೊಗೆ ಕೊಟ್ಟು ಮಧುವೆ ಮಾಡಿದ. ನೇಪಾಳದ ರಾಜಕುಮಾರಿಯೊಬ್ಬಳು ಇವನ ಇನ್ನೊಬ್ಬ ಪತ್ನಿ. ಈ ಸಂದರ್ಭಕ್ಕಾಗಿಲೆ ಬೌದ್ಧಧರ್ಮ ಟಿಬೆಟಿಗೆ ಪ್ರವೇಶಿಸಿತ್ತು. ಈತನ ಹೆಂಡತಿಯರು ಬೌದ್ಧ ಧರ್ಮಾವಲಂಬಿಗಳಾಗಿದ್ದರಿಂದ ಇವರಿಬ್ಬರ ಧಾರ್ಮಿಕ ಪ್ರಭಾವಕ್ಕೆ ಒಳಗಾಗಿ ಭಾರತದಿಂದ ಬೌದ್ಧ ಗ್ರಂಥಗಳನ್ನು ತರಲಾಯಿತು ಹಾಗೂ ಬೌದ್ಧ ಧರ್ಮವನ್ನು ಪ್ರಸರಿಸಲು ಶ್ರಮಿಸಿದ. ಅದುವರೆಗೂ ಆಡು ಮಾತಾಗಿದ್ದ ಟಿಬೆಟ್ ಭಾಷೆಗೆ ಲಿಪಿಯೊಂದು ಹುಟ್ಟಿದ್ದು ಈ ಗ್ರಂಥಗಳ ಅಧ್ಯಯನ ಅಧ್ಯಾಪನಗಳಿಗಾಗಿಯೇ ಬೌದ್ಧ ಧರ್ಮ ರಾಜಧರ್ಮ ವೆನಿಸಿಕೊಂಡಿತು.[೨] ಭಾರತ ಮತ್ತು ಚೀನಾಗಳ ಹಲವಾರು ಕಲೆಗಳನ್ನು ಪದ್ಧತಿಗಳನ್ನು ತನ್ನ ರಾಜ್ಯದಲ್ಲಿ ಆರಂಭಿಸಿ ಲಾಸದಲ್ಲಿ ತನಗಾಗಿ ದೊಡ್ಡ ಅರಮನೆಯೊಂದನ್ನು ಕಟ್ಟಿಸಿದ ಇಂತಹ ಸಂದರ್ಭದಲ್ಲಿ ಬೌದ್ಧ ಚಿತ್ರಕಲೆ ಥಾಂಕ ಚಿತ್ರಕಲೆಯಾಗಿ ಬದಲಾಗಿರಬಹುದಾಗಿ ಊಹಿಸಬಹುದು.

ಟಿಬೆಟಿನಿಂದ ವಲಸೆ ಬಂದು ಕರ್ನಾಟಕದಲ್ಲಿ ನೆಲೆನಿಂತ ಟಿಬೆಟಿಯನ್ನರ ಚಿತ್ರಕಲೆಯು ಬೌದ್ಧ ಧರ್ಮ ಪ್ರಭಾವದ್ದಾಗಿಯೇ ಉಳಿದಿದ್ದು ಟಿಬೆಟಿನ ಸಾಂಸ್ಕೃತಿಕ ಹಾಗೂ ಹೆಚ್ಚಾಗಿ ನಿಸರ್ಗದ ಪ್ರಭಾವಕ್ಕೆ ಒಳಗಾಗಿರುವುದರ ಜೊತೆಗೆ ಅಲ್ಲಿನ ಸಹೃದಯ ಹಾಗೂ ಕಲಾ ಆಸಕ್ತರ ಪ್ರೇರಣೆಯು ಹೆಚ್ಚಾಗಿ ಕಂಡುಬರುತ್ತದೆ. ಭಾರತೀಯ ಧಾರ್ಮಿಕ ಪ್ರಭಾವಕ್ಕೆ ಸ್ವಲ್ಪ ಒಳಗಾಗಿರುವುದನ್ನು ಟಿಬೆಟಿಯನ್ನರ ಕ್ಯಾಂಪುಗಳ ಪರಿಸರದಲ್ಲಿ ಕಾಣಬಹುದು. ಕೆಲವು ಕಲಾವಿದರು, ಲಾಮಗಳು ಹಾಗೂ ಇತ್ಯಾದಿ ಧರ್ಮಗುರುಗಳು ಭಾರತಕ್ಕೆ ಬಂದ ಮೇಲೆ ತಾವು ಬಳಸುವ ಚಿತ್ರಗಳೆಲ್ಲವೂ ಮೂಲ ಭಾರತದ

೨. ಕನ್ನಡ ವಿಶ್ವಕೋಶ: ಸಂ. ೮: ಪು.ಸಂ. ೫೪೪

ಧಾರ್ಮಿಕ ನೆಲೆಗಳಿಂದ ಬಂದವೆಂಬುದನ್ನು ಅರಿವಿನ ಪ್ರಭಾವಕ್ಕೆ ಒಳಗಾಗಿರುವಂತೆ ಎಲೆಮರೆ ಕಾಯಿಯಂತೆ ಅರ್ಥೈಸಿಕೊಳ್ಳುವುದು ಕಂಡುಬರುತ್ತದೆ.

ಕೆಲವು ಚಿತ್ರಪಟಗಳಲ್ಲಿ ರಾಮ, ಕಾಳಿ, ಸರಸ್ವತಿ, ಶ್ರೀಕೃಷ್ಣ, ಗಣೇಶ ಇತ್ಯಾದಿ ಹಿಂದೂ ದೇವತೆಗಳನ್ನು ಚಿತ್ರಿಸಿರುವುದು ಕಂಡುಬರುತ್ತವೆ. ಹಾಗೂ ಕೆಲವು ವಿಷ್ಣುವಿನ ದಶ ಅವತಾರ, ನವಗ್ರಹ ದೇವರು ಇತ್ಯಾದಿ ವಸ್ತು ವಿಷಯಗಳನ್ನು ಟಿಬೆಟಿನ ಪರಿಸರದಲ್ಲಿ ಅದರಲ್ಲೂ ಪಟಚಿತ್ರಗಳನ್ನು ವ್ಯಾಪಾರಕ್ಕೆಂದು ಇರಿಸಿದ ಮಳಿಗೆಗಳಲ್ಲಿ ಕಾಣಬಹುದು. ಬಹುಶಃ ಭಾರತೀಯ ಧಾರ್ಮಿಕ ಜನರ ಸ್ವರೂಪಕ್ಕೆ ಹೊಂದಿಕೊಂಡು ಕಲಾಕೃತಿಯನ್ನು ತಮ್ಮ ಶೈಲಿಗೆ ಹಾಗೂ ಭಾರತೀಯ ಸಂಪ್ರದಾಯಿಕ ಶೈಲಿಗೆ ಹೊಂದಿಕೊಂಡತೆ ರಚಿಸಿದ್ದಾರೆ. ಕಾರಣ ಕಲಾಕೃತಿಯನ್ನು ಕೊಂಡುಕೊಳ್ಳುವರು ಭಾರತೀಯ ಮನೋಧರ್ಮದವರೆ ಆದ್ದರಿಂದ ಇವರಿಗೆ ಭಾರತೀಯ ಸಹೃದಯದವರ ಪ್ರೇರಣೆಗೆ ಒಳಗಾಗಿ ಕೆಲವೊಂದು ಮಾರ್ಪಾಡುಗಳಲ್ಲಿ ತಮ್ಮ ಚಿತ್ರಕಲೆಯನ್ನು ಬದಲಾಯಿಸಿಕೊಂಡಿದ್ದಾರೆ ಎಂದು ಹೇಳಬಹುದು.

ಮೇಲಿನ ಎಲ್ಲಾ ಉಲ್ಲೇಖಿತ ಅಂಶಗಳನ್ನು ಗಮನಿಸಿ ಚರ್ಚಿಸುವುದಾದರೆ, ಭಾರತೀಯ ಸಂಸ್ಕೃತದ ದೊಡ್ಡ ಘಟಕದಿಂದ ಪ್ರವೇಶಿಸಿದ ಬೌದ್ಧ ಧರ್ಮೀಯ ತತ್ವಗಳು ಹಾಗೂ ಅಲ್ಲಿನ ಮೂಲ ವಿಚಾರಗಳು ಹೀನಯಾನ ಮತ್ತು ಮಹಾಯಾನದ ಮೂಲಕ ಕೆಲವು ಭಾರತೀಯ ಸಂಸ್ಕೃತಿ ಬಲ್ಲ, ಬೌದ್ಧ ಧರ್ಮದ ಸನ್ಯಾಸಿಗಳಿಂದ ಸಂಸ್ಕೃತ ಹಸ್ತಪ್ರತಿ ಹಾಗೂ ಇಲ್ಲಿನ ಕಲಾವಿದರ ಚಿತ್ರಕಲೆಯ ಮೂಲಕ ಟಿಬೆಟಿಗೆ ಪ್ರಚಾರ ರೂಪದಲ್ಲಿ ಪ್ರವೇಶಿಸಿ ಟಿಬೆಟಿನ ಬಾನ್ ಭಾಷೆಗೆ ಅನುವಾದವಾಗಿದ್ದರು, ಭಾರತೀಯ ಪ್ರಧಾನ ಧರ್ಮದ ದೇವತೆಗಳು ಹಾಗೂ ಪ್ರಧಾನ ಪುರುಷರ ವ್ಯಕ್ತಿತ್ವವು ಬುದ್ಧನ ವಿಚಾರದೊಳಗೆ ಸೇರಿಸಲ್ಪಟ್ಟು ಒಂದು ಧರ್ಮ ಮತ್ತೊಂದು ಧರ್ಮದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವಂತಹ ಪ್ರಭಾವಕ್ಕೆ ಒಳಗಾಗಿ ಹಾಗೂ ಒಪ್ಪಿಕೊಂಡ. ಅನ್ಯಧರ್ಮವು ಅಲ್ಲಿನ ಧಾರ್ಮಿಕ ಗುರುಗಳ ರಾಜಾಶ್ರಯದವರ ಪ್ರೇರಣೆಯ ಮೇಲೆ ಟಿಬೆಟಿಯನ್ನರ ಬೌದ್ಧ ಧರ್ಮವಾಗಿ ಇಲ್ಲಿಯವರೆಗೂ ಉಳಿಯುವಂತಾಗಿತು ಎಂದು ಹೇಳಬಹುದು.

ತಂತ್ರಗಾರಿಕೆ

ಕಲಾವಿದನು ಚಿತ್ರಕಲೆ ರಚಿಸುವುದು ಆತನ ಅಭಿವ್ಯಕ್ತ ಸ್ವಾತಂತ್ರಕ್ಕೆ ಬಿಟ್ಟಿದ್ದು. ಆತ ತನ್ನ ಅನುಕೂಲಕ್ಕೆ ತಕ್ಕಂತೆ ತನ್ನದೆಯಾದ ಸಂಸ್ಕೃತಿಕ, ಸಾಮಾಜಿಕ, ಧಾರ್ಮಿಕ, ರಾಜಕೀಯಗಳಂತಹ ಇತ್ಯಾದಿ ಪರಿಸರದಲ್ಲಿನ ಹೊಂದಾಣಿಕೆಯಾಗುವಂತೆ ಅದರ ಜೊತೆಗೆ ತನ್ನ ಅಭಿವ್ಯಕ್ತತೆಗೆ ಸ್ವತಂತ್ರ್ಯತೆಯನ್ನು ತಂದುಕೊಂಡು, ತನ್ನದೆಯಾದ ಪರಿಸರದಲ್ಲಿ ದೊರಕುವ ಪರಿಕರಕಗಳಡಿಯಲ್ಲಿ ಚಿತ್ರರಚಿಸುವ ತಂತ್ರಗಾರಿಕೆಯನ್ನು ಆದಿಮಾನವ ಕಾಲದಿಂದ ಇಂದಿನವರೆಗೂ ನಾನಾ ವಿಧದಲ್ಲಿ ತನ್ನದೆಯಾದ ಮಾಧ್ಯಮ, ಶೈಲಿ, ತಂತ್ರಗಾರಿಕೆಗಳ ಮೂಲಕ ಚಿತ್ರಗಳನ್ನು ಅಭಿವ್ಯಕ್ತಿಗೊಳಿಸಿದ್ದಾನೆ.

ಮೇಲಿನ ಮೂಲಾಂಶಗಳಂತೆಯೇ ಟಿಬೆಟಿಯನ್ನರು ತನ್ನ ಪರಿಸರದಿಂದ ಭಾರತಕ್ಕೆ ವಲಸೆ ಬಂದು ನೆಲೆಸಿರುವಂತಹ ಪ್ರದೇಶಗಳಲ್ಲಿ ದೇವಾಲಯ, ವಿಹಾರ, ಮನೆಗಳು, ಹೆಬ್ಬಾಗಿಲು, ಸ್ತೂಪ ಹಾಗೂ ಇತ್ಯಾದಿ ಪ್ರದೇಶದ ಸುತ್ತಲೂ ಥಾಂಕ ಶೈಲಿಯ ಚಿತ್ರಕಲೆಯನ್ನು ಹಾಗೂ ಕಲಾವಿದರುಗಳನ್ನು ಹೊಂದಿರುವುದನ್ನು ಕಾಣಬಹುದು. ಅವರದೇ ಆದ ದೇಶೀಯ ಸಾಂಪ್ರದಾಯಿಕ, ಧರ್ಮಧಾರಿತ

ಚಿತ್ರಗಳು, ಪರಿಕರಗಳು, ರಚನಾವಿಧಾನ, ಶೈಲಿ ಹಾಗೂ ತಂತ್ರಗಾರಿಕೆಯನ್ನು ಉಳಿಸಿಕೊಂಡು ಬಂದಿರುವುದು ಸೋಜಿಗದ ಸಂಗತಿ. ಇವರ ಚಿತ್ರಕಲೆಯನ್ನು ಭಿತ್ತಿಚಿತ್ರಕಲೆ ಮತ್ತು ಭಿತ್ತಿಯೇತರ ಚಿತ್ರಕಲೆಗಳಾಗಿ ವರ್ಗೀಕರಿಸಿ ನಂತರ ಅವುಗಳನ್ನು ವಿಭಾಗಿಸಿಕೊಂಡು ಇವುಗಳಲ್ಲಿ ಕಂಡುಬರುವ ಚಿತ್ರಕಲೆಯ ತಂತ್ರಗಾರಿಕೆಯನ್ನು ಕುರಿತು ಒಂದೊಂದಾಗಿ ಚರ್ಚಿಸಿ ಅಧ್ಯಯನ ಮಾಡಲಾಗುವುದು.

ತಂತ್ರಗಾರಿಕೆ ಎಂದರೆ ಆಂಗ್ಲ ಭಾಷೆಯಲ್ಲಿ "ಟೆಕ್ನಿಕ್" ಎಂದು ಕರೆಯುತ್ತಾರೆ ಹಾಗೂ ಕಲಾವಿದರ ಭಾಷೆಯಲ್ಲಿ ಮೈವಳಿಕೆ ಎಂದು ಕರೆಯುವುದುಂಟು. ಟಿಬೆಟಿಯನ್ ಕಲಾವಿದರು ತಮ್ಮ ಚಿತ್ರರಚನ ವಿಧಾನಗಳಲ್ಲಿ ಬಳಸಿಕೊಂಡ ತಂತ್ರಗಾರಿಕೆಗಳು ಬಹು ಕುತೂಹಲಕಾರಿಯಾಗಿದ್ದು ಅತಿಸೂಕ್ಷ್ಮ ಕುಶಲಗಾರಿಕೆ ಕಾರ್ಯದಿಂದ ಹಿಡಿದು ಬಹುದೊಡ್ಡ ಕಲಾಕೃತಿಗಳ ಕುಶಲಗಾರಿಕೆ ಕಾರ್ಯವನ್ನು ಗಮನಿಸಬಹುದು. ಇದರ ಜೊತೆಗೆ ಧಾರ್ಮಿಕ ಕ್ರಿಯಾ ವಿಧಿ-ವಿಧಾನ ಹಾಗೂ ಸಾಂಪ್ರದಾಯಿಕ ಪದ್ಧತಿಗಳನ್ನು ಅಳವಡಿಸಿಕೊಂಡು ಕೆಲವು ಚಿತ್ರಗಳನ್ನು ಇಂತಹ ದಿನಗಳಲ್ಲಿ ನಿರ್ಮಿಸಬೇಕು ಎಂಬ ಕಟ್ಟ ಸಂಪ್ರದಾಯಿಕ ಪದ್ಧತಿಗಳನ್ನು ಟಿಬೆಟಿಯನ್ನರ ಚಿತ್ರಕಲೆಯ ತಂತ್ರಗಾರಿಕೆಯಲ್ಲಿ ಕಾಣಬಹುದು.

ದೇವಾಲಯದ ಭಿತ್ತಿಚಿತ್ರವನ್ನು ಥಾಂಕಾ ಶೈಲಿಯ ಮಾದರಿಯಲ್ಲಿ ರಚಿಸಿದ್ದು ಭಿತ್ತಿಚಿತ್ರಗಳನ್ನು ಗೋಡೆಯ ಮೇಲೆ ನಿರ್ಮಿಸುವ ಮೊದಲು ಬಿಳಿಯ ರೇಷ್ಮೆ, ಹತ್ತಿ ಅಥವಾ ಮಂಜರ್‌ಪಾಟ್ ಬಟ್ಟೆಗಳನ್ನು ಅಂಟುವಾಳ ಮತ್ತು ಸೋಡಾನೀರಿಗೆ ಅದ್ದಿ ಒಣಗಿಸಿ. ನಂತರ ಅದನ್ನು ಬಿದಿರು ಮತದ ಅಳತೆ ಅಥವಾ ಚೌಕಾಕಾರದ ಮರದ ರೀಪರ್‌ಗೆ ಚೌಕಕಾರವಾಗಿ ಹಗ್ಗದಿಂದ ಬಿಗಿದು ಗಟ್ಟಿಯಾಗಿ ಕಟ್ಟಿಕೊಂಡು ಸಿನಿಮಾ ಪರದೆಯಂತೆ ನೆರಿಗೆ ಬಾರದ ರೀತಿಯಲ್ಲಿ ನೋಡಿಕೊಳ್ಳಲಾಗುತ್ತದೆ. ಕೆಲವೊಂದು ಬಾರಿ ಪ್ಲೈವುಡ್‌ನ ಮೇಲೆ ಬಟ್ಟೆಯನ್ನು ಅಂಟಿಸಿಕೊಂಡು ಮರವಜ್ರ, ಮಿಣಸರಿ, ಕೆಲವು ರಾಸಾಯನಿಕ ಬಣ್ಣವಾದ ಡಿಸ್ಟೆಂಪರ್ ಲೇಪಿಸಿ ಒಣಗಿಸುತ್ತಾರೆ. ಮೇಲಿನ ತಂತ್ರಗಾರಿಕೆಯಲ್ಲಿ ಭಿತ್ತಿಯನ್ನು ಸಿದ್ಧಪಡಿಸಿಕೊಂಡು ನಂತರ ಟಿಬೆಟಿಯನ್ನರ ಸಾಂಪ್ರದಾಯಿಕ ತಾಳಮಾನದಂತೆ ಭಿತ್ತಿಯ ಮಧ್ಯಭಾಗದಲ್ಲಿ ಲಂಬರೇಖೆ ತಳಭಾಗದಲ್ಲಿ ಭೂರೇಖೆಯನ್ನು ಎಳೆದು ಕೈವಾರದ ಹಾಗೂ ಸೆಟ್‌ಸ್ಕ್ವೈರ್ ನಿಂದ ಚೌಕ, ಆಯತ, ತ್ರಿಭುಜ ಇತ್ಯಾದಿ ಅಳತೆಗಳನ್ನು ಸಿದ್ಧಪಡಿಸಿಕೊಂಡು ಥಾಂಕಾ ಶೈಲಿಯಲ್ಲಿ ಬರುವಂತಹ ತಾಳಮಾನದ ಅನುಸಾರವಾಗಿ ರೇಖಾ ಚಿತ್ರಗಳನ್ನು ಪೆನ್ಸಿಲಿನಿಂದ ಭಿತ್ತಿಯ ಮಧ್ಯಭಾಗದಲ್ಲಿ ದೊಡ್ಡ ಆಕಾರದ ಪ್ರಧಾನ ಚಿತ್ರವನ್ನು ಇರಿಸಿ ನಂತರ "ರೂಪ-ಭೇದ ಭಾವಲಾವಣ್ಯ ಸಾದೃಶ್ಯ ವರ್ಣಿಕಭಂಗ ಇತಿಚಿತ್ರಂ ಸಡಂಗಕಂ" ಶ್ಲೋಕದಂತೆ ಚಿಕ್ಕ ಚಿಕ್ಕ ಚಿತ್ರಗಳ ಆಕಾರವನ್ನು ಅದರ ಸುತ್ತಲು, ಪಕ್ಕದಲ್ಲೂ ಅಥವಾ ಮೇಲು ಭಾಗದಲ್ಲೂ ಬಿಡಿಸುವಂತಹ ತಂತ್ರಗಾರಿಕೆಯನ್ನು ಹೊಂದಿದ್ದಾರೆ.

ಮುಖಮಾನದಿಂದ ಆರಂಭಿಸಿ ಕೈಕಾಲು, ದೇಹ, ಕುಳಿತಿರುವ ಪೀಠದವರೆಗೆ ಚಿತ್ರ ರಚಿಸಿ ಪ್ರಧಾನ ಆಕಾರ ಚಿತ್ರದ ಹೃದಯಭಾಗದ ಬಟ್ಟೆಯ ಹಿಂಭಾಗ ಮತ್ತು ಮುಂಭಾಗದಲ್ಲಿ ದೈವಿ ಸಂಕೇತ ಅಕ್ಷರಗಳಾದ ಶ್ರೀ, ಆಹಂ, ಓಂ ಇತ್ಯಾದಿ ಟಿಬೆಟಿಯನ್ ಶುಭ ನುಡಿಗಳನ್ನು ಬರೆದಿರುತ್ತಾರೆ. ಚಿತ್ರದ ಹೊರವಲಯ ಹಾಗೂ ಕೆಲವು ಒಳ ಹೊರವಲಯದಲ್ಲಿ ಭೂನಕ್ಷೆ, ನಿಸರ್ಗ, ಜಾಮಿತಿಕ, ಪಕ್ಷಿಗಳ ಸರಳಗೈ ಚಿತ್ರಣಗಳನ್ನು ಒಂದೇ ರೇಖಾ ಪ್ರಧಾನವಾದ ಚಿತ್ರಗಳನ್ನು ಬಳಸುವ ತಂತ್ರಗಾರಿಕೆಯನ್ನು ಹೊಂದಿದ್ದು ಕೆಲವೊಂದು ಸಂದರ್ಭದಲ್ಲಿ ಚಿತ್ರರಚಿಸಲು ಕಷ್ಟವಾದರೆ ಅಥವಾ ಒಂದೇ ಚಿತ್ರವು ಅನೇಕ ಕಡೆ ಬಳಸುವ ಸಂದರ್ಭದಲ್ಲಿ ಟ್ರೇಸಿಂಗ್ ಪೇಪರ್ ಬಳಸಿಕೊಂಡು ಪ್ರತಿಚಿತ್ರ ಮಾಡುವ ತಂತ್ರಗಾರಿಕೆಯನ್ನು ಬಳಸಿಕೊಳ್ಳುತ್ತಾರೆ.

ಕೆಲವು ಅಭ್ಯಾಸನಿರತ ಕಲಾವಿದರು ನೇರ ಚಾರ್‌ಕೋಲ್‌ನಿಂದ ತಾಳಮಾನ ರೂಪದಲ್ಲಿ ಚಿತ್ರವನ್ನು ಬರೆಯುವಂತಹ ತಂತ್ರಗಾರಿಕೆಯನ್ನು ಹೊಂದಿದ್ದಾರೆ. ಈ ರೀತಿಯ ಸಂಯೋಜನೆ ಚಿತ್ರಗಳನ್ನು ರಚಿಸಿಕೊಂಡು ಸಮಗ್ರವಾದ ಚಿತ್ರಗಳನ್ನು ಪೂರ್ಣಗೊಳಸಿ ನಂತರ ಮೊದಲ ಚಿತ್ರಗಳ ಹಿನ್ನೆಲೆಯ ಆಕಾರಕ್ಕೆ ತಿಳಿ ನೀಲಿ ಬಣ್ಣ ಹಾಗೂ ಬಿಳಿ ಬಣ್ಣಗಳಿಂದ ತುಂಬುತ್ತಾರೆ.

ಸಾಮಾನ್ಯವಾಗಿ ಚೌಕಟ್ಟನ್ನು (ಫ್ರೇಮ್) ಗೋಡೆಗೆ ಒರಗಿಸಿ ನೆಲದ ಮೇಲೆ ಇಟ್ಟುಕೊಂಡು ಅಥವಾ ಅತಿ ಚಿಕ್ಕದಾದರೆ ತೊಡೆಯ ಮೇಲೆ ಇಟ್ಟುಕೊಂಡು ಬರೆಯುತ್ತಾರೆ. ಕೆಲವು ಕಲಾವಿದರು ಚಿತ್ರರಚಿಸಲು ವಾರಗಟ್ಟಲೆ ಅಥವಾ ತಿಂಗಳುಗಟ್ಟಲೆ ಕುಳಿತಂತೆಯೇ ಚಿತ್ರ ಬಿಡಿಸುವುದನ್ನು ರೂಢಿಗತ ಮಾಡಿಕೊಂಡಿದ್ದಾರೆ. ಮನಸ್ಸಿಗೆ ಬೇಸರ ತಂದ ಸಂದರ್ಭದಲ್ಲಿ ಬೌದ್ಧ ಧರ್ಮದ ಮಂತ್ರಪಠಣ ಇತ್ಯಾದಿ ಮನೋರಂಜನ ಸಂಗೀತಗಳನ್ನು ವಾಕ್‌ಮನ್ (ರೇಡಿಯೋ) ಮೂಲಕ ಕೇಳಿ ಸಮಯವನ್ನು ಕಳೆಯುತ್ತಾರೆ.

ಟಿಬೆಟಿಯನ್ನರು ಚಿತ್ರಗಳಲ್ಲಿ ಬಳಸುವ ಬಣ್ಣಗಳ ತಂತ್ರಗಾರಿಕೆಯು ವಿಸ್ಮಯವಾದುದು. ನೇರ ಬಣ್ಣದಿಂದ ನೆರಳು, ಬೆಳಕು ತೋರಿಸುವಂತೆ ಚಿತ್ರಿಸಿ ೨ಡಿ ಪ್ರಧಾನ ಬಣ್ಣಗಾರಿಕೆ, ಚಿನ್ನದ ಬಣ್ಣಗಳನ್ನು ಬಳಸುವಲ್ಲಿ ಅಳವಡಿಸಿಕೊಳ್ಳವ ತಂತ್ರಗಾರಿಕೆ ಬೇರೆ ಯಾವ ಕಲೆಯಲ್ಲೂ ಕಂಡು ಬರುವುದಿಲ್ಲ. ಚೀನಾ ಮತ್ತು ಟಿಬೆಟಿನ ಕಲೆಗಳಲ್ಲಿ ಸ್ವಲ್ಪ ಮಾತ್ರ ಸೌಮ್ಯವಿದೆ. ಆದರೆ ನೇರವಾಗಿ ಎದ್ದು ಬರುವಂತಹ ತಂತ್ರಗಾರಿಕೆಯಲ್ಲಿ ಬಣ್ಣಗಳನ್ನು ಸೂಕ್ಷ್ಮತೆಯಿಂದ ಹಿಡಿದು ಅತಿ ದೊಡ್ಡ ಚಪ್ಪಟೆ ಲೇಪನಗಳಲ್ಲೂ ವಿಶೇಷವಾದ ತಂತ್ರಗಾರಿಕೆಯನ್ನು ಬಳಸಿಕೊಂಡು ರಚಿಸುತ್ತಾರೆ.

ಇವರು ಬಳಸುವ ತಂತ್ರಗಾರಿಕೆಯು ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಬಳಸುವ ಕಾಲದ ಮಿತಿಗೆ ತಕ್ಕಂತೆ ಚಿತ್ರಕ್ಕೆ ಭಾವ ಜೀವವನ್ನು ತುಂಬಿರುತ್ತಾರೆ. ಜೊತೆಗೆ ಬೌದ್ಧ ಧರ್ಮದ ಅನೇಕ ತಾಂತ್ರಿಕ ಮಂಡಲ ಚಿತ್ರಗಳಲ್ಲಿ ಬಳಸುವ ತಾಂತ್ರಿಕ ಅಂಶಗಳು ಹಾಗೂ ಶಾಂತ ದೇವತೆ ಸ್ವಭಾವ ಹಾಗೂ ಉಗ್ರದೇವತೆಗಳ ಸ್ವರೂಪಗಳನ್ನು ತೋರಿಸಲು ಬಳಸುವ ರೇಖಾ ಪ್ರಧಾನ ಹಾಗೂ ಬಣ್ಣಗಳ ಹೊಂದಾಣಿಕೆಯು ನಿಜಕ್ಕೂ ಒಂದು ಕುತೂಹಲಕಾರಿಯಾದ ತಂತ್ರಗಾರಿಕೆಯ ಗುಣಗಳನ್ನು ಹೊಂದಿದ್ದಾರೆ. ತಾಳ್ಮೆ, ಸಹನೆ, ಸೂಕ್ಷ್ಮತೆ, ಬಣ್ಣಗಳನ್ನು ಗುರುತಿಸುವ ದೃಷ್ಟಿ ಹಾಗೂ ಧಾರ್ಮಿಕತೆಯ ತಂತ್ರಾಂಶಗಳನ್ನು ಬಳಸಿಕೊಳ್ಳುವಿಕೆ ಥಾಂಕ ಶೈಲಿಯ ತಂತ್ರಗಾರಿಕೆಯಲ್ಲಿ ವಿಶೇಷವೆಂದು ಹೇಳಬಹುದು.[೩]

ಇಂತಹ ಪ್ರಯತ್ನದ ಕಲಾವಿದರ ಪರಿಶ್ರಮದ ಫಲದಿಂದಲೇ ಥಾಂಕಾ ಶೈಲಿಯ ತಂತ್ರಗಾರಿಕೆ ಇದುವರೆಗೂ ಬೇರೂರಿ ನಿಂತಿದೆ. ಫಲ ಪ್ರಧಾನವಾಗಿ ನಿರಂತರವಾಗಿ ಬಳಸಿಕೊಂಡು ಬಂದಿದೆ. ಹೀಗೆ ಹೆಚ್ಚು ಕಾಲದಿಂದ ಬಳಕೆಯಲ್ಲಿ ಕಲಾ ಕೃತಿಗಳು ಉಳಿದುಕೊಂಡು ಬರುವಲ್ಲಿ ಯೋಗ್ಯವಾಗಿವೆ ಎಂದು ಹೇಳಬಹುದು. ಇವರು ಬಳಸುವ ತಂತ್ರಗಾರಿಕೆಗಳು ಹಾಗೂ ಪರಿಕರಗಳು ಹೆಚ್ಚು ಮೌಲ್ಯಯುತವಾದವು. ನಿತ್ಯ ಸಂರಕ್ಷಣಾ ತಿತವಾದವುಗಳು. ಭಿತ್ತಿ ಹಾಳಾಗದಂತೆ ವಾರ್ನಿಷ್ ಲೇಪನ, ಗಾಳಿ, ಮಳೆಗಳಿಂದ ರಕ್ಷಿಸಲು ಎರಡು ಕಿಟಕಿಗಳ ಒಳ ಮಧ್ಯಭಾಗದಲ್ಲಿ ಕಲಾಕೃತಿಯನ್ನು ರಚಿಸಿದ್ದಾರೆ. ಇವು ಛಾಯಾಗ್ರಹಣವನ್ನು ಸ್ಪಷ್ಟವಾಗಿ ಪಡೆಯಲು ಅಸಾಧ್ಯ.

---

೩. ಬಿ.ಕೆ.ಹಿರೇಮಠ: ಕಲಾಕೋಶ: ಪು.ಸಂ. ೧೬೮–೧೬೯

ತಾಮ್ರದ ವಿಗ್ರಹಗಳಿಗೆ ಅತಿ ಹೆಚ್ಚು ಬೆಲೆ ಬಾಳುವ ಚಿನ್ನದ ಹಾಗೂ ಬೆಳ್ಳಿಯ ಬಣ್ಣಗಳ ಲೇಪನ ಮಾಡಲಾಗಿದ್ದು ಹೀಗೆ ಹತ್ತು ಹಲವು ವಿಧಾನದ ತಂತ್ರಗಾರಿಕೆಯನ್ನು ವಿಶೇಷವಾಗಿ ಗುರುತಿಸಬಹುದು ಹಾಗೂ ಹಳೆಯ ಸಾಂಪ್ರದಾಯಿಕ ಪದ್ಧತಿಯನ್ನು ಭಿತ್ತಿಯಲ್ಲಿ ಉಳಿಸಿಕೊಂಡು ಬಂದಿದ್ದಾರೆ. ಆದರೆ ಭಿತ್ತಿಯೇತರ ಚಿತ್ರಕಲೆಗಳಲ್ಲಿ ಆಧುನಿಕ ತಂತ್ರಗಾರಿಕೆಯು ಪ್ರತಿಬಿಂಬಿಸುತ್ತಿವೆ. ಬಾವುಟಗಳ ಮೇಲಿನ ಚಿತ್ರಗಳು ಹಾಗೂ ಕ್ಯಾಲೆಂಡರ್‌ಗಳ ಮೇಲಿನ ಭಿತ್ತಿಚಿತ್ರ, ಛಾಯಾಚಿತ್ರಗಳು (ಆಧುನಿಕ) ಇತ್ಯಾದಿ ಕರಕುಶಲ ಕಲೆಗಳಲ್ಲಿ ಪಟಚಿತ್ರಗಳಲ್ಲಿ ಕಾಣಬಹುದಾಗಿದೆ.

ಕೆಲವು ಶಿಲ್ಪಗಳು ಕೂಡಾ ಆಧುನಿಕ ಪ್ರತಿಕೃತಿ ಮಾಲ್ಡಗಳನ್ನು ತೆಗೆಯುವಂತಹ ತಂತ್ರಗಾರಿಕೆಗೆ ಬದಲಾಗಿರುವುದನ್ನು ಸಹ ಟಿಬೆಟಿಯನ್ನರ ಚಿತ್ರಕಲೆಯಲ್ಲಿ ಹಿಂದಿನ ಹಾಗೂ ಆಧುನಿಕ ತಂತ್ರಗಾರಿಕೆಯ ಬಳಕೆಗಳನ್ನು ಕಾಣಬಹುದು. ಥಾಂಕ ಶೈಲಿ ತನ್ನ ತಂತ್ರಗಾರಿಕೆಯನ್ನು ಆಧುನಿಕ ವಿಧಾನಕ್ಕೆ ಅಳವಡಿಸಿಕೊಂಡರೂ ಸಹ ತನ್ನ ಸಾಂಪ್ರದಾಯಿಕ ಚಿತ್ರ ಸ್ವರೂಪವನ್ನು ಕಳೆದುಕೊಂಡಿಲ್ಲ. ಹಿಂದಿನ ಥಾಂಕ ಶೈಲಿಯ ಚಿತ್ರಗಳೇ ಆಧುನಿಕ ನಕಲು ಕಲಾಕೃತಿಗಳಾಗಿ ಹೊರಬರುತ್ತಿರುವುದನ್ನು ಕಾಣಬಹುದು.

ಶೈಲಿ

ಟಿಬೆಟಿನಲ್ಲಿ ಮೊದಲು ಇದ್ದ ಮತ ಬಾನ್ ಇಲ್ಲಿನ ಕಲೆಗೆ "ಬಾನ್ ಪೊ-ಶೈಲಿ" ಪಶ್ಚಿಮ ಟಿಬೆಟ್‌ನಲ್ಲಿರುವ ಕಿಂಗ್‌ಉಂಗ್ ಎಂಬಲ್ಲಿರುವ ಗುಂಡಾದ ಕಟ್ಟಡವನ್ನು ಆ ಶೈಲಿಯದೆಂದು ಸೂಚಿಸುತ್ತದೆ.

ಕಾಶ್ಮೀರಿ ಕಲೆ "ಪಾಲ್" ಮತ್ತು "ಸೇನಾ" ಶೈಲಿ ಭಾರತದಲ್ಲಿ ಕುಂಠಿತವಾಗಿ ಕಣ್ಮರೆಯಾದ ಮೇಲೆಯೂ ಟಿಬೆಟಿನಲ್ಲಿ ಅವುಗಳನ್ನು ಬೆಳೆಸಿಕೊಂಡು ಬರಲಾಗಿದೆ.

ಸ್ರಾಂಗ್ ಬೀನ್ ಸ್ಗಾಮ್ ಪ್ಲೇ ಎಂಬುವನು ಟಿಬೆಟಿನ ಮೊದಲ ಬೌದ್ಧ ದೊರೆಯೆಂಬುವನು ೭ನೇ ಶತಮಾನದಲ್ಲಿ ಗೋಡೆ, ತಟ್ಟು, ರೇಷ್ಮೆ ಬಟ್ಟೆ ಅಥವಾ ಮರದ ಹಲಗೆಗಲ ಮೇಲೆ ಮೂಡಿಸಿರುವ ವರ್ಣ ಚಿತ್ರಗಳು ಟಿಬೆಟಿನಲ್ಲಿ ಅತ್ಯಂತ ವರವಾಗಿದ್ದು ಇತರ ಕಲೆಗಳನ್ನು ಮೀರಿಸಿವೆ. ಇವುಗಳಲ್ಲಿ ಮುಖ್ಯವಾಗಿ ಬುದ್ಧ, ಬೋಧಿಸತ್ವರು ಗುರುಗಳು ಇವರನ್ನು ಚಿತ್ರಿಸಿರುವುದರೊಂದಿಗೆ ತಾಂತ್ರಿಕ ಘಟನೆಗಳನ್ನು ಹೇರಳವಾಗಿ ಚಿತ್ರಿಸಲಾಗಿದೆ. ಟಿಬೆಟ್ ಚರಿತ್ರಾಕಾರ "ತಾರಾನಾಥ" ತಿಳಿಸಿರುವಂತೆ ಈ ಚಿತ್ರಕಾರರು ಭಾರತೀಯ ಚಿತ್ರಕಾರರಿಂದ ತರಬೇತಿ ಹೊಂದಿದ್ದರು. ಆದ್ದರಿಂದಲೇ ಈ ಚಿತ್ರಗಳನ್ನು ಭಾರತೀಯ ಸಂಪ್ರದಾಯದ ಛಾಯೆ ಇದೆ.[೪] ಇನ್ನು ಒಂದು ಹೆಜ್ಜೆ ಮುಂದೆ ಹೋಗುವುದಾದರೆ ಅಜಂತಾ ಸಂಪ್ರದಾಯದ ಛಾಯೆಯನ್ನು ಮುಖ್ಯವಾಗಿ ಅವಲೋಕಿತೇಶ್ವರ ಕ್ಷಿತಿಗರ್ಭದ ಚಿತ್ರಗಳಲ್ಲಿ ಗುರುತಿಸಬಹುದು. ಅಂದ ಮೇಲೆ ಭಾರತೀಯ ಸಂಪ್ರದಾಯಿಕ ಶೈಲಿ ನಂತರದಲ್ಲಿ ನೇಪಾಳಿ ಚಿತ್ರಶೈಲಿಯ ಪ್ರಭಾವ ಹೆಚ್ಚಾಯಿತು. ಹೀಗೆ ಬೇರೆ ಬೇರೆ ಶೈಲಿಗಳ ಪ್ರಭಾವಗಳು ಟಿಬೆಟ್ ಚಿತ್ರಕಲೆಯ ಮೇಲೆ ಬಿದ್ದರೂ ಅದು ಅನೇಕ ಮಾರ್ಪಾಡಿನೊಂದಿಗೆ ತನ್ನದೇ ಆದ ಕೆಲವು ವೈಶಿಷ್ಟ್ಯಗಳನ್ನು ಉಳಿಸಿಕೊಂಡು ಬಂದಿದ್ದು ಇದರ ಜೊತೆಗೆ ಚೀನಿಯರ ಪ್ರಭಾವಿ ಶೈಲಿಯು ಕೂಡಾ ಇಷ್ಟೆಲ್ಲಾ ಆದರೂ ತನ್ನದೇ ಆದ ಥಾಂಕ ಶೈಲಿಯನ್ನು ರೂಪಿಸಿಕೊಂಡು ಒಂದು ವಿಶಿಷ್ಟ ಶೈಲಿಯಾಗಿ ಉಳಿದಿರುವುದು ವಿಶೇಷ. ಭಾರತೀಯ ಸಾಂಪ್ರದಾಯಿಕ ಶೈಲಿ ಟಿಬೆಟಿಯನ್ನರ ಸಾಂಪ್ರದಾಯಿಕ ಶೈಲಿಯೊಂದಿಗೆ ಬೆರೆತುಕೊಂಡಿರುವುದಕ್ಕೆ ಅನೇಕ ಉದಾಹರಣೆಗಳನ್ನು ಕೊಡಬಹುದು.

---

೪. ಕನ್ನಡ ವಿಶ್ವಕೋಶ: ಸಂ. ೮: ಪು.ಸಂ. ೫೪೪

ಅವುಗಳೆಂದರೆ: ಬೌದ್ಧ ಮತದಂತೆ ಶಿಲ್ಪವೂ ಭಾರತದಿಂದಲೇ ಇಲ್ಲಿಗೆ ಬಂದುದು ಸರಿಯಷ್ಟೆ ಅನೇಕ ಮೂರ್ತಿಗಳನ್ನು ಭಾರತಕ್ಕೆ ಭೇಟಿಕೊಟ್ಟಿದ್ದು ಭಿಕ್ಷುಗಳು ಹಾಗೂ ಇತರರು ತಮ್ಮೊಡನೆ ತಂದರೆಂಬ ಹೇಳಿಕೆ ಇದೆ. ಟಿಬೆಟಿನ ಅತ್ಯಂತ ಪ್ರಾಚೀನವಾದ ಬೌದ್ಧ ಮೂರ್ತಿ ಮಗಧದಿಂದ ಬಂದುದೆಂದು ಅದು ಚೀನಾಕ್ಕೆ ಮೊದಲು ಬಂದಿದ್ದು, ಅಲ್ಲಿನ ರಾಜಕುಮಾರಿಯೊಬ್ಬಳು ಟಿಬೆಟಿನ ಮೊದಲ ಬೌದ್ಧ ದೊರೆಯನ್ನು ಮದುವೆಯಾದಾಗ ಅದನ್ನು ಇಲ್ಲಿಗೆ ತಂದುದಾಗಿ ಒಂದು ಐತಿಹ್ಯವಿದೆ.

ಟಿಬೆಟಿನಲ್ಲಿ ಸಾಮಾನ್ಯವಾಗಿ ಕಂಡುಬರುವ ಗ್ರಂಥಗಳ ಚಿತ್ರಿತ ಹಸ್ತಪ್ರತಿಗಳು ಭಾರತ ಮತ್ತು ನೇಪಾಳಿ ಮಾದರಿಗಳನ್ನನುಸರಿಸಿವೆ. ಮೇಲ್ನೋಟಗಳಲ್ಲಿ ಮಾತ್ರವಲ್ಲದೆ ಪುಟ ಪುಟಗಳಲ್ಲಿಯೂ ಕಿರು ಚಿತ್ರಗಳನ್ನು ಕಾಣಬಹುದು. ಈ ಹಸ್ತಪ್ರತಿಗಳಿಗೆ ರಕ್ಷಣಾ ಕವಚಗಳಾಗಿ ಉಪಯೋಗಿಸಿರುವ ಮರ ಹಲಗೆಗಳ ಮೇಲೆ ತೆಳುವಾಗಿ ನವುರಾಗಿ ಮೂಡಿರುವ ಉಬ್ಬು ಕರಡರಣೆಯಲ್ಲಿ ಅಸಾಧಾರಣವಾದ ಪರಿಕರ್ಮ ಕೌಶಲವನ್ನು ಕಾಣಬಹುದು. ಇವುಗಳಿಗಾಗಿ ಭಾರತ ನೇಪಾಳಗಳಿಂದ ಮಾದರಿಗಳನ್ನು ಇಲ್ಲಿಗೆ ತರಿಸಿಕೊಂಡದ್ದೂ ಉಂಟು.

ಜೋಕಾನ್‌ನಲ್ಲಿರುವ ಅವಲೋಕಿತೇಶ್ವರನ ಮೂರ್ತಿಯನ್ನು ದಕ್ಷಿಣಭಾರತದಿಂದ ಟಿಬೆಟಿಗೆ ತಂದಿರಬೇಕೆಂದು ಅಭಿಪ್ರಾಯವಿದೆ. ಕಾಶ್ಮೀರದಿಂದ ಹಲವು ಶಿಲ್ಪಗಳು ಟಿಬೆಟಿಗೆ ಹೋಗಿ ಕೆಲಸ ಮಾಡಿರುವುದು ಉಂಟು, ಹಾಗೆಯೇ ಬ್ರಾನ್‌ಯಾನ್‌ನಲ್ಲಿರುವ ಕೆಲವು ಲೋಹ ಮೂರ್ತಿಗಳು ಪಾಲ ಶೈಲಿಯಲ್ಲಿವೆ.[೫]

ಟಿಬೆಟಿಯನ್ನರ ಪ್ರಮುಖ ಕಲಾವಿದರಾದ ಕ್ಯಾನಸೇ ಚೆನೆಲೋ ಮತ್ತು ಮೇನ್ ಲಾಡುಂಡ್ ಡುಪ್ ತ್ರುಲ್ ಕೀ ಜೋ ಔರಂಗ್‌ನಲ್ಲಿ ರಾಜ ಸುಮಂಗ್ ಗ್ವಾಲ್ ಪೋ ಆಳುತ್ತದ್ದಾಗ ಅವನ ಆಸ್ಥಾನದಲ್ಲಿ ಪ್ರಸಿದ್ಧರಾದ ಥಾಂಕ ಶೈಲಿ ಕಲೆಗಾರರು ಜ್ಯೋತಿಷಿಗಳು, ಶಿಲ್ಪಕಾರರು, ವೈದ್ಯರು, ಅಕ್ಕಸಾಲಿಗರು ಇದ್ದರು. ರಾಜರು ಅನೇಕ ಕೇಂದ್ರಗಳನ್ನು ತೆರೆದು ಆಯಾ ಕ್ಷೇತ್ರಗಳಲ್ಲಿ ಮುಂದುವರಿಯುಂತೆ ಮಾಡಿದರು. ಔರಂಗ ಪ್ರದೇಶದಲ್ಲಿ ಪ್ರಸಿದ್ಧ ಚಿತ್ರಕಾರರೆಂದರೆ ಹೇಟಂ ವೆಲ್, ವ್ಹಾಸೋ ಸೇರಿಂಗ್ ಪ್ರಮುಖರು ಅವರ ಮನೆತನದವರಾದ ಪ್ರಸಿದ್ಧ ಚಿತ್ರಕಾರಾದ ಅಗ್‌ಟರಿನ್, ಡೆಂಗ್ ಚೋ ಮತ್ತು ಜಾಂಗ್ ಎಂಗ್ ಲಾಸಲ್ ಅವರುಗಳು ಅಮ್‌ದೋರು ಚಿತ್ರಕಲೆಯಲ್ಲಿ ಪರಿಣಿತಿಯನ್ನು ಪಡೆದಿದ್ದರು. ೧೫ನೇ ಶತಮಾನದಲ್ಲಿ ಗೊಂಕ್‌ರಾಕ್ ಬಾಕುನ್‌ಗಾ, ಮೆಮನ್ ಬೀಡ್ ಚನ್ ಮೊ, ೧೬ನೇ ಶತಮಾನದಲ್ಲಿ ಕರ್ಮಪಾ ಜೋಸ ಚೀನಸ್ ದೋರ್ ಜೆಲ್ಲಿ, ೧೭ನೇ ಶತಮಾನದಲ್ಲಿ ಪಂಚಲ್‌ಲಾಮ, ಜೋಸ್ ಕೀ ಚಿಂಗ್‌ನಾಸ್, ಲೇತ್ ಡ್ರಾಪ್‌ಗಾಲ್ ಜೋ ಮಾರ್‌ಸ್ಪಾರ್ ಪ್ಯೋ ಇದ್ದರು ಅಂದ ಮೇಲೆ ಇವರಿಂದ ಕಲಿತ ನೂರಾರು ಶಿಷ್ಯ ವೃಂದವು ಟಿಬೆಟಿನ ಸುತ್ತಲೂ ತಮ್ಮ ಚಿತ್ರಗಳನ್ನು ರಚಿಸಿದರು.[೬] ಇವರೆಲ್ಲಾ ಶಿಷ್ಯರು ನಂತರದಲ್ಲಿ ೧೮ ಮತ್ತು ೧೯ನೆಯ ಶತಮಾನದಲ್ಲಿ ಥಾಂಕ ಶೈಲಿ ಚಿತ್ರಗಳನ್ನು ಟಿಬೆಟಿನಲ್ಲಿ ಉಂಟಾದ ಅರಾಜಕತೆಯಿಂದ ಅನೇಕ ಕಲಾವಿದರುಗಳ ಜೊತೆಯಲ್ಲಿಯೇ ವಿವಿಧ ದೇಶಗಳಿಗೆ ಕೊಂಡೊಯ್ದರು ಅಂತಹ ಪ್ರಯತ್ನದಲ್ಲಿ ನಮ್ಮ ದೇಶದ ದಕ್ಷಿಣ ಭಾಗವಾದ ಕರ್ನಾಟಕ ನಾಡಿಗೆ ಬಂದು ಸೇರಿದವರು ಇವರು ಬೈಲುಕುಪ್ಪೆ, ಮುಂಡಗೋಡ, ಗುರುಪುರ, ಒಡಯರ ಪಾಳ್ಯಗಳಲ್ಲಿ ಥಾಂಕ ಚಿತ್ರಶೈಲಿಯನ್ನು ಸಾಂಪ್ರದಾಯಿಕ ನೆಲೆಗಟ್ಟಿನಲ್ಲಿ ತಮ್ಮದೇ ಆದ ವಸ್ತುವಿಷಯಗಳ ಜೊತೆಗೆ ಭಾರತೀಯ ಸಂಪ್ರದಾಯಿಕ ವಸ್ತುವಿಷಯಗಳನ್ನು ಬೆರೆಸಿಕೊಂಡು ಅನೇಕ ಪರಿಕರ-ಸಿದ್ಧಾಂತ, ವಿಧಿ-ವಿಧಾನಗಳ ನವೀನ ಮಾದರಿಯ ಬಳಕೆಗಳೊಂದಿಗೆ

೫. ಕನ್ನಡ ವಿಶ್ವಕೋಶ: ಸಂ. ೮: ಪು.ಸಂ. ೫೪೪

೬. ಜಾರ್ಜ್ ರೋನಿಚ್: ಟಿಬೆಟಿಯನ್ ಪೇಂಟಿಂಗ್ಸ್: ಪು.ಸಂ. ೧೮

ಈ ಶೈಲಿಯನ್ನು ಬೆಳೆಸಿಕೊಂಡು ಹೋಗುತ್ತಿರುವುದನ್ನು ಸಂಶೋಧನೆಯ ಕ್ಷೇತ್ರಕಾರ್ಯದಿಂದ ತಿಳಿದುಬಂದಿರುತ್ತದೆ.

ಥಾಂಕ ಚಿತ್ರಶೈಲಿಯ ಪ್ರಾಮುಖ್ಯತೆ

ಥಾಂಕ ಶೈಲಿಯ ಚಿತ್ರಕಲೆಯ ಚಿತ್ರಪಟ, ಭಿತ್ತಿಚಿತ್ರಗಳು ಚಿತ್ರಿಸಿ ಗೋಡೆಗೆ ಅಂಟಿಸುವುದು, ತೂಗು ಹಾಕುವುದು ಹಾಗೂ ಗೋಡೆಯ ಮೇಲೆ ಭಿತ್ತಿಚಿತ್ರ ನಿರ್ಮಿಸುವುದರಿಂದ ಯಾವುದೇ ಪ್ರಾಮುಖ್ಯತೆ ಇರುವುದಿಲ್ಲ. ಇಂತಹ ಚಿತ್ರಗಳನ್ನು ನಿರ್ಮಿಸಿದ ಪ್ರದೇಶದ ಧರ್ಮಗುರುಗಳ ಸಮ್ಮುಖದಲ್ಲಿ ಅಥವಾ ಬೌದ್ಧ ದೇವಾಲಯಗಳಲ್ಲಿ ದೇವರ ಮುಂದೆ ಪ್ರಾರ್ಥನೆ ಸಲ್ಲಿಸಿ ಚಿತ್ರದಲ್ಲಿ ಪ್ರಧಾನ ಆಕಾರ ಹೊಂದಿದ ದೇವತೆಯನ್ನು ಆಹ್ವಾನಿಸಿದರೆ ಅದಕ್ಕೆ ಹೆಚ್ಚಿನ ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆ. ಇಂತಹ ಚಿತ್ರರಚನೆಯ ಹಿಂಬಾಗದಲ್ಲಿ ಓಂ, ಶ್ರೀ, ಆಹಾ, ಅಂ, ನಾ ಎಂಬ ಇತ್ಯಾದಿ ಟಿಬೆಟಿನ ಅಕ್ಷರಗಳನ್ನು ತಲೆ, ಗಂಟಲು, ಹೃದಯ ಭಾಗದಲ್ಲಿ ಬರೆಯಬೇಕು. ಹೀಗೆ ಮಾಡಿದರೆ ದೇವತೆಗಳು ಚಿತ್ರಕ್ಕೆ ಬಂದು ಸೇರಿಕೊಳ್ಳಲು ಅನುಕೂಲವಾಗುತ್ತದೆ.

ಟಿಬೆಟಿಯನ್ನರ ಒಂದು ಚಿತ್ರಸುರುಳಿಯನ್ನು ಆಧ್ಯಾತ್ಮಿಕ ಉದ್ದೇಶಕ್ಕಾಗಿ ರಚಿಸಲಾಗುವ ಚಿತ್ರಪಟ ಅವರು ಇದನ್ನೊಂದು ಧರ್ಮ ಗ್ರಂಥವೆಂಬಂತೆ ಕಾಣುತ್ತಾರೆ ಆದರೂ ಥಾಂಕ ಚಿತ್ರಗಳು ತಮ್ಮ ಕಲಾತ್ಮಕ ಚಿತ್ರಣ, ವರ್ಣವಿನ್ಯಾಸ, ಚಿತ್ರ ಸಂಯೋಜನೆ ಇತ್ಯಾದಿಗಳಿಂದ ನೋಡುಗರನ್ನು ಆಕರ್ಷಿಸಬಲ್ಲವು. ಥಾಂಕ ಚಿತ್ರಕಾರರು ತಲೆಮಾರುಗಳಿಂದ ಈ ಕಲೆಯನ್ನು ಸಾಂಪ್ರದಾಯಿಕವಾಗಿ ಬಳಸಿಕೊಂಡು ಬಂದಿದ್ದಾರೆ.

ಈ ಚಿತ್ರಕಾರರು ಆಕೃತಿ ಹಾಗೂ ಪ್ರತಿಮಾ ಲಕ್ಷಣ ಶಾಸ್ತ್ರಕ್ಕ ಅನುಗುಣವಾಗಿ ಇಲ್ಲಿನ ಚಿತ್ರಗಳನ್ನು ಧ್ಯಾನಕ್ಕೆ ನೆರವಾಗಿರುವಂತೆ ಕೌಶಲದಿಂದ ಸಂಯೋಜಿಸಿರುತ್ತಾರೆ. ಆಧ್ಯಾತ್ಮಿಕ ಉದ್ದೇಶಕ್ಕಾಗಿ ಬಳಸಿಕೊಳ್ಳುವ ಈ ಚಿತ್ರ ಒಬ್ಬ ಕಲಾವಿದನು ಬರೆದ ಕೇವಲ ಚಿತ್ರವೆಂದು ಭಾವಿಸದೆ ಅದನ್ನು ಪವಿತ್ರಾತ್ಮರು ಕಂಡ ದರ್ಶನ ಹಾಗೂ ಅದರ ಚಿತ್ರಣವೆಂದು ಭಾವಿಸುತ್ತಾರೆ. ಅದಕ್ಕಾಗಿಯೇ ಚಿತ್ರರಚನೆಗಳನ್ನು ತುಂಬಾ ಗೌರವದಿಂದ ಕಾಣತ್ತಾರೆ.

ಟಿಬೆಟಿಯನ್ನರಲ್ಲಿ ಥಾಂಕ ಚಿತ್ರಗಳನ್ನು ಮನಸ್ಸಿನ ಏಕಾಗ್ರತೆಗಾಗಿ ಧ್ಯಾನಕ್ಕಾಗಿ ಬಳಸುತ್ತಾರೆ. ಸಾಧಕನ ಆಂತರ್ಯದ ಕಣ್ಣನ್ನು ತೆರೆಯಿಸುವ, ವಿಕಸಿಸುವ ಕಾರ್ಯವನ್ನವು ಮಾಡುತ್ತವೆ. ಇವು ಆಧ್ಯಾತ್ಮಿಕ ರಹಸ್ಯವನ್ನು ಬಿಂಬಿಸುವ ಕೃತಿಗಳಾಗಿರುವುದರಿಂದ ಇವುಗಳನ್ನು ಯಾವಾಗಲೂ ತೆರೆದು ಇಟ್ಟಿರುವುದಿಲ್ಲ. ಧ್ಯಾನದ ಸಮಯದಲ್ಲಿ ಮಾತ್ರ ತೆರೆದಿದ್ದು ಇನ್ನುಳಿದ ಸಮಯದಲ್ಲಿ ಚಿತ್ರದ ಮೇಲೆ ರೇಷ್ಮೆಯ ಹೊದಿಕೆಯೊಂದನ್ನು ಹಾಕಿರುತ್ತಾರೆ.

ಥಾಂಕ ಶೈಲಿಯ ಶ್ರೇಷ್ಠ ಗುಣಗಳೆಂದರೆ ಶಾಂತಿ, ಸಂಯಮ ಮತ್ತು ಸೌಹಾರ್ದಯುತವಾದ ಸರ್ವೋತ್ಕೃಷ್ಟ ಕ್ಷೇತ್ರಗಳಲ್ಲಿನ ಧ್ಯಾನ, ಚಿತ್ರಕಲೆ ರಚಿಸುವಲ್ಲಿನ ಶ್ರದ್ಧೆ ಮತ್ತು ಆಸಕ್ತಿಗಳು ಪ್ರಮುಖ ಕಾರಣದಿಂದ ಅಭಿವೃದ್ಧಿ ಶೀಲವಾಗಿರುವುದಲ್ಲದೆ, ಇದರಲ್ಲಿ ದೇಶಭಕ್ತಿ, ಬುದ್ಧನ ಶಾಂತಿಯುತ ತತ್ವಗಳು ಹಾಗೂ ಆಧ್ಯಾತ್ಮಿಕ ಬದುಕಿನ ವಿವಿಧ ರೂಪಗಳನ್ನು ಮುನ್ನಡೆಸಿಕೊಂಡು ಬರುವಂತಹ ವಿಶಿಷ್ಠ ಅಂಶಗಳನ್ನು ಒಳಗೊಂಡಿರುವುದನ್ನು ಕರ್ನಾಟಕದ ಐದು ನೆಲೆಯಲ್ಲಿನ ಟಿಬೆಟಿಯನ್ನರ ಥಾಂಕ ಶೈಲಿಯಲ್ಲಿ ಕಾಣಬಹುದಾಗಿದೆ.

***



ಅಧ್ಯಾಯ–ಏಳು

ಟಿಬೆಟಿಯನ್ನರ ಕಲಾವಿದರುಗಳ ಕಲಾ ಶಿಕ್ಷಣ ಮತ್ತು ಸ್ಥಿತಿ–ಗತಿ

ಕಲಾ ಶಿಕ್ಷಣ ಪದ್ಧತಿಯು ಪ್ರಾಚೀನ ಭಾರತದಲ್ಲಿ ಗುರಕುಲ ಪದ್ಧತಿಯಲ್ಲಿ ಕಲಿಸಲ್ಪಡುತ್ತಾ ಬೆಳೆದು ಬರುವುದನ್ನು ತಿಳಿಯಬಹುದು. ಇದಕ್ಕೆ ಕಾರಣ ಗುರುತಿಸಿ ಕಣ್ಣ ಮುಂದೆ ಯಾವಾಗಲೂ ಶಿಷ್ಯ ಇರುವುದರಿಂದ ಸಂದರ್ಭ ಬಂದಾಗಲೆಲ್ಲ ಕಲೆಗಳ ವಿಷಯವನ್ನು ಅದರ ಒಟ್ಟಾರೆ ವಿವಿಧ ಆಯಾಮಗಳನ್ನು ಕುರಿತು ತಿಳಿದುಕೊಳ್ಳಲು ಅನುಕೂಲವಾಗುತ್ತಿರಬಹುದು. ಶಿಷ್ಯನಾದವನು ಒಂದು ಪರಂಪರೆಯನ್ನು ಹೊತ್ತುತಂದು ತನ್ನ ಸಮಕಾಲೀನತೆಯೊಂದಿಗೆ ಸಮೀಕರಿಸಿ ಮುಂದಿನ ತಲೆಮಾರಿನವನಾದ ಶಿಷ್ಯನಿಗೆ ರವಾನಿಸುತ್ತಾನೆ.

ಈ ರೀತಿ ಗುರು ಮೂರು ತಲೆಮಾರಿನ ಸೇತುವೆಯಾಗುತ್ತಾನೆ. ತನಗೆ ಶಿಷ್ಯನಾಗುವನು ತನ್ನ ಹೆಸರು ಉಳಿಸಬಲ್ಲನೆಂಬ ನಿರೀಕ್ಷೆ ಇದ್ದರಷ್ಟೇ ಮನಪೂರ್ವಕವಾಗಿ ತನಗೆ ತಿಳಿದಿರುವ ತಂತ್ರ. ಮಾಧ್ಯಮಗಳನ್ನು ತಿಳಿಸುತ್ತಾನೆ .ವಿದ್ಯಾರ್ಥಿಯಾದವನು ತನ್ನದೇ ಅದ ಶೈಲಿ ರೂಪಿತವಾಗುವವರೆಗೂ ಗುರುವಿನ ಪ್ರಭಾವ ಶಿಷ್ಯನ ಮೇಲೆ ಅಗುವುದು ಸಹಜ, ವರ್ಣ ಸಂಯೋಜನೆ ಅಕೃತಿಗಳ ನಿರೂಪಣೆಯಲ್ಲಿ ಅನುಕರಣೆ ಅನಿವಾರ್ಯ, ಅಂತೆಯೇ ಶಿಷ್ಯನಾದವನು ತನ್ನ ಮನಸ್ಸಿಗೆ ಒಗ್ಗುವ ತಾನು ಬಯಸಿದಂತೆ ಶಿಕ್ಷಣ ನೀಡಬಲ್ಲ ಗುರುವನ್ನು ಅರಿಸಿಕೊಂಡು ದೇಶಾಂತರ ಹೊರಡುವುದು ನಿಜವಾದ ವಿದ್ಯಾರ್ಥಿಯ ಲಕ್ಷಣಗಳಾಗಿದೆ.[೧]

ಕ್ರಿ.ಪೂ. ಕಾಲದಲ್ಲಿ ಪಾಲೀ ಭಾಷೆಯಲ್ಲಿ ರಚನೆಯಾದ ವಿನಯ ಪಿಟಕ ಎಂಬ ಬೌದ್ಧ ಕೃತಿಯಲ್ಲಿ ಪಸೇನದ ಎಂಬ ರಾಜನ ಅರಮನೆಯಲ್ಲಿ ಸಂತೋಷಪಾರ್ಥ ಚಿತ್ರ ಗೃಹಗಳಿದ್ದವೆಂದು ತಿಳಿದುಬರುತ್ತದೆ. ಗುರುಕುಲ ಮಾದರಿಯಲ್ಲಿ ಹೀಗೆ ಅನೌಪಚಾರಿಕ ಶಿಕ್ಷಣ ಪದ್ಧತಿಯಲ್ಲಿ ಅನೇಕ ಬದಲಾವಣೆಗಳು ಹುಟ್ಟಿಕೊಂಡಿದ್ದು. ೩ನೇ ಶತಮಾನದಲ್ಲಿ ಬೌದ್ಧ ತ್ರಿಪೀಠಕಗಳಲ್ಲಿಯೂ ಚಿತ್ರಗೃಹಗಳ ಚಿತ್ರಶಾಲೆಗಳ ಪ್ರಸ್ತಾಪಬರುತ್ತದೆ. ವಿದೇಶಿಯರು ಭಾರತಕ್ಕೆ ಅಗಮನ. ನಡೆಸಿದ ನಂತರ, ವಿಶೇಷವಾಗಿ ಬ್ರಿಟೀಷರಿಂದ ಎಂದು ಹೇಳಬಹುದು. ಇವರ ಅಗಮಾನದಿಂದ ಭಾರತದ ದಿಕ್ಕನ್ನು ಎಲ್ಲಾ ಅ

೧. ಉಮೇಶ ಎಸ್. : ಆರ್.ಎಂ. ಹಡಪದ ಮತ್ತು ಕೆನ್ ಕಲಾಶಾಲೆ ಎಮ್.ವಿ.ಎ. ಕಿ.ಪ್ರ : ಪು.ಸಂ. ೧

ಕ್ಷೇತ್ರದಲ್ಲಿ ಬದಲಾಯಿಸಿದರು ಅದರಲ್ಲಿ ಚಿತ್ರಕಲಾ ಕ್ಷೇತ್ರಕ್ಕೆ ವರತಾದುದಲ್ಲ ಎಂಬುದನ್ನು ಇತಿಹಾಸಕಾರರ ಅಭಿಪ್ರಾಯದಿಂದ ತಿಳಿಯಬಹುದು.

ಭಾರತೀಯ ಹಾಗೂ ಪಾಶ್ಚಾತ್ಯೆ ಮಿಶ್ರ ಕಲಾ ಸಾಂಪ್ರದಾಯದ ಚಿತ್ರಕಾರರು, ಚಿತ್ರಕಲಾಶಿಕ್ಷಣ ಬೆಳೆದು ಬಂದರು ಹಾಗೆಯೇ ದೇಶಿಯ ವಸ್ತುಗಳನ್ನು ಚಿತ್ರಸುವ ಪಂಥಗಳು ಇಂದಿನವರೆಗೂ ಕಾಣಿಸಿಗುತ್ತವೆ.

ಟಿಬೆಟಿಯನ್ನರ ಐತಿಹಾಸಕ ಕಲಾಶಿಕ್ಷಣದ ಪರಂಪರೆ ಅವಲೋಕಿಸುವುದಾದರೆ ಕ್ರಿ.ಶ.೭ನೇ ಶತಮಾನದವತ್ತಿಗೆ ಗುರುಪದ್ಮಸಂಭಾವ ಮತ್ತು ಶಾಂತರಕ್ಷಿತರಂತಹ ಬೌದ್ಧ ಗುರುಗಳು ಹಾಗೂ ಅತನ ಶಿಷ್ಯರನ್ನು ಟಿಬೆಟಿನ ರಾಜರುಗಳು ಬೌದ್ಧಧರ್ಮ ಪ್ರಚಾರಕ್ಕೆ ಕರೆದಾಗ ಅಲ್ಲಿಗೆ ತಮ್ಮ ಕಲಾವಿದರೊಂದಿಗೆ ಹೋಗಿ ಅಲ್ಲಿನ ಕಲೆ-ಕಲಾವಿದರೊಂದಿಗೆ ಹೊಂದಿ ಕೊಂಡು ಮಹಾಯಾನ ಪಂಥದಲ್ಲಿ ಬರುವ ದೇವತೆಗಳನ್ನು ಚಿತ್ರ ಮತ್ತು ಶಿಲ್ಪ ರೂಪಕಕ್ಕೆ ಟಿಬೆಟಿನ ಥಾಂಕ ಶೈಲಿಗೆ ಪರಿವರ್ತಿಸಿದರು. ಇಂಥಹ ಸಂದರ್ಭಕ್ಕೆ ಅನೇಕ ಕಲಾವಿದರು, ಅನೇಕ ತಾಂತ್ರಿಕ ಶಾಖೆಗಳು ಹುಟಿಕೊಳ್ಳತ್ತವೆ. ೧೦ನೇ ಶತಮಾನದ ನಂತರ ಕೆಲವು ಕಲಾವಿದರು ಟಿಬೆಟಿಯನ್ನರ ಗುರುಕುಲ ಮಾದರಿಯಲ್ಲಿ ಕಾಣಿಸಿಕೊಳ್ಳುತ್ತಾರೆ ಅವರುಗಳೆಂದರೆ. ಯುನಾಡ್ಯೆನಾಸ್ಟೀ ಅನೀಕೋ ೧೨೪೩ ರಲ್ಲಿ, ತಾಸೀ ಲುನೋಪೋ. ಅಲ್ಲಿನ ಲಾಸಾಶಾಲೆ ಮತ್ತು ಶ್ಯಾಂಗ್ಸೇ ಶಾಲೆಯಲ್ಲಿ ಪರಿಣಿತಿ ಪಡೆದುಪ್ರಸಿದ್ಧ ಕಲಾವಿದರಾಗಿ ಕಾಣಿಸಿಕೊಳ್ಳುತ್ತಾರೆ.[೨]

ಟಿಬೆಟಿನಲ್ಲಿ ಕ್ರಿ. ಶ. ೭ನೇ ಶತಮಾನದಲ್ಲಿ ಜೀವಿಸಿದ್ಧ ತಾರಾನಾಥನೆಂಬ ಚರಿತ್ರಕಾರನು ಭಾರತದ ಬೌದ್ಧ ಭಿತ್ತಿ ಚಿತ್ರಕಲೆಯ ಬಗ್ಗೆ ಪ್ರಸ್ತಾಪಿಸುತ್ತ ಇದು ಕ್ರಿ. ಪೂ. ೪೮೦ರಲ್ಲಿಯೋ ಉನ್ನತಾವಸ್ಥೆಯನ್ನು ಮುಟ್ಟಿತ್ತು ಎಮದು ಹೇಳುತ್ತಾನೆ. ನಂತರ ಟಿಬೆಟಿಯನ್ನರು ಚರಿತ್ರಕಾರ ತಾರಾನಾಥ ತಿಳಿಸಿರುವಂತೆ ಈ ಚಿತ್ರಕಾರರು ಭಾರತೀಯ ಚಿತ್ರಕಾರರಿಂದ ತರಬೇತಿ ಹೊಂದಿದರು. ಅದರಿಂದಲೇ ಈ ಚಿತ್ರಗಳಲ್ಲಿ ಭಾರತೀಯ ಸಂಪ್ರದಾಯ ಛಾಯೆ ಇದೆ.[೩] ಈಗೆ ಟಿಬೆಟಿಯನ್ನರ ಸನ್ಯಾಸಿಗಳು ಹಾಗೂ ಭಾರತೀಯ ಬೌದ್ಧ ಸನ್ಯಾಸಿಗಳು ಧರ್ಮಪ್ರಚಾರದ ಉದ್ದೇಶದಿಂದ ಎರಡು ದೇಶದಲೊಂದಿಗೆ ನಿರಂತರ ಸಂಬಂಧವನ್ನು ಕಾಣಬಹುದು. ೧೯ನೇ ಶತಮಾನದ ಸಂದರ್ಭದಲ್ಲಿ ಚೀನಾದ ರಾಜಕೀಯ ಅರಾಜಕತೆಯಿಂದ ತತ್ತರಿಸಿದ ಟಿಬೆಟಿಯನ್ನರು ಬರಿಗೈಯಲ್ಲಿ ಭಾರತಕ್ಕೆ ನಿರಾಶ್ರಿತರಾಗಿ ಬಂದರು. ಇವರ ಸಂಗಡ ಅನೇಕ ಕಲಾವಿದರ ಕುಟುಂಬಗಳು ಬಂದು ಭಾರತದಲ್ಲಿ ಅನೇಕ ನೆಲೆಗಳಲ್ಲಿ ನೆಲೆಸಿ. ಧಾರ್ಮಿಕ ಅಚರಣೆಗೆ ತನ್ನದೇ ಪರಿಸರದಲ್ಲಿ ಚೈತ್ಯಾಲಯ. ಬೌದ್ಧ ಮಂದಿರ. ಪ್ರಾರ್ಥನೆ ಮಂದಿರ, ಸ್ತೂಪ. ಇತ್ಯಾದಿ. ವಾಸ್ತುರಚನೆಯನ್ನು ಮಾಡಿಕೊಂಡು ಇವುಗಳಲ್ಲಿ ಚಿತ್ರಕಲೆಯನ್ನು ಚಿತ್ರಿಸಲು ಹಿಮಾಚಲದ ಧರ್ಮಸಾಲ, ಸೊನವರದಲ್ಲಿ ಚಿತ್ರಶಾಲೆಗಳನ್ನು ತೆರೆದರು ಹಾಗೂ ಇಂತಹ ಕೆಲಸವು ಕರ್ನಾಟಕದಲ್ಲಿಯು ನಡೆಯಿತು.

೧೯೯೫ರಲ್ಲಿ ನಿಪುಣ ಟಿಬೆಟಿಯನ್ ಚಿತ್ರ ಹಾಗೂ ಶಿಲ್ಪಕಲಾವಿದರನ್ನು, ಟಿಬೆಟ್. ಹಿಮಾಚಲ ಪ್ರದೇಶ , ನೇಪಾಳ ಕಲಾಶಾಲೆಗಳಿಂದ ೧೦೦ರಿಂದ ೨೦೦ ಅಧಿಕ ಚಿತ್ರಕಲಾವಿದರನ್ನು ದಲೈಲಾಮರವರ ಒಪ್ಪಿಗೆ ಮೇರೆಗೆ ಕರೆಸಿಕೊಳ್ಳಲಾಗಿದೆ.[೪] ಹೀಗೆ ಬಂದವರು ತಮ್ಮ ಚಿತ್ರ ರಚನೆಯ ಕೆಲಸ ಮುಗಿಸಿದ ಮೇಲೆ ಪುನಃ ತಮ್ಮ ಪ್ರದೇಶಗಳಿಗೆ ಹಿಂತಿರುಗಿದರು. ಅದರೆ ಕೆಲವು ಕಲಾವಿದರು ಹಾಗೂ ಅವರ

೨. ಜಾರ್ಜ್ ರೋನಿಚ್: ಟಿಬೆಟಿಯನ್ ಪೇಂಟಿಂಗ್ಸ್: ಪು.ಸಂ. ೧೪

೩. ಕನ್ನಡ ವಿಶ್ವಕೋಶ: ಸಂ. ೮: ಪು.ಸಂ. ೫೪೪

೪. ದಲೈ ಲಾಮಾ: ವಾಟ್ ಈಸ್ ಬುದ್ಧಿಸಮ್: ಪು.ಸಂ. ೭

ಕುಟುಂಬದವರ ಬೌದ್ಧಧರ್ಮಶಾಸ್ತ್ರ ಅಧ್ಯಾಯನಕ್ಕೆ ಉಳಿದರು. ಕೆಲವರು ಉತ್ತಮ ಪರಿಸರವಿರುವುದರಿಂದ ಬೈಲುಕುಪ್ಪೆಯ ಕ್ಯಾಂಪುಗಳಲ್ಲಿ ನಲೆಸಿರುತ್ತಾರೆ. ಇಂತಹವರಿಂದ ತರಬೇತಿ ಪಡೆದ ಶಿಷ್ಯಪರಂಪರೆಯು ಕರ್ನಾಟಕದಲ್ಲಿ ಚಿತ್ರಶಾಲೆ ನಡೆಸುತ್ತಿದ್ದು ಕೆಲವರು ಅ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವುದನ್ನು ಕಾಣುತ್ತೇವೆ. ಅವರುಗಳೆಂದರೆ ನಮ್‌ಗೇಲ್, ದೀಪೇಶ್(ಶಿಷ್ಯ), ಸಾಮ್ ಡೇನ್, ಸೋನಾಮ್ ರೀನ್ ಚೀನ್ (ಶಿಷ್ಯ), ಸೋನಾಮ್ ಪಿಂಚು, ಪೀನ್ ಪಾ ಮೊಸಲ್, ಚಂಪಾ ಮತ್ತು ಉರ್ಪೂ, ಗೀಮ್, ಡೋರ್ಗಿ, ದೂಂಡು, ಗೇಲೆ ಇತ್ಯಾದಿ ಕಲಾವಿದರನ್ನು ಈ ಪರಿಸರದಲ್ಲಿ ಕಾಣಬಹುದು ೪೦ಕ್ಕೂ ಹೆಚ್ಚು ಕಲಾವಿದರು ದಲೈಲಾಮರವರ ಸೂಚನೆಯಂತೆ ಉತ್ತರ ಭಾರತದ ಕೆಲವು ಪ್ರದೇಶಗಳಿಗೆ ಹೋಗಿ ದೇವಾಲಯ ನಿರ್ಮಾಣಗಳಲ್ಲಿ ಭಿತ್ತಿ ಮತ್ತು ಶಿಲ್ಪಗಳನ್ನು ರಚಿಸುವಲ್ಲಿ ಹೋಗಿದ್ದಾರೆ. ಕೆಲವು ರಜಾದಿನಗಳಂತಹ ಸಂದರ್ಭದಲ್ಲಿ ಹೋಗುವುದನ್ನು ಮಾಡುತ್ತಾರೆ. ಅದ್ದರಿಂದ ಕೆಲವೆ ಕೆಲವು ಕಲಾವಿದರು ದೊರಕಿದ್ದು ಅವರುಗಳಲ್ಲಿ ಚಿತ್ರಶಾಲೆ ಇಟ್ಟುಕೊಂಡಿರುವ ೩ ಕಲಾವಿದರನ್ನು ಹಾಗೂ ಇಬ್ಬರು ಅಲ್ಲಿನ ವಿದ್ಯಾರ್ಥಿಗಳನ್ನು ಸಂದರ್ಶಿಸಿ ಅಧ್ಯಾಯನಕ್ಕೆ ಬಳಸಿಕೊಳ್ಳಲಾಗಿದೆ.

೧. ನಮ್‌ಗೇಲ್ ಕಲಾವಿದ

ಬೈಲುಕುಪ್ಪೆಯ ಒಂದನೇ ಕ್ಯಾಂಪ್‌ನಲ್ಲಿ ಭಾರತ ಸರ್ಕಾರದ ಅನುಮತಿಯೊಂದಿಗೆ ಹಾಗೂ ಬೆಂಗಳೂರಿನಲ್ಲಿ ಇರುವ ಟಿಬೆಟಿಯನ್ನರ ಕೇಂದ್ರಿಯ ಕಛೇರಿಯ ಅದೇಶದಂತೆ ಮನೆಯನ್ನು ನಿರ್ಮಿಸಿಕೊಂಡು ೧೯೬೦ರಲ್ಲಿ ವಾಸವಾದ ನಮ್‌ಗೇಲ್ ಕುಟುಂಬವರು ಜೀವನ ನಡೆಸುತ್ತಿದ್ದಾರೆ. ಇವರ ತಂದೆ ಫೀನ್ ಸೂಕ್, ತಾಯಿ ತಮ್ಮಜುಡ್ ಇವರಿಗೆ ಐದು ಜನ ಮಕ್ಕಳು ಜನಿಸಿದ್ದು. ಇವರುಗಳಲ್ಲಿ ಕೆಲವರು ಯುರೋಪ್, ಅಮೇರಿಕಾ ಇತ್ಯಾದಿ ದೇಶಗಳಿಗೆ ಉದ್ಯೋಗದ ಮೇಲೆ ವಿದೇಶಕ್ಕೆ ಹೋಗಿದ್ದಾರೆ . ಇವರು ಮಾತ್ರ ಬೈಲುಕುಪ್ಪೆಯಲ್ಲಿ ಒಂದನೇ ಕ್ಯಾಂಪಿನಲ್ಲಿ ಚಿತ್ರಶಾಲೆಯನ್ನು ಇಟ್ಟುಕೊಂಡಿದ್ದಾರೆ.

ನಮ್‌ಗೇಲ್ ಬೈಲುಕುಪ್ಪೆಯಲ್ಲಿಯೆ ೧೯೬೯ರಲ್ಲಿ ಜನಿಸಿದ್ದು. ಇವರ ಬಾಲ್ಯಾವದಿಯನ್ನು ಬೈಲುಕುಪ್ಪೆಯ ಪರಿಸದಲ್ಲಿಯೇ ಕಳೆದವರಾಗಿದ್ದು. ಇವರು ತಮ್ಮ ಶಾಲಾ ಶಿಕ್ಷಣವನ್ನು ೪ನೇ ತರಗತಿಯ ಪ್ರಾಥಮಿಕ ಶಾಲೆಯವರಿಗೆ ನಡೆಸಿದರು. ಓದುವಿನಲ್ಲಿ ಅಶಕ್ತಿ ಇಲ್ಲಿದೆ ಶಾಲೆಯನ್ನು ತೊರೆದು ಚಿತ್ರಕಲೆಯ ಬಗ್ಗೆಗಿನ ಅಶಕ್ತಿಯನ್ನು ಚಿಕ್ಕಂದಿನಲ್ಲಿಯೇ ಇದ್ದುದರಿಂದ ಹಾಗೂ ತನ್ನ ಬಾಲ್ಯಾವದಿಯಲ್ಲಿ ಅನೇಕ ಟಿಬೆಟಿಯನ್ನರ ಭಿತ್ತಿಚಿತ್ರ ಹಾಗೂ ಪಟಚಿತ್ರ , ಬುದ್ಧ ಇತ್ಯಾದಿ ಶಿಲ್ಪಗಳ ಪ್ರಭಾವಕ್ಕೆ ಒಳಗಾಗಿ ದೇವಾಲಯ ನಿರ್ಮಿಸುತಿದ್ದ ಸಂದರ್ಭದಲ್ಲಿ ಅವುಗಳನ್ನು ನೋಡಿ ನಾನು ಕೊಡ ಒಬ್ಬ ಲಾಮ ಗುರುಜೀ ರೀತಿಯಲ್ಲಿ ಚಿತ್ರವನ್ನು ಬರೆಯುವುದನ್ನು ಕಲಿಯ ಬೇಕೆಂದು ಕೆಲವು ಹಾಳೆಗಳ ಮೇಲೆ ಚಿತ್ರ ಬರೆಯುವುದನ್ನು ಕಲಿತರು. ಇತನ ಅಟಮಾರಿತನ, ತುಂಟತನವನ್ನು ಅರಿತ ಅವರ ತಂದೆ ತಾಯಿಗಳು ಇತನಿಗೆ ಗುರುಜೀಯ ಬಳಿ ಕರೆದುಕೊಂಡು ಹೋಗಿ ಇವರು ಹುಚ್ಚು ಅಟವನ್ನು ವಿವರಿಸಿದರು. ಈ ಸಂದರ್ಭಕ್ಕಾಗಲೆ ನಮ್‌ಗೀಲ್‌ಗೆ ೧೪ ವರ್ಷವಾಗಿತ್ತು. ಕಲಾವಿದನ ಹೇಳಿಕೆಯಂತೆ ಗುರುಗಳ ಹೆಸರು ಸ್ಪಷ್ಟವಾಗಿಲ್ಲ , ಕಾರಣ ಎಲ್ಲರು ಗುರುಜೀ ಎಂದು ಕರೆಯುತ್ತಿದ್ದಾರಿಂದ. ನಮ್‌ಗೀಲ್ ಇವರಲ್ಲಿ ಗುರುಕುಲದ ಮಾದರಿಯ ಕಲಾಶಿಕ್ಷಣವನ್ನು ಪಡೆದನು. ಇತನ ಜೊತೆಗೆ ೧೪ಜನ ವಿದ್ಯಾರ್ಥಿಯ ಶಿಷ್ಯವೃಂದವು ಇತ್ತು . ಇವರಿಗೆಲ್ಲ ಗುರುಜೀರವರು ಮೊದಲು ನಕ್ಷೆಗಳನ್ನು ತಯಾರಿಸುವುದು ಹಾಗೂ ಸರಳಗೈ

ರೇಖಾಚಿತ್ರ ಮತ್ತು ಭಿತ್ತಿಸಿದ್ದತೆಯ ಸಣ್ಣ ಪುಟ್ಟ ಕೆಲಸಗಳನ್ನು ಕಲಿಸುತ್ತಿದ್ದರು. ಬೆಳಿಗ್ಗೆ ಹಿಂದ ಸಂಜೆಯವರಿಗೆ ಗುರುವಿನ ಬಳಿಯಲ್ಲಿ ಇದ್ದು ಗುರು ಹೇಳಿದ ರೀತಿಯಲ್ಲಿ ಮೊದಲು ರೇಖಾಚಿತ್ರ ರಚಿಸುವುದನ್ನು ಕಲಿಸಿದರು. ಟಿಬೆಟಿಯನ್ನರ ಏನ್ ಸೈಕ್ಲೋಪೀಡಿಯದಲ್ಲಿ ಇರುವ ಚಿತ್ರಕಲೆಯ ತಾಳಮಾನಗಳು ಹಾಗೂ ಅಳತೆ ಪ್ರಮಾಣ ಮಾಡಿಕೊಳ್ಳುವ ಪಟ್ಟಿಗಳನ್ನು ಸಿದ್ದಗೊಳಿಸುಲು ಕಲಿಸುತ್ತಿದ್ದರು. ಗುರುಜೀ ಚಿತ್ರಬರೆಯುವುದನ್ನು ಎಲ್ಲಾ ಶಿಷ್ಯರು ದಿನ ನಿತ್ಯೆಗಮನಿಸುತ್ತಿದ್ದರು. ಹಾಗೂ ಅವರು ರಚಿಸುವಂತೆ ಇವರು ಸಹ ಗುರುವಿಲ್ಲದ ಸಂದರ್ಭದಲ್ಲಿ ರಚಿಸಿ. ತಪ್ಪುಗಳನ್ನು ಗುರುಗಳಿಂದ ಸರಿಪಡಿಸಿಕೊಂಡು ಕಲಿಯುತ್ತಿದ್ದರು. ಇವರ ಗುರುಗಳು ಕುನುಮ್ ಮನಾಲ ಚಿತ್ರಶಾಲೆಯಿಂದ ತರಬೇತಿ ಪಡೆದವರಾಗಿದ್ದು. ಧರ್ಮಶಾಲೆ. ಹಾಗೂ ನೇಪಾಳದಲ್ಲಿ ಹೆಚ್ಚಿನ ಚಿತ್ರಕಲೆಯ ಅನುಭವ ಹೊಂದಿದವರು. ನಂತರ ಬೈಲುಕುಪ್ಪೆಯೆ ಚೈತ್ಯಾಲಯಗಳ ನಿರ್ಮಾಣ ಮಾಡಲು ಹಾಗೂ ಕಿರಿಯ ಕಲಾವಿದರಿಗೆ ತರಬೇತಿ ನೀಡಲು ಬಂದವರು. ಇದರ ಜೊತೆಗೆ ಧರ್ಮಪಠಣ, ಧರ್ಮಪ್ರಚಾರ ಉದ್ದೇಶವನ್ನು ಹೊಂದಿದವರು ಹಾಗೂ ಭಾರತದಲ್ಲಿರುವ ತಮ್ಮ ಪರಿಸವನ್ನು ಟಿಬೆಟಿಯನ್ನರ ಪರಿಸರದಂತೆ ಸುಂದರವಾಗಿಡ ಬೇಕೆಂಬ ಅಸೆ ಹೊಂದಿದವರು . ಇವರ ಶಿಷ್ಯನಾಗಿ ಕಲಿಯಲು ಅವಕಾಶ ದೊರೆತದ್ದು ಹೆಮ್ಮೆಯ ವಿಷಯವೆಂದು ಹೇಳುತ್ತಾರೆ,

ದಿನಗಳು ಕಳೆದಂತೆ ಚಿತ್ರಕಲೆಯಲ್ಲಿ ಇನ್ನೂ ಹೆಚ್ಚು ಆಶಕ್ತಿ ಹುಟ್ಟಿ ಗುರುಜೀಯವರು ರಚಿಸುವ ಚಿತ್ರಗಳನ್ನು ತಾನು ಸಂಪೂರ್ಣವಾಗಿ ತಪ್ಪುಗಳಿಲ್ಲದೆ ತಾಳಮಾನವನ್ನು ಕಲಿಬೇಕೆಂದು ಹಾಗೂ ನಂತರದಲ್ಲಿ ಬಣ್ಣಗಳ ಮಿಶ್ರಣ ಮಾಡುವುದು . ಅವುಗಳನ್ನು ಯಾವ ರೀತಿ ತುಂಬಬೇಕು ಹಾಗೂ ವಿಶೇಷವಾದ ಬಣ್ಣಗಳಂತೆ ಚಿನ್ನ ಮತ್ತು ಬೆಳ್ಳಿ ಬಣ್ಣಗಳ ಬಳಸುವ ವಿಧಿ-ವಿಧಾನಗಳನ್ನು ತಿಳಿದುಕೊಂಡರು. ನಂತರದಲ್ಲಿ ನಮ್‌ಗೀಲ್‌ರವರು ಗುರುಗಳಿಗೆ ಅನಾರೋಗ್ಯ ಇದ್ದ ಕಾರಣ ಅರ್ಧಕ್ಕೆ ನಿಂತುಹೋಗಿದ್ದ ಚಿತ್ತಪಟವನ್ನು ವಿನಃ ಕಾರಣ ಸ್ವತಃ ತಾನೇ ಪೂರ್ಣಗೊಳಿಸುವ ಸಂದರ್ಭ ಬಂದಾಗ ಗುರುವಿನ ಒಪ್ಪಿಗೆ ಪಡೆದು ಸಂಪೂರ್ಣವಾಗಿ ತಾನೇ ಅತಿ ಸುಂದರವಾಗಿ ಗುರುಜೀಯವರಂತೆ ಚಿತ್ರಿಸುತ್ತಾರೆ. ಇದರಿಂದ ಮೆಚ್ಚುಗೆ ಪಡೆದು, ಇತರರಿಗೆ ಈಗೆ ಕಲಿಯಬೇಕೆಂದು ಪ್ರೇರೆಪಣೆ ನೀಡುತ್ತಿದ್ದರು. ಅಂದಿನಿಂದ ನಮ್‌ಗೀಲ್ ಕಲಾವಿದನು ತನ್ನದೇಯಾದ ರೀತಿಯಲ್ಲಿ ಭಿತ್ತಿಚಿತ್ರಗಳನ್ನು ಸಿದ್ಧಗೊಳಿಸುವುದರಲ್ಲಿ ಹಾಗೂ ಶಿಲ್ಪಗಳಿಗೆ ವರ್ಣಲೇಪನ ಮಾಡುವುದರಲ್ಲಿ ಸಿದ್ಧ ಹಸ್ಥರಾದರು.

ಈ ಅವದಿಗಾಗಲೆ ೨೫ ವರ್ಷ ತುಂಬಿತು. , ನಂತರದಲ್ಲಿ ಗುರುಕುಲವನ್ನು ತೊರೆದು ತನ್ನದೇಯಾದ ಚಿತ್ರದ ಕೆಲಸವನ್ನು ಮನೆಯಲ್ಲಿ ಅರಂಭಿಸಿದರು ನಂತರದಲ್ಲಿ ಇವರಿಗೆ ತಾನು ಒಂದು ಗುರುಕುಲಮಾದರಿಯ ಚಿತ್ರಶಾಲೆಯನ್ನು ಪ್ರಾರಂಭಿಸಬೇಕು ಹಾಗೂ ಗುರುಜೀಯಂತೆ ಇತರರಿಗೆ ಚಿತ್ರಕಲಿಸಬೇಕೆಂಬ ಆಶಕ್ತಿ ಇತ್ತು. ಅದರೆ ತಂದೆ ತಾಯಿಯ ಒಪ್ಪಿಗೆಯಂತೆ ಮಧುವೆಯಾಗುವಂತೆ ಒಪ್ಪಿಕೊಂಡು ನಂತರದಲ್ಲಿ ಚಿತ್ರಶಾಲೆಯನ್ನು ಅರಂಭಿಸಿದರು ಮೊದಲು ಅವರೆ ಪ್ರಾರಂಭಿಸಿದರು ನಂತರ ಇವರಲ್ಲಿ ೨೦-೨೫ಕ್ಕೂ ಅಧಿಕ ಶಿಷ್ಯರು ಕಲಿತರು. ಕಲ್‌ಸಾಂಗ್ ಡೊಲಾನ್ ಎಂಬ ಹೆಂಡತಿ, ಇಕೆಗೆ ೩೧ ವರ್ಷ ವಯಸ್ಸಾಗಿತ್ತು, ಇಕೆ ೨ ಮಕ್ಕಳಿಗೆ ಜನ್ಮ ನೀಡಿದ್ದಾಳೆ, ಏರ್ ಪೀಲ್ ಎಂಬ ಗಂಡುಮಗು ತೇನ್ ಜೀನ್ ನಮ್ ದೊಲ್ ಎಂಬ ಮಗಳು ಇದ್ದಾರೆ ಇವರ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ಟಿಬೆಟಿಯನ್ನರ ಶಾಲೆಯಲ್ಲಿ ಕಲಿಸುತಿದ್ದಾರೆ. ತಮ್ಮ ಜೀವನವನ್ನು ಚಿತ್ರಶಾಲೆಯಲ್ಲಿ ಚಿತ್ರ ಬಿಡಿಸುವುದು ಹಾಗೂ ಬಿಡುವಿನ ವೇಳೆಯಲ್ಲಿ ಮಕ್ಕಳಿಗೆ ಜನ್ಮ ನೀಡಿದ್ದಾಳೆ. ಏರ್ ಪೀಲ್ ಎಂಬ

ಗಂಡುಮಗು ತೇನ್ ಜೇನ್ ನಮ್ ದೊಲ್ ಎಂಬ ಮಗಳು ಇದ್ದಾರೆ ಇವರ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ಟಿಬೆಟಿಯನ್ನರ ಶಾಲೆಯಲ್ಲಿ ಕಲಿಸುತಿದ್ದಾರೆ, ತಮ್ಮ ಜೀವನವನ್ನು ಚಿತ್ತಶಾಲೆಯಲ್ಲಿ ಚಿತ್ರ ಬಿಡಿಸುವುದು ಹಾಗೂ ಬಿಡುವಿನ ವೇಳೆಯಲ್ಲಿ ಕುಟುಂಬದ ಸದಸ್ಯರೊಂದಿಗೆ ಕಳೆಯುವುದು, ಬಿಡುವಿನ ವೇಳೆಯಲ್ಲಿ ದೇವಾಲಯಗಳಿಗೆ ಹೋಗಿ ಪ್ರಾರ್ಥನೆ ಕಲಿಸುವುದು. ಇವರ ಚಿತ್ರಶಾಲೆಗೆ ಚಿತ್ರ ಬಿಡಿಸಿಕೊಳ್ಳಲು ಬರುವ ಬೌದ್ಧ ಸನ್ಯಾಸಿಗಳು . ಸ್ಥಳಿಯರು ಟಿಬೆಟಿಯನ್ನರು ಹಾಗೂ ಹೊರಗಡೆಯಿಂದ ಬರುವಂತಹ ಸಹೃದಯರುಗಳು ನೀಡುವ ಅಳತೆ ಹಾಗೂ ಅವರ ಮನೆಯ ಜಾತಕದಲ್ಲಿ ಬರುವ ದೇವತೆಗಳಿಗೆ ಸರಿಹೊಂದುವಂತೆ ಚಿತ್ರಪಟಗಳು ಹಾಗೂ ಶಿಲ್ಪಕಲಾಕೃತಿಗಳನ್ನು ಸಿದ್ಧಗೊಳಿಸಿ ಕೊಡುತ್ತಾರೆ. ಇದರಿಂದ ಬರುವ ಹಣದಿಂದ ತನ್ನ ಗುರುಕುಲ ಮಾದರಿಯ ಚಿತ್ರಶಾಲೆ ಹಾಗೂ ಶಿಷ್ಯರಿಗೆ ಸಂಬಳ ರೂಪದ ಹಣ ನೀಡಿ ತಮ್ಮ ಜೀವನವನ್ನು ನಡೆಸುತ್ತಾರೆ ಹಾಗೂ ಕೆಲವೊಂದು ಸಂದರ್ಭದಲ್ಲಿ ದೇವಾಲಯಗಳಿಗೆ ಹರಕೆಯ ರೂಪದಲ್ಲಿ ಗುರುಗಳು (ಲಾಮರವರು) ತಿಳಿಸಿದಂತೆ ಭಿತ್ತಿಚಿತ್ರವನ್ನು ಧಾನದ ರೂಪದಲ್ಲಿ ನೀಡುತ್ತಾರೆ.

ನಮ್‌ಗೇಲ್ ರವರ ಬಳಿಗೆ ಬರುವ ವ್ಯಕ್ತಿಗಳ ಶ್ರೀಮಂತಿಕೆ ಹಾಗೂ ಅವರ ಅರ್ಥಿಕ ಸಾಮರ್ಥ್ಯಕ್ಕೆ ತಕ್ಕಂತೆ ಹಣವನ್ನು ಪಡೆಯುತ್ತಾರೆ. ಸುಮಾರು ಒಂದು ಪಟಚಿತ್ರಕ್ಕೆ ಮೂವತ್ತುಸಾವಿರ ದಿಂದ ಐವತ್ತು ಸಾವಿರದ ವರೆಗೆ ಹಾಗೂ ಬಡವರಿಗೆ ೩ ಸಾವಿರದಿಂದ ೧೦ ಸಾವಿರದವರೆಗೆ ಪಡೆದುಕೊಳ್ಳುತ್ತಾರೆ. ಪಟಚಿತ್ರದ ಮೌಲ್ಯವು ಹೆಚ್ಚಾಗಿ ಬಳೆಸುವ ಚಿನ್ನದ ಬಣ್ಣ ಹಾಗೂ ಅದರ ಸೂತ್ತ ಬಳಸುವ ಡಿಸೈನ ರೇಷ್ಮೆ ಬಟ್ಟೆಯ ಮೇಲೆ ನಿರ್ಧರಿತವಾಗುತ್ತದೆ. ಅದೇ ರೀತಿಯಲ್ಲಿ ಶಿಲ್ಪ ಕಲಾಕೃತಿಯು ಕೂಡ, ಈ ರೀತಿಯಲ್ಲಿ ತಮ್ಮ ಕಲಾ ಜೀವನವನ್ನು ನಡೆಸುತ್ತಾರೆ. ಶಿಲ್ಪಕಲಾಕೃತಿಯನ್ನು (ಕಂಚಿನ) ದೆಹಲಿಯಿಂದ ತರಿಸಿ ನಂತರ ಚಿನ್ನದ ಬಣ್ಣವನ್ನು ಲೇಪಿಸಿ ಇತರ ಬಣ್ಣಗಳನ್ನು ಶಿಲ್ಪಗಳಿಗೆ ಹಚ್ಚಿ ನಂತರದಲ್ಲಿ ಅವುಗಳನು ಮೇಲಿನ ರೀತಿಯಲ್ಲಿ ಹಣ ಪಡೆದು ಬದುಕು ಸಾಗಿಸುತ್ತಾರೆ. ಈಗೆ ಒಂದು ಅಡಿಯಿಂದ ೨೦ ಅಡಿಗಿಂತಲು ಹೆಚ್ಚು ಅಳತೆಯ ಕಲಾಕೃತಿಯನ್ನು ತನ್ನ ಚಿತ್ರಶಾಲೆಯಲ್ಲಿಯೇ ನಿರ್ಮಿಸುತ್ತಾರೆ ಇವರ ಕೈಕೆಳಗೆ ೪ ರಿಂದ ೫ ಜನ ಶಿಷ್ಯವೃಂದ ಇರುತ್ತಾರೆ, ಇವರು ಉತ್ತಮ ಚಿತ್ರರಚಿಸಲು ಕಲಿತರೆಂದರೆ ೪ ಅಥವಾ ೬ ವರ್ಷದ ನಂತರ ತಮ್ಮದೇಯಾದ ಸ್ವ ಉದ್ಯೋಗವನ್ನು ಮಾಡುತ್ತಾರೆ. ಕೆಲವರು ಅರ್ಧಕ್ಕೆ ಬಿಟ್ಟು ಬೇರೆ ಉದ್ಯೋಗವನ್ನು ಹರಸಿಕೊಂಡು ಹೋಗುತ್ತಾರೆ ಇವರ ಬಳಿಯಲ್ಲಿ ಕಲಿತ ೨೦ಕ್ಕೂ ಅಧಿಕ ಶಿಷ್ಯವೃಂದದವರು, ಮುಂಡಗೂಡ , ಒಡಯರ ಪಾಳ್ಯೆ ಮತ್ತು ಗುರುಪುರದಲ್ಲಿ ಸ್ತೂಪಗಳ ನಿರ್ಮಾಣ ಹಾಗೂ ಭಿತ್ತಿನಿರ್ಮಾಣಕಾರ್ಯದಲ್ಲಿ ತೊಡಗಿದ್ದಾರೆ ಹಾಗೂ ಕೆಲವರು ಥಾಂಕ ಶೈಲಿಯ ಚಿತ್ರ ಬಿಡಿಸುವ ಮಳಿಗೆಗಳನ್ನು ನಿರ್ಮಿಸಿಕೊಂಡು ಜೀವನ ನಡೆಸುತ್ತಿದ್ದಾರೆ.

ನಮ್‌ಗೇಲ್ ಕಲಾವಿದರು " ಒಡನಾಡಿ" ಎಂಬ ಮೈಸೂರಿನ ಪ್ರತಿಷ್ಟಿತ ಸಂಸ್ಥೆಯವರು ೨೦೦೫ ರಲ್ಲಿ ಅಯೋಜಿಸಿದ ವರ್ಣ ಚಿತ್ರಕಲಾ ಶಿಬಿರದಲ್ಲಿ ಭಾಗವಹಿಸಿದ್ದಾರೆ, ೧೫ ದಿನಗಳ ಕ್ಯಾಂಪಿನಲ್ಲಿ ಮೈಸೂರಿನ ಹಾಗೂ ಅಂತರಾಜ್ಯ ಕಲಾವಿದರ ಜೊತೆ ತಮ್ಮ ಚಿತ್ರಕಲೆಯನ್ನು ಹಾಗೂ ಅದರ ಬಗ್ಗೆ ವಿಚಾರ ಮಂಥನ ನಡೆಸಿದ್ದು. ಈ ಶಿಬಿರದ ಮೂಲ ಉದ್ದೇಶ ಸಮಾಜಿಕ ಪಿಡುಗಾದ ಮಹಿಳಾ ಶೋಷಣೆಯನ್ನು ವಿರೋಧಿಸುವುದಾಗಿದೇ ಅದರೆ ಇವರು ತಮ್ಮ ಟಿಬೆಟಿಯನ್ನರ ಥಾಂಕ ಚಿತ್ರವನ್ನು ಇದಕ್ಕೆ ಸರಿಹೊಂದುವಂತೆ ಚಿತ್ರರಚಿಸಿ, ಭಾರತೀಯ ಸಾಮಾಜಿಕ ಪಿಡುಗಿಗೆ ತನ್ನದೊಂದು ಕಾಣಿಕೆ ನೀಡಿದೆನೆ ಎನ್ನುತ್ತಾರೆ.

ನಂತರ ಇವರು ತಮ್ಮ ಬಿಡುವಿನ ವೇಳೆಯಲ್ಲಿ ಅಧುನಿಕ ಶೈಲಿಯ ಚಿತ್ರಕಲಾ ಕೃತಿಗಳನ್ನು ಮಾಡಿದ್ದಾರೆ. ಅವರಿಗೆ ಅಧುನಿಕ ಕಲಾಕೃತಿಯನ್ನು ಕಲಿಯಬೇಕೆಂಬ ಅಂಬಲವನ್ನು ಹೊಂದಿದ್ದು ಬೆಂಗಳೂರಿನ ಕೊರಮಂಗಲದಲ್ಲಿ ಟಿಬೆಟಿಯನ್ನರ ಕೇಂದ್ರಿಯ ಕರ್ಛೇರಿಯ ಗೋಡೆಯ ಮೇಲೆ ಲಾಸಾ ಅರಮನೆಯ ಭಿತ್ತಿಚಿತ್ರವನ್ನು ರಚಿಸಿಕೊಟ್ಟಿದ್ದಾರೆ ಹಾಗೂ ಇತ್ಯಾದಿ ಬೌದ್ಧ ಧರ್ಮಕ್ಕೆ ಸಂಭಂಧಿಸಿದ ದೇವ-ದೇವತೆಗಳ, ಯಕ್ಷ, ಯಕ್ಷಿಣಿಯ ಚಿತ್ರಗಳನ್ನು ರಚಿಸಿದ್ದಾರೆ, ಇದುವರೆಗೆ ಇವರ ಬಳಿಯಲ್ಲಿ ಕಲಿತ ೩೦ಕ್ಕೂ ಅಧಿಕ ಶಿಷ್ಯವೃಂದದವರನ್ನೂ ಕಾಣಬಹುದು. ಈ ಕಲಾ ಜೀವನದಿಂದ ಇವರಿಗೆ ಹೆಚ್ಚಿನ ಗೌರವ ಹಾಗೂ ಜೀವನ ನಡೆಸಲು ಹಣ ದೊರೆಯುತಿದ್ದು ಇದರಿಂದ ಸಂತೃಪ್ತಿ ಜೀವನವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ.

ಬಿಡುವಿನ ವೇಳೆಯಲ್ಲಿ ಅಧುನಿಕ ಹಾಗೂ ಧಾರ್ಮಿಕ ಸಂಗೀತವನ್ನು ಕೇಳುವುದು ದೇವರನ್ನು ಪ್ರಾರ್ಥಿಸುವುದು, ನಂತರದ ಬಿಡುವಿನ ವೇಳೆಯಲ್ಲಿ ಥಾಂಕ ಭಿತ್ತಿಯ ಚೌಕಟ್ಟು ಇತ್ಯಾದಿ ಭಿತ್ತಿಸಿದ್ಧಾತ ವಿಧಿ- ವಿಧಾನ ಕಾರ್ಯ ಹಾಗೂ ಬಣ್ಣ, ಕುಂಚ. ಅಂಟು ಇತ್ಯಾದಿ ಪರಿಕರಗಳನ್ನು ಸಿದ್ಧತಗೊಳಿಸಿಕೊಳ್ಳುವುದು. ಥಾಂಕ ಚಿತ್ರದ ಸುತ್ತಲು ಇರುವ ರೇಷ್ಮೆ ನಕ್ಷೆಯ ಚೌಕಟ್ಟನ್ನು ಬನರಾಸಿನಿಂದ ತರಸಿಕೊಳ್ಳುತ್ತಾರೆ. ಅಲ್ಲಿ ಸಿದ್ಧ ಹಸ್ತರು ಧಾರ್ಮಿಕ ವಿಧಿಗೆ ತಕ್ಕಂತೆ ಡಿಸೈನನ್ನು ಸಿದ್ಧಪಡಿಸುತ್ತಾರೆ ೨೨೦೦ರೂ ಕೊಟ್ಟು ಕೊಂಡುಕೊಳ್ಳುತ್ತಾರೆ ನಂತರ ಚಿತ್ರಪಟವನ್ನು ಸೇರಿಸಿ ಹೊಲಿಯುತ್ತಾರೆ.

ಈ ಮೇಲಿನ ಎಲ್ಲಾ ಕಲಾ, ಕೆಲಸದಿಂದ ದೇವಾಲಯಗಳಿಗೆ ಕೊಡುವುದರಿಂದ ದೇವರ ಬಳಿಯಲ್ಲಿ ಪೂಜಿ ನಡೆಯುವುದರಿಂದ ಧರ್ಮ ಪ್ರಚಾರಕ್ಕೆ ತನ್ನ ಚಿತ್ರಗಳು ಬಳಕೆಯಾಗುವುದರಿಂದ ಪುನಃ ಟಿಬೆಟಿಯನ್ನರ ಇತಿಹಾಸನ್ನು ಭಾರತದಲ್ಲಿ ಸೃಷ್ಟಿದವಾಗುತ್ತದೆ, ೧೯೫೯ ರಲ್ಲಿ ನಡೆದಂತಹ ಟಿಬೆಟಿಯನ್ನರ ದಾರುಣ ಘಟನೆಯನ್ನು ಅಧುನಿಕ ಶೈಲಿ ಚಿತ್ರದಲ್ಲಿ ಚಿತ್ರಿಸಿ ಇಡೀ ಜಗತ್ತಿಗೆ ತೋರಿಸಬೇಕು ಎಂಬುವಂತಹ ಮಹದಾಂಕ್ಷೆಯನ್ನು ಕಣ್ಣಿನಲ್ಲಿ ತುಂಬಿಕೊಂಡಿದ್ದಾರೆ ಇದರ ಜೊತೆಗೆ ತಮ್ಮ ಟಿಬೆಟಿಯನ್ನ, ತಾಯಿನಾಡಿಗೆ ಸ್ವತಂತ್ರ್ಯ ಸಿಕ್ಕದರೆ ಚೀನಾ ಸೇನೆ ಹಾಳು ಮಾಡಿರುವ ದೇವಾಲಯಗಳನ್ನು ಥಾಂಕ ಶೈಲಿಯಲ್ಲಿ ಪುನಃ ರೂಪಿಸುವಂತಹ ಹಾಗೂ ತಮ್ಮ ಧರ್ಮಚಾರಣೆಯನ್ನು ಶ್ರೇಷ್ಠ ಮಟಕ್ಕೆ ಕೊಂಡ್ಯೊಯುವ, ಉಳಿಸಿ-ಬೆಳೆಸುವ ನಿರ್ಧಾರವನ್ನು ಈ ಕಲಾವಿದನು ಮಹಾದಾಸೆ ತನ್ನ ಜೀವನದ ಮುಂದಿನ ಗುರಿಯ ಇಟ್ಟುಕೊಂಡು ಈ ಒಂದು ಗುರುಕುಲ ಮಾದರಿಯ ಚಿತ್ರಶಾಲೆಯನ್ನು ನಡೆಸಿಕೊಂಡು ಜೀವನ ನಡೆಸುತ್ತಿರುವುದು ಕಂಡು ಬರುತ್ತದೆ,

೨. ಸಾಮ್‌ತೇನ್ ಕಲಾವಿದ

ದಲೈ ಲಾಮರವರೊಂದಿಗೆ ಬಂದಂತಹವರಲ್ಲಿ ಕಲಾವಿದರು ಒಬ್ಬರಾಗಿದ್ದಾರೆ. ಅ ಸಂದರ್ಭದಲ್ಲಿ ಇವರು ಚಿಕ್ಕ ಮಗುವಾಗಿದ್ದರು. ಇಲ್ಲಿಗೆ ಯಾರು ಕರೆತಂದರು ಎಂಬುವುದು ಇವರಿಗೆ ತಿಳಿಯದು. ಬೈಲುಕಪ್ಪೆಯ ಪರಿಸರದಲ್ಲಿ ನಿರಾಶ್ರಿತರಾಗಿ ೮ ವರ್ಷಗಳವರೆಗೆ ಭಾರತ ಸರ್ಕಾರ ನೀಡಿದ ಅಶ್ರಯದ ಮನೆಗಳಲ್ಲಿ ಹಲವು ಟಿಬೆಟಿಯನ್ನರ ಮನೆಯಲ್ಲಿ ಬೆಳೆದಿದ್ದು. ನಂತರ ಚೈತ್ಯಾಲಯ ಹಾಗೂ ಸ್ತೂಪಗಳಂತಹ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತೊಡಗಿದರು. ಅಷ್ಟರಲ್ಲಿ ಇವರಿಗೆ ೧೨ ವರ್ಷವಾಗಿತ್ತು, ನಂತರ ಟಿಬೆಟಿನಿಂದ ಬಂದಂತಹ ನಿಪುಣ ಕಲಾವಿದರಿಗೆ ಸಹಾಯ ಮಾಡುವ ಕೆಲಸ ವಹಿಸಿಕೊಟ್ಟರು. ಇಂಥಹ ಕಲಾ ಪರಿಸರದಲ್ಲಿ ಅನೇಕ ಕಲಾವಿದರಿಗೆ ಸಹಾಯ ಮಾಡುತ್ತ ತನ್ನ ಅಶಕ್ತಿಯನ್ನು ಚಿತ್ರ

ಬರೆಯುವ ಕಡೆ ತೋರಿಸಿದರು. ಇದರಿಂದ ಬಿಡುವಿನ ವೇಳೆಯಲ್ಲಿ ರೇಖಾಚಿತ್ರ ಬರೆಯುವುದನ್ನು ಕಲಿತರು. ಇದನ್ನು ತಿಳಿದ ಅಲ್ಲಿನ ಧರ್ಮ ಗುರುಗಳು ಇವರನ್ನು ಅಲ್ಲಿನ ಸಂದರ್ಭದಲ್ಲಿ ಗುರುಕುಲಮಾದರಿಯಲ್ಲಿ ಚಿತ್ರಕಲೆ ಬಗ್ಗೆ ಅನೌಪಚಾರಿಕವಾಗಿ ನೀಡುತ್ತಿದ್ದವರ ಕಡೆ ಸೇರಿಸಿ ಕೆಲಸದ ಜೊತೆಗೆ ಕಲಾಶಿಕ್ಷಣವನ್ನು ಪಡೆಯುವಂತೆ ಮಾಡಿದರು. ಇದರಿಂದ ಇವರ ಜೀವನವು ಕಲಿಕೆ ಮತ್ತು ಉದ್ಯೋಗವು ಏಕಕಾಲಕ್ಕೆ ನಡೆದವು ಇಂಥಹ ಪ್ರಯತ್ನದಿಂದ ಎಲ್ಲರಂತೆ ನುರಿತ ಕಲಾವಿದನಾಗಿ ಬೆಳೆದು ಬಂದರು.

ಗುರುಕುಲ ಮಾದರಿಯಲ್ಲಿಯೇ ೮ ವರ್ಷ ಚಿತ್ರಕಲಾ ಅಭ್ಯಾಸ ಮಾಡುತ್ತಾರೆ. ಇಲ್ಲಿಯ ಪರಿಸರದ ಚೈತ್ಯಾಲಯದಲ್ಲಿ ಊಟ, ವಸತಿನಿಲಯ ಇತ್ಯಾದಿ ಅರ್ಥಿಕ ವ್ಯವಸ್ಥೆ ಅಗುತ್ತಿತ್ತು, ಸ್ವಲ್ಪ ಹಣ, ಬಟ್ಟೆ ಬರೆಗೆ ಸರಿಯೋಗುವಂತಹ ಜೀವನವನ್ನು ನಡೆಸಿಕೊಂಡು ಕ್ರಮೇಣ ಸಾಮ್‌ತೇನ್ ಕಲಾವಿದರ ಜೀವನ ಶೈಲಿಯೇ ಬದಲಾಗಿ ಹೋಗಿತು ಇವರಿಗೆ ಅದೇ ಪರಿಸರದ ತೇಲಿನ್ ಪೊ ಎಂಬ ಹುಡುಗಿಯನ್ನು ಮಧುವೆ ಮಾಡಿಕೊಂಡರು ಇದರಲ್ಲಿ ಗುರುವಿನ ಒಪ್ಪಿಗೆಯು ಸಹ ನೀಡಿ ದೇವಾಲಯದಲ್ಲಿಯೇ ಮಧುವೆ ಮಾಡಿಕೊಟ್ಟಿದ್ದರು. ಇದಕ್ಕೆ ಸೊಸೈಟಿಯಿಂದ ಸಾಲ ಪಡೆದು ೩ನೇ ಕ್ಯಾಂಪ್‌ನಲ್ಲಿ ತನ್ನದೆಯಾದ ಮನೆಯನ್ನು ಕಟ್ಟಿಕೊಂಡು ಜೀವನ ನಡೆಸುತ್ತಿದ್ದರು. ೩ ವರ್ಷಗಳ ನಂತರ ತೇನ್‌ಲಿನ್- ಪೂಳಿಗೆ ೩ ಜನ ಮಕ್ಕಳಾದ ಅವರ ಹೆಸರು ತಂಜಿನ್ ತಂಬಾ, ತೆಂಜಿನ್, ತಂಜಿನ್‌ಲಾಮಾ ಇವರುಗಳೆಲ್ಲರು ಬೈಲುಕುಪ್ಪೆಯ ಪರಿಸರದಲ್ಲಿಯೇ ಸಂತೋಷದ ಜೀವನವನ್ನು ಮಾಡಿಕೊಂಡು. ಒಂದನೇ ಕ್ಯಾಂಪಿನಲ್ಲಿ ತನ್ನದೇಯಾದ

ಸಾಮ್‌ತೇನ್ ಚಿತ್ರಶಾಲೆಯನ್ನು ಗುರುಕುಲದ ಮಾದರಿಯಲ್ಲಿ ೧೯೯೦ ರಲ್ಲಿ ಧರ್ಮ ಗುರುವಿನ ಪೂಜಿಯೊಂದಿಗೆ ಅರಂಭಿಸಿದರು ಮೊದ ಮೊದಲು ೩ ಜನ ಶಿಷ್ಯರನ್ನು ಹೊಂದಿದ್ದು ನಂತರ ವರ್ಷಗಳು ಕಳೆದಂತೆ ೧೦ ಶಿಷ್ಯಂದಿರು ಕಲಿಯಲು ಬಂದರು, ಇವರಿಗೆ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಎನ್‌ಸೈಕ್ಲೋಪಿಡಿಯಾದಿಂದ ಟಿಬೆಟಿಯನ್ ಥಾಂಕ ಶೈಲಿಯ ಚಿತ್ರಗಳನ್ನು ನೋಡಿ ರಚಿಸುವುದನ್ನು ಹಾಗೂ ಅದರ ಜೊತೆಗೆ ಸಾಂಪುದಾಯಿಕ ಶಾಸ್ತ್ರದ ವಿವರಣೆಯ ಪುಸ್ತಕವನ್ನು ಎರಡನೇ ಕ್ಯಾಂಪಿನಲ್ಲಿರುವ ನಲಂದ ವಿಶ್ವವಿದ್ಯಾಲಯದಿಂದ ತರಿಸಿಕೊಂಡು ಕಲಿಸುತ್ತಿದ್ದರು. ಇದರ ಜೊತೆಗೆ ಟಿಬೆಟಿಯನ್ನರ ಜನರು ಹಾಗೂ ಬೌದ್ಧ ಧರ್ಮದ ಗುರುಗಳು ನೀಡುತ್ತಿದ್ದ ವಿವರಗಳಲ್ಲಿ ಕಲಾವಿದರುಗಳಿಂದ ಸಾಮ್‌ತೇನ್ ಪಟಚಿತ್ರಗಳು ಹಾಗೂ ಕೆಲವೊಮ್ಮ ಸ್ವರ್ಣ ದೇವಾಲಯದಲ್ಲಿನ ಭಿತ್ತಿ ಚಿತ್ರಕಲೆಯ ಕೆಲಸವನ್ನು ಮಾಡಿಕೊಡುತಿದ್ದರು, ಉಳಿದ ಸಂದರ್ಭದಲ್ಲಿ ತನ್ನ ಶಿಷ್ಯರಿಗೆ ಚಿತ್ರಬರೆಯುವುದು. ಅದಕ್ಕೆ ಅಳತೆ ಹಾಕುವುದು

ಹಾಗೂ ಬಣ್ಣಗಳನ್ನು ಹೇಗೆ ವಿವಿಧ ರೀತಿಯಲ್ಲಿ ತಯಾರಿಸುವುದು ರೇಷ್ಮೆ ಬಟ್ಟೆಯ ಮೇಲೆ ಹೇಗೆ ಭಿತ್ತಿ ತಯಾರಿಸಿ ಕೊಳ್ಳಬೇಕು ಹಾಗೂ ಪಟವನ್ನು ಹೇಗೆ ಕಟ್ಟಿಗೆಗೆ ಕಟ್ಟಿಕೊಂಡು ಚಿತ್ರ ರಚಿಸಬೇಕು. ಎಂಬುದನ್ನು ತಾನು ರಚಿಸುತ್ತಿದ್ದನ್ನು ನೋಡಿ ಕಲಿಯುವಂತೆ ಹೇಳುತ್ತಿದ್ದರು ಹಾಗೂ ಶಿಷ್ಯರೊಂದಿಗೆ ತಾವು ಮೇಲಿನ ಕೆಲಸಗಳನ್ನು ಮಾಡುತ್ತಿದ್ದಾರೆ. ದೇವಾಲಯದಲ್ಲಿ ಕಂಡು ಬರುವ ಎಲ್ಲಾ ವಸ್ತುವಿಷಯ ಚಿತ್ರಗಳನ್ನು ರಚಿಸುವುದರಲ್ಲಿ ಸಿದ್ದ ಹಸ್ತರಾಗಿದ್ದರು. ಬಿಡುವಿನ ವೇಳೆಯಲ್ಲಿ ಬೌದ್ಧ ಧರ್ಮದ ಗ್ರಂಥಗಳ ಪಟಣ ಹಾಗೂ ದೇವಾಲಯಕ್ಕೆ ಹೋಗಿ ಪ್ರಾರ್ಥನೆಯಲ್ಲಿ ಬಾಗಿಯಾಗುತ್ತಿದ್ದಾರೆ ಚಿತ್ರಶಾಲೆ ಬಿಟ್ಟರೆ

ದೇವಾಲಯ ಎಂಬಂಥ ತಮ್ಮ ಜೀವನವನ್ನು ಕಲೆಗೆ ಮೀಸಲಾಗಿಟ್ಟಿದ್ದರು ಇದುವರೆಗೆ ಇವರ ಕೈಯಲ್ಲಿ ೨ ರಿಂದ ೫೦ ರವರಿಗೂ ಶಿಷ್ಯರು ಕಲಿತಿದ್ದು, ಸದ್ಯಕ್ಕೆ ಅವರ ಕಲಾಶಾಲೆಯಲ್ಲಿ ೮ ಜನ ಶಿಷ್ಯರು ನಿತ್ಯ ಭಿತ್ತಿಚಿತ್ರ ಹಾಗೂ ಪಟ ಚಿತ್ರರಚಿಸುವರು. ಜೊತೆಯಲ್ಲಿ ದೆಹಲಿಯಿಂದ ತಂದಂತಹ ಚಿಕ್ಕ ಶಿಲ್ಪದಿಂದ ಇಡಿದು ದೊಡ್ಡ ಶಿಲ್ಪದವರೆಗೂ ವರ್ಣ ಲೇಪನವನ್ನು ಮಾಡುತ್ತಿರುತ್ತಾರೆ. ಹೆಚ್ಚು ಕೆಲಸ ಕಲಿತಿದ್ದಾರೆ ಎಂಬ ಅಧಾರದ ಮೇರೆಗೆ ೮೦೦೦ ಸಾವಿರ ರೂ ಗಳವರೆಗೆ ಮಾಸಿಕ ಹಣವನ್ನು ನೀಡುತ್ತಾರೆ. ಇವರ ಚಿತ್ರಶಾಲೆಯಲ್ಲಿ ಕಲಿಯಲು ಬೇರೆ ಕ್ಯಾಂಪುಗಳಿಂದ ಅಲ್ಲದೆ ದೇಶ–ವಿದೇಶದ ವ್ಯಕ್ತಿಗಳು ಒಂದು ತಿಂಗಳು ಗಟ್ಟಲೆ ಇವರ ಮನೆಯಲ್ಲಿಯೇ ಇದ್ದು ಕೊಂಡು ಕಲಿಯುತ್ತಾರೆ. ಇಲ್ಲಿ ಕಲಿತ ನಂತರ ಕಲಾವಿದರಾದ ಸಾಮ್‌ತೇನ್‌ರವರಿಗೆ ಇಂತಿಷ್ಟು ಗುರುದಕ್ಷಿಣೆ ನೀಡಿ ಗೌರವಿಸುತ್ತಾರೆ. ಇಂಥಹ ಗುರು ಪರಂಪರೆಯನ್ನು ಹಾಗೂ ಶಿಷ್ಯ ಪರಂಪರೆಯನ್ನು ಒಳಗೊಂಡ ಚಿತ್ರಶಾಲೆಯು ವಿಶೇಷವಾಗಿದೆ.

ಕಲಾವಿದರಾದ ಸಾಮ್‌ತೇನ್ ರವರು ಟಿಬೆಟಿಯನ್ ನೆಲೆಯ ಎಲ್ಲಾ ಟಿಬೆಟಿಯನ್ನರಿಗು ಪರಿಚಿತ ಕಲಾವಿದರಾಗಿದ್ದು ಯಾವುದೇ ಪಟ ಚಿತ್ರ ಹಾಗೂ ಭಿತ್ತಿಚಿತ್ರಗಳನ್ನು ಇವರ ಕೈಯಲ್ಲಿ ರಚಿಸಿಕೊಳ್ಳಲು ಬರುತ್ತಾರೆ. ಇವರಿಗೆ ದೇವಾಲಯದಿಂದ ಗುರುಗಳ ಸಮುಖದಲ್ಲಿ ಅನೇಕ ಗೌರದ ಸನ್ಮನಗಳು ನಡೆದಿವೆ ಹಾಗೂ ಇವರುಗಳನ್ನು ಭೇಟಿ ಮಾಡಲು ಅನೇಕ ಪತ್ರಕರ್ತರು. ಟಿ, ವಿ, ಮಾಧ್ಯಮದವರು ಬಂದು ಅನೇಕ ಸಂದರ್ಶನಗಳನ್ನು ಮಾಡಿದ್ದಾರೆ, ಮೈಸೂರು ಸಿ.ಟಿ. ಚಾನಲ್‌ಗಳಲ್ಲಿ ಇವರ ಬಗ್ಗೆ ವಿವರಗಳನ್ನು ಸಹ ಪರಿಚಯಿಸುವ ಕೆಲಸವಾಗಿದೆ, ಹಾಗೂ ಅನೇಕ ಮಾನವಿಯಶಾಸ್ತ್ರ, ಚಿತ್ರಕಲೆ, ದೇವಾಲಯ ವಾಸ್ತು ಶಾಸ್ತ್ರಗಳ ಬಗ್ಗೆ ಅಭ್ಯಾಸಿಸುವ ಅನೇಕ ಸಂಶೋಧಕರು ಸಹ ಇವರನ್ನು ಸಂದರ್ಶಿಸಿ ಅವರಿಗೆ ಬೇಕಾದಂತಹ ವಿವರಗಳನ್ನು ಕನ್ನಡ, ಹಿಂದಿ ಮತ್ತು ಇಂಗ್ಲೀಷಿನಲ್ಲಿ ಮಾಹಿತಿಯನ್ನು ಪಡೆದಿದ್ದಾರೆ. ಅವರಿಗೆಲ್ಲ ಮೇಲಿನಂತೆ ಹಾಗೂ ಅವರಿಗೆ ಬೇಕಾದ ಅವಶ್ಯಕ ಪ್ರಶ್ನೆಗಳಿಗೆ ಸಾಧ್ಯವಾದಷ್ಟು ಉತ್ತರವನ್ನು ನೀಡಿದ್ದಾರೆ,

೨೦೦೪ ನೇ ವರ್ಷದಲ್ಲಿ ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿನ ಕಲಾಗ್ಯಾಲರಿಗಳನ್ನು ಟಿಬೆಟಿನ ತಮ್ಮ ಪರಿಸರದ ಎಲ್ಲಾ ಕಲಾವಿದರ ಚಿತ್ರಕಲಾ ಪ್ರದರ್ಶನವನ್ನು ಮಾಡಿದರು, ಅಂಥಹವರಲ್ಲಿ ಹೆಚ್ಚು ಹಣಕ್ಕೆ ವ್ಯಾಪಾರವಾಗಿದ್ದು, ಬೆಂಗಳೂರಿನ ಸಹೃದಯರಿಗೆ ಪರಿಚಿತರಾದರು, ಇದರ ಜೊತೆಗೆ ಇವರದೇಯಾದ ಥಾಂಕ ಶೈಲಿಯ ಚಿತ್ರಕಲೆ ಇತರರಿಗೆ ಪರಿಚಯವಾಗಿತ್ತು. ಮುಂದೆ ಇಂಥಹ ಪ್ರದರ್ಶನ ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದಾರೆ.

ಹಲವು ಕಲಾವಿದರುಗಳು ತಮ್ಮ ಕಲಾಕೃತಿಗಳನ್ನು ಬೆಂಗಳೂರು, ಮೈಸೂರು, ಹಂಪಿ, ಇತ್ಯಾದಿ ಅಂತರಾಜ್ಯದಲ್ಲಿರುವ ಕರಕುಶಲ ಕೇಂದ್ರಗಳಿಗೆ ಕಳಿಸುವಂತೆ ಇವರು ಸಹ ಪಟಚಿತ್ರಗಳನ್ನು ಕಳುಹಿಸುತ್ತಾರೆ, ಕೆಲವೊಮ್ಮೆ ಅವರೆ ಬಂದು ಕೊಂಡು ಕೊಳ್ಳುತ್ತಾರೆ. ಇದರಿಂದ ಇವರಿಗೆ ಹೆಚ್ಚಿನ ಹಣ ಲಭಿಸುತ್ತದೆ, ಬಂದ ಹಣದಿಂದ ಕಲಾಶಾಲೆ ಹಾಗೂ ಅವರ ವಿಧ್ಯಾರ್ಥಿಗಳಿಗೆ ಅರ್ಥಿಕ ಸಹಾಯ ದೊರೆಯುತ್ತದೆ, ಇದರಿಂದ ಉತ್ತಮ ಕಲೆಯ ಪೋಷಣೆ ಹಾಗೂ ಬೆಳವಣಿಗೆದು ಕ್ರಿಯ ನಡೆಯುತ್ತದೆ. ಎಂದು ಕಲಾವಿದ ಸಾಮ್‌ತೇನ್‌ರವರು ಸಂತೋಷದಿಂದ ಒಪ್ಪಿಕೊಂಡು ಇದರಿಂದ ಬೌದ್ಧ ಧರ್ಮ ಪ್ರಚಾರದ ಕೆಲಸಕ್ಕೆ ನಾನು ಒಂದು ಅಲ್ಪ ಕಾಣಿಕೆ ನೀಡುತ್ತೇನೆ. ಭಗವಾನ್ ಬುದ್ಧನು ಸಂಚರಿಸಿದಂತೆ ನನ್ನ ಚಿತ್ರಗಳು ಸಂಚರಿಸಲಿ ಅಷ್ಟು ಸಾಕು ಎಂಬುವುದು ಇವರ ಅಭಿಪ್ರಾಯ.

ಈ ಮೇಲಿನ ಎಲ್ಲಾ ಅಂಶಗಳನ್ನು ತನ್ನ ಕಲಾಜೀವನದಲ್ಲಿ ಇಟ್ಟುಕೊಂಡು ಬೈಲುಕುಪ್ಪೆಯ ಪರಿಸರದಲ್ಲಿ ವಾಸಮಾಡುತ್ತಿರುವ ಕಲಾವಿದರು ಟಿಬೆಟಿನಲ್ಲಿ ಸ್ವಾತಂತ್ರ್ಯ ಸಿಕ್ಕರೆ ಎಲ್ಲವನ್ನು ಭಾರತೀಯರಿಗೆ ಬಿಟ್ಟು ನಾವು ಹೇಗೆ ಬಂದವೂ ಹಾಗಿ ಹೋಗಿ ಮತ್ತು ಚೀನಿಯರ ಅಕ್ರಮಣಕ್ಕೆ ಒಳಗಾಗಿರುವಂತಹ ಬೌದ್ಧ ದೇವಾಲಯಗಳು ಹಾಗೂ ಸ್ತೂಪಗಳನ್ನು ಮನದಲ್ಲಿ ಇಟ್ಟುಕೊಂಡು ಬದುಕಿದೆವೆ ಎಂದು ಹೇಳುತ್ತಾರೆ.

೩. ಚಂಪಾ ಕಲಾವಿದ

ಚಂಪಾರವರು ತೇನ್ ಪೊವಾರವರ ಮನೆತನದವರಾಗಿದ್ದು. ತೇನ್‌ಪೊವಾರವರು ಬೈಲುಕುಪ್ಪೆಗೆ ಬಂದು ನೆಲೆಸಿದ ಮೇಲೆ ಪೇಚನ್‌ರವರ ಒಬ್ಬನೆ ಮಗನಾಗಿ ೧೯೭೭ ರಲ್ಲಿ ಬೈಲುಕುಪ್ಪೆಯ ಪರಿಸರದಲ್ಲಿ ೧೦ ನೇ ತರಗತಿಯವರೆಗೆ ಟಿಬೆಟಿಯನ್ನರ ಕ್ರೇಂದ್ರಿಯ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದಾರೆ. ಇಂಥಹ ಸಂದರ್ಭದಲ್ಲಿ ಅಲ್ಲಿನ ಚಿತ್ರಕಲೆಯ ಶಿಕ್ಷಕರಾದ ಗೋವಾಪೋ ರವರ ಕಲಿಸುವಂತಹ ಚಿತ್ರಕಲೆಯಿಂದ ಪ್ರೇರಣೆಗೊಂಡು ಅದರ ಜೊತೆಗೆ ತನ್ನ ಬಾಲ್ಯದ ಸಂದರ್ಭದಲ್ಲಿ ಚೈತ್ಯಾಲಯಗಳ ಮೇಲಿನ ಭಿತ್ತಿಚಿತ್ರಗಳನ್ನು ನೋಡಿ ಚಿತ್ರಬಿಡಿಸುತ್ತಿದ್ದರು. ಹಿರಿಯ ಟಿಬೆಟಿಯನ್ನರ ಹಾಗೂ ನೇಪಾಳ ಕಲಾವಿದರನ್ನು ಗಮನಿಸುತ್ತಿದ್ದದು ಒಂದು ರೀತಿಯ ಪ್ರಭಾವ-ಪ್ರೇರಣೆ ಎಂದು ಹೇಳಬಹುದು. ಬಿಡುವಿನ ವೇಳೆಯಲ್ಲಿ ಚಿತ್ರಕಲಾ ಶಿಕ್ಷಕರು ಹೇಳಿಕೊಟ್ಟಂತಹ ವಿಧಾನದಲ್ಲಿ ಕೆಲವು ಭಿತ್ತಿಚಿತ್ರಗಳನ್ನು ರೇಖಾ ಪ್ರಧಾನವಾಗಿ ನಕಲು ಮೊಡಿ ಚಿತ್ರಸುತ್ತಿದ್ದರು, ಇದನ್ನು ದಿನವಿಡಿ ಗಮನಿಸುತ್ತಿದ್ದನು ಎಂದು ಸಂತೋಷ ಪಡುತ್ತಿದ್ದರು. ತನ್ನ ಮಗ ಎಲ್ಲಿ ಅರ್ಧಕ್ಕೆ ಶಿಕ್ಷಣ ನಿಲ್ಲಿಸುತ್ತಾನೆ ಎಂಬ ಬಯದಿಂದ " ಚಿತ್ರಬಿಡಿಸುವುದು ಸಾಕು ಮೊದಲು ಓದುವುದನ್ನು ಕಲಿ" ಎಂದು ಗದರಿಸುತ್ತಿದ್ದು ಸಹ ಉಂಟು, ಅದರೆ ಕಲಾವಿದರಿಗೆ ಗುರುವಿನ ಪ್ರೋತ್ಸಾಹ ಹೆಚ್ಚು ಇದ್ದುದರಿಂದ ಹೆಚ್ಚಿನ ಅಂತದ ಕಲಿಯುವಿಕೆಗೆ ಸಹಾಯಕವಾಗುತ್ತಿತ್ತು. ಜೊತೆ ಜೊತೆಯಲ್ಲಿದು ಶಾಲೆಯ ಮನೆ ಪಾಠಗಳನ್ನು ಓದುವುದನ್ನು ಅಭ್ಯಾಸದಲ್ಲಿ ರೊಢಿಸಿಕೊಂಡು ಹೋಗುತ್ತಿದ್ದರು. ಅದ್ದರಿಂದ ಪೋಷಕರು ಇವನಿಗೆ ಯಾವುದೇ ಅತೀಯಾದ ಅಡೆ ತಡೆಗಳನ್ನು ಮಾಡುಲಿಲ್ಲ. ಶಾಲೆಯಲ್ಲಿ ಇತನ ಗೆಳೆಯರು ಸಹ ಹೆಚ್ಚಿನ ಪ್ರೋತ್ಸಾಹವನ್ನು ನೀಡುತ್ತಿದ್ದರು ಹಾಗೂ ಕಲಾವಿದರು ಬರೆದ ಚಿತ್ರಕ್ಕೆ ನಮಸ್ಕಾರಿಸಿ ತನ್ನ ಬ್ಯಾಗಿನಲ್ಲಿ ಕೇಳಿ ಪಡೆದು ಇಟ್ಟು ಕೊಳ್ಳುತ್ತಿದ್ದರು.

ಅಪ್ಪರವತ್ತಿಗೆ ಇವರು ೧೦ ನೇ ತರಗತಿಯ ವಿದ್ಯಾಭ್ಯಾಸಮುಗಿಸಿ ೧೯೮೪ರಲ್ಲಿ ತಂದೆ ಹಾಗೂ ತಾಯಿಯ ಪ್ರೋತ್ಸಹ ಜೊತೆಗೆ ಗುರುವಿನ ಸಹಾಯದಿಂದ ನಮ್‌ಗೇಲ್ ಚಿತ್ರಶಾಲೆಗೆ ಚಿತ್ರಕಲಿಯಲು ಕೆಳುಯಿಸಿದರು. ಅದೇ ಪರಿಸರದಲ್ಲಿ ಇರುವ ನಮ್‌ಗೇಲ್ ಚಿತ್ರಶಾಲೆಗೆ ಹೋಗಿ ಸಂಜೆಯವರೆಗೆ ಚಿತ್ರ ಅಭ್ಯಾಸವನ್ನು ನಡೆಸಿದರು, ಮೊದ ಮೊದಲು ಗುರುಗಳು ಇತನಿಗೆ ಸಲಕರಣೆಗಳನ್ನು ತೊಳೆಯುವುದು ಹಾಗೂ ಪಟಭಿತ್ತಿಯನ್ನು ಸಿದ್ಧ ಪಡಿಸಲು ಚೌಕಟ್ಟಿಗೆ ಬಡ್ಡಿಯನ್ನು ಬಿಗಿಗೊಳಿಸಿ ಸಿದ್ಧಪಡಿಸುವುದು ಇತ್ಯಾದಿ ಪರಿಕರಗಳ, ಪರಿಚಯವನ್ನು ಮಾಡಿಸಿಕೊಟ್ಟರು,

ಕೆಲವು ದಿನಗಳು ಕಳೆದ ಮೇಲೆ ಇತನು ಬಿಡುವಿನ ವೇಳೆಯಲ್ಲಿ ರಚಿಸುತ್ತಿದ್ದ ಚಿತ್ರಗಳನ್ನು ಗಮನಿಸಿದ ಗುರುಗಳು ಥಾಂಕ ಚಿತ್ರ ಶೈಲಿ ಚಿತ್ರಗಳನ್ನು ಬರೆಯುವ ವಿಧಾನ, ತಾಳಮಾನದ ಅಳತೆಯ ಒಳ ಗುಟ್ಟನ್ನು ತಿಳಿಸಿದರು. ಅದರಂತೆ ಅಲ್ಲಿನ ಚಿತ್ರಗಳು ಹಾಗೂ ನಕ್ಷ ಚಿತ್ರಗಳನ್ನು ಚಿತ್ರಿಸುವುದರಲ್ಲಿ ಸಿದ್ಧ ಹಸ್ತನಾದ ಬಳಿಕ ಬಣ್ಣಗಳನ್ನು ಬಳಸುವ ವಿಧಾನವನ್ನು ಹಂತ ಹಂತವಾಗಿ ಹೇಳಿಕೊಟ್ಟರು.

ಅಷ್ಟವತ್ತಿಗಾಗಲೆ ಗುರುವು ಅರ್ಧಕ್ಕೆ ನಿಂತ ಬಣ್ಣಗಾರಿಕೆಯನ್ನು ಪೂರ್ಣಗೊಳಿಸಲು ಸಹ ತಿಳಿಸಿದರು. ಇಂಥಹ ಕೆಲಸವನ್ನು ವಿಧಾನವಾಗಿಯೊದರು ಸರಿಯಾಗಿ ತುಂಬುವುದನ್ನು ಕಲಿಯುವಂತಾದರು ಹೀಗೆ ಸಂಪೂರ್ಣ ಪಟ ಚಿತ್ರವನ್ನು ಬರೆಯುವುದನ್ನು ಕಲಿತರು. ನಂತರ ಇತರ ವಿದ್ಯಾರ್ಥಿಗಳಿಗೆ ತಿಳಿಸಿ ಕೊಡುವಂತಹ ಪ್ರಯತ್ನದಲ್ಲಿ ತಮ್ಮ ಕಲಾಶಿಕ್ಷಣವನ್ನು ವೃದ್ಧಿಸಿಕೊಂಡು, ಹೀಗೆ ತಮ್ಮ ಕಲಾಶಿಕ್ಷಣವನ್ನು ೮ ವರ್ಷದವರೆಗೆ ಕಲಿತು. ಗುರುವಿನಿಂದ ಮೆಚ್ಚುಗೆ ಹಾಗೂ ಬೈಲುಕುಪ್ಪೆಯ ಪರಿಸರಕ್ಕೆ ಒಬ್ಬ ಉತ್ತಮ ಕಲಾವಿದನೆಂದು ಹೆಸರು ಗಳಿಸಿದರು, ಮುಂದೆ ಗುರುವಿನ ಮಾರ್ಗದರ್ಶನದಂತೆ ಒಂದನೇ ಕ್ಯಾಂಪಿನ ಕರ ಕುಶಲ ಮಳಿಗೆಗಳಲ್ಲಿ ಒಂದು ಮಳಿಗೆಯಲ್ಲಿ ಚಂಪಾ ಕಲಾಶಾಲೆಯನ್ನು ೧೯೯೪ಳ ರಲ್ಲಿ ಪ್ರಾರಂಭಿಸಿದರು, ಜೊತೆಯಲ್ಲಿ ತನ್ನ ಕಲಾಶಿಕ್ಷಣ ಮುಗಿಸಿದ ಉರ್ಪೂ ಗೆಳೆಯನೊಂದಿಗೆ ಕೆಲಸವನ್ನು ಮಾಡತೊಡಗಿದರು.

ಸಾಮಾನ್ಯ ಟಿಬೆಟಿಯನ್ನರು ಹಾಗೂ ಲಾಮಗಳು ತಮ್ಮ ಹರಕೆಯನ್ನು ಪೂರ್ಣಗೊಳಿಸಲು ನೀಡುತ್ತಿದ್ದ ಚಿತ್ರಪಟ ಹಾಗೂ ಶಿಲ್ಪಗಳ ಅಳತೆಯಂತೆ ಚಿತ್ರಿಸಿ ಕೊಡುವುದು ಅದಕ್ಕೆ ತಕ್ಕಂತೆ ಹಣಪಡೆಯುತ್ತಿದ್ದರು. ಇಲ್ಲಿಗೆ ಬರುವ ಮಾನ್ಯತೆಗೆ ತಕ್ಕಂತೆ ಥಾಂಕ ಶೈಲಿಯ ಚಿತ್ರಗಳನ್ನು ಚಿತ್ರಿಸುತ್ತಿದ್ದರು. ಬಿಡುವಿನ ವೇಳೆಯಲ್ಲಿ ಬೌದ್ಧ ಧರ್ಮದ ತತ್ವಗಳನ್ನು ಹೆಚ್ಚಾಗಿ ಅಭ್ಯಾಸಿಸುವ ಹಾಗೂ ಯೋಗಾಸನಗಳನ್ನು ಮಾಡುತ್ತಾರೆ. ಕೆಲವು ಸಂದರ್ಭದಲ್ಲಿ ಹಿಂದಿ, ಇಂಗೀಷ ಭಾಷೆಯ ಸಂಗೀತವನ್ನು ಕೇಳುವುದು ಇವರಿಬ್ಬರು ಸ್ಪಷ್ಟವಾಗಿ ಕನ್ನಡವನ್ನು ಮಾತನಾಡುತ್ತಿದ್ದರು ಇದರಿಂದ ಹೆಚ್ಚಿನ ಬಣ್ಣಗಳ ಬಗ್ಗೆ ಮಾಹಿತಿಯನ್ನು ಮಾತನಾಡುತ್ತಿದ್ದರು ಕೇಳಿದಾಗ ತಮಗೆ ತಿಳಿದಿದುದ್ದನ್ನು ಹೇಳಿ ಕೆಲವೊಂದು ಸಂದರ್ಭದಲ್ಲಿ ಗೊತ್ತಿಲ್ಲದ ಮಾಹಿತಿಯ ಬಗ್ಗೆ ನೇರವಾಗಿ ಗೊತ್ತಿಲ್ಲವೆಂದು ತಿಳಿಸುತ್ತಾರೆ.

ರೇಖಾ ಚಿತ್ರಗಳನ್ನು ತಾವು ಕಲಿತ ಶಾಲೆಯ ಪುಸ್ತಕದಲ್ಲಿ ಸಂಗ್ರಹಿಸಿ ಇಟ್ಟುಕೊಂಡು ಟ್ರೇಸಿಂಗ್ ಪೇಪರನಲ್ಲಿ ದೊಡ್ಡದಾಗಿ ಚಿತ್ತಿಸಿಕೊಂಡು ನಂತರ ತಮ್ಮ ಚಿತ್ರಬಿಡಿಸುವ ಬಟ್ಟೆಯ ಮೇಲೆ ಥಾಂಕಾ ಸಂಪುದಾಯದ ತಾಳಮಾನದ ಮಾದರಿಯ ರೂಪದಲ್ಲಿ ಚಿತ್ರಣವನ್ನು ಪೂರ್ಣ ಗೊಳಿಸಿಕೊಂಡು ಅತಿ ಚಿಕ್ಕ ಹಾಗೂ ಸಾಧಾರಣ ಅಳತೆಗಳ ಚಿತ್ರಣವನ್ನು ಮಾಡಿ ಮಾರಾಟ ಮಾಡುತ್ತಾರೆ. ತಮ್ಮ ಅಂಗಡಿಯಲ್ಲಿ ನೇತು ಹಾಕಿರುತ್ತಾರೆ ಚಿತ್ರಕ್ಕೆ ಬೇಕಾದ ಪರಿಕರಗಳನ್ನು ಟಿಬೆಟಿಯನ್ನರ ಸಹಕಾರ ಸಂಸ್ಥೆಯಲ್ಲಿ ಕೊಂಡು ತಮಗೆ ಬೇಕಾದ ರೀತಿಯಲ್ಲಿ ಸಿದ್ದಪಡಿಸಿಕೊಂಡು ಚಿತ್ರಗಳ ಮೇಲೆ ಬಣ್ಣಗಳನ್ನು ಹೆಚ್ಚುತ್ತಾರೆ ಇವರು ಹಲವು ಚಿತ್ರರಚನೆಯನ್ನು ಅನುಸರಿಸಿಕೊಂಡು ಬಂದಿದ್ದು ಚಿತ್ರಕಲೆಯನ್ನು ಇನ್ನೂ ಹೆಚ್ಚಾಗಿ ಅಭ್ಯಾಸಿಸುವುದು ಹಾಗೂ ದೊಡ್ಡ ದೊಡ್ಡ ಚಿತ್ರಗಳನ್ನು ರಚಿಸುವಂತಹ ಕನಸು ಕಂಡಿರುವುದನ್ನು ತಮ್ಮದೇ ದೊಡ್ಡ ಪ್ರಮಾಣದ ಚಿತ್ರಶಾಲೆಯನ್ನು ನಿರ್ಮಿಸಿ ಮತ್ತು ಚಿತ್ರಕಲಾವಿದರನ್ನು ಸೃಷ್ಟಿಸುವ ಕನಸು ಕಂಡು ತಮ್ಮ ಕಲಾಬದುಕನ್ನು ಟಿಬೆಟಿಯನ್ನ ಶಾಲಾ ವಿದ್ಯಾರ್ಥಿಗಳಿಗೆ ಹಾಗೂ ಸಮಾರಂಭಗಳಲ್ಲಿ ನೀಡಿರುತ್ತಾರೆ, ಇವರು ತಮಗೆ ಅಧುನಿಕ ಚಿತ್ರಗಳು ಇಷ್ಟವಿಲ್ಲ ಅವುಗಳು ದೈವತ್ವಕ್ಕಿಂತ ದೂರವಿದ್ದು, ಉಪಯೋಗಕ್ಕೆ ಬರದಂತಹ ಕಲೆಗಳೆಂದು ಧ್ವನಿಸುವ ಮನೋಭಾವವನ್ನು ಹೊಂದಿದ್ದಾರೆ.

ಚಿತ್ರಗಳ ವಸ್ತುವಿಷಯವನ್ನು ತಾವೂ ಅಳವಾಗಿ ಅಭ್ಯಾಸಿಸಿಲ್ಲ ಕಾರಣ ವಿದ್ಯಾಭ್ಯಾಸಕಿಂತ ಹೆಚ್ಚಾಗಿ ಚಿತ್ರಕಲೆಯ ಮೇಲೆ ಮನಸ್ಸು ಹೊಂದಿರುವುದರಿಂದ ಬೌದ್ಧ ಧರ್ಮದ ಥಾಂಕಾದ ಅಭ್ಯಾಸವು ಹೆಚ್ಚಾಗಿ ತಿಳಿದಿಲ್ಲ ಇವೆಲ್ಲವನ್ನು ಬೌದ್ಧ ಧರ್ಮದ ಎಲ್ಲಾ ಅಯಾಮಗಳನ್ನು ತಿಳಿದು ಕೊಳ್ಳಬೇಕು. ಇಂತಹ ಪ್ರಯತ್ನಕ್ಕೆ ಕೈ ಹಾಕಿದರೆ ವರ್ಷಗಳು ಉರುಳುವುದೆಂದು ಹೇಳುತ್ತಾರೆ. ಇವರಿಗೆ ಟಿಬೆಟಿ

ನೆಲೆಗಳಿರುವ ಪ್ರದೇಶದಲ್ಲಿ ಬೌದ್ಧ ದೇವಾಲಯಗಳನ್ನು ಹೆಚ್ಚು ಭಿತ್ತಿಚಿತ್ರಗಳಲ್ಲಿ ನಿರ್ಮಿಸಬೇಕೆಂಬ ಮಹಾದಾಶೆಯನ್ನು ಹೊಂದಿದವರಾಗಿದ್ದಾರೆ.

೪. ದುಂಡೋ ಕಲಾವಿದ

ನೇಪಾಳ ದೇಶವು ಸಹ ಅನೇಕ ಟಿಬೆಟಿಯನ್ನರ ನೆಲೆ ಬೀಡು ಇಲ್ಲಿಂದ ಅನೇಕ ಕಲಾವಿದರು ಭಾರತಕ್ಕೆ ಬಂದು ಟಿಬೆಟಿಯನ್ನರ ದೇವಾಲಯ, ಸ್ತೂಪ ಹಾಗೂ ದ್ವಾರಬಾಗಿಲುಗಳನ್ನು ನಿರ್ಮಿಸಿರುವುದು ಕಂಡು ಬರುತ್ತದೆ. ಇಂಥಹ ಪ್ರಯತ್ನದಲ್ಲಿ ಬಂದತಹ ಕಲಾವಿದರುಗಳಲ್ಲಿ ದುಂಡೋರವರು ಒಬ್ಬರು. ಇವರು ೧೯೯೩ರಲ್ಲಿ ಕರ್ನಾಟಕದ ಟಿಬೆಟಿಯನ್ನರ ನೆಲೆಯಾದ ಮುಂಡಗೋಡಕ್ಕೆ ಬಂದವರು ಇವರ ಜೊತೆ ಅನೇಕ ಕಲಾವಿದರು ಬಂದಿರುವರು. ಇವರು ಮುಂಡಗೊಡಕ್ಕೆ ಬಂದು ಅಲ್ಲಿನ ಬೌದ್ಧ ವಿಹಾರದಲ್ಲಿ ಉಳಿದುಕೊಂಡಿದ್ದು ಇವರಿಗೆ ಅಲ್ಲಿನ ದೇವಾಲಯದ ಧಾರ್ಮಿಕ ಗುರುಗಳ ಸಮ್ಮತಿ ಮೇರೆಗೆ ಹಾಗೂ ಅಲ್ಲಿನ ಕಲಾ ಕೆಲಸಗಳು ಇರುವುದರಿಂದ, ವಸತಿ ಹಾಗೂ ಸಂಭಳವನ್ನು ನೀಡಿ ಇರಿಸಿಕೊಂಡಿದ್ದಾರೆ.

ಇವರಿಗೆ ೪೫ ವರ್ಷ ವಯಸ್ಸಾಗಿದ್ದು ಇವರ ತಂದೆ ಹೆಸರು ರವಿನೋಪಾ, ತಾಯಿ ದುಂಡೋಪಾವಿ, ಚೂನಾಲ್ ಎಂಬ ಅಣ್ಣನನ್ನು ಒಂದಿದ್ದು ಅಣ್ಣ ಅಮೇರಿಕಾದಲ್ಲಿ ಇಂಜಿನಿಯರಾಗಿ ಕೆಲಸ ಮಾಡುತಿದ್ದು, ತನ್ನ ಸಂಸಾರವನ್ನು ಅಲ್ಲೆ ನಡೆಸುತ್ತಿದ್ದಾರೆ. ದುಂಡೋ ಕಲಾವಿದರು ತನ್ನ ಬಾಲ್ಯದ ಕಲಾಶಿಕ್ಷಣವನ್ನು ಗುರುಕುಲಮಾದರಿಯಲ್ಲಿ ನೇಪಾಳಯ ದೇವಾಲಯದ ಪರಿಸರದಲ್ಲಿ ಅನೌಪಚಾರಿಕ ಶಿಕ್ಷಣವನ್ನು ಚಿಕ್ಕಂದಿನಲ್ಲಿ ಯಾವುದೇ ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ, ಚಿಕ್ಕಂದಿನಿಂದ ಅಲ್ಲಿನ ಪರಿಸರದ ದೇವಾಲಯಗಳ ಮೇಲಿನ ೮ ಶ್ರೇಷ್ಠ ಚಿನ್ನೆಗಳನ್ನು ರಸ್ತೆಯ ಮೇಲಿರುವುದನ್ನು ಅಳಿಸಿ ಹೊಗಿರುವುದನ್ನು ನೋಡಿ ಪೂರ್ಣಗೊಳಿಸುವ ಪ್ರಯತ್ನ ಮಾಡುವುವಂತಹ ಕ್ರಿಯತ್ಮಾಕ ಚಟುವಟಿಕಯಲ್ಲಿ ಚಿತ್ರಕಲೆಯನ್ನು ಕಲಿಯುತ್ತಾರೆ, ಸೀಸದ ಕಡ್ಡಿಯಿಂದ ತನ್ನ ರೇಖಾ ಚಿತ್ರವನ್ನು ಕಲಿಯಲು ಮುಂದುವರಿಸಿ, ಅಲ್ಲಿನ ದೇವಾಲಯದ ಗುರುಗಳು ಹಾಗೂ ಲಾಮಗಳು ಪ್ರೋತ್ಸಹದಿಂದ, ಅಲ್ಲೆ ಉಳಿದು ಕೊಂಡಿದ್ದ ಕಲಾವಿದರ ಬಿಳಿ ಕಳುಹಿಸುತ್ತಾರೆ. ಅವರ ಬಳಿ ಎಂಟು ವರ್ಷದವರೆಗೆ ಕಲಿತ ಇವರು ಶಿಲ್ಪಗಳನ್ನು ಮಾಡುವುದರಲ್ಲಿ ಅಸಕ್ತಿ ತೋರಿದರಿಂದ ಮೊದ ಮೊದಲು ಸ್ತೂಪಗಳ ಅಕಾರವನ್ನು ಕಟ್ಟುವುದರಿಂದ ಏರಕ ಹೊಯ್ಯುವ (ಲೋಹ ಮಾಧ್ಯಮ) ಬೃಹತ್ ಅಕಾರ ಶಿಲ್ಪ ಮಾಡುವ ಕಡೆ ಕಲಿಯಲು ಪ್ರಯತ್ನಿಸುತ್ತಾರೆ, ಅಲ್ಲೆ ಅನೇಕ ವರ್ಷಗಳವರೆಗೆ ಕಲಿತು, ನಂತರದಲ್ಲಿ ಧರ್ಮಶಾಲೆಯಲ್ಲಿ ತನ್ನ ಪ್ರಯೋಗವನ್ನು ಮಾಡುತ್ತಾರೆ. ಶಿಲ್ಪಕಲೆಯಲ್ಲಿ ಸಿದ್ದಹಸ್ತರಾಗುತ್ತಾರೆ, ಎಂಬುದನ್ನು ತಿಳಿದ ಪರಮ ಪೂಜ್ಯೆ ಪೇನ್‌ರೀನ್ ಪೊಚೆರವರು ಮುಂಡಗೋಡದಲ್ಲಿ ನಿರ್ಮಿಸುವ ದೇವಾಲಯಗಳನ್ನು ಸ್ತೂಪ, ಹಾಗೂ ದ್ವಾರಬಾಗಿಲುಗಳ ಉಬ್ಬು ಶಿಲ್ಪ ಮತ್ತು ಮೂರ್ತಿ ಶಿಲ್ಪಗಳನ್ನು ನಿರ್ಮಿಸಿಕೊಂಡು ಕರೆಸಿಕೊಂಡರು. ಸುಮಾರು ೧೯೯೩ ರಲ್ಲಿ ಬಂದ ಇವರು ಮುಂಡಗೊಡದಲ್ಲಿ ಇದ್ದು ಅಲ್ಲಿನ ದೇವಾಲಯಗಳಲ್ಲಿ ನೇಪಾಳದಿಂದ ಹಾಗೂ. ದೆಹಲಿಯಿಂದ ಬರುವ ಮೂರ್ತಿ ಶಿಲ್ಪಗಳ ಬಿಡಿಭಾಗವನ್ನು ಜೋಡಿಸುವ ಹಾಗೂ ಮೂರ್ತಿರೂಪಕ್ಕೆ ಸಿದ್ಧಗೊಳಿಸುವ ಕೆಲಸವನ್ನು ಇತರ ಕಿರಿಯ ಕಲಾವಿದರ ಸಹಾಯದಿಂದ ಮಾಡುತ್ತಿದ್ದಾರೆ ಲೋಹದ ತಗಡಿನಿಂದ ಮೂರ್ತಿರೂಪಕ್ಕೆ ತಂದ ಶಿಲ್ಪಗಳ ಜೋಡಣೆಯನ್ನು ತಾಮ್ರದಿಂದ ಬೆಸೆಯುವುದು. ಹಾಗೂ ಅವುಗಳನ್ನು ಶಾಸ್ತ್ರೀಯವಾಗಿ ಪ್ರತಿಷ್ಠಾಪಿಸುವ ಕೆಲಸವನ್ನು ಮಾಡುತ್ತಿದ್ದು ಅವುಗಳ ಮೇಲೆ

ಚಿನ್ನದ ಬಣ್ಣದ ಲೇಪನ ಮಾಡುವಂತೆ ಮೂರ್ತಿಯನ್ನು ಸಿದ್ದಗೊಳಿಸುತ್ತಾರೆ. ನಂತರದಲ್ಲಿ ಬೇರೆ ಭಿತ್ತಿ ಚಿತ್ರಕಲಾವಿದರು ಪೂರ್ಣಗೊಳಿಸುತ್ತಾರೆ. ಇದರ ಜೊತೆಗೆ ಸಿಮೆಂಟ್ ಮಾಧ್ಯಮದಲ್ಲಿ ಅನೇಕ ದೇವಾಲಯಗಳ ಬಾಗಿಲಿನ ಉಬ್ಬು ನಕ್ಷಾಕೆಲಸ ಹಾಗೂ ಸ್ತೂಪಗಳ ಮೇಲಿನ ಎಂಟು ವಿವಿಧ ಅಕಾರದ ಸ್ತೂಪದ ರಚನೆ ಹಾಗೂ ಅವುಗಳ ಮೇಲಿನ ಉಬ್ಬು ಶಿಲ್ಪದ ನಕ್ಷಾಚಿತ್ರವನ್ನು ಸಿಮೆಂಟಿನಿಂದ ತೈಯಾರಿಸುವ ಕೆಲಸ ಮಾಡುತ್ತಾರೆ,

ಕೆಲವೊಂದು ಸಂದರ್ಭದಲ್ಲಿ ಕೆಲಸಕ್ಕೆ ನಿಗದಿತವಾದ ಒಪ್ಪಿಗೆ ಪಡೆದು ಅದಕ್ಕೆ ತಕ್ಕ ಹಣವನ್ನು ಪಡೆದು ತಮ್ಮ ಕಲಾ ಕೆಲಸವನ್ನು ನಿರ್ವಹಿಸುತ್ತಾರೆ, ಇವರ ಜೊತೆ ನೇಪಾಳದ ಸೇರಾ, ಲಾಮ್ ಕ್ಯಾಂಪನಲ್ಲಿ ಕಲಿತವರು ಶಿಲ್ಪಗಳಿಗೆ ಬಣ್ಣಗಾರಿಕೆ ಮಾಡುತ್ತಾರೆ, ದೆಹಲಿಯಿಂದ ಲೋಹವಿಗ್ರಹತರಿಸಿ ಅವುಗಳನ್ನು ಟೊಳ್ಳು ಮಾದರಿಯಲ್ಲಿ ಸಿದ್ದಪಡಿಸಿ ಅವುಗಳ ಬಿರುಕಿನ ಭಾಗಕ್ಕೆ ತಾಮ್ರದಿಂದ ಬೆಸೆದು ಗಟ್ಟಿಗೊಳಿಸುವಲ್ಲಿ ದುಂಡೋ ಕಲಾವಿದರು ಸಿದ್ಧ ಹಸ್ತರಾಗಿರುತ್ತಾರೆ, ಇವರು ತಾಮ್ರ ಮಾಡುವ ಶಿಲ್ಪ ಕೆಲಸವನ್ನು ತುಂಬ ಸಾಂಪ್ರದಾಯಕ ಕ್ರಿಯೆಗಳಿಂದ ಸಿದ್ಧಪಡಿಸುತ್ತಾರೆ, ಹುಣಿಮ ದಿನಕ್ಕೆ ಸಂಪೂರ್ಣ ಬುದ್ಧನ ಅಥವಾ ಇನ್ಯವುದೇ ದೇವಾತೆಯ ತಲೆಯ ಭಾಗವನ್ನು ಪೂರ್ಣಗೊಳಿಸುವ ಪದ್ಧತಿಯನ್ನು ಕಾಣಬಹುದು. ದ್ವಾರಬಾಗಿಲು ನಿರ್ಮಾಣದಲ್ಲಿಯೇ ಸಹ ಇದೇ ಪದ್ಧತಿ ಅನುಸರಿಸುತ್ತಾರೆ.

ಟಿಬೆಟಿನಲ್ಲಿ ಸ್ವತಂತ್ರ್ಯ ಸಿಕ್ಕರೆ ದುಂಡೋರವರು ಹೇಳುವಂತೆ ಟಿಬೆಟಿನಲ್ಲಿ ಮತ್ತೆ ದೇವಾಲಯ ಕಟ್ಟುವುದಕ್ಕೆ ಇಲ್ಲಿ ತರಬೇತಿ ಹಾಗೂ ಪ್ರಾಯೋಗಿಕ ಕೆಲಸವನ್ನು ಎಲ್ಲರಿಗೂ ಕಲಿಸುತ್ತೇನೆ, ಎಲ್ಲರನ್ನು ಸಿದ್ಧಹಸ್ತರನ್ನಾಗಿ ಮಾಡುತ್ತೇನೆ ಎಂಬುವುದನ್ನು ಅಂತರಾಳದಲ್ಲಿ ವಿಚಾರ ಇಟ್ಟುಕೊಂಡಿದ್ದಾನೆ,

೫. ಸೊನಮ್ ರೀನ್ ಚೀನ್ ಕಲಾವಿದ

ಭಾರತದ ಹಿಮಾಚಲ ಪ್ರದೇಶದಿಂದ ೨೦೦೪ರಲ್ಲಿ ಬಂದಂತಹ ವಿದ್ಯಾರ್ಥಿಯಾಗಿದ್ದು ಸಾಮ್‌ತೇನ್ ಕಲಾವಿದರ ಚಿತ್ರಶಾಲೆಯಾದ ಸಾಮ್‌ತೇನ್ ಚಿತ್ರಶಾಲೆಯಲ್ಲಿ ಥಾಂಕ ಚಿತ್ರಕಲೆಯನ್ನು ಕಲಿಯಲು ಬಂದವರಾಗಿದ್ದು. ಇಲ್ಲಿ ಯಾವುದೇ ಪ್ರವೇಶ ಪತ್ರ, ಶುಲ್ಕ ಇತ್ಯಾದಿ ಪದ್ಧತಿಗಳಲ್ಲದೆ ಬಾಯಿಮಾತಿನ ಪರಿಚಯದಿಂದಲೆ ಒಪ್ಪಿಕೊಂಡರೆ ಪ್ರವೇಶ ಪಡೆದಂತೆ ಅಂದಿನಿಂದ ಚಿತ್ರಕಲಾ ಅಭ್ಯಾಸವನ್ನು ಗುರುಕುಲ ಮಾದರಿಯಲ್ಲಿ ಪ್ರಾರಂಭವಾಗುತ್ತದೆ.

ಸೊನಮ್‌ರೀನ್ ಚೀನ್ ಹುಟ್ಟಿದ್ದು ೧೯೮೬ರಲ್ಲಿ ಇವರ ತಂದೆ ತಾಸಿದೂನ್, ತಾಯಿ ತಾಸಿಯಂಗ್ ತೋಕ್ಷೆ, ರವರಿಗೆ ಮೂರುಜನ ಮಕ್ಕಳಿದ್ದಾರೆ ಮಧ್ಯೆದಲ್ಲಿ ಜನಿಸಿದವರು ಸೊನಮ್‌ರವರು ಚಿಕ್ಕಂದಿನಿಂದಲೆ ಚಿತ್ರಕಲೆಯನ್ನು ಕಲಿಯುವ ಅಶಕ್ತಿ ಹೊಂದಿಧ್ದು. ಇವರು ಬಾಲ್ಯಾದ ಪರಿಸರವನ್ನು ಹಿಮಾಚಲ ಪ್ರದೇಶದಲ್ಲಿ ಕಳೆದಿದ್ದು ಏಳನೇ ತರಗತಿಯವರೆಗೆ ವಿದ್ಯಾಭ್ಯಾಸ ಮುಗಿಸಿ ನಂತರ ಓದಿನಲ್ಲಿ ಅಶಕ್ತಿ ಇಲ್ಲದೆ ಶಾಲೆಯಲ್ಲಿ ಬಿಟ್ಟು ಬಿಡುತ್ತಾರೆ, ನಂತರದಲ್ಲಿ ತಮ್ಮ ಪರಿಸರದಲ್ಲಿ ಇರುವ ಬೊರ್ಡ ಬರೆಯುವ ಕಲಾವಿದರ ಪರಿಚಯ ಮಾಡಿಕೊಂಡು ಅಕ್ಷರಲೇಖನ ಹಾಗೂ ಸಣ್ಣ ಪುಟ್ಟ ಚಿತ್ರಗಳನ್ನು ಬರೆಯುವುದು ಬಳಸಿಕೊಂಡು ೨೦ ವರ್ಷ ತುಂಬುವರೆಗೂ ಕೆಲವು ಚಿತ್ರಗಳನ್ನು ಗೋಡೆಯ ಮೇಲೆ ಜಾಹೀರಾತುಗಳಂತಹ ಚಿತ್ರಗಳನ್ನು ಹಾಗೂ ಚಿಕ್ಕ ಚಿಕ್ಕ ಬೌದ್ಧ ದೇವತೆಗಳ ಚಿತ್ರಗಳನ್ನು ಬರೆಯುತ್ತಾ ಕೊನೆಗೆ ಥಾಂಕಾ ಶೈಲಿಯ ಚಿತ್ರಗಳನ್ನು ಕಲಿಯಲು ಪ್ರಯತ್ನಿಸಿದರು ಕಲಿಯಲು ಕಷ್ಟವೆನಿಸಿತ್ತು.

ಇದನ್ನು ಕಲಿತೆ ಕಲಿಯುತೇನೆಂದು ಅಟಮಾರಿತನದಿಂದ ಕೆಲವು ಬೌದ್ಧ ಗುರುಗಳು ತಿಳಿಸಿದರು ಟಿಬೆಟಿಯನ್ನರ ಚಿತ್ರಶಾಲೆಗೆ ಕಳುಹಿಸಿದರು ಇದಕ್ಕೆ ಕಲಾವಿದರ ತಂದೆ-ತಾಯಿಗಳ ಒಪ್ಪಿಗೆಯನ್ನು ಪಡೆದು ಚಿತ್ರಕಲೆಯಲು ಬಂದಿದ್ದಾರೆ. ೪ ವರ್ಷದಿಂದ ಇದುವರೆವಿಗೂ ಅನೇಕ ಭಿತ್ತಿಚಿತ್ರ ಬರೆಯುವ ರೇಖಾವಿಧಾನ ಹಾಗೂ ಪಟಚಿತ್ರ ಬರೆಯುವ ವಿಧಾನಗಳನ್ನು ಕಲಿತಿದ್ದು ಇದರ ಜೊತೆಗೆ ಪರಿಕರಗಳನ್ನು ತೈಯಾರಿಸಿ ಕೊಳ್ಳುವುದು ಹಾಗೂ ಭಿತ್ತಿಗೆ ಬಣ್ಣವನ್ನು ಸಿದ್ಧಾಗೊಳಿಸುವಂತಹ ಪೂರ್ವ ಸಿದ್ದತೆಯ ಕೆಲಸವನ್ನು ಕಲಿಸಿದರು.

ನಿತ್ಯವಿಡಿ ಗುರುವಿನ ಮನೆಯಲ್ಲಿಯೇ ಉಳಿದುಕೊಂಡು ಚಿತ್ರಕಲೆಯ ಅಭ್ಯಾಸವನ್ನು ಮಾಡುವುದರ ಜೊತೆ ಬೌದ್ಧ ಎನ್ ಸೈಕ್ಲೋಪಿಡಿಯದಲ್ಲಿನ ರೇಖಾಚಿತ್ರ ಹಾಗೂ ಶಾಸ್ತ್ರೀಯ ತಾಳಮಾನಗಳ ಅಳತೆ ವಿಧಿ-ವಿಧಾನಗಳನ್ನು ಸೂಕ್ತರೀತಿಯಲ್ಲಿ ಅರ್ಥವಾಗುವಂತೆ ಗುರುವಿನ ಬಳಿ ಬಿಡುವಿನ ವೇಳೆಯಲ್ಲಿ ಚರ್ಚೆ, ವಾದವಿವಾದಗಳ ಮೂಲಕ ಕಲೆಯನ್ನು ಕಲಿಯುತ್ತಿದ್ದಾರೆ.

ಮೇಲಿನ ರೀತಿಯಲ್ಲಿ ತನ್ನ ಕಲಾಬದುಕಿನ ಜೊತೆಗೆ ಬೌದ್ಧ ಧರ್ಮದ ಪ್ರಾರ್ಥನೆಶಾಸ್ತ್ರ, ಇತ್ಯಾದಿ ಕ್ರಿಯೆಗಳಲ್ಲಿ ಬಾಗಿಯಾಗುವುದು, ಹೆಚ್ಚು ದಿನಗಳ ಕಾಲ ಕುಳಿತಲ್ಲೆ ಚಿತ್ರಬರೆಯುವುದರಿಂದ ಯೋಗ, ಮೇಡಿಟೇಷನ್, ಪ್ರಾಣಿಯಮ ಇತ್ಯಾದಿ ಅಭ್ಯಾಸವನ್ನು ಮಾಡಿಕೊಂಡು ತನ್ನ ಕಲಾ ಶಿಕ್ಷಣವನ್ನು ಪಡೆಯುತ್ತಿದ್ದಾರೆ ಸಂಪೂರ್ಣ ಕಲಿತ ನಂತರ ತಮ್ಮ ವ್ಯಾವಹಾರಿಕ ಬದುಕಿನಲ್ಲಿ ಚಿತ್ತಶಾಲೆಯನ್ನು ತೆರೆಯುವಂತಹ ಮಹಾದಾಸೆಯನ್ನು ಹೊಂದಿದ್ದಾರೆ,

೬. ದೀಪೇಶ್ ಕಲಾವಿದ

ಭಾರತದ ನೆರೆಯ ರಾಷ್ಟ್ರವಾದ ನೇಪಾಳವು ಸಹ ಅನೇಕ ಕಲಾವಿದರ ತಾಣವಾಗಿದ್ದು ಅಲ್ಲಿನ ಟಿಬೆಟಿಯನ್ನರು ಭಾರತಕ್ಕೆ ಬರುತ್ತಿರುವುದು, ಟಿಬೆಟಿಯನ್ನರು ಇತಿಹಾಸದಿಂದ ತಿಳಿದು ಬರುವುದು. ನೇಪಾಳದ ವಿದ್ಯಾರ್ಥಿಯಾದ ದೀಪೇಶ್‌ರವರು ೧೯೯೮ ರಲ್ಲಿ ಭಾರತದಲ್ಲಿನ ಕರ್ನಾಟಕದ ನೆಲೆಯಾದ ಬೈಲುಕುಪ್ಪೆಯ ನಮ್‌ಗೇಲ್ ಕಲಾಶಾಲೆಗೆ ಥಾಂಕ ಶೈಲಿ ಚಿತ್ರಕಲೆ ಕಲಿಯಲು ಬಂದು ಸೇರಿಕೊಂಡಿದ್ದಾರೆ, ದೀಪೇಶರವರು ೧೯೮೪ ರಲ್ಲಿ ಗಾವಂದಲ್ ಎಂಬ ಪ್ರದೇಶದಲ್ಲಿ ಜನಿಸಿದ್ದು, ರಾಮ್ ಬಹದ್ದೂರ್ ಮನೆತನದಲ್ಲಿ ತಾಯಿ ಬೀಬಾರವರ ೧೦ ಮಕ್ಕಳಿಗೆ ಜನ್ಮನೀಡಿದ್ದು. ಅವರಲ್ಲಿ ಐದನೇ ಮಗನಾಗಿ ಜನಿಸಿದ್ದಾರೆ ಇವರು ನಾಲ್ಕುನೇ ತರಗತಿಯವರಿಗೆ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ್ದು ಮುಂದೆ ಓದಿನಲ್ಲಿ ಅಶಕ್ತಿ ಇಲ್ಲದೆ ಅರ್ಧಕ್ಕೆ ಶಾಲೆಬಿಟ್ಟು. ದೇವಾಲಯದಲ್ಲಿ ಕಸಗುಡಿಸುವ ಕೆಲಸಕ್ಕೆ ಸೇರಿದರು ಕಾರಣ ಹೆಚ್ಚು ಮಕ್ಕಳನ್ನು ಹೊಂದಿದ ಸಂಸಾರವು ನಡೆಸಿಕೊಂಡು ಹೋಗುವುದು ಕಷ್ಟ ಸಾಧ್ಯವಾದರಿಂದ ಕಲಾವಿದರು ತಮ್ಮಲ್ಲೇ ಇರುವ ದೇವಾಲಯಲ್ಲಿ ಕೆಲಸ ಮಾಡುವುದು ಹಾಗೂ ಬಿಡುವಿನ ವೇಳೇಯಲ್ಲಿ ದೇವಾಲಯದ ಚಿತ್ರಗಳನ್ನು ಚಿತ್ರಿಸುವುದು ಕಲಿಯುತ್ತಿದ್ದರು ಈಗೆ ತನ್ನ ಹತ್ತು ವರ್ಷವನ್ನು ಕಳೆಸರು. ಇವರು ಗುರುಗಳೇ ಇಲ್ಲಿದೆ ಕಲಾಶಿಕ್ಷಣವನ್ನು ಅರಂಭಿಸಿ ಉತ್ತಮ ಚಿತ್ರವನ್ನು ಬರೆಯುವ ಚಾತುರತೆ ಹೊಂದಿದರು ಇದನ್ನು ಗಮನಿಸಿದ ಸುತ್ತ ಮುತ್ತಲಿನ ಜನರು ಇವನನ್ನು ಚಿತ್ರಶಾಲೆಗೆ ಸೇರಿಸಿ ಎಂದು ತಂದೆ, ತಾಯಿಗೆ ಪ್ರೋತ್ಸಾಹಿಸಿದರು. ಅದರೆ ತಮ್ಮ ಸಂಸಾರವನ್ನು ಸಾಕಲು ಸಾಧ್ಯವಾಗದ ತಂದೆತಾಯಿಗಳು. ಇದು ಹೇಗೆ ಸಾಧ್ಯೆ ಎಂಬುವ ಸಂದರ್ಭದಲ್ಲಿ. ಅಲ್ಲಿನ ದೇವಾಲಯದ ಗುರುವಿಗೆ ನಮ್‌ಗೇಲ್ ಕಲಾವಿದರು ಚಿತ್ರ ಬರೆದು ಕೊಟ್ಟಿದ್ದುದರಿಂದ ನಮ್‌ಗೇಲ್ ಚಿತ್ತಶಾಲೆ ವಿಳಾಸವನ್ನು ನೀಡಿ, ಅಲ್ಲಿ ಯಾವುದೇ ರೀತಿ ಕಲಿಯಲು ಹಣ ಕೇಳುವುದಿಲ್ಲ ಗುರುಕುಲ

ಮಾದರಿಯಲ್ಲಿ ಕಲಿಸುತ್ತಾರೆ ಎಂದು ತಿಳಿಸಿ, ತಮ್ಮ ಒಂದು ಪತ್ರವನ್ನು ಬರೆದು ಕೊಟ್ಟು ಊರಿನ ಕೆಲವು ಶ್ರೀಮಂತ ವ್ಯಕ್ತಿಗಳ ಬಳಿ ಹಣವನ್ನು ಸಂಗ್ರಹಿಸಿ ಕಳುಹಿಸುತ್ತಾರೆ ನಂತರ ೧೯೯೫ರಲ್ಲಿ ಭಾರತ ಸರಾಕರದ ಒಪ್ಪಿಗೆ ಮೇರೆಗೆ ಕರ್ನಾಟಕದಲ್ಲಿನ ಬೈಲುಕುಪ್ಪೆ ಪರಿಸರಕ್ಕೆ ಬಂದು ನಮ್‌ಗೇಲ್ ಚಿತ್ರಶಾಲೆಯಲ್ಲಿ ಸೇರಿಕೊಂಡರು

ನಮ್‌ಗೇಲ್ ಗುರುವಿನ ಮನೆಯಲ್ಲಿಯೇ ಉಳಿದುಕೊಂಡು ತನ್ನ ಕಲಾ ಅಭ್ಯಾಸವನ್ನು ಅರಂಭಿಸಿದ ಕಲಾವಿದರು. ಮಾದ ಮಾದಲು ಅಲ್ಲಿನ ಕಲಾಶಾಲೆಯ ಪರಿಕರಗಳನ್ನು ಸೂಚ್ಚತೆ ಮಾಡುವ ಹಾಗೂ ವಿವಿಧ ಬಣ್ಣದ ಡಬ್ಬಗಳನ್ನು ಬಣ್ಣ ಕಲೆಸಿ ಇಡುವಂತಹ ಕೆಲಸಕಲಿತು. ಜೊತೆಯಲ್ಲಿ ಗುರುಗಳು ಹೇಳಿಕೊಟ್ಟ ಸರಳಗೈ ಚಿತ್ರಣ, ಜಾಮಿತಿ ಚಿತ್ರಣ ಹಾಗೂ ಥಾಂಕ ಚಿತ್ರಕಲೆಯ ತಾಳಮಾನಗಳ ಅಳತೆಯನ್ನು ಹಾಕಿಕೊಂಡು ಅನಾಟಮಿ ರೂಪದ ಚಿತ್ರಗಳನ್ನು ಮಾದಲು ಒಂದು ವರ್ಷದವರೆಗೆ ಅಭ್ಯಾಸಿಸುತ್ತಾರೆ. ನಂತರದಲ್ಲಿ ಗುರುವಿನ ಚಿತ್ರಗಳು ನೋಡುವುದು. ಹಾಗೂ ಅವರು ಬಳಸುವಂತಹ, ತಂತ್ರಜ್ಞಾನವನ್ನು ಅನುಕರಿಸುವುದು ಜೊತೆಗೆ ಗುರುವಿಗೆ ಸಹಾಯಕವಾಗುವಂತೆ ಚಿತ್ರಗಳನ್ನು ರಚಿಸಿಕೊಡುವಂತಹ ಕೆಲಸದಲ್ಲಿ ಪರಿಣಿತಿ ಹೊಂದುವರಾಗಿರುತ್ತಾರೆ. ಕೆಲವು ಸಂದರ್ಭದಲ್ಲಿ ಇತರ ವಿದ್ಯಾರ್ಥಿಗಳ ಜೊತೆ ಕೊಡಿ ಸಂಪೂರ್ಣ ಚಿತ್ರವನ್ನು ಬಿಡಿಸಿ ಗುರುವಿನ ಮಾರ್ಗ ದರ್ಶನದಿಂದ ವರ್ಣಗಾರಿಕೆಯ ಕಾರ್ಯವನ್ನು ಅಭ್ಯಾಸಿಸುತ್ತಾರೆ. ಕಷ್ಠವಾದಂತಹ ಸಂದರ್ಭದಲ್ಲಿ ಗುರುವಿನ ಸಲಹೆ ಪಡೆಯತ್ತಾರೆ ಕಾರಣ ಸೂಕ್ಷ್ಮ ಅತಿ ಸೂಕ್ಷ್ಮವಾದಂತಹ ರೇಖೆಗಳನ್ನು ರಚಿಸುವಾಗ ಬೂದು ಗನ್ನಡಿಯಲ್ಲಿ ಬಳಸಿಕೊಂಡು ರಚಿಸುವುದುಂಟು ಹಾಗೂ ಟಿಬೆಟಿಯನ್ನರ ಥಾಂಕ ಶೈಲಿಯ ಬಣ್ಣಗಾರಿಕೆಯು ಮೂಲ ಬೌದ್ಧತತ್ವ ದಡಿಯಲ್ಲಿ ಬೆಳೆದು ಬಂದಿವೆ,

ಮೊದಲು ಕಲಾವಿದರಾದ ದೀಪೇಶ್ ಒಂದು ದೇವತೆಗಳನ್ನು ಹೊಂದಿದಂತ ಚಿತ್ರ ಬರೆಯುವುದನ್ನು ೨ ವರ್ಷಗಳ ಕಾಲ ಕಲಿತು ಅಭ್ಯಾಸ ಮಾಡಿದರು. ನಂತರ ಮೂರನೆ ಮತ್ತು ನಾಲ್ಕನೇ ವರ್ಷದ ವತ್ತಿಗೆ ಅನೇಕ ದೇವಾತೆಗಳ ಚಿತ್ರವನ್ನು ಸಂಯೋಜನೆ ಮಾಡುವ ಅದಕ್ಕೆ ತಕ್ಕಂತೆ ತಾಳಮಾನ ಚಿತ್ರವನ್ನು ರಚಿಸುವ ಸೂಕ್ಷ್ಮ ಚಾತುರತೆಯನ್ನು ವೃದ್ಧಿಸಿಕೊಂಡರು,

ಐದು ವರ್ಷದ ನಂತರ ನಮ್‌ಗೇಲ್ ಗುರುಗಳು ಇವರ ಚಿತ್ರ ಅಭ್ಯಾಸವನ್ನು ಮೆಚ್ಚಿ ತನ್ನ ಚಿತ್ರಶಾಲೆಯಲ್ಲಿಗೆ ಬರುವಂತಹ ಟಿಬೆಟಿಯನ್ನರಿಗೆ ಚಿತ್ರಪಟ ಬರೆದು ಕೊಡುವಂತೆ ಹಾಗೂ ಅವರಿಂದ ಹಣವನ್ನು ಪಡೆಯುವಂತಹ ಕೆಲಸವನ್ನು ನಿರ್ವಹಿಸುತ್ತಾರೆ ಗುರುವಿನ ಸಲಹೆಯಂತೆ ತಾನು ದುಡಿದ ಹಣವನ್ನು ತನ್ನ ಮನೆಗೆ ಕಳುಹಿಸುತ್ತಾರೆ. ಹಾಗೂ ಎಲ್ಲಾ ಜನಸಾಮನ್ಯರಂತೆ ಸಾಧಾರಣ ಜೀವನ ನಡೆಸಿಕೊಂಡು ಹೋಗುತ್ತಿದ್ದರೆ ಈಗಲು ಸಹ ನಮ್‌ಗೇಲ್ ಕಲಾಶಾಲೆಯಲ್ಲಿ ಗುರುಗಳಿಗೆ ಬರುವಂತಹ ಅರ್‌ಡರ್‌ಗಳನ್ನು ಮಾಡಿಕೊಂಡು, ಇನ್ನು ಚಿತ್ರಕಲೆ ಕಲಿಯುವ ಅಂಬಲ ಹಾಗೂ ಹೆಚ್ಚಿನ ಪರಿಣಿತಿ ಪಡೆದು ತಮ್ಮ ಗುರುಗಳು ನಡೆಸುತ್ತಿರುವಂತೆ ಚಿತ್ರಶಾಲೆಯನ್ನು ನಡೆಸಿ ಅನೇಕ ಅಶಕ್ತಿ ಹೊಂದಿರುವ ವಿದ್ಯಾರ್ಥಿಗಳಿಗೆ ಚಿತ್ರಕಲೆಯನ್ನು ಕಲಿಸ ಬೇಕೆಂದು ಅಸೆ ಇಟ್ಟುಕೊಂಡಿದ್ದಾರೆ, ಮುಂದೆ ನೇಪಾಳಕ್ಕೆ ಹೋಗಿ ತನ್ನ ಊರಿನ ಜನರಿನ ಅಸೆಯಂತೆ ಒಂದು ದೊಡ್ಡ ಚಿತ್ರಶಾಲೆ ತೆರೆದು ಅಶಕ್ತಿ ಮಕ್ಕಳಿಗೆ ಕಲೆಯ ಬಗ್ಗೆ ಬೌದ್ಧ ಧರ್ಮದ ಬಗ್ಗೆ ಮಾಹಿತಿ ನೀಡಿ ಉತ್ತಮ ಚಿತ್ರಕಾರನಾಗಿ ದೇಶಕ್ಕೆ ಕೀರ್ತಿತರುವಂತೆ ಮಾಡುವುದನ್ನು ತಿಳಿಸುವರು.

****

ಟಿಬೆಟಿಯನ್ ಕಲಾವಿದರು



■ ಊರ್ಫ್ ಕಲಾವಿದರು



■ ನಮಗೆಲ್ ಕಲಾವಿದ



■ ನಮಗೆಲ್ ಕಲಾಶಾಲೆಯ ವಿದ್ಯಾರ್ಥಿಗಳು

ಟಿಬೆಟಿಯನ್ ಕಲಾವಿದರು



ಸಾಮ್‌ತೇನ್ ಕಲಾವಿದರು



ಪಟಚಿತ್ರ ಸಿದ್ಧಪಡಿಸುತ್ತಿರುವ ಕಲಾವಿದ



ಚಂಪಾ




ದೀಪೇಶ್

ಟಿಬೆಟಿಯನ್ ಕಲಾವಿದರು



■ ಸೋನಮ್ ರೀನ್‌ಚೀನ್



■ ದುಂಡೋ ಕಲಾವಿದ



■ ದುಂಡೋ ಕಲಾವಿದ



■ ಉರ್ಪೋ



ಅಧ್ಯಾಯ–ಎಂಟು

ಟಿಬೆಟಿಯನ್ ಕಲೆ ಮತ್ತು ಕರ್ನಾಟಕ ಕಲೆಯ ಸಹಸಂಬಂಧ

ಬೌದ್ಧಧರ್ಮದಲ್ಲಿ ಹೀನಯಾನ ಮಹಾಯಾನಗಳೆಂಬ ಎರಡು ವಿಭಜನೆಗಳಾದವಷ್ಟೆ. ಹೀನಯಾನ ಪಾಲಿ ಭಾಷೆಯಲ್ಲಿರುವ ಬುದ್ಧನ ಮೂಲ ತತ್ವಗಳಿಗೆ ನಿಷ್ಠವಾಗುಳಿಯಿತು. ಕರ್ನಾಟಕದಲ್ಲಿ ಅಶೋಕನ ಶಾಸನಗಳಿರುವ ಕಾಲದಲ್ಲಿ ಇದ್ದದ್ದು ಈ ಬೌದ್ಧ ಶಾಖೆ, ಈಗ ಶ್ರೀಲಂಕ, ಟಿಬೆಟ್, ಬರ್ಮಾ, ಇಂಡೋನೇಷಿಯಾಗಳಲ್ಲಿ ಅದರ ರೂಪಗಳಿವೆ. ಆದರೆ ಮಹಾಯಾನದ್ದು ಕೊಂಚ ಭಿನ್ನ ಹಾದಿ, ಅದು ಈ ಮೇಲೆ ಬಂದ ಕಥೆಯ ಪ್ರಕಾರ ಸಾಮೂಹಿಕ ಬಿಡುಗಡೆಯ ಕಲ್ಪನೆ ಹೊಂದಿತು, ಇದರ ಮುಖ್ಯ ಲಕ್ಷಣವೆಂದರೆ ಬೋಧಿಸತ್ವದ ಕಲ್ಪನೆ. ಬೋಧಿ ಸತ್ವವೆಂದರೆ ಮುಂದೆ ಬುದ್ಧವಾಗಲಿರುವರು. ಬುದ್ಧಿ ಮತ್ತು ಮನಸ್ಸಿನ ಉತ್ಕರ್ಷಕ್ಕೆ ಯತ್ನಿಸುವ ಸಾಧಕರು, ಇದು ಅವಲೋಕಿತೇಶ್ವರ, ಮಂಜುಶ್ರೀ, ವಜ್ರಪಾಣಿ ಮುಂತಾದ ಅವತಾರದ ಕಲ್ಪನೆಗೆ ಕಾರಣವಾಯಿತು. ಇಲ್ಲಿ ಬುದ್ಧನು ದೈವವಾಗಿ ಬುದ್ಧಿ ಮೂರ್ತಿಗಳ ಪೂಜೆ ಆರಂಭವಾಯಿತು. ಯೋಗ ಸಾಧನೆಗೂ ತಾಂತ್ರಿಕ ಆಚರಣೆಗಳಿಗೂ ಆಸ್ಪದವಿದ್ದು, ಇಲ್ಲಿ ಗಂಡು-ಹೆಣ್ಣುಗಳ ಮಿಲನದ ಅನೇಕ ಗುಪ್ತ ಆಚರಣೆಗಳಿದ್ದವು. ನೇಪಾಳ, ಜಪಾನ, ಚೀನಾ, ಟಿಬೆಟುಗಳಲ್ಲಿ ಹರಡಿದ ಮಹಾಯಾನವು ಕರ್ನಾಟಕಕ್ಕೆ ಶಾತವಾಹನರ ಕಾಲದಲ್ಲಿ ಅಗಮಿಸಿತು. ಇಲ್ಲಿನ ಸನ್ನತಿ(ಚಿತ್ತಾಪುರ) ಮುಂತಾದ ಬೌದ್ಧ ಕೇಂದ್ರಗಳು ಆಗ ರೂಪುಗೊಂಡವು, ಚೀನೀ ಯಾತ್ರಿಕ ಹ್ಯೊಯನ್‌ತ್ಸಾಂಗನು ಬನವಾಸಿಗೆ ಬಂದು ನೂರಾರು ವಿಹಾರಗಳು ಸಾವಿರಾರು ಭಿಕ್ಷುಗಳನ್ನು ಕಂಡ ಬಗ್ಗೆ ವರದಿ ಮಾಡುತಾನೆ.

೮ನೇ ಶತಮಾನದ ವೇಳೆ ಕರ್ನಾಟಕವನ್ನು ಪ್ರವೇಶಿಸಿದಂತಿರುವ ವಜ್ರಯಾನವು ೧೫ನೇ ಶತಮಾನದವರೆಗೂ ಇತ್ತು. ವಜ್ರಯಾನ ಕ್ಷೇತ್ರಗಳಾದ ಬನವಾಸಿ, ಶ್ರೀಶೈಲ, ಡಂಬಳ, ಕೋಳಿವಾಡ ಹಾಗೂ ಕದ್ರಿಗಳಲ್ಲಿ ಅವಲೋಕಿತೇಶ್ವರ, ತಾರಾಭಗವತಿ ಹಾಗೂ ಮಂಜುಶ್ರೀ ದೇವತೆಗಳಿಗೆ ವಿಹಾರ ಹಾಗೂ ಗಡಿಗಳು ಅಂದು ನಿರ್ಮಾಣಗೊಂಡವು ಅವಲೋಕಿತನು ಕರುಣೆಯ ದೇವತೆ, ತಾರ ಅವನ ಸ್ತ್ರೀ ಸಂಗಾತಿ, ಆಕೆಯ ಇನ್ನೊಂದು ಹೆಸರು ಪ್ರಜ್ಞಾ ಎಂದರೆ ವಿವೇಕವನ್ನು ಪ್ರತಿನಿಧಿಸುವಳು. ಮಂಜುಶ್ರೀ "ಜ್ಞಾನದ ದೇವತೆ" ಗುಹ್ಯ ಸಮಾಜ ತಂತ್ರ "ಮಂಜುಶ್ರೀ ಕಲ್ಪ" ಇವು ವಜ್ರಯಾನದ ದರ್ಶನಿಕ ಕೃತಿಗಳು. ವಜ್ರಯಾನದಲ್ಲಿ ಬರುವ ವಜ್ರ ಶಬ್ದಕ್ಕೆ ದಾರ್ಶನಿಕವಾದ ವಿಭಿನ್ನ ಅರ್ಥಗಳಿವೆ.[೧]

೧. ರಹಮತ್ ತರೀಕೆರೆ: ಕರ್ನಾಟಕದ ನಾಥಪಥ: ಪು.ಸಂ. ೩೪-೩೫

ಇಂತಹ ಇತಿಹಾಸ ಹೊಂದಿರುವ ಕರ್ನಾಟಕದ ಕಲೆಯು ಒಂದು ಭಾಗವಾದರೆ ಮಹಾಯಾನವು ಟಿಬೆಟಿಯನ್ನರ ಕಲೆಗೂ ಹತ್ತಿರದ ಸಂಬಂಧವಿದೆ. ಟಿಬೆಟಿಯನ್ನರ ಮಹಾಯಾನ ದೇವತೆಗಳಂತೆ ಕರ್ನಾಟಕದಲ್ಲಿ ಬೌದ್ಧ ದೇವತೆಗಳು ಹುಟ್ಟಿ ಒಂದು ಮತ್ತೊಂದರ ಸಂಬಂಧವನ್ನು ಗುರುತಿಸಬಹುದು.

ಟಿಬೆಟಿನ ಚಿತ್ರಕಲೆ ಹಾಗೂ ಶಿಲ್ಪಕಲೆಯಲ್ಲಿ ಬಳಸಿಕೊಂಡ ದೇವತೆಗಳಾದ ಬುದ್ಧ, ಅವಲೋಕಿತೇಶ್ವರ, ಮುಂಜುಶ್ರೀ, ಗುರುಪದ್ಮ ಸಂಭವ, ಶಾಂತರಕ್ಷಿತ, ಯಮಂತಕ, ತಾರದೇವಿ ಇವುಗಳೆಲ್ಲವು ಮೂಲ ಭಾರತೀಯ ಅದರಲ್ಲೂ ಕರ್ನಾಟಕ ದೇವತೆಗಳಾಗಿದ್ದು ಬೌದ್ಧಧರ್ಮದ ಪ್ರಚಾರ ಹಾಗೂ ಟಿಬೆಟಿನ ರಾಜ ಮನೆತನದ ಅರಸರು ಬೌದ್ಧ ಧರ್ಮ ಪ್ರಚಾರಕ್ಕೆ ಸಂಸ್ಕೃತ ಗ್ರಂಥಗಳನ್ನು ಟಿಬೆಟಿನ ಭಾಷೆಗೆ ಭಾಷಾಂತರಿಸಲು ಅನೇಕ ಬೌದ್ಧ ಸನ್ಯಾಸಿಗಳನ್ನು ಕರಿಸಿದಾಗ ಅನೇಕ ಹಸ್ತಪ್ರತಿಗಳಂತಹ ಪಾಳಿ ಭಾಷೆಯ ಗ್ರಂಥಗಳು ಗಾಂಧಾರ ಕಲೆಯ ಅನೇಕ ಚಿತ್ರ ಹಾಗೂ ಶಿಲ್ಪಗಳು ಟಿಬೆಟಿಗೆ ಹೋಗಿ ಪ್ರಬುದ್ಧವಾಗಿ ಪ್ರಚಾರವಾಗಿ ಟಿಬೆಟಿನ ಥಾಂಕ ಶೈಲಿಗೆ ಬದಲಾಗಿ ಮೇಲಿನ ದೇವತೆಗಳನ್ನು ಆಧರಿಸಿ ಅನೇಕ ದೇವಾಲಯ, ಸ್ತೂಪ ಹಾಗೂ ಬೌದ್ಧ ಮಂದಿರಗಳು ಸಹಸ್ರಾರು ಸಂಖ್ಯೆಯಲ್ಲಿ ಉಗಮಗೊಂಡವು ಎಂಬುದಕ್ಕೆ ಟಿಬೆಟಿನ ಕಲಾ ಇತಿಹಾಸವನ್ನು ಗಮನಿಸುವುದರಿಂದ ತಿಳಿದು ಬರುತ್ತದೆ.

ಇಂಥಹ ಬೌದ್ಧಧರ್ಮ ಆಧರಿತ ಚಿತ್ರ, ಶಿಲ್ಪಗಳು ಅಶೋಕನ ಕಾಲದಿಂದ ಕರ್ನಾಟಕಕ್ಕೆ ಕಾಲಿರಿಸಿ ಮೇಲಿನ ದೇವತೆಗಳ ಹೆಸರಿನಲ್ಲಿ ಅನೇಕ ದೇವಾಲಯಗಳು ಹುಟ್ಟಿಕೊಂಡು ಕರ್ನಾಟಕದ ಸಂಸ್ಕೃತಿಯಲ್ಲಿ ತನ್ನದೇಯಾದ ಕಲೆಯ ಇತಿಹಾಸವನ್ನು ಸೃಷ್ಟಿಸಿವೆ ಅವುಗಳನ್ನು ಈ ಕೆಳಗಿನಂತೆ ಕಾಣಬಹುದು.

ಕರ್ನಾಟಕದಲ್ಲಿ ಅವಲೋಕಿತೇಶ್ವರ ಹೆಸರಿನಲ್ಲಿ ಹಲವಾರು ಗ್ರಾಮ ನಗರಗಳು ಸಿಗುತ್ತವೆ, ಲಕ್ಕುಂಡಿ (ಗದಗ) ಲೋಕಾಪುರ (ಮುಧೋಳ), ಲೋಕವಳ್ಳಿ (ಮೂಡಿಗೆರೆ), ಲೋಕಾನಾಥಪುರ (ಹೊಸಪೇಟೆ), ಲಕ್ಕೊಳ್ಳಿ (ಮುಂಡಗೋಡ) ಇದು ಈಗ ಟಿಬೆಟಿನ ನೆಲೆಯಾಗಿ ಅನೇಕ ಬೌದ್ಧ ದೇವಾಲಯಗಳು ಹುಟ್ಟಿಕೊಂಡಿವೆ. ಬೌದ್ಧ ಧರ್ಮದ ಮಹತ್ವ ಸಾರುವ ಅಶೋಕ ಶಾಸನಗಳಿರುವ ಬ್ರಹ್ಮಗಿರಿ, ಸಿದ್ಧಾಪುರಗಳ ಪರಿಸರದಲ್ಲಿ ಲುಂಕೆ ಮೇಲೆ ಇದೆ.

ಕುಂದವರ್ಮನು (ಕ್ರಿ.ಶ.೯೬೮) ಕದರಿಕಾ ವಿಹಾರ ಕಟ್ಟಿಸಿದ ದಾಖಲೆಯಿದೆ. ವಿಹಾರವೆಂದರೆ ಬೌದ್ಧ ಸನ್ಯಾಸಿಗಳು ಇರುತ್ತಿದ್ದ ಮಠ (ಚೈತ್ಯಾಲಯ ಎಂದರೆ ಬೌದ್ಧ ಮೂರ್ತಿ ಇರುವ ಗುಡಿ. ಸ್ತೂಪ ಎಂದರೆ ಅಸ್ಥಿ ಪಂಜರದ ಸಮಾಧಿ)[೨] ಗೋವಿಂದ ಪೈಗಳ ಪ್ರಕಾರ ಶಿವನಿಗೇ ಏಕೆ ಸನಾತನ ಧರ್ಮದ ಯಾವ ದೇವತೆಗೂ ಮಂಜುನಾಥ ಎಂದು ಹೆಸರಿಲ್ಲ ಇದು ಸ್ಪಷ್ಟವಾಗಿ ಬೋಧಿ ಸತ್ವರಲ್ಲಿ ಒಬ್ಬನಾದ ಅವಲೋಕಿತೇಶ್ವರನ ಹೆಸರು ಕೆಲವು ವಿದ್ವಾಂಸರು ಅವಲೋಕಿತೇಶ್ವರನ ಜಟೆಯಲ್ಲಿ ಶಿವಲಿಂಗದ ಕುರುಹುಗಳಿರುವುದನ್ನು ಗಮನಿಸಿ ಇದು ಶಿವನ ವಿಗ್ರಹವೆಂದರೂ ಬಹಳವೆಂದರೆ ಬೌದ್ಧಪ್ರಭಾವ ಪಡೆದ ಶಿವನಮೂರ್ತಿಯಂದೂ ಭಾವಿಸಿದರು. ಹಲವು ಕಡೆ ಶಿವನಿಗೆ ಲೋಕೇಶ್ವರನೆಂಬ ಹೆಸರು ಇರುವ ಕಾರಣ ಇದು ಮೂಲತಃ ಶೈವ ಗುಡಿ ಎಂದು ತಿಳಿದಿದ್ದಾರೆ. ಒಟ್ಟಿನಲ್ಲಿ ಕರ್ನಾಟಕದಲ್ಲಿ ಅವಲೋಕಿತೇಶ್ವರ ದೇವತೆಯ ಮೂಲಸ್ಥಾನವೆಂದು ಮೇಲಿನ ಕುರುಹುಗಳಿಂದ ಗಮನಿಸಬಹುದು.

ನಂತರ ಇತ್ತೀಚಿಗೆ ಚಿತ್ರದುರ್ಗದಲ್ಲಿ ಇರುವ ಗಂಡುಗಲಿ ವಸ್ತು ಸಂಗ್ರಹಾಲಯದಲ್ಲಿ ೧೨ ತಲೆಯ ಅವಲೋಕಿತೇಶ್ವರನ ಕಂಚಿನ ವಿಗ್ರಹವನ್ನು ಕಾಣಬಹುದು. ಈ ವಿಗ್ರಹದ ಸಂಪೂರ್ಣ

೨. ರಹಮತ್ ತರೀಕೆರೆ: ಕರ್ನಾಟಕದ ನಾಥಪಂಥ, ಪು.ಸಂ. ೩೯

ಆಕಾರ ರಚನೆಯು ಈಗಿನ ಟಿಬೆಟಿಯನ್ನರ ಶಿಲ್ಪಗಳಿಗೂ ಹಾಗೂ ಚಿತ್ರಗಳಿಗೂ ಸಂಪೂರ್ಣ ಸಾಮ್ಯತೆ ಕಂಡುಬಂದಿದೆ. ಆದರೆ ವಸ್ತ್ರವಿನ್ಯಾಸ, ಆಭರಣಗಳಲ್ಲಿ ಟಿಬೆಟಿನ ಥಾಂಕ ಶೈಲಿಯ ಬೆಳವಣಿಗೆಯಾಗಿರುವುದು ಕಂಡುಬರುತ್ತಿದೆ. ಅಂದ ಮೇಲೆ ಬೌದ್ಧ ಧರ್ಮದಲ್ಲಿ ಪ್ರಥಮವಾಗಿ ಹುಟ್ಟಿಕೊಂಡ ದೇವತೆಗಳು ಇಂದಿನವರೆಗೂ ಅಲ್ಪ ಸ್ವಲ್ಪ ಹೊಂದಾಣಿಕೆಯಾಗಿರುವುದು ಕಂಡುಬರುತ್ತದೆ.

"ಕರ್ನಾಟಕದ ನಾಥಪಂಥ" ಎಂಬ ಪುಸ್ತಕದಲ್ಲಿ ರಹಮತ ತರೀಕೆರೆಯವರು ಬರೆದಿರುವ "ವಜ್ರಯಾನ ಹಾಗೂ ನಾಥಪಂಥ" ಸಾಮ್ಯತೆಯನ್ನು ಗುರುತಿಸುವಲ್ಲಿ ಅವಲೋಕಿತೇಶ್ವರ ಕರ್ನಾಟಕದಲ್ಲಿ ಇರುವ ಅನೇಕ ಉಲ್ಲೇಖಗಳನ್ನು ಗುರುತಿಸಿದ್ದಾರೆ. ಇದನ್ನು ಆಧರಿಸಿ ಹೇಳುವುದಾದರೆ ಬೌದ್ಧಧರ್ಮವು ಅನೇಕ ಕಾಲಘಟ್ಟಗಳನ್ನು ದಾಟಿ ಟಿಬೆಟಿಗೆ ಹೋಗಿ ಬೆಳೆದಿತ್ತು ಅಥವಾ ನಂತರ ಟಿಬೆಟಿನಿಂದ ಭಾರತಕ್ಕೆ ಬಂದಿತು ಎಂಬುವುದರ ಇತಿಹಾಸ ದೊರಕುತ್ತದೆ.

ಜೋಕಾನ್‌ನಲ್ಲಿರುವ ಅವಲೋಕಿತೇಶ್ವರ ಮೂರ್ತಿಯನ್ನು ದಕ್ಷಿಣ ಭಾರತದಿಂದ ಟಿಬೆಟಿಗೆ ತಂದಿರಬೇಕೆಂಬ ಅಭಿಪ್ರಾಯವಿದೆ. ಕಾಶ್ಮೀರದಿಂದ ಹಲವು ಶಿಲ್ಪಿಗಳು ಟಿಬೆಟಿಗೆ ಹೋಗಿ ಕೆಲಸ ಮಾಡಿರುವುದುಂಟು. ಹಾಗೆಯೇ ಬ್ರಾನ್‌ಯಾನದಲ್ಲಿರುವ ಕೆಲವು ಲೋಹ ಮೂರ್ತಿಗಳು ಪಾಲಿ ಶೈಲಿಯಲ್ಲಿದ್ದು,[೩] ನಂತರ ಥಾಂಕ ಶೈಲಿಗೆ ಬದಲಾದವು. ಅಜಂತ ಭಿತ್ತಿ ಚಿತ್ರದಲ್ಲಿ ಕಂಡುಬರುವ ಅವಲೋಕಿತೇಶ್ವರ ಭಿತ್ತಿ ಚಿತ್ರವು ಹೀಗೆ ಟಿಬೆಟಿಯನ್ನರ ಭಿತ್ತಿ ಚಿತ್ರಗಳಿಗೂ ಸಾಮ್ಯತೆಯನ್ನು ಕಾಣಬಹುದು. ಈಗೆ ಹತ್ತು ಹಲವು ಉದಾಹರಣೆಗಳನ್ನು ಗಮನಿಸಿದರೆ ಟಿಬೆಟಿಯನ್ನರ ಕಲೆ ಇತಿಹಾಸದೊಂದಿಗೆ ಕರ್ನಾಟಕದ ಕಲೆಗಳ ಸಂಬಂಧ ಇರುವುದನ್ನು ಊಹಿಸಬಹುದು.

ತಾರದೇವಿಯು ಅವಲೋಕಿತೇಶ್ವರನ ಸಂಗಾತಿ ದೇನತೆಯಾದ ಉಪಾಸನೆ ಕರ್ನಾಟಕದಲ್ಲಿ ವ್ಯಾಪಕವಾಗಿತ್ತು. ಡಂಬಳದ ಶಾಸನದಲ್ಲಿ (ಕ್ರಿ.ಶ.೧೧) ತಾರೆಯ ವರ್ಣನೆ ಮಾಡುತ್ತಾ ಅವಳನ್ನು ಅರಿವಿನಸಾಗರ ಕಡೆಯಲು ಹುಟ್ಟಿದವಳೆಂದು ಬುದ್ಧನಿಗೆ ವಿಭೂತಿ ಕೊಟ್ಟವಳೆಂದೂ ಕರೆಯಲಾಗಿದೆ. ಐಹೊಳೆಯ ದುರ್ಗಾಗುಡಿಯ ವಾಸ್ತು ಬೌದ್ಧ ಚೈತ್ಯಾಲಯದ ಮಾದರಿಯದು ಎಂದು ವಾಸ್ತುಶಿಲ್ಪದ ಪರಿಣಿತರು ಗುರುತಿಸುತ್ತಾರೆ. ಈ ದುರ್ಗಾದೇವಿಯು ತಾರಾಭಗವತಿ ಇರಬಹುದು. ಈ ಭಾಗದಲ್ಲಿ ತಾರೆಯ ಇನ್ನೊಂದು ಹೆಸರಾದ ಮಂಗಳೆಯ ಹೆಸರಲ್ಲಿ ಎರಡು ಮಂಗಳೂರುಗಳಿವೆ. ಇವು ತಾರೆಯ ಶಾಸನ ಗುಡಿ ಹಾಗೂ ವಿಗ್ರಹಗಳು ಸಿಗುವ ಲಕ್ಕುಂಡಿ, ಡಂಬಳ, ಕೋಳಿವಾಡಕ್ಕೆ ಸಮೀಪದಲ್ಲಿವೆ.

ತಾರೆಯ ಮೂರ್ತಿಗಳು ಬಳ್ಳಿಗಾವೆ, ಕೋಳಿವಾಡ, ಬನವಾಸಿ ಹಾಗೂ ಡಂಬಳಗಳಲ್ಲಿ ಸಿಗುತ್ತವೆ. ತಾರೆಯ ಚಹರೆ ಸುಂದರವಾದ ದುಂಡು ಕೋಲುಮುಖ, ಚಿಕ್ಕಕಣ್ಣು, ಪ್ರಧಾನವಾದ ಮೂಗು, ಕರಿಬಾಯಿ, ನಗುಮುಖಭಾವ, ದಪ್ಪಕುಚದ್ವಯ, ೧೦ ಅವಳ ಕಿರೀಟದಲ್ಲಿ ಧ್ಯಾನಿ ಬುದ್ಧನಿದ್ದಾನೆ. ಶಾಸನಗಳ ಪ್ರಕಾರ ಕರ್ನಾಟಕದಲ್ಲಿ ಮೂರು ತಾರೆಯ ವಿಹಾರಗಳಿದ್ದವು ಒಂದು ಲಕ್ಕುಂಡಿಯಲ್ಲಿ ಎರಡು ಬಳ್ಳಿಗಾವಿ, ಬನವಾಸಿ ಇವುಗಳು ಭಗ್ನವಾಗಿ ಸಿಗುತ್ತವೆ.[೪]

ತಾರಾಭಗವತಿ ವಿಗ್ರಹ ಸಿಕ್ಕಿರುವ ಬಳ್ಳಿಗಾವೆಯ ಕೆರೆಯ ಹೆಸರು, ತಾವರೆಯ ಕೆರೆ, ಈಗ ಕರ್ನಾಟಕದಲ್ಲಿ ತಾರದೇವಿಯ ಹೆಸರಿನಲ್ಲಿ ತಾರಹಣಸೆ (ದೇವನಹಳ್ಳಿ), ತಾವರೆಹಳ್ಳಿ (ಹೊಸಪೇಟೆ),

೩. ರಘುನಾಥಭಟ್ಟ ಎಚ್.ಆರ್. ಬನವಾಸಿಯ ಬೌದ್ಧ ವಿಶೇಷಗಳು: ಒಂದು ಸಮೀಕ್ಷೆ: ಪು.ಸಂ. ೬೬

೪. ಕನ್ನಡ ವಿಶ್ವಕೋಶ: ಪು.ಸಂ. ೫೪೪

ತಾರೀಕೆರೆ, ತಾಹೆಗಳ್ಳಿ (ಜಗಳೂರು), ತಾವರೆಕೊಪ್ಪ (ಟಿ.ನರಸೀಪುರ) ತಾವರೆಹಳ್ಳಿ ಹೀಗೆ ಮುಂತಾದ ಊರುಗಳಿವೆ. ಹೀಗೆ ತಾರೆಯ ಹೆಸರಿನಲ್ಲಿ ಊರುಗಳ ಗುಚ್ಛವೇ ಇದೆ. ತಾರಾದೇವತೆಯ ಹೆಸರು ಕರ್ನಾಟಕದಲ್ಲಿ ತಾರಾಭಗವತಿ, ಮಂಗಳಾದೇವಿ, ಪ್ರಮೀಳೆ, ಪಿಂಗಳೆ, ಹಿಂಗುಳಾಂಬೆ, ರಾಜರಾಜೇಶ್ವರಿ, ಅಮೃತೇಶ್ವರಿ, ಮೂಕಾಂಬಿಕೆ, ದುರ್ಗಭಗವತಿ ಮುಂತಾದ ಶಕ್ತಿ ದೇವತೆ ಜಾಗಗಳಾಗಿವೆ.

ಮೇಲಿನ ಎಲ್ಲಾ ಉಲ್ಲೇಖಿತ ಮಾಹಿತಿಗಳನ್ನು ಗಮನಿಸಿದರೆ ಟಿಬೆಟಿನಲ್ಲಿ ಇರುವ ೨೧ ಅವತಾರದ ತಾರದೇವಿಯರು ಕರ್ನಾಟಕದ ತಾರದೇವಿಯ ಪ್ರತಿ ರೂಪಗಳಾಗಿರಬಹುದು. ಇಲ್ಲಿರುವ ತಾರದೇವಿಯ ರೂಪವನ್ನು ಹೋಲುವಂತೆ ಟಿಬೆಟಿಯನ್ನರ ತಾರ ಭಗವತಿಯ ರೂಪಕ್ಕೆ ಹೊಂದಾಣಿಕೆ ಇದ್ದು, ವಸ್ತ್ರವಿನ್ಯಾಸ ಭಂಗಿಯಲ್ಲಿನ ನೈಪುಣ್ಯತೆ ಬಳಕುವಂತಾಗಿದ್ದು ,ಆಭರಣದಲ್ಲಿ ಬದಲಾವಣೆ ಹಿನ್ನೆಲೆಯ ಪ್ರದೇಶವನ್ನು ಟಿಬೆಟಿಯನ್ನರ ನೈಸರ್ಗಿಕ ದೃಶ್ಯಗಳಾಗಿದ್ದು ಹಾಗೂ ವರ್ಣ ವಿನ್ಯಾಸದಲ್ಲಿ ಭಿನ್ನತೆಗಳನ್ನು ಥಾಂಕ ಶೈಲಿಯ ಮಾದರಿಯಲ್ಲಿ ಕಾಣಬಹುದು.

ಮಂಜುಶ್ರೀಯ ಸಂಬಂಧವನ್ನು ಕರ್ನಾಟಕದ ಕಲಾ ನೆಲೆಯಲ್ಲಿ ಕಾಣಬಹುದು. ಮಹಾಯಾನದಲ್ಲಿ ಮಂಜು ಬುದ್ಧನ ಹೆಸರು (ಟಿಬೆಟಿನ ಭಾಷೆಯಲ್ಲಿ ಮೊಂಜು) ಬೌದ್ಧ ತಾಂತ್ರಿಕ ಪಂಥದಲ್ಲಿ "ಮಂಜುಶ್ರೀ ಕಲ್ಪ" ಎಂಬ ಗ್ರಂಥದ ಉಲ್ಲೇಖ ಹೀಗೆ ಬಂದಿತು. ಇದರಿಂದ ಬುದ್ಧ ನೆಲೆಸಿದ ಕರ್ನಾಟಕದ ಕುರುಹುಗಳಾಗಿ ಮಂಜುನಾಥ ಗುಡಿ (ಕದ್ರಿಬೆಟ್ಟ, ಧರ್ಮಸ್ಥಳ), ಮಂಜೇಶ್ವರ (ಕಾಸರಗೋಡು), ಕಿರು ಮಂಜೇಶ್ವರ (ಮಂಗಳೂರು), ಮಂಜೇನಹಳ್ಳಿ (ಕಡೂರು), ಮಂಜಲಾಪುರ (ಸುರಪುರ), ಮಂಜನಹಾಳು (ಸಿರುಗುಪ್ಪೆ) ಮಂಜುನಾಥ ಕೂಡ ಬೌದ್ಧನ ಮೂಲದ ಹೆಸರು.

ಇತಿಹಾಸಕಾರರಾದ ಗುರುರಾಜ ಭಟ್ಟರು ಕದ್ರಿಗುಡಿಗೆ ಬರೆದು ಕೊಟ್ಟಿರುವ ಇತಿಹಾಸ ಪುಸ್ತಕದಲ್ಲೂ ಈ ನಾಮಕರಣಗೊಂಡ ಹೆಸರುಗಳು ಇರುವುದು ಸೋಜಿಗ. ಸದ್ಯಕ್ಕೆ ಅವಲೋಕಿತೇಶ್ವರ ಮೂರ್ತಿಯನ್ನು ಮಂಜುನಾಥ ಗುಡಿಯ ಬಲಗಡೆಯಲ್ಲಿರುವ ಪ್ರಾದಕ್ಷಿಣಾ ಪಥದಲ್ಲಿಯೂ ಮಂಜುಶ್ರೀ ಹಾಗೂ ಬುದ್ಧನ ಮೂರ್ತಿಗಳನ್ನು ಎಡಭಾಗದ ಪ್ರದಕ್ಷಿಣಾ ಪಥದಲ್ಲಿಯೂ ಎಣ್ಣೆ ಡಬ್ಬ, ತೆಂಗಿನಕಾಯಿಗಳ ನಡುವೆ ಇಡಲಾಗಿದೆ. ಇದು ಕದ್ರಿ ಮಂಜುನಾಥ ಗುಡಿಯ ಕುರುಹು.

ಕರ್ನಾಟಕದ ಮಂಜುಶ್ರೀ ದೇವತೆಯ ಬಾಹ್ಯ ಚಹರೆ, ಟಿಬೆಟಿನ ಮಂಜುಶ್ರೀಯ ಬಾಹ್ಯ ಚಹರೆ ಒಂದೇ ಆದರೂ ವಸ್ತುವಿನ್ಯಾಸ ಹಾಗೂ ಆಭರಣ ಇತ್ಯಾದಿ. ಆಕಾರ ಭಂಗಿಗಳಲ್ಲಿ ಸ್ವಲ್ಪ ವ್ಯತ್ಯಾಸವನ್ನು ಮಾಡಿಕೊಂಡು ಟಿಬೆಟಿಯನ್ನರ ಇದೇ ದೇವತೆಯನ್ನು ಥಾಂಕಾ ಶೈಲಿಯ ಚಿತ್ರಶೈಲಿಗೆ ಬದಲಿಸಿಕೊಂಡಿರುವುದನ್ನು ಗಮನಿಸಬಹುದು.

ಇದು ಟಿಬೆಟಿಯನ್ ಕಲಾವಿದರ ಪರಿಸರದ ವೈಶಿಷ್ಟ್ಯದ ಪ್ರಭಾವ ಎಂದು ಹೇಳಬಹುದು. ಕರ್ನಾಟಕದ ಕಲೆ ಹೇಗೆ ಟಿಬೆಟಿಗೆ ಪ್ರವಹಿಸಿತು ಎಂದು ಸ್ಪಷ್ಟವಾದ ಕುರುಹು ದೊರೆಯದು. ಬೌದ್ಧಧರ್ಮ ಪ್ರಸಾರದಲ್ಲಿ ದಕ್ಷಿಣ ಭಾರತಕ್ಕೆ ಬಂದು ಹೋಗುತ್ತಿರುವ ಟಿಬೆಟಿಯನ್ನರಿಂದಲೂ ಅಥವಾ ಟಿಬೆಟಿಗೆ ಹೋಗಿ ಬಂದ ಬೌದ್ಧ ಸನ್ಯಾಸಿಗಳಿಂದಲೂ ಈ ಸಂಬಂಧ ಬೆಳೆದಿದೆ ಎಂದು ಹೇಳಬಹುದು. ಇವೆಲ್ಲವುಗಳನ್ನು ದೃಶ್ಯಕಲಾ ಮಾಧ್ಯಮದ ಬಾಹ್ಯ ಚಹರೆಯ ಅವಲೋಕನದಿಂದ ಊಹಿಸಬಹುದಾಗಿದೆ.

ಮೇಲಿನ ಪ್ರಧಾನ ದೇವತೆಗಳಂತೆ ಟಿಬೆಟಿನ ಅನೇಕ ದೇವತೆಗಳಾದ ಯಮಂತಕ (ಯಮರಾಜ) ಶ್ರೇಷ್ಠ ಎಂಟು ಚಿನ್ಹೆಗಳು, ಪದ್ಮಸಂಭವ, ಶಾಂತರಕ್ಷಿತ, ಸರಸ್ವತಿ, ಗಣಪತಿ, ಅಷ್ಟ ದಿಕ್ಕುಪಾಲಕರು ಇತ್ಯಾದಿ ವಸ್ತುವಿಷಯಗಳು ಕರ್ನಾಟಕದ ಕಲೆಗಳೊಂದಿಗೆ ಸಂಬಂಧವನ್ನು ಹೊಂದಿರುವುದನ್ನು ಇತಿಹಾಸಿಕ ಅವಲೋಕನ ಹಾಗೂ ಚಿತ್ರ ಮತ್ತು ಶಿಲ್ಪಗಳ ಕುರುಹುಗಳಿಂದ ಗುರುತಿಸಬಹುದು.

ಕರ್ನಾಟಕದಲ್ಲಿ ಭಿತ್ತಿ ನೆಲೆಗಳಲ್ಲಿ ಹೇಗೆ ಗೋಡೆ, ಕಂಬಗಳು, ಪಟ್ಟಿಕೆ, ಇತ್ಯಾದಿಗಳ ಮೇಲೆ ರಚಿಸಿದಂತೆ, ಟಿಬೆಟಿಯನ್ನರು ರಚಿಸಿರುವುದು ಭಿನ್ನವಾಗಿವೆ. ಪರಿಕರದಲ್ಲಿ ವ್ಯತ್ಯಾಸವಿದೆ. ರಾಸಾಯನಿಕ ಬಣ್ಣಗಳನ್ನು ಬಳಸಿಕೊಂಡು ಆಧುನಿಕ ಸಿಮೆಂಟ್ ಗಾರೆಯ ಭಿತ್ತಿಯ ಮೇಲೆ ಚಿತ್ರಗಳನ್ನು ರಚಿಸಿದ್ದಾರೆ. ತನ್ನದೇಯಾದ ಥಾಂಕ ಶೈಲಿಯನ್ನು ಯಾವುದೇ ಚಿತ್ರಶೈಲಿಯ ಪ್ರಭಾವಕ್ಕೆ ಒಳಗಾಗದೆ, ಚಿತ್ರ ರಚಿಸಿರುವುದು ಕಂಡುಬರುತ್ತದೆ. ಚಿತ್ರ ಸಂಯೋಜನೆಯು ಭಾರತೀಯ ಷಡಂಗಗಳ ಶಾಸ್ತ್ರೀಯ ವಿಧಾನದಲ್ಲಿ ರಚಿಸುವುದು ವಿಶೇಷ. ಆದರೆ ವಸ್ತುವಿಷಯಗಳಲ್ಲಿ ಕೆಲವು ಮಾತ್ರ ಕರ್ನಾಟಕದ ಕಲೆಗಳೊಂದಿಗೆ ಸಂಬಂಧ ಹೊಂದಿರುವುದನ್ನು ಗುರುತಿಸಬಹುದು.

ನಂತರ ದೇವಾಲಯದ ಹೊರವಲಯದಲ್ಲಿ ನಿರ್ಮಾಣಗೊಂಡಿರುವ ಅನ್ಯಧರ್ಮೀಯರಂತ ಹೆಬ್ಬಾಗಿಲಿನ ರೀತಿಯಲ್ಲಿಯೇ ಟಿಬೆಟಿಯನ್ನರು ತಮ್ಮ ದೇವಾಲಯಗಳ ಮುಂದೆ ಹೆಬ್ಬಾಗಿಲುಗಳನ್ನು ಆಧುನಿಕ ರೀತಿಯಲ್ಲಿ ನಿರ್ಮಿಸಿಕೊಂಡಿದ್ದು ಸಿಮೆಂಟ್ ಮಾಧ್ಯಮವಾಗಿದೆ. ಇದನ್ನು ನಮ್ಮ ವಾಸ್ತು ಕಲೆಯ ಶೈಲಿಗಳಂತಿಲ್ಲದಿದ್ದರೂ ಥಾಂಕ ಶೈಲಿಯಲ್ಲಿಯ ಶೈಲಿಗೆ ಹೋಲುವಂತೆ ನಿರ್ಮಿಸಿಕೊಂಡಿದ್ದಾರೆ. ಆದರೆ ಮೇಲೆ ಉಬ್ಬು ಶಿಲ್ಪಗಳು ಹಾಗೂ ಭಿತಿ ್ತಚಿತ್ರಗಳು ಟಿಬೆಟಿನ ಬೌದ್ಧಧರ್ಮಿಯ ಥಾಂಕ ಶೈಲಿಯಲ್ಲಿಯೇ ಇವೆ. ಇವುಗಳಲ್ಲಿನ ಕೀರ್ತಿಮುಖ, ಶಂಖು ಇತ್ಯಾದಿ ವಸ್ತುವಿಷಯಗಳು ನಮ್ಮ ಕಲೆಗೆ ಸಂಬಂದ ಹೊಂದಿರುವುದನ್ನು ತಿಳಿಯಬಹುದು.

ಕರ್ನಾಟಕ ಜನಪದ ಕಲೆಯಲ್ಲಿ ವಿಶಿಷ್ಟವಾಗಿ ಗುರುತಿಸಿಕೊಂಡಿರುವ ರಂಗೋಲಿ ಚಿತ್ರಕಲೆಯು ಹಬ್ಬ-ಹರಿದಿನಗಳಲ್ಲಿ ಉತ್ಸವ, ಜಾತ್ರೆ, ಇತ್ಯಾದಿ ಶುಭ ಸಮಾರಂಭಗಳಲ್ಲಿ ದೇವಾಲಯಗಳ, ಮನೆ, ರಸ್ತೆಗಳ ಮೇಲೆ ಕಂಡುಬರುತ್ತವೆ. ಇಂತಹ ಕಲೆ ಕರ್ನಾಟಕ ಜನಪದ ಚಿತ್ರಕಲೆ ಪುಸ್ತಕದಲ್ಲಿ ಡಾ. ಎಸ್.ಸಿ.ಪಾಟೀಲರವರು ತಿಳಿಸಿರುವುದನ್ನು ಕಾಣಬಹುದು.[೫] ಅದರಂತೆ ಟಿಬೆಟಿಯನ್ನರ ನೆಲೆಗಳಲ್ಲಿ ಹಬ್ಬಹರಿದಿನಗಳು ಉತ್ಸಹ, ಜಾತ್ರೆ ಅನೇಕ ಶುಭದಿನಗಳಲ್ಲಿ ದೇವಾಲಯ, ಮನೆಗಳ, ರಸ್ತೆಯ ಮೇಲೆ ಇತ್ಯಾದಿ ಪ್ರದೇಶದಲ್ಲಿ ರಂಗವಲಿಯಂತೆ ರೇಖಾಪ್ರಧಾನ ಚಿತ್ರಗಳನ್ನು ಕುಂಚದಿಂದ ಬರೆಯುತ್ತಾರೆ. ಜೊತೆಗೆ ಅನೇಕ ನಕ್ಷಾ ಚಿತ್ರಗಳನ್ನು ಬರೆಯುತ್ತಾರೆ. ಅವುಗಳನ್ನು ಸಂಪೂರ್ಣ ಬಣ್ಣದಿಂದ ತುಂಬಿದ್ದು ಭಿತ್ತಿ ಚಿತ್ರ ಮಾದರಿಯಲ್ಲಿ ಶೃಂಗರಿಸುತ್ತಾರೆ. ಇವುಗಳಲ್ಲಿ ವೈತ್ಯಾಸವಿದ್ದರು ಸಂಭಂದಗಳು ಒಂದೇ ಎಂಬುವುದಾಗಿ ಗುರುತಿಸಿಕೊಂಡಿದೆ. ನಾಗರ ಪಂಚಮಿಯಲ್ಲಿ ನಾಗದೇವತೆಗೆ ಸಂಭಂದಿಸಿದ ಚಿತ್ರವಾದರೆ ಬೌದ್ಧ ಪೂರ್ಣಿಮೆಯಲ್ಲಿ ಬುದ್ಧನಿಗೆ ಸಂಬಂಧಿಸಿದ ವಸ್ತುವಿಷಯಗಳಲ್ಲಿ ಚಿತ್ರಗಳನ್ನು ಬೌದ್ಧ ಸನ್ಯಾಸಿಗಳು ರಚಿಸುತ್ತಾರೆ. ಅದರೆ ಕರ್ನಾಟಕದಲ್ಲಿ ಮನೆಯಲ್ಲಿನ ಮಹಿಳೆಯರಿಗೆ ಸಂಬಂಧಿಸಿದ ಕಲೆಯಾಗಿದೆ. ಒಟ್ಟಿನಲ್ಲಿ ಎರಡು ಕಲೆಗಳ ಉದ್ದೇಶ, ಗುರಿ ಒಂದೇ ಆಗಿರುವುದರಿಂದ ಒಂದಕ್ಕೊಂದು ಸಂಬಂಧ ಹೊಂದಿರುವುದನ್ನು ಕಾಣಬಹುದು.

---

೫. ಡಾ. ಎಸ್.ಸಿ.ಪಾಟೀಲ: ಕರ್ನಾಟಕ ಜನಪದ ಚಿತ್ರಕಲೆ: ಪು.ಸಂ. ೨೧೯

ಕರ್ನಾಟಕದ ಬೌದ್ಧಧರ್ಮದ ಸ್ತೂಪ ಅವಶೇಷಗಳನ್ನು ಗಮನಿಸಿದರೆ ಅವುಗಳಲ್ಲಿ ಯಾವುದೇ ರೀತಿಯ ಚಿತ್ರಗಳು ಕಂಡುಬರುವುದಿಲ್ಲ ಆದರೆ ವಾಸ್ತು ನಿರ್ಮಾಣಗಳಲ್ಲಿ ಮಾತ್ರ ಲ ಸ್ತೂಪಗಳಲ್ಲಿ ಒಂದಕ್ಕೊಂದು ವ್ಯತ್ಯಾಸಗಳಿವೆ. ಅದರಂತೆ ಕರ್ನಾಟಕದ ಟಿಬೆಟಿಯನ್ನರಲ್ಲಿ ಬೌದ್ಧಧರ್ಮದ ಸ್ತೂಪಗಳು ಲ ರೀತಿಯಲ್ಲಿ ರಚಿಸಿದ್ದು, ಸ್ವಲ್ಪ ದೊಡ್ಡದಾಗಿ ಮತ್ತು ಅಚ್ಚುಕಟ್ಟಾಗಿ ಆಕಾರವನ್ನು ಹೊಂದಿದ್ದು ಹಾಗೂ ಅವುಗಳ ಮೇಲೆ ಉತ್ತಮವಾದ ಸಿಮೆಂಟ್ ಮಾಧ್ಯಮದ ಉಬ್ಬುಶಿಲ್ಪಗಳು, ಕಂಚಿನ ಕಳಸಗಳು ಹಾಗೂ ಭಿತ್ತಿ ಚಿತ್ರಗಳನ್ನು ಕಾಣಬಹುದು. ಕರ್ನಾಟಕದಲ್ಲಿ ಸ್ತೂಪದ ವಾಸ್ತು ಅವಶೇಷಗಳಿಗೂ ಟಿಬೆಟಿಯನ್ನರ ಸ್ತೂಪದ ವಾಸ್ತುಕಲೆಗಳಿಗೂ ಸಾಮ್ಯತೆಯು ಒಂದೇ ರೀತಿಯಾಗಿ ಕಂಡುಬರುತ್ತದೆ.

ಕರ್ನಾಟಕದಲ್ಲಿನ ಉದ್ಧರಣೆಯ ಚಿತ್ರಪಟಗಳಿಗೂ ಅನ್ಯಧರ್ಮದ ಚಿತ್ರಪಟಗಳನ್ನು ಗಮನಿಸಿದರೆ ಟಿಬೆಟಿಯನ್ನರ ಚಿತ್ರಪಟಗಳು ಸಹ ಪೂಜೆಗೆ ಬಳಸು ವಿಧಾನ, ಧರ್ಮಕ್ಕೆ ಸಂಬಂಧಿಸಿದ ವಸ್ತುವಿಷಯ, ಚಿತ್ರಗಳು ಇತ್ಯಾದಿ ವಿಧಿ-ವಿಧಾನಗಳು ಒಂದೇ ರೀತಿ ಸಾಮ್ಯತೆ ಇದ್ದರೆ, ಕರ್ನಾಟಕದ ಪಟಚಿತ್ರಗಳು ನೈಸರ್ಗಿಕ ಬಣ್ಣಗಳಿಂದ ತಯಾರಿಸಿರುವುದು ಕಂಡುಬರುತ್ತವೆ. ಆದರೆ ಟಿಬೆಟಿಯನ್ನರು ರಾಸಾಯನಿಕ ಬಣ್ಣಗಳನ್ನು ಬಳಸಿಕೊಂಡಿರುವುದನ್ನು ಕಾಣಬಹುದು. ಸಿದ್ದತಾ ವಿಧಿ-ವಿಧಾನ ಹಾಗೂ ಚಿತ್ರರಚಿಸುವ ವಿಧಾನ ಬೇರೆಯಾದರೂ ಉದ್ದೇಶ, ಧರ್ಮಾರಾಧನೆಗೆ ಸಂಬಂಧಿಸಿರುವ ವಿಷಯದಲ್ಲಿ ಸಾಮ್ಯತೆ ಇದೆ ಇದೆ ಎಂದು ಗುರುತಿಸಬಹುದು. ಇಂತಹ ಚಿತ್ರಪಟಗಳಲ್ಲಿ ಟಿಬೆಟಿಯನ್ನರು ಶೈವ, ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ಹಿಂದೂ ದೇವತೆಯ ಚಿತ್ರಗಳನ್ನು ಕರ್ನಾಟಕದ ಕಲಾಶೈಲಿಗೆ ಧಕ್ಕೆ ತರದ ರೀತಿಯಲ್ಲಿ ಬಳಸಿಕೊಂಡು ಚಿತ್ರರಚಿಸಿರುವುದನ್ನು ವಿಶೇಷವಾಗಿ ಗಮನಿಸಬಹುದು. ಈಗೆ ಮೇಲಿನಂತೆ ಟಿಬೆಟಿಯನ್ನರ ಕಲೆ ನಮ್ಮ ಕಲೆ ಹೊಂದಿಗೆ ಗೊತ್ತು ಗೂತ್ತಿಲ್ಲದ ಸಂಬಂಧಗಳನ್ನು ಹೊಂದಿದೆ.

ಬಾವುಟಗಳ ಮೇಲಿನ ಚಿತ್ರಗಳಲ್ಲಿ ಪ್ರತಿಯೊಂದು ಧರ್ಮಗಳು ತನ್ನದೇಯಾದ ಬಾವುಟಗಳನ್ನು ಗುರುತಿಸಿಕೊಂಡು ತನ್ನದೇಯಾದ ವಿಶೇಷ ಚಿತ್ರಿತ ಚಿನ್ಹೆಗಳನ್ನು ಒಳಗೊಂಡಂತೆ ಟಿಬೆಟಿಯನ್ನರು ತಮ್ಮದೇಯಾದ ಪಂಚವರ್ಣ ಧ್ವಜಗಳನ್ನು ಗುರುತಿಸಿಕೊಂಡು ಬೌದ್ಧಧರ್ಮಕ್ಕೆ ಸಂಬಂಧಿಸಿದ ದೇವರುಗಳ ಚಿತ್ರಕ್ಕೆ ಹೆಚ್ಚು ಒತ್ತುಕೊಟ್ಟು ಬಳಸಿಕೊಂಡಿರುವುದು ವಿಶೇಷವಾಗಿ ಗಮನಿಸಬಹುದು.

ಕರ್ನಾಟಕದಲ್ಲಿ ಇಂದಿಗೂ ಪ್ರಚಲಿತವಿರುವ ಬಾಗಿಲಿನ ಪರದೆ, ತೋರಣ, ಬೀಸಣಿಗೆ, ಪಾಟಿಚೀಲ ಮನೆಯಲ್ಲಿ ಶೃಂಗರಿಸುವ ವಸ್ತುಗಳಂತೆ ಟಿಬೆಟಿಯನ್ನರು ತಮ್ಮ ಕರಕುಶಲ ಕಲೆಗಳಲ್ಲಿ ಬೌದ್ಧಧರ್ಮಕ್ಕೆ ಸಂಬಂಧಿಸಿದ ಚಿತ್ರಗಳನ್ನು ಹೆಚ್ಚಾಗಿ ಬಳಸಿಕೊಂಡಿದ್ದಾರೆ. ವಸ್ತುವಿಷಯ ಬೇರೆಯಾದರೂ ಎರಡು ಕಲೆಗಳ ಉದ್ದೇಶ, ಗುರಿಗಳು ಒಂದೇ ಎಂಬ ಸಾಮ್ಯತೆಯನ್ನು ಗುರುತಿಸಬಹುದು.

ಕರ್ನಾಟಕದಲ್ಲಿ ವಿಜಯನಗರ ಕಾಲದಲ್ಲಿ ಆರಂಭಗೊಂಡ ಗಾರೆ ಭಿತ್ತಿಯ ಉಬ್ಬುಶಿಲ್ಪಗಳು ನಂತರ ಮೈಸೂರು ರಾಜರ ಕಾಲದವರೆಗೆ ಬೆಳೆದು ಅನೇಕ ಗಾರೆಯ ಮೂರ್ತಿ ಮತ್ತು ಉಬ್ಬುಶಿಲ್ಪಕಲೆಗೀ ಬೆಳೆದವು. ಆಧುನಿಕವಾಗಿ ಬೆಂಗಳೂರಿನ ರಾಜರಾಜೇಶ್ವರಿ ದೇವಾಲಯ ಹಾಗೂ ಹೆಬ್ಬಾಗಿಲು, ಗುಲಬರ್ಗಾ ದ ಬೌದ್ಧದೇವಾಲಯ, ಮುರುಡೇಶ್ವರ ದೇವಾಲಯ ಹಾಗೂ ಹೆಬ್ಬಾಗಿಲು ಬೃಹತ್ತಾದ ಶಿವನ ಮೂರ್ತಿ ಇತ್ಯಾದಿ ಸ್ಥಳಗಳಲ್ಲಿ ಸಿಮೆಂಟ್ ಮಾಧ್ಯಮದಲ್ಲಿ ನಿರ್ಮಿಸಿದ್ದುಂತೆ.

ಟಿಬೆಟಿಯನ್ನರು ತಮ್ಮ ನೆಲೆಗಳಲ್ಲಿ ಬೌದ್ಧಧರ್ಮಕ್ಕೆ ಸಂಬಂಧಿಸಿ ಸಿಮೆಂಟ್ ಮಾಧ್ಯಮದಲ್ಲಿ ದೇವಾಲಯ, ಹೆಬ್ಬಾಗಿಲು, ಉಬ್ಬುಶಿಲ್ಪ, ಮೂರ್ತಿಶಿಲ್ಪಗಳು, ಸ್ತೂಪಗಳ ಮೇಲೆ ಉಬ್ಬುಶಿಲ್ಪ ಕೃತಿಗಳನ್ನು

ನಿರ್ಮಿಸಿಕೊಂಡಿದ್ದಾರೆ. ವಿಶೇಷವಾಗಿ ದೇವರ ಹಿಂದಿನ ಪ್ರಭಾವಳಿಯನ್ನು ಸಿಮೆಂಟಿನಲ್ಲಿಯೇ ನಿರ್ಮಿಸಿದ್ದಾರೆ ಇದನ್ನು ಗಮನಿಸಿದರೆ ಎರಡು ಕಲೆಗಳಲ್ಲಿ ಬಳಸಿದ ಸಿದ್ಧಾಂತ, ವಿಧಿ-ವಿಧಾನ ಒಂದೇ. ವಾಸ್ತು ರಚನೆ ಬೇರೆ ಉದ್ದೇಶ, ಗುರಿಗಳು ಒಂದೇ ಆಗಿದ್ದು ಅವರವರ ಧಾರ್ಮಿಕ ಕಲೆಗೆ ತಕ್ಕ ಉಬ್ಬುಶಿಲ್ಪ, ಮೂರ್ತಿಶಿಲ್ಪಗಳನ್ನು ಹಾಗೂ ವರ್ಣಗಾರಿಕೆಯನ್ನು ಮಾಡಿದ್ದಾರೆ ಎನ್ನುವ ಅಂತರ್ ಸಂಬಂಧದ ಸಾಮ್ಯತೆಯನ್ನು ಕಾಣಬಹುದು.


ಟಿಬೆಟಿಯನ್ನರು ತಯಾರಿಸುವ ಲೋಹ ಮಾಧ್ಯಮ ಶಿಲ್ಪಗಳ ಸಂಪೂರ್ಣ ಟೊಳ್ಳಾಗಿದ್ದು ಲೋಹದ ತಗಡಿನ ಜೋಡಣೆಯಿಂದ ಬೃಹತ್ ಶಿಲ್ಪವನ್ನು ೬೦ ಅಡಿಯಿಂದ ಚಿಕ್ಕ ಗಾತ್ರದವರೆಗೂ ತಯಾರಿಸುತ್ತಾರೆ. ಇವುಗಳೆಲ್ಲವು ಭಾರತೀಯರ ಪ್ರಭಾವದವುಗಳೆಂದು ಇತಿಹಾಸಿದಿಂದ ತಿಳಿಯಬಹುದು.

ದೇವರ ಹಿಂಭಾಗದ ಪ್ರಭಾವಳಿಗಳು ಸಂಪೂರ್ಣ ಲೋಹ ತಗಡಿನಿಂದ ಉಬ್ಬು ಶಿಲ್ಪಗಳಂತೆ ನಿರ್ಮಾಣವಾಗುತ್ತದೆ. ಕರ್ನಾಟಕದ ಮೂರ್ತಿಶಿಲ್ಪಕಲೆಗಳಿಗೂ ಟಿಬೆಟಿಯನ್ನರ ಮೂರ್ತಿಶಿಲ್ಪಕಲೆಗಳಿಗೂ ವ್ಯತ್ಯಾಸವಿದೆ. ಕಟ್ಟಿಗೆ ಮಾಧ್ಯಮದ ಚಿತ್ರಕಲೆಗಳಲ್ಲಿ ಟಿಬೆಟಿಯನ್ನರು ನಗಾರಿ ನೇತುಹಾಕುವ ಸ್ಟಾಂಡ್‌ಗಳನ್ನು ಹಾಗೂ ನಗಾರಿಯ ಸುತ್ತಲೂ ಕೆತ್ತಿರುವ ಉಬ್ಬುಶಿಲ್ಪಗಳಲ್ಲಿ ಕಾಣಬಹುದು. ಆದರೆ ವಾಸ್ತುವಿಷಯಗಳು ಬೇರೆ ಬೇರೆ ದಲೈಲಾಮರವರ ಸಿಂಹಾಸನವನ್ನು ನಿರ್ಮಿಸಿ, ಕಲಘಟಗಿ ಕಲೆಯಂತೆ ವರ್ಣಲೇಪನ ಮಾಡಿರುವುದು ಕಂಡುಬರುತ್ತದೆ. ವಾಸ್ತುವಿಷಯಗಳು ಬೇರೆಯಾಗಿವೆ, ಇಂತಹ ಕಲೆಗಳ ಗುಣಲಕ್ಷಣಗಳಲ್ಲಿ ಸಂಬಂಧವನ್ನು ಹೊಂದಿರುವುದನ್ನು ಕಾಣಬಹುದು.

ಗೋಧಿ ಹಿಟ್ಟಿನಿಂದ ಹಾಗೂ ಬೆಣ್ಣೆ ಮಾಧ್ಯಮದ ಚಿತ್ರಕಲೆಗಳನ್ನು ಗಮನಿಸಿದರೆ, ಕರ್ನಾಟಕದ ಜನಪದರಲ್ಲಿ ಕಂಡುಬರುವ ತಂಬಿಟ್ಟಿನ ಶೃಂಗಾರ ಹಾಗೂ ಅನೇಕ ದೇವರ ಮುಂದಿನ ಕಳಸವನ್ನು ಶೃಂಗರಿಸುವ ಮಾದರಿಯಲ್ಲಿ, ಟಿಬೆಟಿಯನ್ನರು ಮೇಲಿನ ಮಾಧ್ಯಮಗಳಲ್ಲಿ ತ್ರಿಕೋನಕಾರದಲ್ಲಿ ಉಬ್ಬುಶಿಲ್ಪದಂತೆ ಸಿದ್ದಗೊಳಿಸಿ ಅವುಗಳ ಮೇಲೆ ವರ್ಣವನ್ನು ಲೇಪಿಸುತ್ತಾರೆ. ಈ ರೀತಿಯ ಆಚರಣೆಯು ನಮ್ಮ ಕಲೆಗಳಲ್ಲಿ ಅನೇಕ ರೀತಿಯಲ್ಲಿ ಕಾಣಬಹುದು.

ಟಿಬೆಟಿಯನ್ನರ ಕಲೆಗಳು ಕರ್ನಾಟಕದ ಕಲೆಗಳೊಂದಿಗೆನ ಸಂಬಂಧವು ಮೇಲಿನ ವಿವರಣೆಗಳಿಂದ ಇತಿಹಾಸಿಕ ಕಾಲ ಘಟ್ಟಗಳಿಂದ ಅಧುನಿಕ ಕಾಲ ಘಟ್ಟಗಳವರೆಗೆ ಅದಂತಹ ಬದಲಾವಣೆಗಳು ಎಷ್ಟರ ಮಟ್ಟಿಗೆ ಹೊಂದಾಣಿಕೆಗೊಂಡಿವೆ ಎಂಬುವುದನ್ನು ತಿಳಿಯಬಹುದು. ಹೀಗೆ ಕಲೆಗಳಲ್ಲಿನ ಬಾಹ್ಯೆ ಮತ್ತು ಅಂತರಿಕ ಸಂಬಂಧಗಳಲ್ಲಿ ಧಾರ್ಮಿಕ ಅಚರಣೆಗಳು, ಸಿದ್ಧತಾ ವಿಧಿ-ವಿಧಾನಗಳು, ಪರಿಕರಗಳು ಇತ್ಯಾದಿ ವಸ್ತುವಿಷಯಗಳು ಎರಡು ಕಲೆಗಳೊಂದಿಗೆ ಯಾವ ರೀತಿಯಲ್ಲಿ ಒಂದಕ್ಕೊಂದು ಸಂಬಂಧಗಳನ್ನು ಹೊಂದಿಕೊಂಡಿದೆ ಎಂಬುದನ್ನು ಮೇಲಿನ ಹತ್ತು ಹಲವು ವಿವರಣೆಗಳಿಂದ ತಿಳಿದು ಕೋಳ್ಳಬಹುದು.ಕರ್ನಾಟಕದ ಪ್ರಭಾವಳಿಯ ಸಿದ್ಧಮಾದರಿಯಂತೆ ಟಿಬೆಟಿಯನ್ನರು ಟೊಳ್ಳಿನ ತಗಡಿನ ಜೋಡಣೆಯಲ್ಲಿ ಮೂರ್ತಿಶಿಲ್ಪಗಳನ್ನು ಮಾಡುತ್ತಾರೆ. ಈ ರೀತಿಯ ವ್ಯತ್ಯಾಸದ ಸಂಬಂಧಗಳನ್ನು ಗುರುತಿಸಬಹುದು. ಟಿಬೆಟಿಯನ್ನರ ಕಲೆಗಳು, ಕರ್ನಾಟಕದ ಕಲೆಗಳೊಂದಿಗಿನ ಸಂಬಂಧವು ಮೇಲಿನ ವಿವರಣೆಗಳಿಂದ ಐತಿಹಾಸಿಕ ಘಟ್ಟಗಳಲ್ಲಿ ಆಧುನಿಕ ಕಾಲಘಟ್ಟಗಳಲ್ಲಿ ಆದಂತಹ ಬದಲಾವಣೆಗಳು ಎಷ್ಟರಮಟ್ಟಿಗೆ ಹೊಂದಿಕೆಗೊಂಡಿವೆ ಎಂಬುದನ್ನು ತಿಳಿಯಬಹುದು. ಈಗ ಕಲೆಗಳಲ್ಲಿನ ಬಾಹ್ಯ ಮತ್ತು ಆಂತರಿಕ ಸಂಬಂಧಗಳಲ್ಲಿ, ಧಾರ್ಮಿಕ ಆಚರಣೆಗಳು, ಸಿದ್ಧಾಂತ, ವಿಧಿ-ವಿಧಾನಗಳು, ಪರಿಕರಗಳು ಇತ್ಯಾದಿ ವಾಸ್ತುವಿಷಯಗಳು ಎರಡು ಕಲೆಗಳೊಂದಿಗೆ ಯಾವ ರೀತಿಯಲ್ಲಿ ಒಂದಕ್ಕೊಂದು ಸಂಬಂಧವನ್ನು ಹೊಂದಿಕೊಂಡಿದೆ ಎಂಬುದನ್ನು ಹತ್ತುಹಲವು ವಿವರಣೆಗಳಿಂದ ತಿಳಿದುಕೊಳ್ಳಬಹುದು.

***



ಅಧ್ಯಾಯ-ಒಂಭತ್ತು

ಸಮಾರೋಪ

ಕರ್ನಾಟಕವು ಲಲಿತಕಲೆಗಳಂತಹ ಕಲಾಪ್ರಕಾರಗಳಲ್ಲಿ ಸಮೃದ್ಧಿಯನ್ನು ಹೊಂದಿದ್ದು ಇಂತಹ ಕಲೆಗಳನ್ನು ಉಳಿಸಿ ಬೆಳೆಸಿಕೊಂಡು ತನ್ನದೆಯಾದ ಸಾಂಸ್ಕೃತಿಕ ಪರಂಪರೆಯನ್ನು ಕಟ್ಟಿಕೊಂಡಿದೆ. ಅಲ್ಲದೇ ವಿಶ್ವವ್ಯಾಪ್ತಿ ಕಲೆಯ ಬೀಡೆಂದು ಪ್ರಜ್ವಲಿಸುತ್ತಿರುವಂತಹ ಅತ್ಯುನ್ನತ ಸ್ಥಾನವನ್ನು ಪಡೆದಿದೆ. ಇಂತಹ ನಾಡಿನಲ್ಲಿ ಪ್ರಾಗೈತಿಹಾಸಿಕ ಕಾಲದಿಂದ ವಿಜಯನಗರ, ಮೈಸೂರು, ಚಾಲುಕ್ಯ, ಸುರಪುರ, ಕರಾವಳಿ, ದಖ್ಖನಿ, , ಬ್ರಿಟೀಷ್ ಹಾಗೂ ಇತ್ಯಾದಿ ಆಧುನಿಕ ಕಲಾಶೈಲಿಗಳನ್ನು ತನ್ನದೆಯಾದ ಅನೇಕ ಧಾರ್ಮಿಕ ಮತ್ತು ಧಾರ್ಮಿಕೇತರ ಚೌಕಟ್ಟಿನಲ್ಲಿ ಸೃಷ್ಟಿಸಿದ ಶೈಲಿರೂಪದ ಚಿತ್ರ, ಶಿಲ್ಪ ಹಾಗೂ ವಾಸ್ತುಕಲೆಯನ್ನು ಬೆಳೆಸಿದಂತವುಗಳು ನಮ್ಮ ನಾಡಿನ ಸಾಂಸ್ಕೃತಿಕ ಆಸ್ತಿಗಳಾಗಿವೆ. ಅನೇಕ ಅರಸರು, ಮಾಂಡಲಿಕರು, ಧರ್ಮೋದ್ಧಾರಕರು ಶ್ರೀಮಂತ ವರ್ಗದವರು, ಪಾಶ್ಚಿಮಾತ್ಯರು, ಕಲಾ ದಾರ್ಶನಿಕರು ಹಾಗೂ ಕಲಾವಿದರುಗಳ ಪ್ರೋತ್ಸಾಹದ ಪ್ರತಿಫಲವೇ, ಎಲ್ಲ ಕಲಾಪ್ರಕಾರಗಳು ಬೆಳವಣಿಗೆಯ ಹಂತವನ್ನು ಕಾಣಲು ಧರ್ಮಗಳು ತನ್ನದೆಯಾದ ವಿಶಿಷ್ಟ ಪಾತ್ರವನ್ನು ವಹಿಸಿದೆ.

ಮೇಲಿನ ಕರ್ನಾಟಕದ ಸಂಸ್ಕೃತಿಯೊಂದಿಗೆ ಮುಸ್ಲಿಂ ಅರಸು ಹಾಗೂ ಬ್ರಿಟಿಷರು ತನ್ನದೆಯಾದ ವಿನೂತನ ಶೈಲಿಯನ್ನು ಪರಿಚಯಿಸಿದಂತೆ ಭಾರತದ ಗಡಿಯಿಂದಾಚೆಗೆ ಹಿಮ ತುಂಬಿದ ಭೌಗೋಳಿಕ ಪ್ರದೇಶದಲ್ಲಿ ಹಸಿರು ಪ್ರಕೃತಿಯನ್ನು ಮೈದುಂಬಿಕೊಂಡು ಶೋಭಾಯಮಾನವಾದ ಪ್ರಕೃತಿ ಹಾಗೂ ವಿಶಿಷ್ಟ ಬೌದ್ಧ ಧಾರ್ಮಿಕ ಸಂಸ್ಕೃತಿಯನ್ನು ಹೊಂದಿರುವ ಟಿಬೆಟ್ ದೇಶವು ತನ್ನದಯಾದ ರಾಜಕೀಯ ಅರಾಜಕತೆಯಿಂದ ಭಾರತಕ್ಕೆ ಸ್ವಯಂ ಗಡಿಪಾರಾಗಿ ವಲಸೆ ಬಂದಿರುತ್ತಾರೆ. ಇವರಲ್ಲಿನ ಬೌದ್ಧಧರ್ಮ ಗುರುಗಳಾದ ದಲೈಲಾಮರೊಂದಿಗೆ ದಕ್ಷಿಣಭಾರತದ ಕರ್ನಾಟಕಕ್ಕೆ ಬಂದು ತನ್ನದೇಯಾದ ನೆಲೆಗಳಲ್ಲಿ ವಾಸಿಸುತ್ತಾರೆ. ಅಂದಿನಿಂದ ಕರ್ನಾಟಕದ ಟಿಬೇಟಿಯನ್ನರಾಗಿ ತನ್ನದೇಯಾದ ಸಾಂಸ್ಕೃತಿಕ ಕಲಾ ಪರಿಸರಗಳಲ್ಲಿನ ಬೌದ್ಧಧರ್ಮದ ಆಚರಣೆ ಹಾಗೂ ಜೀವನವಿಧಾನ-ವಲಸೆ ಅನುಭವದ ಜೊತೆಗೆ ಇವರೊಂದಿಗೆ ಚಿತ್ರಕಲೆ, ಶಿಲ್ಪಕಲೆ ಹಾಗೂ ವಸ್ತು ವಿನ್ಯಾಸಗಳು ಟಿಬೆಟಿನ ಮೂಲ ಥಾಂಕ ಶೈಲಿಯಂತಹ ಸಾಂಪ್ರದಾಯಿಕ ಪದ್ಧತಿಯನ್ನು ಹಾಗೂ ಹತ್ತು ಹಲವು ವಿಷಯಗಳನ್ನು ನಮ್ಮ ನಾಡಿನ ಸಾಂಸ್ಕೃತಿಕ ನೆಲಕ್ಕೆ ಕೊಡುಗೆಯಾಗಿ ನೀಡಿದ್ದು ನಂತರ ಅವರುಗಳು ನೆಲೆಸಿರುವ ಪ್ರದೇಶಗಳು ನಮ್ಮ ನಾಡಿನ ಪ್ರೇಕ್ಷಣೀಯ ಸ್ಥಳಗಳಲ್ಲಿ ಒಂದಾಗಿಸಿವೆ. ಮತ್ತು ಪ್ರವಾಸಿಗರ ಕಣ್ಮನ ತಣಿಸುವ ವಿನೂತನ ಬೌದ್ಧ

ಧಾರ್ಮಿಕ ಕೇಂದ್ರವಾಗಿ ಬೆಳವಣಿಗೆ ಹೊಂದುತ್ತಿವೆ. ಇವರು ನಿರ್ಮಿಸಿರುವ ದೇವಾಲಯಗಳು ಪ್ರಾರ್ಥನ ಮಂದಿರ, ಸ್ತೂಪ, ಹೆಬ್ಬಾಗಿಲು, ಬೌದ್ಧ ವಿಹಾರಗಳು ಹಾಗೂ ಅನೇಕ ಬೌದ್ಧಧರ್ಮೀಯ ಶಾಲೆ, ಚಿತ್ರಶಾಲೆಗಳು ಇತ್ಯಾದಿ ವಸ್ತು ನಿರ್ಮಿತ ಪ್ರದೇಶಗಳನ್ನು ತನ್ನದೇಯಾದ ಥಾಂಕ ಶೈಲಿಯ ಚಿತ್ರಕಲೆ, ಶಿಲ್ಪಕಲೆ ಹಾಗೂ ವಾಸ್ತುಕಲೆಗಳನ್ನು ಪ್ರಭುದ್ಧವಾಗಿ ನಿರ್ಮಿಸಿಕೊಂಡಿದ್ದಾರೆ. ಇವು ನಾಳಿನ ಕರ್ನಾಟಕದಲ್ಲಿ ದೃಶ್ಯಕಲೆಗಳ ಕುರುಹುಗಳಾಗಿ ಉಳಿದುಕೊಂಡು ಒಂದು ಹೊಸ ಕಲಾಶೈಲಿಯನ್ನು ಕೊಡುಗೆಯಾಗಿ ನೀಡುತ್ತಿವೆ.

ಕರ್ನಾಟಕದ ಸಾಂಸ್ಕೃತಿಕ ಪರಿಸರದಲ್ಲಿ ಪೌರಾತ್ಯ ಸಂಸ್ಕೃತಿಯಾದ ಟಿಬೆಟ್ ಕಲಾವಿದರುಗಳು ನೆಲೆಸಿ ಟಿಬೆಟಿನ ಬೌದ್ಧಧರ್ಮದ ಥಾಂಕಾ ಚಿತ್ರ, ಶಿಲ್ಪ ರಚಿಸುವುದು ಇಂದಿನ ದೃಶ್ಯಕಲಾ ಕ್ಷೇತ್ರಕ್ಕೆ ಹೆಚ್ಚಿನ ಲಾಭದಾಯಕವಾಗಿದೆ. ಇಂತಹ ಅಧ್ಯಯನ ಮುಂದಿನ ಜನಾಂಗಕ್ಕೆ ಅವಶ್ಯಕವಾಗಿದ್ದು, ದಾಖಲಿಸಿಡುವ ಪ್ರಯತ್ನವಾಗಿದೆ. ನಮ್ಮ ನಾಡಿನ ಸಂಸ್ಕೃತಿಯು ಬೆಳೆಯಲು ಮುಂದಿನ ಕಲಾವಿದರಿಗೆ ಹೆಚ್ಚಿನ ವಿಷಯ ತಿಳಿಯಲು ಉಪಯುಕ್ತವಾಗಿದೆ. ಒಬ್ಬರಿಗೊಬ್ಬರು ಮುಂದಿನ ಹೊಸ ಶೈಲಿಯ ಸಂಪ್ರದಾಯವನ್ನು ಕಟ್ಟಿಕೊಳ್ಳಲು ಸಹಕಾರಿಯಾಗುತ್ತದೆ ಮಾತ್ರವಲ್ಲದೆ ಭಾವೈಕ್ಯತೆ ಸಮನ್ವಯತೆಗಳು ಈ ರೀತಿಯ ಅಧ್ಯಯನ ಬಿಂಬಿತವಾಗುತ್ತದೆ. ಜೊತೆಗೆ ಇಂತಹ ಸೂಕ್ಷ್ಮ ಮಾದರಿಯ ಚಿತ್ರ, ಶಿಲ್ಪಗಳ ನಿರ್ಮಾಣವು ಮುಂದಿನ ಚಿತ್ರಕಲಾ ಶಿಕ್ಷಣ ಕ್ಷೇತ್ರಕ್ಕೆ ಅಧ್ಯಯನ ವ್ಯಾಪ್ತಿಗೆ ತಂದುಕೊಂಡು ಅಭ್ಯಾಸಮಾಡಲು ಸಹಕಾರಿಯಾಗಿ ಇದರಲ್ಲಿನ ಟಿಬೆಟ್ ಬೌದ್ಧಧರ್ಮದ ತಾಂತ್ರಿಕ ವಿಧಿ-ವಿಧಾನಗಳನ್ನು ದೃಶ್ಯಕಲೆಗಳ ಮೂಲಕ ಅರಿತುಕೊಳ್ಳಲು ಸಹಕಾರಿಯಾಗುತ್ತದೆ.

ಕರ್ನಾಟಕದ ಟಿಬೆಟಿಯನ್ನರ ಚಿತ್ರಕಲೆಯ ಹಲವು ಮುಖಗಳು ಬೌದ್ಧಧಾರ್ಮಿಕ ಪ್ರಭಾವ ಹಾಗೂ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಒಳಗೊಂಡಂತೆ ರೂಪಗೊಂಡಿರುವ ಈ ಕಿರು ಸಂಶೋಧನ ಪ್ರಬಂಧವನ್ನು ಒಟ್ಟು ಒಂಭತ್ತು ಅಧ್ಯಾಯಗಳಲ್ಲಿ ವಿಷಯಗಳನ್ನು ವಿಸ್ತರಿಸಿಕೊಂಡು ವಿಶ್ಲೇಷಿಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವೈಧಾನಿಕತೆಯನ್ನೊಳಗೊಂಡಿದೆ. ವಿಶೇಷವಾಗಿ ಕರ್ನಾಟಕದ ಟಿಬೆಟಿಯನ್ನರು ಚಿತ್ರಕಲೆಗಳಿಗೆ ಸಂಬಂಧಿಸಿದ ಅನೇಕ ವೈವಿಧ್ಯತೆಗಳಿಂದ ಕೂಡಿದ ಉದ್ದೇಶಗಳನ್ನು ಇಟ್ಟು ಕೊಂಡು ಪ್ರಸ್ತುತ ಅಧ್ಯಯನದ ಸ್ವರೂಪಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಕರ್ನಾಟಕದ ಐದು ನೆಲೆಗಳನ್ನು ವ್ಯಾಪ್ತಿಗೊಳಪಡಿಸಿಕೊಂಡ ವಿವರಣಾಂಶ ಆಕರ ಸಾಮಗ್ರಿ ಮತ್ತು ಆನುಷಂಗಿಕ ಆಕರ ಸಾಮಗ್ರಿಗಳಲ್ಲಿ ಬಳಸಿಕೊಂಡು ಸೂಕ್ತ ಮಾಹಿತಿಯನ್ನು ಈ ಅಧ್ಯಯನಕ್ಕೆ ಅಳವಡಿಸಿಕೊಂಡು ವಿವರಗಳನ್ನು ಪ್ರಸ್ತಾಪ ಮಾಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಟಿಬೆಟಿಯನ್ನರ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆ, ಬೆಳವಣಿಗೆ ಮತ್ತು ಪ್ರಾದೇಶಿಕ ವೈಶಿಷ್ಟ್ಯ ಬೌದ್ಧಧಾರ್ಮಿಕ ಪ್ರಭಾವದ ಬೆಳವಣಿಗೆ, ರಾಜಕೀಯ ಅರಾಜಕತೆಯಿಂದಾದ ಕಲೆ ಪ್ರಾದೇಶಿಕ ವಿಸ್ತಾರವನ್ನು ವಿದೇಶಿಯ ಹಾಗೂ ದೇಶೀಯ ಪ್ರಾಂತ್ಯಗಳ ವಿವರಗಳು, ನಂತರ ವಲಸೆಗೆ ಕಾರಣವಾದ ಮೂಲಾಂಶಗಳಂತಹ ಇತ್ಯಾದಿ ವಿವರಗಳನ್ನು ಚಿತ್ರಕಲೆಯ ಪ್ರಸ್ತಾಪವನ್ನು ಆಧರಿಸಿ ಟಿಬೆಟಿಯನ್ನರ ಬೌದ್ಧಧರ್ಮದ ಕಲೆಯ ಇತಿಹಾಸವನ್ನು ಸಾಹಿತ್ಯದ ಮೂಲಕ ಕಟ್ಟಿಕೊಡುವ ಮೂಲಕ ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಕರ್ನಾಟಕದಲ್ಲಿ ಟಿಬೆಟಿಯನ್ನರ ನೆಲೆಗಳು ಸಾಂಸ್ಕೃತಿಕ ಪರಿಸರ, ಕಲೆಯ ಹರವು ಕುರಿತಾಗಿದ್ದು. ಐದು ನೆಲೆಗಳಲ್ಲಿನ ಟಿಬೆಟಿಯನ್ನರ ಸಾಂಸ್ಕೃತಿಕ ಪರಿಸರ ಹಾಗೂ ಅವರುಗಳು ಆಚರಿಸುವ ಧಾರ್ಮಿಕ ಕ್ರಿಯಾ ವಿಧಿಗಳು ಇದರಿಂದ ಉಗಮಗೊಂಡ ಚಿತ್ರ, ಶಿಲ್ಪ ಮತ್ತು ವಾಸ್ತು ಕಲೆಗಳನ್ನು ಆಧರಿಸಿದ ಅವಲೋಕನವಾಗಿದೆ. ಇದಕ್ಕೆ ಪ್ರೇರಣೆಗೊಂಡ ಭೌಗೋಳಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ದೇಶೀಯ ಬೌದ್ಧಧರ್ಮ ಆಧಾರಿತ ವಿವರಗಳೊಂದಿಗೆ ಸಮೀಕರಿಸಿ ಅಧ್ಯಾಯದಲ್ಲಿ ವಿವರಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಟಿಬೆಟಿಯನ್ನರ ಚಿತ್ರಕಲೆಯಲ್ಲಿ ಕಂಡುಬರುವ ವಸ್ತುವಿಷಯಗಳನ್ನು ವಿವರಿಸಲಾಗಿದೆ. ಚಿತ್ರಕಲೆಯು ಕರ್ನಾಟಕದ ಐದು ನೆಲೆಗಳಲ್ಲಿರುವುದನ್ನು ಪರಿಗಣಿಸಿ ನಂತರ ಚಿತ್ರಕಲೆಯನ್ನು ವರ್ಗೀಕರಿಸಿಕೊಂಡು ಭಿತ್ತಿ ಚಿತ್ರಕಲೆ ಮತ್ತು ಭಿತ್ತಿಯೇತರ ಚಿತ್ರಕಲೆ ಎಂದು ವಿಭಾಗಿಸಿಕೊಂಡು ಭಿತ್ತಿ ಚಿತ್ರಕಲೆಯಲ್ಲಿ ಉಪಭಾಗಗಳಾದ ದೇವಾಲಯಗಳ, ಸ್ತೂಪಗಳ, ಹೆಬ್ಬಾಗಿಲುಗಳ, ರಸ್ತೆಯ ಮೇಲಿನ ಭಿತ್ತಿ ಚಿತ್ರಗಳನ್ನು ಸ್ಥೂಲವಾಗಿ ಅಭ್ಯಸಿಸಲಾಗಿದೆ ಮತ್ತು ಭಿತ್ತಿಯೇತರ ಚಿತ್ರಕಲೆಯಲ್ಲಿ ಉಪ ಭಾಗಗಳಾದ ಪಟ ಚಿತ್ರಗಳು, ಸುರುಳಿ ಚಿತ್ರಗಳು, ಬಾವುಟದ ಚಿತ್ರಗಳು, ಕರಕುಶಲ ವಸ್ತುಗಳ ಚಿತ್ರಕಲೆಗಳನ್ನು ಪ್ರತ್ಯೇಕವಾಗಿ ಸ್ತೂಲವಾಗಿ ಅಭ್ಯಸಿಸಿ ವಿವರಣಾತ್ಮಕ ಹಾಗೂ ವಿಶ್ಲೇಷಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಟಿಬೆಟಿಯನ್ನರ ಸಂಕೀರ್ಣ ಮಾಧ್ಯಮದ ಚಿತ್ರಕಲೆಗಳ ಕುರಿತು ಚರ್ಚಿಸಲಾಗಿದೆ. ಸಂಕೀರ್ಣ ಮಾಧ್ಯಮದ ಚಿತ್ರಕಲೆಯಲ್ಲಿ ಲೋಹ ಮಾಧ್ಯಮ, ಸಿಮೆಂಟ್ ಮಾಧ್ಯಮ, ಕಟ್ಟಿಗೆ ಮಾಧ್ಯಮ ಹಾಗೂ ಗೋಧಿಹಿಟ್ಟು ಮತ್ತು ಬೆಣ್ಣೆಯಿಂದ ತಯಾರಿಸಿದ ಗೊಂಬೆಗಳ ಮೇಲಿನ ಚಿತ್ರಕಲಗಳೆಂದು ವಿಔಆಗಿಸಿಕೊಂಡಿದೆಯಲ್ಲದೇ ಪ್ರತ್ಯೇಕವಾದ ಮಾಧ್ಯಮದಲ್ಲಿ ಚಿತ್ರಿತಗೊಂಡ ಚಿತ್ರಗಳ ವಿವರಣೆಯನ್ನೂ ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಟಿಬೆಟಿಯನ್ನರ ಚಿತ್ರಕಲೆಯ ಮೇಲಾದ ಪ್ರಭಾವ-ಪ್ರೇರಣೆಗಳು, ತಂತ್ರಗಾರಿಕೆ ಮತ್ತು ಶೈಲಿಯ ಲಕ್ಷಣಗಳನ್ನು ಕುರಿತು ಚರ್ಚಿಸಲಾಗಿದೆ. ಟಿಬೆಟಿಯನ್ನರ ಚಿತ್ರಕಲೆಯ ಮೇಲಾದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಿಸರದ ಪ್ರಭಾವದಲ್ಲಿ ವಿಶೇಷವಾಗಿ ಬೌದ್ಧಧರ್ಮದ ಆಚರಣೆಗಳ ನಡುವಿನ ಬೆಳವಣಿಗೆ. ಇದಕ್ಕೆ ನೀಡಿದ ಪ್ರೇರಣೆಗಳನ್ನು ಮತ್ತು ಇವರು ಬಳಸಿದ ಚಿತ್ರಕಲೆಯ ತಂತ್ರಗಾರಿಕೆಯ ವಿನ್ಯಾಸಗೊಳಿಸುವ ಬಗ್ಗೆ ಬಳಸಿಕೊಂಡ ಶೈಲಿಗಳ ಕುರಿತು ಸ್ಥೂಲವಾಗಿ, ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಟಿಬೆಟಿಯನ್ ಕಲಾವಿದರುಗಳ ಕಲಾಶಿಕ್ಷಣ ಮತ್ತು ಸ್ಥಿತಿ-ಗತಿ ಕುರಿತಾಗಿದ್ದು. ಇಲ್ಲಿ ಸುಮಾರು ಕ್ರಿ.ಶ. ೧೯೫೨ರಿಂದ ಬೆಳವಣಿಗೆ ಹೊಂದಿದ ಅನೇಕ ಗುರುಕುಲ ಮಾದರಿಯ ಕಲಾವಿದರುಗಳ ಕಲಾಶಿಕ್ಷಣ ಪದ್ಧತಿಯ ವಿವರಣೆಗಳೊಂದಿಗೆ ಹಾಗೂ ಕಲಾವಿದರುಗಳ ಜೀವನಕ್ರಮ, ಕಲಾವಿದರ ಕಲಾ ಬೆಳವಣಿಗೆಯ ಹಂತಗಳನ್ನು ಹಾಗೂ ಅವರಿಗೆ ಸಿಕ್ಕ ಪ್ರೇರಣೆ, ದೊರೆತ ಪರಿಸರ, ಧಾರ್ಮಿಕ ಆಚರಣೆ ಗೌರವ ಹಾಗೂ ಅವರು ಚಿತ್ರರಚಿಸುವ ಕ್ರಮ ಮತ್ತು ಕಲಾಕೃತಿಯನ್ನು ಮಾರಾಟ ಮಾಡಿ ಜೀವನ ಸಾಗಿಸುವ ವಿಧಾನ ಇತ್ಯಾದಿ ಸಾಧಕ-ಬಾಧಕಗಳನ್ನು ಕುರಿತು ವಿವರಣೆ ನೀಡಲಾಗಿದೆ.

ಎಂಟನೆಯ ಅಧ್ಯಾಯದಲ್ಲಿ ಟಿಬೆಟಿಯನ್ನರ ಕಲೆ ಮತ್ತು ಕರ್ನಾಟಕದ ಕಲೆಯ ಸಹ ಸಂಬಂಧಗಳ ಕುರಿತಾಗಿದ್ದು ಕರ್ನಾಟಕದ ಕಲೆಗಳೊಂದಿಗೆ ಟಿಬೆಟಿಯನ್ನರ ಕಲೆಗಳು ಹೇಗೆ ಮೇಳೈಸಿಕೊಂಡಿವೆ.

ಎಂಬುವುದರ ಬಗ್ಗೆ ಇಲ್ಲಿ ಬಹುಮುಖ್ಯ ಅಂಶಗಳನ್ನು ಗುರುತಿಸಿಕೊಂಡು ವಿಶ್ಲೇಷಣಾತ್ಮಕವಾಗಿ ಬಳಸಿಕೊಳ್ಳಲಾಗಿದೆ.

ಈ ಮೇಲೆ ಹೇಳಿದ ಪ್ರತಿಯೊಂದು ಅಧ್ಯಾಯದಲ್ಲಿ ಚರ್ಚಿಸಿದ ಅನೇಕ ವಿಷಯಗಳನ್ನು ಈ ಕೊನೆಯ ಅಧ್ಯಾಯವಾದ ಸಮಾರೋಪದಲ್ಲಿ ಸಮೀಕ್ಷಿಸಲಾಗಿದೆ. ಅಲ್ಲದೆ ಈ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನದಿಂದ ಕಂಡುಕೊಂಡ ಫಲಿತಾಂಶಗಳನ್ನು ಸಹ ಸಮೀಕ್ಷಿಸಲಾಗಿದೆ.

ಪ್ರಸ್ತುತ ಅಧ್ಯಯನದಿಂದ ಕಂಡುಬರುವ ಪ್ರಮುಖ ಫಲಿತಗಳು

೧. ಟಿಬೆಟಿಯನ್ನರ ಭೌಗೋಳಿಕ, ರಾಜಕೀಯ ಮತ್ತು ಧಾರ್ಮಿಕ ಅಂಶಗಳು ಹೇಗೆ ದೇಶೀ ಮತ್ತು ವಿದೇಶಿ ಕಲೆಗಳಲ್ಲಿ ಸಂಗಮಗೊಳ್ಳುತ್ತವೆ, ಅದರೊಂದಿಗೆ ಧರ್ಮ ಎಷ್ಟರ ಮಟ್ಟಿಗೆ ಚಿತ್ರಕಲೆ ಮಾಧ್ಯಮದ ಮೇಲೆ ಪ್ರಭಾವ ಬೀರಿದೆ ಎಂಬುದನ್ನು ಟಿಬೆಟಿಯನ್ ಇತಿಹಾಸದಿಂದ ತಿಳಿದುಕೊಳ್ಳಬಹುದು.

೨. ಮನುಷ್ಯನು ಮೂಲ ಪರಿಸರ ಪ್ರಭಾವ, ಜೀವನ ವಿಧಾನ, ಧರ್ಮ ಹಾಗೂ ಚಿತ್ರ, ಶಿಲ್ಪ ಮತ್ತು ವಾಸ್ತು ಇತ್ಯಾದಿ ಕಲೆಗಳು ಎಷ್ಟರ ಮಟ್ಟಿಗೆ ನಿರಂತರವಾಗಿ ಉಳಿದುಕೊಂಡು ಬರುತ್ತವೆ ಎಂಬುದನ್ನು ಟಿಬೆಟಿಯನ್ನರ ಕರ್ನಾಟಕದ ಐದು ನೆಲೆಯನ್ನು ಅಭ್ಯಸಿಸುವುದರಿಂದ ತಿಳಿದುಕೊಳ್ಳಬಹುದು.

೩. ಟಿಬೆಟಿಯನ್ನರ ಥಾಂಕ ಶೈಲಿರೂಪಿತ ಚಿತ್ರ ಮತ್ತು ಶಿಲ್ಪಗಳಲ್ಲಿ ಭಾರತೀಯ ನೆಲೆಯ ದೇವರುಗಳ ವಸ್ತು ವಿಷಯಗಳನ್ನು ಕಾಣಬಹುದು. ಇತ್ತೀಚಿನ ಕರ್ನಾಟಕದ ನೆಲೆಗಳಲ್ಲಿ ಅನ್ಯಧರ್ಮಕ್ಕೆ ಸಂಬಂಧಿಸಿದ ದೇವರುಗಳ ಚಿತ್ರಗಳನ್ನು ವಿಶೇಷವಾಗಿ ಪಟಚಿತ್ರಗಳಲ್ಲಿ ಕಾಣಬಹುದಾಗಿದೆ.

೪. ಟಿಬೆಟಿಯನ್ನರ ಚಿತ್ರಕಲೆಯಲ್ಲಿ ಬಳಸುವ ವರ್ಣಗಳ ಬಳಕೆಯ ಗಾಢತೆ ಹಾಗೂ ಅವರು ಚಿತ್ರಿಸುವ ದೇವತೆಗಳ ಚಿತ್ರಗಳಲ್ಲಿ ಟಿಬೆಟಿಯನ್ನರ ಸಂಸ್ಕೃತಿಯ ವಸ್ತ್ರವಿನ್ಯಾಸಗಳು ಹಾಗೂ ನೈಸರ್ಗಿಕ ಪರಿಸರದ ದೃಶ್ಯಗಳನ್ನು ವಿಶೇಷವಾಗಿ ಪ್ರಸ್ತುತ ಪ್ರಬಂಧದಿಂದ ಕಂಡುಕೊಳ್ಳಲಾಗಿದೆ.

೫. ಟಿಬೆಟಿಯನ್ನರ ಸಾಂಪ್ರದಾಯಿಕ ಥಾಂಕ ಶೈಲಿರೂಪದ ಚಿತ್ರಕಲೆಯು ತನ್ನದೇ ಮಾಧ್ಯಮಗಳಲ್ಲಿ ಹೊರಜಗತ್ತಿಗೆ ಈ ಕಲೆಯ ಮಹತ್ವ ಹಾಗೂ ಬೌದ್ಧಧರ್ಮದ ಪ್ರಚಾರವನ್ನು ನೀಡುವುದು ಕಂಡುಬರುತ್ತದೆ. ತಮ್ಮ ಧರ್ಮದ ಬಗ್ಗೆ ಜಾಗೃತ ಪ್ರಜ್ಞೆಯನ್ನು ಮೂಡಿಸಲು ಸಹಾಯಕವಾಗುತ್ತದೆ.

೬. ಟಿಬೆಟಿಯನ್ನರು ಕಟ್ಟಾ ಸಂಪ್ರದಾಯವಾದಿಗಳು, ಪ್ರಕೃತಿ ಆರಾಧಕರು ಬೌದ್ಧಧರ್ಮೀಯರು ಹಾಗೂ ತಮ್ಮದೇಯಾದ ಜೀವನ ಶೈಲಿಯನ್ನು ಅಳವಡಿಸಿಕೊಂಡವರು. ಕರ್ನಾಟಕದಲ್ಲಿ ಬೌದ್ಧಧರ್ಮೀಯ ಸಂಘ-ಸಂಸ್ಥೆಗಳು ಇಲ್ಲದಿರುವುದರಿಂದ ಬಹುಶಃ ಅನ್ಯ ಸಂಸ್ಕೃತಿಯ ಜನಾಂಗ ಕಲೆಗಳೊಂದಿಗೆ ಅಷ್ಟು ಹೊಂದಿಕೊಳ್ಳಲು ಸಾಧ್ಯವಾಗಿಲ್ಲ.

೭. ಟಿಬೆಟಿಯನ್ನರ ಸ್ವಾತಂತ್ರ್ಯವನ್ನು ಎದುರು ನೋಡುತ್ತಿರುವ ಹಾಗೂ ಪುನಃ ಟಿಬೆಟಿಗೆ ಹೋಗಿ ತಮ್ಮ ಬೌದ್ಧಧರ್ಮದ ದೇವಾಲಯ, ವಿಹಾರ, ಸ್ತೂಪಗಳನ್ನು ಕಟ್ಟಿಕೊಂಡು ತಮ್ಮ ನೆಲದಲ್ಲಿ ನೆಮ್ಮದಿಯಿಂದ ಬದುಕುವ ತವಕವನ್ನು ಇಲ್ಲಿನ ಕಲಾವಿದರು ನಿರೀಕ್ಷಿಸುತ್ತಿದ್ದಾರೆ.

೮. ಟಿಬೆಟಿಯನ್ ಕಲಾವಿದರು ಕರ್ನಾಟಕದ ಯಾವುದೇ ಕಲಾಶಾಲೆ, ಅಕಾಡೆಮಿ, ಉನ್ನತ ಮಟ್ಟದ ಕಲಾಶಿಬಿರ, ವೈಯಕ್ತಿಕ ಕಲಾಪ್ರದರ್ಶನಗಳನ್ನು ಬದಿಗಿಟ್ಟು ಧಾರ್ಮಿಕ ಆಚರಣೆ ಹಾಗೂ ವ್ಯವಹಾರಿಕ ಬದುಕಿಗಾಗಿ ತಮ್ಮ ಸಂಪ್ರದಾಯ ಕಲೆಯನ್ನು ಉಳಿಸಿಕೊಂಡು ಹೋಗುತ್ತಿದ್ದಾರೆ.

೯. ಟಿಬೆಟಿಯನ್ ಕಲಾವಿದರು ಚಿತ್ರರಚಿಸುವ ಸಂದರ್ಭದಲ್ಲಿ ಧಾರ್ಮಿಕ ಭಕ್ತಿ, ಶ್ರದ್ಧೆ, ಏಕಾಗ್ರತೆಯಿಂದ ಹೆಚ್ಚಿನ ಸಮಯ ಚಿತ್ರ ರಚಿಸುವಲ್ಲಿ ಕಳೆಯುತ್ತಾರೆ. ಇವರು ರಚಿಸುವ ಚಿತ್ರಗಳು ಸೂಕ್ಷ್ಮ, ಅತಿಸೂಕ್ಷ್ಮರೇಖೆ ಮತ್ತು ಬಣ್ಣಗಳನ್ನು ತುಂಬುವುದರ ಪದ್ಧತಿಗಳಿಂದ ಕೂಡಿರುತ್ತಾರೆ. ಸೂಕ್ಷ್ಮ ಕರಕುಶಲ ಕೆಲಸಗಳಿಂದ ಅತಿದೊಡ್ಡ ಅಳತೆಯ ಚಿತ್ರಗಳ ವರ್ಣ ಸಂಯೋಜನೆಯ ಕೌಶಲ್ಯತೆಯನ್ನು ಹೊಂದಿದ್ದಾರೆ.

೧೦. ವಿಶೇಷವಾಗಿ ಎಲ್ಲಾ ಚಿತ್ರಗಳಲ್ಲಿ ಹೆಚ್ಚು ಅಲಂಕಾರಿಕ ವಿನ್ಯಾಸಗಳಂತಹ ಆಕಾರವನ್ನು ರೂಪಿಸಿಕೊಂಡಿದ್ದಾರೆ. ಇಂತಹ ಚಿತ್ರಕಲೆಯನ್ನು ನಮ್ಮ ನಾಡಿನಲ್ಲಿ ಉಳಿಸಿಕೊಳ್ಳುವ ಪ್ರಯತ್ನವು ನಮ್ಮಂತಹ ಚಿತ್ರಕಲಾವಿದರ ಕೆಲಸವಾಗಿದ್ದು ಇಂತಹ ಅನ್ಯ ಶೈಲಿಗಳಂತಹ ವಿಷಯಗಳ ಬಗ್ಗೆ ಆಳವಾದ ಸಂಶೋಧನೆ ಕೈಗೊಂಡು ಚಿತ್ರಕಲಾ ಕ್ಷೇತ್ರಕ್ಕೆ ಕಲಾಸಾಹಿತ್ಯ ರೂಪದಲ್ಲಿ ರಚಿಸಿ ಮುಂದಿನ ತಲೆಮಾರಿಗೆ ದಾಖಲತಿಯಾಗಿ ಸಂರಕ್ಷಣೆ ಮಾಡಿಕೊಡುವ ಪ್ರಯತ್ನ ಅತ್ಯಗತ್ಯವಾಗಿದೆ.

ಇದುವರೆಗೆ ಈ ವಿಷಯದ ಬಗೆಗೆ ಯಾವುದೇ ಗಂಭೀರವಾದ ಅಧ್ಯಯನಗಳು ಆಗದೇ ಇರುವುದರಿಂದ ಈ ಕಲಾ ಸಮಾಜದ ವ್ಯವಸ್ಥೆಯಡಿ ಒಳಪಡುವ ಸದಸ್ಯರಾದ ನಾವು ಈ ಪ್ರಯತ್ನ ಮಾಡಬೇಕಾಗಿದೆ. ಶೈಕ್ಷಣಿಕ ಸಂದರ್ಭದಲ್ಲಿ ಈ ಪಾರಂಪರಿಕ ಕಲೆಯನ್ನು ಶಿಕ್ಷಣದ ಒಂದು ಭಾಗವಾಗಿ ಪಠ್ಯಕ್ರಮದೊಳಗೆ ಅಭ್ಯಸಿಸುವಂತಾದರೆ ಈ ಕಲೆಯ ಉಳಿವು ಸಾಧ್ಯ. ಈ ಕಲೆಯ ಸಂರಕ್ಷಣೆ ದಿಸೆಯಲ್ಲಿ ದಿಟ್ಟ ಹೆಜ್ಜೆಯನ್ನು ಇಡಬೇಕೆಂಬುದು ಮುಖ್ಯವಾದ ಸಂಗತಿಯಾಗಿದೆ ಹಾಗೂ ಟಿಬೆಟಿಯನ್ನರಿಗೆ ಭಾರತ ಸರ್ಕಾರವು ಭಾರತೀಯರೆಂದು ಪರಿಗಣಿಸಿಕೊಂಡು ಇಂತಹ ಕಲೆಯನ್ನು ನಮ್ಮ ನಾಡಿನಲ್ಲಿ ಉಳಿಸಿಕೊಳ್ಳುವುದು ಮುಖ್ಯ ವಿಚಾರವೆಂಬುದನ್ನು ತಿಳಿಸುತ್ತಾ ಈ ಅಧ್ಯಾಯವನ್ನು ಸಮಾರೋಪಗೊಳಿಸಲಾಗಿದೆ.

****

ಗ್ರಂಥ ಸೂಚಿ

೧. ಅಜಂತಾ – ಎಲ್ಲೋರಾ – ಎಂ.ಹೆಚ್. ಕೃಷ್ಣ
ಪ್ರಸಾರಾಂಗ
ಮೈಸೂರು ವಿಶ್ವಾವಿದ್ಯಾಲಯ ಮೈಸೂರು
೧೯೬೭

೨. ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ ಒಂದು ಅಧ್ಯಯನ – ಡಾ. ಯಾದಪ್ಪ ಪರದೇಶಿ.
ಅಪ್ರಕಟಿತ ಪಿ. ಹೆಚ್.ಡಿ. ಮಹಾಪ್ರಬಂಧ
ಕನ್ನಡ ವಿಶ್ವ ವಿದ್ಯಾಲಯ ಹಂಪಿ
೨೦೦೧

೩. ಕರ್ನಾಟಕದ ಭಿತ್ತ ಚಿತ್ರ ಪರಂಪರೆ – ಡಾ. ಅ. ಲ. ನರಸಿಂಹನ್
ಕರ್ನಾಟಕ ಲಲಿತಕಲಾ ಅಕಾಡಮಿ ಬೆಂಗಳೂರು
೧೯೯೮

೪. ಕರ್ನಾಟಕ ಹಸ್ತಪ್ರತಿ ಚಿತ್ರಕಲೆ – ಒಂದು ಅಧ್ಯಯನ – ಡಾ.ಎಚ್.ಎನ್. ಚಿತ್ರಗಾರ
ಅಪ್ರಕಟಿತ ಪಿ.ಎಚ್.ಡಿ. ಮಹಾಪ್ರಬಂಧ
ಕನ್ನಡ ವಿಶ್ವ ವಿದ್ಯಾಲಯ ಹಂಪಿ.
೨೦೦೫

೫. ಕರ್ನಾಟಕ ಜನಪದ ಚಿತ್ರಕಲೆ – ಒಂದು ಅಧ್ಯಯನ – ಡಾ.ಎಸ್.ಸಿ. ಪಾಟೀಲ
ವೀರಶೈವ ಅಧ್ಯಯನ ಸಂಸ್ಥೆ ಗದಗ
೧೯೯೩

೬. ಕರ್ನಾಟಕದ ಭಿತ್ತಿ ಚಿತ್ರಗಳು – ಬಿ.ವಿ.ಕೆ. ಶಾಸ್ತ್ರ
ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು
೧೯೮೩

೭. ಕರ್ನಾಟಕದಲ್ಲಿ ಚಿತ್ರಕಲೆ – ಶಿವರಾಮಕಾರಂತ
ಪ್ರಸಾರಂಗ ಮೈಸೂರು ವಿ.ವಿ. ಮೈಸೂರು
೧೯೭೮

೮. ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ – ತಾಳ್ತಜೆ ವಸಂತ ಕುಮಾರು
ಮುಂಬಯಿ ವಿಶ್ವ ವಿದ್ಯಾಲಯದ
ಕನ್ನಡ ಅಧ್ಯಯನ ವಿಭಾಗ ಪರವಾಗಿ
ವಿನಯ ಪ್ರಕಾಶನ, ಬೆಂಗಳೂರು

೯. ಕರ್ನಾಟಕದ ನಾಥಪಂಥ – ರಹಮತ್ ತರೀಕರೆ
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
೨೦೦೬

೧೦. ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣದ ಬಳಕೆ – ಕೆ.ವಿ. ಕಾಳೆ.
ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
೨೦೦೦

೧೧. ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ – ಡಾ.ಬಿ.ಕೆ. ಹಿರೇಮಠ
ವೀರಶೈವ ಅಧ್ಯಯನ ವೇದಿಕೆ ಬಿಜಾಪುರ
೧೯೯೨

೧೨. ಕರ್ನಾಟಕ ಸಂಸ್ಕೃತಿ ಸಮೀಕ್ಷೆ – ಡಾ.ಎಚ್. ತಿಪ್ಪೆರುದ್ರಸಾಮಿ
ಕರ್ನಾಟಕದ ಲಲಿತಕಲಾ ಆಕಾಡೆಮಿ. ಬೆಂಗಳೂರು
೧೯೮೩

೧೩. ಗಡಿಯಾಚೆ ಭಾರತೀಯ ಸಂಸ್ಕೃತಿ – ಡಾ. ಎ.ಪಿ.ನರಸಿಂಹಮೂರ್ತಿ
ಎಂ.ಪಿ. ಬಿರ್ಲಾ ಫೌಂಡೇಷನ್
ಭಾರತೀಯ ವಿದ್ಯಾಭಾವನ
ಬೆಂಗಳೂರು

೧೪. ಚಿತ್ರಕಲೆ – ಅ. ನ. ಕೃ.
ವಿದ್ಯಾನಿಧಿ : ಬಕ್. ಟಿಮೋ
ಮೈಸೂರು – ೧೯೭೦

೧೫. ಚಿತ್ರಕಲಾ ಪ್ರಂಪಚ – (ಸಂ) ಪಿ.ಆರ್. ತಿಪ್ಪೇಸ್ವಾಮಿ.
ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು
೧೯೯೩

೧೬. ಟಿಬೆಟ್ – ಮಂಗಳೂರು ವಿಜಯ
ಬೆಂಗಳೂರು ವಿ.ವಿ.
ಬೆಂಗಳೂರು. ೨೦೦೫

೧೭. ಧರ್ಮ (ವಿಶ್ವಕೋಶ) – (ಸಂ) ರಹಮತ್ ತರೀಕೆರೆ
ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ
೨೦೦೦

೧೮. ಧಮ್ಮ ಪದ – ಅನು : ಬಿ.ವಿ. ರಾಜಾರಾಂ
ಬುದ್ಧವಚನ ಟ್ರಸ್ಟ್
೧೭. ಮೊದಲನೆ ಮುಖ್ಯ ರಸ್ತೆ
ಗಾಂಧೀನಗರ ಬೆಂಗಳೂರು
೫೬೦೦೦೯– ೧೯೮೯

೧೯. ನಿಜದನೆಲೆ – (ಸಂ) ಡಾ.ಎಸ್.ಸಿ.ಪಾಟೀಲ
ಡಾ.ಬಿ.ಕೆ. ಹಿರೇಮಠ ಅಭಿನಂದನಾಗ್ರಂಥ ಸತ್ಯಾನಂದ ಪಾತ್ರೋಟಿ
ಬಸವೇಶ್ವರ ವಿದ್ಯಾವರ್ಧದ ಸಂಘ ಬಾಗಲಕೋಟೆ
೨೦೦೩

೨೦. ಪ್ರಭುದ್ಧ ಕರ್ನಾಟಕ – ಲಕ್ಕಪ್ಪಗೌಡ. ಹೆಚ್. ಜೆ
ಮೈಸೂರು ವಿಶ್ವವಿದ್ಯಾಲಯ
೧೯೬೬

೨೧. ಪ್ರಾಚೀನ ಲೇಖನ ಸಾಮಾಗ್ರಿಗಳು –(ಮೂಲ) ಡಾ. ಅಲ್ಬರ್ಟನ್ ಗೌರ್
ಪ್ರಸಾರಂಗಕನ್ನಡವಿಶ್ವವಿದ್ಯಾಲಯಹಂಪಿ (ಅನು)ಡಾ.ಶ್ರೀನಿವಾಸಹಾವನೂರು
ಡಾ.ಲಕ್ಷ್ಮೀನಾರಾಯಣ ಆರೋರ

೨೨. ಪ್ರಾಚೀನ ಭಾರತದ ಭಿತ್ತಿ ಚಿತ್ರಗಳು – ಪಿ.ಆರ್. ತಿಪ್ಪೇಸ್ವಾಮಿ
ಚಿತ್ರಾಕ್ಷಿ ಸ್ಕೂಲ್ ಆಫ್ ಆರ್ಟ
ಧಾರವಾಡ (ವಜ್ರ ಮಹೋತ್ಸವ ಸಂಚಿಕೆ)
೧೯೯೫

೨೩. ಬಾದಾಮಿ ಒಂದು ಸಾಂಸ್ಕೃತಿಕ ಅಧ್ಯೆಯನ – ಶಿಲಾಕಾಂತ್ ಪತ್ತಾರ್
ಕನ್ನಡ.ವಿ.ವಿ.

೨೪. ಬುದ್ಧರಕ್ಷಿತ – ಅನು : ರುಕ್ಮಿಣಿ ಗಿರಿಮಾಜಿ
ಬುದ್ಧ ವಚಕ ಟ್ರಸ್ಟ
ಬೆಂಗಳೂರು
೧೯೯೧

೨೫. ಬುದ್ಧವಚಕ ಪರಿಚಯ ಮತ್ತು ಮಿಲಿಂದ ಪ್ರಶ್ನೆ – ಅನು : ಬೆ. ಪಿ. ರಾಜರತ್ನಂ.
(ಪಾಲಿ – ಕನ್ನಡ ಅನುವಾದ ಮಾಲೆ)
ಶಾಕ್ಯಾ ಸಾಹಿತ್ಯ ಮಂಟಪ
ಬೆಂಗಳೂರು – ೧೯೩೭

೨೬. ಬೆಳೆದು ಬಂದ ಭಾರತದ ಚಿತ್ರಕಲೆ – ಪಿ.ಆರ್. ತಿಪ್ಪೇಸ್ವಾಮಿ
ಕಲಾಕ್ಷೇತ್ರ ಮೈಸೂರು
೧೯೬೨

೨೭. ಬೌದ್ಧೀಯತೆ – ಡಿ.ಎ. ಕೃಷ್ಣಯ್ಯ
ಮೈಸೂರು ವಿ.ವಿ. ಮುದ್ರಣಾಲಯ
ಮೈಸೂರು – ೧೯೯೭

೨೮. ಬೌದ್ಧಾಯಾನ – ಡಾ.ತಾಳ್ತಜೆ. ವಸಂತ
ಕುಮಾರ
ಕನ್ನಡ ವಿಭಾಗ
ಮುಂಬಯಿ ವಿಶ್ವವಿದ್ಯಾಲಯ
೨೦೦೫

೨೯. ಬೌದ್ಧಮತದಲ್ಲಿ ಯಕ್ಷಕಲೆ – ಕೆ.ವೆಂ. ರಾಜಗೋಪಾಲ
ಕೊಂಡಜ್ಜಿ ಪ್ರಕಾಶನ
೨೦೫ – ೭ ನೇ ಅಡ್ಡರಸ್ತೆ, ೧ ನೇ
(ಎನ್) ಬ್ಲಾಕ್.
ರಾಜಾಜಿನಗರ ಬೆಂಗಳೂರು –
೫೬೦೦೧೦ – ೧೯೯೭

೩೦. ಭಗವಾನ್ ಬುದ್ಧ – ಅನು : ಅದ್ಯ ರಂಗಾಚಾರ್ಯ
ಕೋಸಂಬೀ (ಧರ್ಮನಂದ)
ನವಕೆಹಲಿ ಕೇ. ನಾ. ಅ. – ೧೯೫೬

೩೧. ಭಾರತೀಯ ಚಿತ್ರಕಲೆ ಸಂಕ್ಷಿಪ್ತ ಪರಿಚಯ – ಎಲ್.ಎಸ್. ಶಿರಹಟ್ಟಿ
ವಿಜಯ ಕಲಾಮಂದಿರ ಗದಗ
೧೯೭೨

೩೨. ಭಾರತೀಯ ಚಿತ್ರಕಲೆ – ಶಿವರಾಮಕಾರಂತ
ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು
೧೯೯೮

೩೩. ಭಾರತ ದರ್ಶನ – ಜವಹರ್‌ಲಾಲ್ ನೆಹರು
ಕಾವ್ಯಾಲಯ : ಪ್ರಕಾಶಕರು ಅನು : ಸಂ.ವಾ. ಕೃಷ್ಣಮೂರ್ತಿ ರಾವ್
ಮೈಸೂರು – ೧೯೭೩

೩೪. ಭಾರತೀಯ ಚಿತ್ರಕಲೆ – ಬಿ.ಪಿ. ಬಾಯಿರಿ
ಸಮಾನ ಪುಸ್ತಕಾಲಯ ಭಾರವಾಡ
೧೯೮೦

೩೫. ಯಕ್ಷ ಯಕ್ಷಿಯರು – ಹಂಪಾನಾಗರಾಜಯ್ಯ
ಚಂದ್ರ ಸಾಗರ ವರ್ಣಿ ಸ್ಮರಕ ಗ್ರಂಥಮಾಲೆ
ಬೆಂಗಳೂರು
೧೯೭೬

೩೬. ಯುಗ ಯತ್ರೀ ಭಾರತೀಯ ಸಂಸ್ಕೃತಿ – ಹರಿದಾಸ್ ಭಟ್ಟ ಚಾರ್ಯ
ಪ್ರಸಾರಾಂಗ ಮೈಸೂರು ವಿ.ವಿ.
೧೯೭೫

೩೭. ವರ್ಣ ಸಂಚಯ – ಡಾ.ಎಸ್.ಸಿ. ಪಾಟೀಲ
ವಿಜಯ ಚಿತ್ರಕಲಾ ಮಹಾವಿದ್ಯಾಲಯ ಇಳಕಲ್
೨೦೦೧

೩೮. ಸಾಹಿತ್ಯ ಮತ್ತು ಚಿತ್ರಕಲೆ – ವಿ. ಸೀತಾರಾಮಯ್ಯ
ರಾಘವ ಪ್ರಕಾಶನ ಬೆಂಗಳೂರು
೧೯೮೫

೩೯. ಸುರಪುರ ಚಿತ್ರಕಲೆ ಒಂದು ಅಧ್ಯಯನ –ಡಾ. ಮಲ್ಲಿಕಾರ್ಜುನ ಬಾಗೋಡಿ
ಅಪ್ರಕಟಿತ ಮಹಾಪ್ರಬಂಧ ಗುಲಬರ್ಗಾ
ವಿ.ವಿ. ಗುಲಬರ್ಗಾ
೨೦೦೭

೪೦. ಸ್ವರ್ಣದೇವಸ್ಥಾನ – ಅನು ಡಿ.ಎಸ್.ಪುರುಷೋತ್ತಮ ರಾವ್
ರಿಗ್‌ಜೋಡ್, ಎಡಿಟೋರಿಯಲ್ ಕಮಿಟಿ
ನೈನಿಗಂ ಸಂಸ್ಥೆ, ಬೈಲುಕುಪ್ಪೆ, ಮೈಸೂರು.
೨೦೦೬

೪೧. ಹಿಮಾಚಲವನ್ನಾಳಿದ ಕರ್ನಾಟಕ ಸೇನರು – ಇ.ಮೂ : ಡಾ.ಡಿ. ಬಿ. ಚಕ್ರವರ್ತಿ
ಕರ್ನಾಟಕ ಸರ್ಕಾರ ಕನ್ನಡ ಪುಸ್ತಕ ಪ್ರಾಧಿಕಾರ
೨೦೦೫

English Books

1. BUDDHIST ICONOGRAPHY – Lokesh chandra
internatinal Acadamy of Indian
culture and aditya prakashan
new delhi– 1994

2. ENCYCLOPEDIA OF ART AND CULTURE – G.T. bettany
victory books internatinal
Delhi – 110006

3. ENCYCLOPEDIA OF ART AND CULTURE – Gopal Bhargava
In Indian Vol- 2.710
Isha Book, Delhi
2008

4. ENCYCLOPEDIAF BUDDHISM – M.G. chitara
vol : XX - XXI
APH publishing corpoatioration
New – delhi – 110002
2007

5. THE ILLUSTRATED HISTORY OF ART – David piper
bounty books – 1986

6. THE ART OF TANTRA – Philip Rawsan
thames & hudson ltd
landon – 1973

7. TIBET PAST & PRESENT – charles bell
asian educational services
new delhi madras – 1992

8. TIBETAN PAINTINGS – George roerich
Gian publishing house delhi
29/6. shaki nagar delhi
1985

• ಕರ್ನಾಟಕದಲ್ಲಿ ಟಿಬೇಟಿಯನ್ ಚಿತ್ರಕಲೆಯ ನೆಲೆಗಳು



ಸಂಕೇತಾಕ್ಷರಗಳು

೦೧.	ಪ್ರ.ಸಂ.	ಪ್ರಧಾನ ಸಂಪಾದಕರು
೦೨.	ಕ.ಲ.ಲ.ಅ.	ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
೦೩.	ಕ.ವಿ.ವಿ, ಹಂಪಿ	ಕನ್ನಡ ವಿಶ್ವವಿದ್ಯಾಲಯ, ಹಂಪಿ
೦೪.	ಪು.ಸಂ.	ಪುಟ ಸಂಖ್ಯೆ
೦೫.	ಗು.ವಿ.ವಿ.	ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ
೦೬.	ಮ.ಪ್ರ.	ಮಹಾಪ್ರಬಂಧ
೦೭.	ಮೈ.ವಿ.ವಿ.	ಮೈಸೂರ ವಿಶ್ವವಿದ್ಯಾಲಯ, ಮೈಸೂರು
೦೮.	ಸಂ.	ಸಂಪಾದಕ
೦೯.	ಕಿ.ಪ್ರ.	ಕಿರು ಪ್ರಬಂಧ
೧೦.	ಚಿತ್ರ ಸಂ	ಚಿತ್ರ ಸಂಖ್ಯೆ

